
# ಕನ್ನಡ ಜನಪದ ಕಥನ ಕಾವ್ಯಗಳು

ಎಚ್.ಎಲ್. ನಾಗೇಗೌಡ



ತ್ರೈವಾರ್ಷಿಕ ಜಾನಪದ ಯೋಜನೆ ಪುಸ್ತಕ ಮಾಲೆ-೨

# ಕನ್ನಡ ಜನಪದ ಕಥನ ಕಾವ್ಯಗಳು

## ಜನಪದ ಕಥನ ಕಾವ್ಯಗಳ ಸಂಕಲನ

ಸಂಗ್ರಾಹಕರು

**ನಾಡೋಜ ಎಚ್. ಎಲ್. ನಾಗೇಗೌಡ**

ಸಂಪಾದಕರು

**ಪ್ರೊ|| ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**

ನಂ. 1 ಕರ್ನಾಟಕ ಸರ್ಕಾರಿ ನೌಕರರ ವಸತಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054

KANNADA JANAPADA KATHANA KAVYAGALU-(A collection of folk narrative poetries) : Collected by Nadoja H. L. Nage Gowda. Edited by Prof. D. Lingaiah. Published by Karnataka Janapada Parishath, No. 1, Karnataka Government Employee's Residential Layout, Near M. S. Ramaiah Hospital Gate, New BEL Road, Bangalore-560 054. Phone : 080-23605033.
Janapada Loka : 7201143 / 7271555.

ಪ್ರಥಮ ಮುದ್ರಣ : 2007

ಪ್ರತಿಗಳು : 1000

ಪುಟಗಳು : xiv+214=228

ಬೆಲೆ : ರೂ. : 100/–(ಒಂದು ನೂರು ರೂಪಾಯಿ)

ಹಕ್ಕುಗಳನ್ನು ಕಾದಿರಿಸಿದೆ

ಅಕ್ಷರ ಜೋಡಣೆ ಹಾಗೂ ಮುದ್ರಣ :
ಚಂದನ ಪ್ರಿಂಟರ್ಸ್
ನಂ. 57, ವಿನಾಯಕ ಕಾಂಪ್ಲೆಕ್ಸ್
10ನೇ ಮುಖ್ಯರಸ್ತೆ, 80 ಅಡಿ ರಸ್ತೆ, ಎಸ್.ಬಿ.ಎಮ್. ಕಾಲೋನಿ
ಬೆಂಗಳೂರು–560 050

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ, ಭಾಷೆ, ಕಲೆ, ವಿಜ್ಞಾನ, ಆಚರಣೆ, ಆರಾಧನೆ, ಆಹಾರವಿಹಾರ, ವೇಷಭೂಷಣ, ಕಸುಬು, ಐತಿಹ್ಯ, ಪುರಾಣ ಸಂಸ್ಕೃತಿ, ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿವೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಆನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸುಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್. ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ'ವನ್ನು ಪ್ರಾರಂಭಿಸಿದರು. ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ 'ಜಾನಪದ ಸಿರಿಭುವನ'ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು, ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು.

ಎಚ್. ಎಲ್. ನಾಗೇಗೌಡರ ಜಾನಪದದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆಯೂ ಒಂದು. ತ್ರೈವಾರ್ಷಿಕ ಜಾನಪದ ಯೋಜನೆಯ ಪುಸ್ತಕ ಮಾಲೆಯ ಎರಡನೆಯ ಕುಸುಮವಾಗಿ 'ಕನ್ನಡ ಜನಪದ ಕಥನ ಕಾವ್ಯಗಳು' ಗ್ರಂಥ ಪ್ರಕಟವಾಗುತ್ತಿದೆ.

ನಾಡೋಜ ಎಚ್. ಎಲ್. ನಾಗೇಗೌಡರು ಹಲವು ವರ್ಷ ಕಷ್ಟಪಟ್ಟು ನಾಡಿನ ವಿವಿಧ ಗಾಯಕರಿಂದ ಸಂಗ್ರಹಿಸಿದ್ದ ಜನಪದ ಕಥನ ಕಾವ್ಯಗಳನ್ನು ಲಿಪ್ಯಂತರ ಮಾಡಿಸಿ, ಒಂದೆಡೆ ಕಲೆಹಾಕಿ, ಪ್ರೊ॥ ಡಿ. ಲಿಂಗಯ್ಯನವರು ವ್ಯವಸ್ಥಿತವಾಗಿ ಸಂಪಾದನೆ ಮಾಡಿದ್ದಾರೆ. ಓದುಗರಿಗೆ ಅನುಕೂಲವಾಗುವಂತೆ ಜನಪದ ಕಥನಕಾವ್ಯ ಕುರಿತು ಪ್ರಸ್ತಾವನೆ, ಗಾಯಕರ ಬಗೆಗೆ ಟಿಪ್ಪಣಿ, ಅರ್ಥಕೋಶಗಳನ್ನು ಸಿದ್ಧಪಡಿಸಿದ್ದಾರೆ. ಕನ್ನಡಾಭಿಮಾನಿಗಳಿಗೆ ಈ ಗ್ರಂಥ ಪ್ರಿಯವಾಗಲಿ ಎಂದು ಆಶಿಸುತ್ತೇನೆ.

**ಜಿ. ನಾರಾಯಣ**

ಅಧ್ಯಕ್ಷ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು

25–8–2007

# ಪರಿವಿಡಿ


ಅಧ್ಯಕ್ಷರ ಮಾತು

ಪ್ರಸ್ತಾವನೆ

| | | |
|---|---|---|
| 1. | ಮಲ್ಲಿಗೆರಾಯ | 01 |
| 2. | ಹೂವಿನ ನಾಗಮ್ಮ | 14 |
| 3. | ಶಿವಗಂಗೆ | 18 |
| 4. | ವೀರದಿಮ್ಮವ್ವ | 24 |
| 5. | ಅತ್ತೆ ಸೊಸೆಯರು | 31 |
| 6. | ಮ್ಯಾದರ ಹೆಣ್ಣು | 42 |
| 7. | ಗುಲಗಂಜಿ ಚೆನ್ನವ್ವ | 47 |
| 8. | ಕೆರೆಕಟ್ಟೋ ಒಡ್ಡರಯ್ಯ | 54 |
| 9. | ಶಿಟವಿ ಕಥೆ | 59 |
| 10. | ಹೊಲೆಯರ ಹೈದ | 63 |
| 11. | ಹಾರುವಯ್ಯ ಮಾದಗಿತ್ತಿ ಹಾಡು | 71 |
| 12. | ಅಣ್ಣ ತಂಗಿಯರ ಹಾಡು | 77 |
| 13. | ಸತಿ ಪುರುಷರ ಹಾಡು | 86 |
| 14. | ಭುಜಂಗರಾಯ | 92 |
| 15. | ಚದುರಂಗ ಮಹಾರಾಜ | 108 |
| 16. | ಸ್ಯಾನಯ್ಯ | 150 |
| 17. | ಸಿರಿದೇವಿ | 161 |
| 18. | ರುದ್ರಕುಮಾರ | 184 |

**ಅನುಬಂಧ**

**ಅರ್ಥಕೋಶ** 199

ಹಾಡುಗಾರರ ಪರಿಚಯ

# ಪ್ರಸ್ತಾವನೆ

೧

ಅಖಂಡ ಜಾನಪದದಲ್ಲಿ ಸಾಹಿತ್ಯಕ ಬಗೆ ವಿಶಿಷ್ಟವೂ ವಿಪುಲವೂ ಆದ ಪ್ರಕಾರ. ಇದರಲ್ಲಿ ಕಥಾಪ್ರಕಾರದ್ದು ಸಿಂಹಪಾಲು. ಜನಪದ ಕಥಾಪ್ರಕಾರದಲ್ಲಿ ಗದ್ಯಕಥೆ ಉಂಟು; ಪದ್ಯ ಕಥೆ ಉಂಟು. ಗದ್ಯವಾಗಲೀ ಪದ್ಯವಾಗಲೀ ಕಥೆ ಅನಿವಾರ್ಯ. ಕಥೆಯಿಲ್ಲದ್ದು ಕಥೆ ಅನ್ನಿಸಿಕೊಳ್ಳುವುದಿಲ್ಲ. ಜನಪದ ಪದ್ಯಕಥೆಗಳನ್ನು ಜನಪದ ಕಥನಕಾವ್ಯವೆಂದು ಕರೆಯುವುದು ರೂಢಿಯಾಗಿದೆ. ಈ ಬಗೆಯ ಸಾಹಿತ್ಯವನ್ನು ಕನ್ನಡದಲ್ಲಿ ಜನಪದ ಕಥನಕಾವ್ಯ, ಕಥನಗೀತೆ, ಕಥಾಗೀತ, ನೀಳ್ಗವಿತೆ, ಹಾಡ್ಗತೆ, ಪದ್ಯಕಥೆ, ಕಾವ್ಯಕಥೆ, ಖಂಡಕಾವ್ಯ, ಲಾವಣಿ ಎಂದು ಕರೆದಿರುವುದುಂಟು.

ವ್ಯಷ್ಟಿ ರೂಪದಲ್ಲಿ ಸೃಷ್ಟಿಯಾದರೂ ಸಮಷ್ಟಿ ಪರಿಸರದಲ್ಲಿ ಬೆಳೆದು, ಸಾಮಾಜಿಕ ಒಪ್ಪಿಗೆ ಪಡೆದು, ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಪರಂಪರೆಯಲ್ಲಿ ಮುಂದುವರಿಯುವ ಪದ್ಯ ಕಥನವೇ ಜನಪದ ಕಥನಕಾವ್ಯ. ಮೌಖಿಕ ಪರಂಪರೆಯ ಸ್ತ್ರೀಪುರುಷರಿಬ್ಬರೂ ಜನಪದ ಕಥನ ಕಾವ್ಯಸೃಷ್ಟಿಗೆ, ಪರಿಪುಷ್ಟಿಗೆ, ಪೋಷಣೆ ಪ್ರಚಾರಕ್ಕೆ ಕಾರಣರಾಗಿದ್ದಾರೆ. ಇಂಗ್ಲಿಷ್ ಭಾಷೆಯ Folk narrative poetryಗೆ ಸಮಾನಾರ್ಥಕವಾಗಿ ಕನ್ನಡ ಭಾಷೆಯಲ್ಲಿ ಜನಪದ ಕಥನಕಾವ್ಯ ಬಳಕೆಯಾಗುತ್ತಿದೆ.

ಜನಪದ ಕಥನಕಾವ್ಯಗಳಲ್ಲಿ ಜನಪದ ಗದ್ಯಕಥೆಗಳಲ್ಲಿರುವಷ್ಟು ಸಂಕೀರ್ಣತೆ ಇರುವುದಿಲ್ಲ. ಕಥನಕ್ರಮ ಇದಕ್ಕೆ ಕಾರಣ. ಜನಪದ ಕಥನಕಾವ್ಯದ ಕಥನಕ್ರಮದಲ್ಲಿ ರೂಪಾಂತರ ಅಥವಾ ಬದಲಾವಣೆ ಕಡಮೆ. ಹಾಡುವ ಧಾಟಿಯೂ ಸಾಮಾನ್ಯವಾಗಿ ಬದಲಾಗುವುದಿಲ್ಲ. ಯಾವ ಮಟ್ಟಿನಲ್ಲಿ ಹಾಡು ಕಲಿತಿದ್ದಾರೋ ಅದೇ ಮಟ್ಟನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದಕ್ಕೆ ಅದರದೇ ಆದ ಛಂದಸ್ಸಿರುತ್ತದೆ; ತಲೆತಲಾಂತರದ ಸಿದ್ಧರೂಪವಿರುತ್ತದೆ. ಆನ್ವಯಿಕತೆ ಜಾನಪದದಲ್ಲಿ ಸರ್ವಸಾಮಾನ್ಯವಾದರೂ ಕಥನಕಾವ್ಯದಲ್ಲಿ ಅದರ ಪ್ರಭಾವ ಕಡಮೆ. ಜನಪದ ಕಥನಕಾವ್ಯದಲ್ಲಿ ಜನಪದ ಸಂಸ್ಕೃತಿಯಿಂದ ಆರಿಸಿದ, ಸಂಸ್ಕೃತಿಗೆ ಪೂರಕವಾಗಿ ಸೃಜಿಸಿದ ವಸ್ತುವಿರುತ್ತದೆ; ಕಥೆ ಸುಲಲಿತವಾದ ರಾಗದಲ್ಲಿ, ಜನಪದವೇ ಕಂಡರಿಸಿದ ಸೊಲ್ಲಿನಲ್ಲಿ, ಹಾಡಿನ ರೂಪದಲ್ಲಿ ನಿರೂಪಣೆಯಾಗುತ್ತದೆ. ಜನಪದ ಕಥನಕಾವ್ಯದಲ್ಲಿ ಕ್ರಿಯೆ ಮುಖ್ಯವಾಗಿರುತ್ತದೆ. ಇದರಲ್ಲಿ ಅನಗತ್ಯ ವರ್ಣನೆ ಇರುವುದಿಲ್ಲ. ಕಥೆಯ ಚಲನೆಯಲ್ಲಿ ವೇಗವಿರುತ್ತದೆ; ಪರಿಣಾಮದ ಕಡೆಗೆ ಗಮ್ಯವಿರುತ್ತದೆ. ಜನಪದ ಕಥನಕಾವ್ಯ ಶುದ್ಧ ಹಾಡಿನ ರೂಪದಲ್ಲೂ ಹಾಡು ಮತ್ತು ವಚನ ರೂಪದಲ್ಲೂ ಮೈದಾಳಿ ನಿರೂಪಣೆಯಾಗುತ್ತದೆ. ಇವುಗಳಲ್ಲಿ ಸಂಗೀತ ಅವಿಭಾಜ್ಯ ಅಂಗವಾಗಿರುತ್ತದೆ. ಸಂಗೀತಮಯ ಹಾಡುಗಾರಿಕೆಯಿಲ್ಲದ ಕಥನಕಾವ್ಯವಿಲ್ಲ. ಕಥನಗೀತೆಯ ಕಥನಕ್ಕೆ ಒಪ್ಪುವ, ಕಥಾವರಣ ಕಳೆಗಟ್ಟುವ, ಆಕರ್ಷಕವಾದ ಸೊಲ್ಲು ಅಥವಾ ಪಲ್ಲವಿ ಇರುತ್ತದೆ. ಕೆಲವು ಸಂದರ್ಭದಲ್ಲಿ ಸೊಲ್ಲಿನ ಜೊತೆಗೆ, ತನಿಸೊಲ್ಲು, ನಿಡುಸೊಲ್ಲುಗಳೂ ಇರುತ್ತವೆ. ಕಥಾ ಪ್ರಸಂಗಕ್ಕೆ ತಕ್ಕಂತೆ ಹಾಡುಗಾರಿಕೆಯಲ್ಲಿ ಏರಿಳಿತವಿರುತ್ತದೆ. ಸಂತೋಷದಾಯಕ ವರ್ಣನೆಗೂ ದುಃಖಮಯ ವರ್ಣನೆಗೂ ಸ್ಪಷ್ಟವಾದ ಹಾಡಿನ ಧಾಟಿಯ ವ್ಯತ್ಯಾಸವಿರುತ್ತದೆ. ಜನಪದ ಕಥನಗೀತೆಗಳನ್ನು ಹಾಡುವಾಗ ಜನಪದ ವಾದ್ಯಗಳನ್ನು

ಬಳಸುವುದುಂಟು; ಬಳಸದೆಯೂ ಇರಬಹುದು. ಕನ್ನಡದಲ್ಲಿ ವೃತ್ತಿಗಾಯಕರು ಸಾಮಾನ್ಯವಾಗಿ ಕಂಸಾಳೆ, ತಂಬೂರಿ, ಗಣೆ, ಏಕತಾರಿ, ಕಿನ್ನರಿ, ಚೌಡಿಕೆ, ಗುಮ್ಮಟೆ, ದಮ್ಮಡಿ, ತಾಳ, ಗಗ್ಗರ, ಗೆಜ್ಜೆ ಮೊದಲಾದವುಗಳನ್ನು ಬಳಸಿ, ಹಾಡುಗಾರಿಕೆಯನ್ನು ಕಳೆಕಟ್ಟಿಸುತ್ತಾರೆ. ಯಾವ ವಾದ್ಯವನ್ನೂ ಬಳಸದೆ ಸೊಗಸಾಗಿ ಹಾಡುವ ಹವ್ಯಾಸಿ ಗಾಯಕರೂ ಉಂಟು. ಕೆಲವು ವಾದ್ಯಗಳು ನಿರ್ದಿಷ್ಟವಾದ ಹಾಡಿಗೋಸ್ಕರವಾಗಿಯೇ ಹುಟ್ಟಿವೆಯೇನೋ ಎನ್ನುವಂತೆ ಸಹಜವಾಗಿ ಹೊಂದಿಕೊಂಡಿವೆ. ವಿಶ್ವದ ಎಲ್ಲಾ ಜನಾಂಗಗಳಲ್ಲೂ ಜನಪದ ಕಾವ್ಯಗಾಯನಕ್ಕೆ ಅವರದೇ ಆದ ವಾದ್ಯಗಳನ್ನು ಬಳಸುವುದುಂಟು. ಕನ್ನಡ ಜನಪದ ಗಾಯಕರೂ ಇದಕ್ಕೆ ಹೊರತಾಗಿಲ್ಲ.

ಜನಪದ ಕಥನಕಾವ್ಯಗಳನ್ನು ಎರಡು ರೀತಿಯ ಗಾಯಕರು ಹಾಡುತ್ತಾರೆ :

1. ವೃತ್ತಿಗಾಯಕರು.
2. ಹವ್ಯಾಸಿ ಗಾಯಕರು.

ಜನಪದ ಕಥನ ಕಾವ್ಯಗಳಲ್ಲಿ ಪ್ರಧಾನವಾಗಿ ಎರಡು ಬಗೆಯ ಕಥಾನಕಗಳು ಕಾಣುತ್ತವೆ:

1. ಧಾರ್ಮಿಕ ಕಾವ್ಯಗಳು.
2. ಲೌಕಿಕ ಕಾವ್ಯಗಳು.

ಜನಪದ ಕಥನ ಕಾವ್ಯಗಳಲ್ಲಿ ಸ್ಪಷ್ಟವಾಗಿ ಎರಡು ಛಂದೋರೂಪಗಳು ಕಂಡುಬರುತ್ತವೆ:

1. ಶುದ್ಧ ಪದ್ಯ ರೂಪದ ಕಥೆಗಳು.
2. ಪದ್ಯ ಮತ್ತು ಗದ್ಯ (ವಚನ) ಮಿಶ್ರಿತ ಕಥೆಗಳು.

ಎಲ್ಲವೂ ಹಾಡುಗಾರಿಕೆಗೆ ಒಗ್ಗುವಂತಹ ಅಂಶಗಣ ಪ್ರಧಾನವಾದ ರಚನೆಗಳಾಗಿರುತ್ತದೆ. ಹಾಡುವ ಧಾಟಿಯಲ್ಲಿ ಮಾತ್ರ ಪ್ರಾದೇಶಿಕವಾಗಿ ಅಲ್ಪ ಸ್ವಲ್ಪ ಭೇದವಿರುತ್ತದೆ. ಸಂಖ್ಯೆಯಲ್ಲಿ ಧಾರ್ಮಿಕ ಕಾವ್ಯಗಳು ಕಡಮೆ; ಲೌಕಿಕ ಕಾವ್ಯಗಳು ಹೆಚ್ಚು.

ಜನಪದ ಕಥನ ಕಾವ್ಯಗಳು ಧಾರ್ಮಿಕ ಹಿನ್ನೆಲೆಯ ಭಿಕ್ಷುಕರಲ್ಲಿ ಹೆಚ್ಚಾಗಿ ಬಳಕೆಯಲ್ಲಿವೆ. ಧಾರ್ಮಿಕದೀಕ್ಷೆ ಪಡೆದ ಗುಡ್ಡರು ಉಪಾದಾನದ ಸಂದರ್ಭದಲ್ಲಿ ಹಾಡುವುದರಿಂದ ಇವು ಹುಟ್ಟಿವೆ, ಉಳಿದಿವೆ, ಬೆಳೆದಿವೆ. ನಿಜವಾಗಿ ನೋಡಿದರೆ ಇವುಗಳನ್ನು ಭಿಕ್ಷುಕರ ಕಾವ್ಯವೆಂದು ಕರೆಯಬೇಕು. ಇವುಗಳನ್ನು ಹಾಡುವವರನ್ನು ಭಿಕ್ಷುಕ ಕಾವ್ಯಗಾಯಕರು ಎನ್ನಬೇಕು. ಜಾನಪದ ವಿದ್ವಾಂಸರಾದ ಡಾ|| ಜೀ. ಶಂ. ಪರಮಶಿವಯ್ಯನವರು ಇವರನ್ನು 'ವೃತ್ತಿಗಾಯಕರು' ಎಂದು ಗೌರವದಿಂದ ಕರೆದರು. ಈಗ ಅದೇ ಹೆಸರು ಬಳಕೆಯಾಗುತ್ತಿದೆ. ವೃತ್ತಿಗಾಯಕರು ಸಾಮಾನ್ಯವಾಗಿ ಧಾರ್ಮಿಕ ಕಾವ್ಯಗಳನ್ನು ಕಲಿತು ಹಾಡುತ್ತಾರೆ. ವೈವಿಧ್ಯತೆಗೋಸ್ಕರ, ವ್ಯವಹಾರಕ್ಕೋಸ್ಕರ ಲೌಕಿಕ ಕಾವ್ಯಗಳನ್ನೂ ಕಲಿತು ಹಾಡುತ್ತಾರೆ. ವೃತ್ತಿಗಾಯಕರು ವೇಷಭೂಷಣ, ವಾದ್ಯಸಹಿತವಾಗಿ ಕಥನಕಾವ್ಯಗಳನ್ನು ಹಾಡುತ್ತಾರೆ. ದೀರ್ಘ ಕಥಾನಕಗಳನ್ನು ದಿನಗಟ್ಟಲೆ, ವಾರಗಟ್ಟಲೆ ಹಾಡುವರು. ಕೇಳುಗರ ಮೇಲೆ ಇವರು ಬೀರುವ ಪ್ರಭಾವ ಅಷ್ಟಿಷ್ಟಲ್ಲ. ವೃತ್ತಿಗಾಯಕರಿಗೆ ಕಥನಕಾವ್ಯ ಗಾಯನ ಆಕರ್ಷಕ ಪ್ರದರ್ಶನ ಕಲೆ. ಪ್ರಧಾನ ಗಾಯಕನ ಜೊತೆಗೆ ಸಹಗಾಯಕರೂ ಇರುತ್ತಾರೆ. ಇದು ಸಮೂಹದ ನಡುವಿನ ಸಾಮೂಹಿಕ

ಗಾಯನ ಕಲೆ. ಗಾಯಕರು ಮತ್ತು ಪ್ರೇಕ್ಷಕರು ಪರಸ್ಪರ ಸ್ಪಂದಿಸಿದರೆ ಇದರ ಸೊಗಸು ಹೆಚ್ಚು. ಗಾಯನದ ಸಂದರ್ಭದಲ್ಲಿ ಗಾಯಕರ ಹಾಗೂ ಪ್ರೇಕ್ಷಕರ ನಡುವಿನ ಅಂತರ ಬಹಳ ಕಡಮೆ.

ವೃತ್ತಿಗಾಯಕರಂತೆ ಹವ್ಯಾಸಿ ಗಾಯಕರೂ ಕಥನಕಾವ್ಯಗಳನ್ನೂ ಹಾಡುವುದುಂಟು. ಇವರು ಸಾಮಾನ್ಯವಾಗಿ ಕೃಷಿ ಹಿನ್ನೆಲೆಯವರು. ಅಂದರೆ ಕೃಷಿಕರು ಅಥವಾ ಕೃಷಿಕರಿಗೆ ಸಹಾಯಕರು. ಕೃಷಿಕಾಯಕ ಕ್ರಿಯೆ ಇವರ ಗಾಯನಕ್ಕೆ ಸ್ಫೂರ್ತಿ. ನಾಟಿಹಾಕುವುದು, ಕಳೆ ಕೀಳುವುದು, ಏತ ಎತ್ತುವುದು, ರಾಶಿ ಒಕ್ಕುವುದು ಮೊದಲಾದ ಸಂದರ್ಭಗಳು ಇವರ ಹಾಡಿಗೆ ಸ್ಫೂರ್ತಿ. ಸಾಮೂಹಿಕ ಕಾಯಕದ ನಡುವೆ ಇವರ ಗಾಯನ; ಏಕಾಂತದಲ್ಲಲ್ಲ. ಹೊತ್ತು ಕಳೆಯುವುದಕ್ಕೋಸ್ಕರ ಸಾಮೂಹಿಕರ ನಡುವೆ ಹಾಡುವುದುಂಟು. ಮನೋರಂಜನೆಯ ಸಂದರ್ಭವೂ ಇಲ್ಲದಿಲ್ಲ. ಹವ್ಯಾಸಿ ಗಾಯಕರಿಗೆ ವೇಷಭೂಷಣ, ವಾದ್ಯಗಳ ಅಗತ್ಯವಿಲ್ಲ. ಅವರಿಗೆ ಕೇಳುವ ಸಹೃದಯ ಕಿವಿಗಳಿದ್ದರೆ ಸಾಕು. ಆಗ ಅದು ಕಾವೇರಿನದಿಯ ತುಂಬು ಪ್ರವಾಹದಂತೆ ಉಕ್ಕಿಹರಿಯುತ್ತದೆ.

ಎಷ್ಟೋ ಜನ ಹವ್ಯಾಸಿ ಗಾಯಕರು ವೃತ್ತಿಗಾಯಕರಷ್ಟೇ ಸೊಗಸಾಗಿ, ಧ್ವನಿಪೂರ್ಣವಾಗಿ ಹಾಡಬಲ್ಲರು. ಇದಕ್ಕೆ ಕನ್ನಡದಲ್ಲೂ ಸಾಕಷ್ಟು ಉದಾಹರಣೆಗಳಿವೆ. ಕಥೆಯನ್ನು ಕೇಳುವ, ಕಲಿಯುವ, ಹಾಡುವ ಗೀಳು ಇಬ್ಬರಲ್ಲೂ ಉಂಟು. ಇಬ್ಬರನ್ನೂ ತೌಲನಿಕವಾಗಿ ಅಭ್ಯಸಿಸಿದರೆ ಹಲವು ಸಮಾನ ಅಂಶಗಳು ವೇದ್ಯವಾಗುತ್ತವೆ. ವೃತ್ತಿಗಾಯಕರಲ್ಲಿ ಧಾರ್ಮಿಕ ಕಾವ್ಯಗಳು ಹೆಚ್ಚು: ಹವ್ಯಾಸಿ ಗಾಯಕರಲ್ಲಿ ಲೌಕಿಕ ಕಾವ್ಯಗಳು ಹೆಚ್ಚು.

ಸಾಮಾನ್ಯವಾಗಿ ಧಾರ್ಮಿಕ ಹಿನ್ನೆಲೆಯ ಕ್ರಿಯೆಯಲ್ಲಿ ಕಥನಕಾವ್ಯ ಅಂಕುರಗೊಳ್ಳುತ್ತದೆ. ಅನಂತರ ಇತರ ಆಯಾಮಗಳಿಗೆ ಹರಡುತ್ತದೆ. ಲೌಕಿಕ ಸಂದರ್ಭವೂ ಉಂಟು. ಕಥನಕಾವ್ಯ ಸಮೂಹದ ನಡುವೆ ಹುಟ್ಟಿ ಬೆಳೆಯುವ ಕಾವ್ಯ. ಹಾಡುವುದಕ್ಕೆ ಒಬ್ಬರಿಗಿಂತ ಹೆಚ್ಚು ಜನವಿದ್ದರೆ ಸೊಗಸು. ಕೇಳುವುದಕ್ಕೂ ಪರಿಷೆಯಿದ್ದರೆ ಸ್ವಾರಸ್ಯ. ಕೂಡಿಬಾಳುವುದಕ್ಕೆ ಜನಪದದ ಒತ್ತು. ಹಾಡಿಗೂ ಅಷ್ಟೆ. ಜನಪದ ಹಾಡು ಜನಪದರ ನಡುವೆ ಸ್ನೇಹಸೇತುವೆಯಂತೆ ಸಂವಹಿಸುತ್ತದೆ.

ಜನಪದ ಕಥನ ಕಾವ್ಯಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು :

1. ಪೌರಾಣಿಕ ಕಥನಕಾವ್ಯ
2. ಚಾರಿತ್ರಿಕ ಕಥನಕಾವ್ಯ
3. ಸಾಮಾಜಿಕ ಕಥನಕಾವ್ಯ
4. ಮಾಂತ್ರಿಕ ಕಥನಕಾವ್ಯ
5. ಅತಿಮಾನುಷ ಕಥನಕಾವ್ಯ
6. ಅದ್ಭುತ ಕಥನಕಾವ್ಯ
7. ರಮ್ಯ ಕಥನಕಾವ್ಯ
8. ಐತಿಹ್ಯ ಕಥನಕಾವ್ಯ

9. ವಿನೋದ ಕಥನಕಾವ್ಯ
10. ಧಾರ್ಮಿಕ ಕಥನಕಾವ್ಯ
11. ಬಲಿ ಸಂಬಂಧಿ ಕಥನಕಾವ್ಯ
12. ಪ್ರಣಯ ಸಂಬಂಧಿ ಕಥನಕಾವ್ಯ
13. ಕಾಲ್ಪನಿಕ ಕಥನಕಾವ್ಯ
14. ಸಾಹಸ ಕಥನಕಾವ್ಯ
15. ಲಾವಣಿ ಕಥನಕಾವ್ಯ

ಜನಪದ ಕಥನಕಾವ್ಯವನ್ನು ಪ್ರದರ್ಶನ ಕಲೆಯಾಗಿ ಪ್ರಸ್ತುತಿಪಡಿಸುವಾಗ ವೇಷಭೂಷಣ ಸಹಿತವಾಗಿರುವುದುಂಟು; ವೇಷಭೂಷಣ ರಹಿತವಾಗಿರುವುದುಂಟು. ಜನಪದ ವಾದ್ಯಸಹಿತವಾಗಿ ಹಾಡುವುದುಂಟು; ಜನಪದ ವಾದ್ಯರಹಿತವಾಗಿ ಹಾಡುವುದುಂಟು. ಪರಿಣತ ಗಾಯಕರು ಯಾವ ರೀತಿಯಲ್ಲಾದರೂ ಕೇಳುಗರನ್ನು ತೃಪ್ತಿಪಡಿಸಬಲ್ಲರು. ಜನಪದ ಕೇಳುಗರ ಮನಸ್ಸನ್ನು ಸಂಮೋಹಕ ರೀತಿಯಲ್ಲಿ ಆಕರ್ಷಿಸುವ ಶಕ್ತಿ ಜನಪದ ಕಾವ್ಯಗಳಿಗಿದೆ. ಜನಪದ ಕಥನ ಕಾವ್ಯಗಳು ಜನಪದರಿಗೆ ಸುಲಭವಾಗಿ ಸಂಸ್ಕೃತಿ ಶಿಕ್ಷಣವನ್ನು ನೀಡುತ್ತವೆ. ಅವು ಕೇವಲ ಮನೋರಂಜನೆಯ ವಿಷಯಗಳಲ್ಲ; ಜನಪದ ಸಂಸ್ಕೃತಿಯ ಸಾರಸರ್ವಸ್ವ.

ಜನಪದ ಕಥನಕಾವ್ಯಗಳನ್ನು ಮತ್ತು ದೀರ್ಘಕಾವ್ಯಗಳನ್ನು ಮೌಖಿಕವಾಗಿ ಕಲಿಸುವ ಗುರುಗಳುಂಟು. ಮೌಖಿಕವಾಗಿ ಕಲಿಯುವ ನಿಷ್ಠಾವಂತ ಶಿಷ್ಯರುಂಟು. ಧಾರ್ಮಿಕ ಹಿನ್ನೆಲೆಯ ವೃತ್ತಿಗಾಯಕರಲ್ಲಿ ಈ ಪ್ರವೃತ್ತಿ ಹೆಚ್ಚು.

ಅವರಿವರು ಹಾಡುವುದನ್ನು ಕೇಳಿ ಕಲಿತುಕೊಳ್ಳುವ ಹವ್ಯಾಸಿ ಗಾಯಕರು ಇದ್ದಾರೆ. ಗುರುಮುಖೇನ ಕಲಿಯುವವರು, ಕೇಳಿಕೆಯಿಂದ ಕಲಿಯುವವರು ಎರಡೂ ರೀತಿಯ ಗಾಯಕರು ಕನ್ನಡದಲ್ಲಿದ್ದಾರೆ. ಎರಡು ವರ್ಗದವರ ಕಲಿಕೆಯೂ ಮೌಖಿಕಕ್ರಿಯೆಯೆ. ಎಲ್ಲವೂ ನೆನಪಿನ ಫಲ. ಇದು ವಿಶಿಷ್ಟವಾದ ಸೃಜನಶೀಲ ಕಲೆಗಾರಿಕೆ. ಸಾಹಿತ್ಯವನ್ನು ಕಲೆಯಾಗಿಸುವುದರಲ್ಲಿ ಜನಪದರು ನಿಪುಣರು.

ಹಾಡುಗಾರನ ಉತ್ಸಾಹ, ಕೇಳುಗರ ಸ್ಪಂದನ ಪರಸ್ಪರ ಪೂರಕವಾಗಿರುತ್ತದೆ. ಕೇಳುಗರು ಇಲ್ಲದಿದ್ದರೆ ಕಥನಕಾವ್ಯ ಹುಟ್ಟುವುದಿಲ್ಲ, ಬೆಳೆಯುವುದಿಲ್ಲ, ಪ್ರದರ್ಶನಗೊಳ್ಳುವುದಿಲ್ಲ. ಸಂಘಜೀವಿಯಾದ ಮನುಷ್ಯನ ಸಾಂಘಿಕ ಸೃಜನಕ್ರಿಯೆಯ ಫಲ ಜನಪದ ಕಥನಕಾವ್ಯ.

ಕನ್ನಡದಲ್ಲಿ ಜನಪದ ಕಥನಕಾವ್ಯಗಳ ಸಂಗ್ರಹ ಹೆಚ್ಚಾಗಿ ನಡೆದಿಲ್ಲ. ಸಂಗ್ರಹದ ಪ್ರಾರಂಭದ ದಿನಗಳಿಂದಲೂ ಕೆಲವರ ಸಂಗ್ರಹ ಗ್ರಂಥಗಳಲ್ಲಿ ಇತರ ಗೀತೆಗಳ ಜೊತೆಗೆ ಒಂದೋ ಎರಡೋ ಕಥನ ಗೀತೆಗಳಿರುವುದುಂಟು. ಒಬ್ಬಿಬ್ಬರು ಮಾತ್ರ ಪ್ರತ್ಯೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಜನಪದ ಕಥನಕಾವ್ಯಗಳ ಸಂಗ್ರಹ ಸಮರ್ಪಕವಾಗಿಲ್ಲ; ಸಮಗ್ರವಾಗಿಲ್ಲ. ಕಥನಕಾವ್ಯಗಳು ದೀರ್ಘವಾಗಿರುವುದರಿಂದಲೋ ಏನೋ ಸಂಗ್ರಹಕ್ಕೆ ಹೆಚ್ಚು ಗಮನಕೊಟ್ಟಂತೆ ಕಾಣುವುದಿಲ್ಲ. ಕಾರಣ ಏನೇ ಇರಲಿ ಇತರ ಸಾಹಿತ್ಯಕ್ಕೆ ಹೋಲಿಸಿದರೆ ಜನಪದ ಕಥನಕಾವ್ಯಗಳ ಸಂಗ್ರಹ ಸಂಖ್ಯೆ ಅಧಿಕವಾಗಿಲ್ಲ. ಸಂಗ್ರಹಕ್ಕೆ ಹೆಚ್ಚು ಸಮಯ, ಸಂಯಮ ನಿರೀಕ್ಷಿಸುವ

ಕಥನಕಾವ್ಯಗಳು ಸ್ವತಂತ್ರವಾಗಿ ನಿರೂಪಣೆಯಾಗುವುದುಂಟು; ಮಹಾಕಾವ್ಯ ಗಾಯನದ ನಡುವೆ ಉಪಕಥೆಗಳಾಗಿಯೂ ಕಾಣಿಸಿಕೊಳ್ಳುವುದುಂಟು.

ಜನಪದ ಕಥನಕಾವ್ಯಗಳು ಸಾಮಾನ್ಯವಾಗಿ ದ್ವಿಪದಿ, ತ್ರಿಪದಿ, ಚೌಪದಿ, ರಗಳೆ ಛಂದೋ ಘಟಕಗಳಲ್ಲಿ ನಿರ್ಮಾಣಗೊಂಡಿವೆ. ಯಾವ ಛಂದಸ್ಸಿನ ಹಿಡಿತಕ್ಕೂ ಸಿಗದ ರಚನೆಗಳೂ ಉಂಟು. ಆದರೆ ಎಲ್ಲವೂ ಅಂಶಗಣ ಪ್ರಧಾನವಾಗಿವೆ. ಪದ್ಯಗಂಧಿಯಾದ ಗದ್ಯವೂ ತಲೆಹಾಕುವುದುಂಟು. ರೂಪ ಯಾವುದಾದರೂ ಉಂಟುಮಾಡುವ ಪರಿಣಾಮ ಅರ್ಥಪೂರ್ಣವಾಗಿರುತ್ತದೆ. ಏನೇ ಆಗಲಿ ಜನಪದ ಛಂದಸ್ಸನ್ನು ಶಿಷ್ಟ ಛಂದಸ್ಸಿನೊಡನೆ ಮಕ್ಕಿಕಾಮಕ್ಕಿ ತಾಳೆಮಾಡಲಾಗುವುದಿಲ್ಲ. ಹೆಸರಷ್ಟೇ ಸಾಮಾನ್ಯ; ಉಸಿರು ಬೇರೆ. ಜನಪದ ಛಂದಸ್ಸು ಸಂಗೀತಮಯ, ಸರಸಮಯ, ಸ್ವಾರಸ್ಯಮಯ. ಹಾಡುಗಾರಿಕೆಗೆ ಒಗ್ಗದ್ದು ಎಲ್ಲಾ ರೀತಿಯಲ್ಲೂ ಹೊರತು. ಸಾಧಾರಣವಾದುದನ್ನು ಅಸಾಧಾರಣವಾಗಿ ಬಿಂಬಿಸುವುದು ಜನಪದ ಹಾಡುಗಾರಿಕೆಯ ಹೆಗ್ಗಳಿಕೆ.

ಜನಪದ ಕಥನಗೀತೆಗಳನ್ನು ಅಚ್ಚಿಸುವಾಗ ಅಲ್ಲಲ್ಲಿ ಪಲ್ಲವಿ, ಹಾಡಿನ ಧಾಟಿ, ಧಾಟಿ ಬದಲಾವಣೆಗಳನ್ನು ಸೂಚಿಸುವ ರೂಢಿಯಿದೆ. ಆದರೆ ಇದು ಏನೇನೂ ಸಾಲದು. ಜನಪದ ಹಾಡುಗಾರಿಕೆಯನ್ನು ಅಕ್ಷರದಲ್ಲಿ ಕಟ್ಟಿಕೊಡುವುದು ಕಷ್ಟ. ಅದನ್ನು ಕೇಳಿಯೇ ಆನಂದಿಸಬೇಕು. ಜನಪದ ಸಂಗೀತ ಅವರ್ಣನೀಯ, ಆನಂದಮಯ. ಜನಪದ ಗಾಯನವನ್ನು ಕಲಿಕೆಯಿಂದಲೇ ಕರಗತಮಾಡಿಕೊಳ್ಳಬೇಕು, ಬೆಳೆಸಬೇಕು, ಉಳಿಸಬೇಕು. ಕೇವಲ ಅಕ್ಷರದ ವರ್ಣನೆ ಅಸ್ಥಿಪಂಜರ ಅಷ್ಟೆ. ಜನಪದ ಗಾಯನ ಕಲಿಯುತ್ತಾ ಪ್ರಯೋಗಿಸುವಂಥದ್ದು; ಪ್ರಯೋಗಿಸುತ್ತಾ ಕಲಿಯುವಂಥದ್ದು. ನಿರಂತರ ಚಲನಶೀಲತೆ ಅದರ ಗುಣ.

ಜನಪದ ಕಥನಕಾವ್ಯಗಳನ್ನು ಪ್ರದರ್ಶನ ಕಲಾರೂಪದಲ್ಲಿ ಹಾಡುವಾಗ ಒಬ್ಬ ಪ್ರಧಾನ ಗಾಯಕನಿರುತ್ತಾನೆ. ಅವನ ಜೊತೆಯಲ್ಲಿ ಒಬ್ಬರೋ ಇಬ್ಬರೋ ಸಹಾಯಕ ಗಾಯಕರಿರುತ್ತಾರೆ. ಸೊಲ್ಲು, ತನಿಸೊಲ್ಲು, ನಿಡುಸೊಲ್ಲು ಎತ್ತುವುದರಲ್ಲಿ, ಮುಂದುವರಿಸುವುದರಲ್ಲಿ, ಕಥೆಗೆ ಸಂಪರ್ಕ ಕಲ್ಪಿಸುವಲ್ಲಿ, ಕಥನ ವ್ಯಾಖ್ಯಾನವನ್ನು ಪ್ರಶ್ನಿಸುವಲ್ಲಿ, ವಿವಿಧ ವಾದ್ಯ ನುಡಿಸುವುದರಲ್ಲಿ, ಪ್ರಧಾನ ಗಾಯಕನಿಗೆ ತುಸು ವಿರಾಮ ದೊರಕಿಸಿಕೊಡುವುದರಲ್ಲಿ ಸಹಕಾಯಕರು ನೆರವಾಗುತ್ತಾರೆ. ಪ್ರಧಾನ ಗಾಯಕ, ಸಹಗಾಯಕರಿಬ್ಬರೂ ಪರಿಣತರಾದರೆ ಹಾಡುಗಾರಿಕೆಯ ಸೊಗಸು ತುತ್ತತುದಿಗೇರುವುದು. ಜನಪದ ಕಾವ್ಯಗಾಯನ ಸಾಮೂಹಿಕ ಗಾಯನ. ಅದು ಕೂಡು ಕುಟುಂಬದ ಕ್ರಿಯೆ.

ಜನಪದ ಕಥನಕಾವ್ಯ ನಿಂತನೀರಲ್ಲ; ಸಂಚಲಿತ ಸಲಿಲ. ಪ್ರತಿಪ್ರದರ್ಶನದಲ್ಲೂ ರೂಪಾಂತರಗೊಳ್ಳುತ್ತಲೇ ಇರುತ್ತದೆ. ಒಂದು ಕಥೆಯನ್ನು ಹತ್ತು ಜನ ಹಾಡಿದರೆ, ಹತ್ತೂ ಬೇರೆಬೇರೆ ಕಥನವಾಗಿರುತ್ತದೆ. ಯಾವ ಜನಪದ ಕಥನಕಾವ್ಯವೂ ಹುಟ್ಟಿದ ರೂಪದಲ್ಲೇ ಇರುವುದಿಲ್ಲ. ಪ್ರತಿಭಾವಂತ ಗಾಯಕನಲ್ಲಿ ಹೊಸ ಹೊಸ ಅಂಶಗಳು ಸೇರಿಕೊಳ್ಳುತ್ತಲೇ ಇರುತ್ತವೆ. ಜಾನಪದಕ್ಕೂ ಆನ್ವಯಿಕತೆಗೂ ಅನಿವಾರ್ಯ ನಂಟು. ಆನ್ವಯಿಕತೆ ಎಂಬ ಮಾತು ಹೊಸತಾದರೂ ಅದರ ಕ್ರಿಯೆ ಹಳೆಯದು. ಜಾನಪದದ ವಿಷಯದಲ್ಲಿ ಇನ್ನೂ

ಹಳೆಯದು. ಜಾನಪದದಲ್ಲಿ ನಿಧಾನವಾಗಿಯೋ ವೇಗವಾಗಿಯೋ ಆನ್ವಯಿಕತೆ ನಡೆಯುತ್ತಲೇ ಇರುತ್ತದೆ. ಜಾನಪದ ಆಧುನಿಕತೆಗೆ ಒಗ್ಗಿಕೊಳ್ಳಲು ಸದಾ ಪ್ರಯತ್ನಿಸುತ್ತಿರುತ್ತದೆ. ಜನಪದ ಕಥನಕಾವ್ಯದಲ್ಲೂ ಇಂಥ ಪ್ರಯತ್ನವನ್ನು ಗುರುತಿಸಬಹುದು.

ಜನಪದ ಕಥನಕಾವ್ಯದ ಅಧ್ಯಯನವೆಂದರೆ ಜನಪದ ಸಂಸ್ಕೃತಿಯ ಅಧ್ಯಯನವೆಂದೇ ಅರ್ಥ. ಸಂಸ್ಕೃತಿಯ ಅಂಶವಿಲ್ಲದ ಜನಪದ ಕಥನಕಾವ್ಯವಿಲ್ಲ. ಮನೋರಂಜನೆ ಕಥನಕಾವ್ಯದ ಗುರಿಯಾದರೂ ಅದೇ ಪರಮಗುರಿಯಲ್ಲ. ಹಲವು ಪ್ರಯೋಜನಗಳಲ್ಲಿ ಅದೂ ಒಂದು, ಅಷ್ಟೆ.

೨

ಕರ್ನಾಟಕ ಜಾನಪದ ಪರಿಷತ್ತಿನ ಸ್ಥಾಪಕರೂ ಜಾನಪದ ಲೋಕ ನಿರ್ಮಾಪಕರೂ ಸಂಸ್ಕೃತಿ ಆರಾಧಕರೂ ಆದ ನಾಡೋಜ ಎಚ್. ಎಲ್. ನಾಗೇಗೌಡರು ತಮ್ಮ ಜೀವಿತಾವಧಿಯ ಬಹುಭಾಗವನ್ನು ಜನಪದ ಸಾಹಿತ್ಯ ಸಂಗ್ರಹಕ್ಕೆ ಮೀಸಲಿಟ್ಟು ಊಹೆಗೂ ಮೀರಿದಷ್ಟು ಸಾಹಿತ್ಯವನ್ನು ಸಂಗ್ರಹಿಸಿದರು. ಆದರೆ ಸಂಗ್ರಹಿಸಿದ ಸಾಹಿತ್ಯವೆಲ್ಲ ಅವರ ಜೀವಿತಕಾಲದಲ್ಲಿ ಗ್ರಂಥರೂಪದಲ್ಲಿ ಪ್ರಕಟವಾಗಲಿಲ್ಲ. ಒಂದುವೇಳೆ ಅವರು ಸಂಗ್ರಹಿಸಿದ ಸಂದರ್ಭದಲ್ಲೇ ಪ್ರಕಟವಾಗಿದ್ದರೆ, ಎಚ್. ಎಲ್. ನಾಗೇಗೌಡರು ಕನ್ನಡದಲ್ಲಿ ಅತ್ಯಧಿಕ ಜನಪದ ಗ್ರಂಥಗಳನ್ನು ಪ್ರಕಟಿಸಿದವರಲ್ಲಿ ಅಗ್ರಗಣ್ಯರಾಗುತ್ತಿದ್ದರು; ಅಧಿಕ ಜನಪದ ಸಾಹಿತ್ಯ ಸಂಗ್ರಹಿಸಿದವರಲ್ಲೂ ಅಗ್ರಪಂಕ್ತಿಯವರಾಗುತ್ತಿದ್ದರು. ಆದರೆ ಹಾಗಾಗಲಿಲ್ಲ. ಎಚ್. ಎಲ್. ನಾಗೇಗೌಡರು ಜಾನಪದ ಸಂಸ್ಥೆಗಳ ನಿರ್ಮಾಣಕ್ಕೆ, ಪ್ರಚಾರಕ್ಕೆ ಹೆಚ್ಚು ಒತ್ತುಕೊಟ್ಟುದರಿಂದ, ಅವರ ಸಂಗ್ರಹ ಸಾಹಿತ್ಯದ ಪ್ರಕಟಣೆ ಹಿಂದೆಸರಿಯಿತು. ಹಲವು ಸಾಹಿತ್ಯಕ ವಿಷಯಗಳಲ್ಲಿ ಅವರು ಆದ್ಯರಾಗುವುದು ತಪ್ಪಿಹೋಯಿತು. ಈಗ ಆ ಕೊರತೆಯನ್ನು ತುಂಬುವ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಪರಿಷತ್ತು ಕಾರ್ಯೋನ್ಮುಖವಾಗಿದೆ.

ಜಾನಪದ ದ್ರಷ್ಟಾರ ಎಚ್. ಎಲ್. ನಾಗೇಗೌಡರು ವಿಧಿವಶರಾದ ಮೇಲೆ, ಶ್ರೀ ಜಿ. ನಾರಾಯಣರು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದರು. ಜಾನಪದ ಸರ್ವತೋಮುಖ ಏಳಿಗೆಗಾಗಿ ತ್ರೈವಾರ್ಷಿಕ ಜಾನಪದ ಯೋಜನೆಯನ್ನು ರೂಪಿಸಿದರು. ಅದರಲ್ಲಿ ಜನಪದ ಸಾಹಿತ್ಯದ ಪ್ರಕಟಣೆಗೆ ಅವಕಾಶ ಕಲ್ಪಿಸಿದರು. ಇದರಿಂದ ನಾಗೇಗೌಡರ ಸಂಗ್ರಹ ಸಾಹಿತ್ಯ ಗ್ರಂಥ ರೂಪಕ್ಕಿಳಿದು ಲೋಕಾರ್ಪಣೆಯಾಗಲು ಅವಕಾಶವಾಗಿದೆ.

ಎಚ್. ಎಲ್. ನಾಗೇಗೌಡರ ಸಂಗ್ರಹ ಸಾಹಿತ್ಯವೆಲ್ಲ ಧ್ವನಿಸುರುಳಿಯಲ್ಲಿದೆ. ಅದನ್ನು ಲಿಪ್ಯಂತರ ಮಾಡಿ, ವಿಷಯವಾರು ವಿಂಗಡಿಸಿ, ವೈಜ್ಞಾನಿಕವಾಗಿ ಸಂಪಾದಿಸುವುದು ಶ್ರಮದಾಯಕ ಕೆಲಸ. ವೈವಿಧ್ಯವೂ ವರ್ಣರಂಜಿತವೂ ಸಾಂಸ್ಕೃತಿಕ ಸಂಪದ್ಭರಿತವೂ ಆದ ಸಾಹಿತ್ಯದ ಪ್ರಕಟಣೆ ಅಗತ್ಯವಾಗಿದೆ. ಕಾಲಗರ್ಭದಲ್ಲಿ ಕಣ್ಮರೆಯಾಗುತ್ತಿದ್ದ ಅಗಾಧ ಸಾಹಿತ್ಯದಲ್ಲಿ ಸ್ವಲ್ಪವನ್ನಾದರೂ ಉಳಿಸಿಕೊಳ್ಳುವುದಕ್ಕೆ ಅನುವಾಗುತ್ತದೆ. ನಾಡೋಜಗೌಡರು ಯಾವ ನಿರೂಪಕರಿಂದ ಸಾಹಿತ್ಯ ಸಂಗ್ರಹಿಸಿದ್ದರೋ ಅದೇ ನಿರೂಪಕರಿಂದ ಅನಂತರದ ಸಾಹಿತ್ಯಾಸಕ್ತರು ಸಂಗ್ರಹಕಾರ್ಯ ನಡೆಸಿ ಪುಸ್ತಕ ಪ್ರಕಟಿಸಿರುವುದೂ ಉಂಟು. ಇದರಿಂದ ಮೊದಲ ಪಠ್ಯವಾಗುತ್ತಿದ್ದದ್ದು ಎರಡನೇ ಪಠ್ಯವಾಗುವ ಪರಿಸ್ಥಿತಿ ಪ್ರಾಪ್ತವಾಗಿದೆ. ತೌಲನಿಕ ಅಧ್ಯಯನಕ್ಕೆ ಇವು

ಸಹಕಾರಿಯಾಗುತ್ತವೆ. ನಾಗೇಗೌಡರು ಸಂಗ್ರಹಿಸಿದ ಸಾಹಿತ್ಯ ಅವರು ಸಂಗ್ರಹಿಸಿದ ಮೂವತ್ತು ನಲವತ್ತು ವರ್ಷಗಳಾದ ಮೇಲೆ ಪ್ರಕಟವಾಗುತ್ತಿದೆ. ಈ ಸಾಹಿತ್ಯವನ್ನು ಕಲಿತು, ನೆನಪಿನಿಂದ ಉಳಿಸಿಕೊಂಡುಬಂದು, ನಿರೂಪಿಸಿದ ಮೂಲ ಕರ್ತೃಗಳಲ್ಲಿ ಹೆಚ್ಚು ಮಂದಿ ಇಂದು ಬದುಕಿಲ್ಲ. ಅವರು ಉಳಿಸಿಹೋದ ಸಾಹಿತ್ಯ ಮಾತ್ರ ನಮ್ಮ ಮುಂದಿದೆ.

ಎಚ್. ಎಲ್. ನಾಗೇಗೌಡರು ತಮ್ಮ ಹಿಂದಿನ ಜನಪದ ಸಂಗ್ರಹಗಳಲ್ಲಿ ಕೆಲವು ಕಥನ ಕಾವ್ಯಗಳನ್ನು ಸೇರಿಸಿರುವುದುಂಟು. ಆದರೆ ಕಥನ ಗೀತೆಗಳನ್ನೇ ಪ್ರತ್ಯೇಕ ಗ್ರಂಥವಾಗಿ ಪ್ರಕಟಿಸಿಲ್ಲ. ಪ್ರಸ್ತುತ ಪುಸ್ತಕ ಕಥನಕಾವ್ಯಗಳಿಗೇ ಮೀಸಲಾಗಿದೆ. ಇದರಲ್ಲಿ ಅವರು ಸಂಗ್ರಹಿಸಿರುವ ಎಲ್ಲ ಕಥೆಗಳೂ ಇಲ್ಲ. ಕೆಲವು ಮಾತ್ರ ಇವೆ.

ಕನ್ನಡ ಜನಪದ ಕಥನಕಾವ್ಯಗಳು ಗ್ರಂಥದ ಹದಿನೆಂಟು ಕಥನಗಳನ್ನು ವಿವಿಧ ಸ್ತ್ರೀ ಪುರುಷರು ಹಾಡಿದ್ದಾರೆ. ಇವರಲ್ಲಿ ಧಾರ್ಮಿಕ ಹಿನ್ನೆಲೆಯ ವೃತ್ತಿಗಾಯಕರುಂಟು; ಕೃಷಿ ಹಿನ್ನೆಲೆಯ ಹವ್ಯಾಸಿ ಗಾಯಕರುಂಟು. ಇವರಲ್ಲಿ ಹಿಂದುಳಿದ ವರ್ಗದವರೇ ಹೆಚ್ಚು. ಎಲ್ಲವೂ ಮೂಲ ಗಾಯಕರು ಹಾಡಿದಂತೆಯೇ ಇವೆ. ಎಲ್ಲಾ ಕಥನಕಾವ್ಯಗಳಲ್ಲೂ ಪ್ರಾದೇಶಿಕ ವೈವಿಧ್ಯತೆ, ಭಾಷಾ ವೈವಿಧ್ಯತೆ, ನುಡಿ ನುಡಿಗಟ್ಟುಗಳ ವೈವಿಧ್ಯತೆಯೂ ನಿಚ್ಚಳವಾಗಿ ಕಂಡುಬರುತ್ತದೆ.

ಪ್ರಸ್ತುತ ಗ್ರಂಥದ ಕಥನಕಾವ್ಯಗಳನ್ನು ವಸ್ತು ವಿಷಯದ ಹಿನ್ನೆಲೆಯಲ್ಲಿ ಸ್ಥೂಲವಾಗಿ ಹೀಗೆ ವಿಂಗಡಿಸಿದೆ :

ಮಾಂತ್ರಿಕ ಕಥನಕಾವ್ಯಗಳು : ಮಲ್ಲಿಗೆರಾಯ, ಹೂವಿನ ನಾಗಮ್ಮ, ಸ್ಯಾನಯ್ಯ.

ಅತಿಮಾನುಷ ಕಥನಕಾವ್ಯಗಳು : ಮ್ಯಾದರ ಹೆಣ್ಣು, ಗುಲಗಂಜಿ ಚೆನ್ನವ್ವ, ಸಿರಿದೇವಿ, ರುದ್ರಕುಮಾರ.

ಅದ್ಭುತ ಕಥನಕಾವ್ಯಗಳು : ಭುಜಂಗರಾಯ, ಚದುರಂಗ ಮಹಾರಾಜ.

ಸಾಮಾಜಿಕ ಕಥನಕಾವ್ಯಗಳು : ಶಿವಗಂಗೆ, ವೀರದಿಮ್ಮವ್ವ, ಅತ್ತೆ ಸೊಸೆಯರು, ಕೆರೆಕಟ್ಟೊ ಒಡ್ಡರಯ್ಯ, ಹೊಲೆಯರ ಹೈದ, ಹಾರುವಯ್ಯ ಮಾದಗಿತ್ತಿ ಹಾಡು, ಸತಿ ಪುರುಷರ ಹಾಡು.

ಐತಿಹ್ಯ ಕಥನಕಾವ್ಯ : ಅಣ್ಣ ತಂಗಿಯರ ಹಾಡು.

ರಮ್ಯ ಕಥನಕಾವ್ಯ : ಶಿಟವಿ ಕಥೆ.

ಪ್ರಸ್ತುತ ಜನಪದ ಕಥನಕಾವ್ಯಗಳು ಭಿನ್ನಪಾಠಗಳ ಅಧ್ಯಯನಕ್ಕೆ ಧಾರಾಳವಾಗಿ ಉಪಯೋಗಕ್ಕೆ ಬರುತ್ತವೆ. ಸಾಮಾನ್ಯ ಆಶಯಗಳುಳ್ಳ ಕಥನಕಾವ್ಯಗಳು ತೌಲನಿಕ ಅಧ್ಯಯನಕ್ಕೆ ಆಕರವಾಗುತ್ತವೆ. ಕೆಲವು ಹೊಸವು. ಇಂಥವು ಮೊದಲಬಾರಿಗೆ ಅಧ್ಯಯನಕ್ಕೆ ತೆರೆದುಕೊಳ್ಳುತ್ತಿವೆ.

ಈ ಅಪರೂಪವಾದ ಕಾವ್ಯಗಳನ್ನು ಹಾಡಿರುವ ಮೂಲಗಾಯಕರನ್ನು ತಂಪುಹೊತ್ತಿನಲ್ಲಿ ನೆನೆಯಬೇಕು. ಅವರು ತಮ್ಮ ಬದುಕಿನಲ್ಲಿ ಏನನ್ನು ಕಂಡರೋ ಎಷ್ಟನ್ನು ಉಂಡರೋ

ಗೊತ್ತಿಲ್ಲ. ಬದುಕಿನ ಪರ್ಯಂತ ಬಡತನವನ್ನೇ ಹಾಸುಹೊದ್ದುಕೊಂಡಿದ್ದ ಈ ನಿರಕ್ಷರರು ಶ್ರೀಮಂತವಾದ ಸಾಹಿತ್ಯವನ್ನು ನಮಗೆ ಬಿಟ್ಟಿದ್ದಾರೆ. ಇದೆಲ್ಲ ಅವರದೇ ಸೃಷ್ಟಿ; ಇದಕ್ಕೆಲ್ಲ ಅವರೇ ಸ್ಫೂರ್ತಿ. ಸಮಗ್ರ ಜನಪದ ಸಾಹಿತ್ಯಕ್ಕೆಲ್ಲ ಅವರೇ ನಿಜವಾದ ವಾರಸುದಾರರು. ಸಂಗ್ರಹಿಸಿ ಪ್ರಕಟಿಸುತ್ತಿರುವ ನಾವು ನೆಪಮಾತ್ರರರು.

ಜಾನಪದ ರೂವಾರಿ ಎಚ್. ಎಲ್. ನಾಗೇಗೌಡರು ವಿಪುಲವಾಗಿ ಸಂಗ್ರಹಿಸಿರುವ ಜನಪದ ಸಾಹಿತ್ಯವನ್ನು ಸಂಯೋಜಿಸಿ, ಸಂಪಾದಿಸಿ, ಪ್ರಕಟಣೆಗೆ ಸಿದ್ಧಗೊಳಿಸುವ ಜವಾಬ್ದಾರಿಯನ್ನು ನನಗೆ ವಹಿಸಿದ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಮತ್ತು ಇತರ ಪದಾಧಿಕಾರಿಗಳಿಗೆ ನಾನು ಆಭಾರಿಯಾಗಿದ್ದೇನೆ. ಸಾಧ್ಯವಾದಮಟ್ಟಿಗೆ ಶ್ರಮವಹಿಸಿ, ವೈಜ್ಞಾನಿಕವಾಗಿ, ಗ್ರಂಥವನ್ನು ಸಂಪಾದಿಸಿ, ಪ್ರಕಟಣೆಗೆ ಸಿದ್ಧಪಡಿಸಿದ್ದೇನೆ. ಓದುಗ ಸಹೃದಯರಿಗೆ ಸಹಾಯವಾಗಲೆಂದು, ದೀರ್ಘ ಪ್ರಸ್ತಾವನೆ, ಅರ್ಥಕೋಶ, ನಿರೂಪಕರ ಪರಿಚಯ ಕೊಟ್ಟಿದೆ. ಜನಪದ ಕಾವ್ಯಾಸಕ್ತರು ಇವುಗಳನ್ನು ಉಪಯೋಗಿಸಿಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ದಿವಂಗತ ಎಚ್. ಎಲ್. ನಾಗೇಗೌಡರು ಸಂಗ್ರಹಿಸಿದ ಈ ಕಥನಕಾವ್ಯಗಳನ್ನು ಡಾ॥ ಚಕ್ಕೆರೆ ಶಿವಶಂಕರ್, ಡಾ॥ ಕುರುವ ಬಸವರಾಜ್, ಶ್ರೀ ವ. ನಂ. ಶಿವರಾಮು, ಶ್ರೀಮತಿ ಸರ್ವಮಂಗಳ ಲಿಪ್ಯಂತರ ಮಾಡಿದ್ದಾರೆ. ಶ್ರೀಮತಿ ಯಶೋಧ ಬೆರಳಚ್ಚು ಮಾಡಿದ್ದಾರೆ.

ದಿವಂಗತ ನಾಗೇಗೌಡರು ತಾವು ಸಂಗ್ರಹಿಸಿದ ಸಾಹಿತ್ಯವನ್ನು ತಾವೇ ಸಂಪಾದಿಸಿ ಪ್ರಕಟಿಸಿದ್ದರೆ ಗ್ರಂಥ ಯಾವ ರೂಪದಲ್ಲಿರುತ್ತಿತ್ತೋ ಗೊತ್ತಿಲ್ಲ. ಪ್ರಸ್ತುತ ಸಂಪಾದಿತ ಗ್ರಂಥ ಅವರ ಆತ್ಮಕ್ಕೆ ಪ್ರಿಯವಾಗಬಹುದೆಂದು ಭಾವಿಸಿದ್ದೇನೆ. ಕನ್ನಡ ಜನಪದ ಕಥನಕಾವ್ಯಗಳು ಗ್ರಂಥದ ಸಿದ್ಧತೆಗೆ, ಪ್ರಕಟಣೆಗೆ ನೆರವಾದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು

15–8–2007

**–ಪ್ರೊ॥ ಡಿ. ಲಿಂಗಯ್ಯ**

# ೧. ಮಲ್ಲಿಗೆರಾಯ

**ತಾನು ತಾನಂದನೆ** ॥ **ಪಲ್ಲವಿ** ॥

ಏಳು ಜನ ಮಕ್ಕಾಳಂತೆ ತಾನು ತಾನಂದನೆ
ಹೊತ್ತುಮುಂಚೆ ಎದ್ದೀದಾರು ತಾನು ತಾನಂದನೆ
ಸಾನ ಜಪ ಮಾಡರಾಗ ತಾನು ತಾನಂದನೆ
ದೇವ್ರ ಪೂಜೆ ಮಾಡಾರೀಗ ತಾನು ತಾನಂದನೆ
ಹಿರಿಯಣಿ ಸಂಪೀಗಿರಾಯ ತಾನು ತಾನಂದನೆ
ಕಿರಿತಮ್ಮ ಮಲ್ಲೀಗಿರಾಯ ತಾನು ತಾನಂದನೆ
ಏಳು ಜನ ಅಣ್ಣ ತಮ್ಮಾದೀರು ತಾನು ತಾನಂದನೆ
ಊಟಾನ ಮಾಡುವಾರು ತಾನು ತಾನಂದನೆ
ಕಯ್ಯ ಬಾಯ ತೊಳುದಾರು ತಾನು ತಾನಂದನೆ
ಜಗುಲೀಗೆ ಬಂದಾರಾಗ. ತಾನು ತಾನಂದನೆ

ಹಿರಿಯಣ್ಣನೆಂಡಾತಿ ತಾನು ತಾನಂದನೆ
ಹರಿವ್ರೋಣೆಂಬಾಳು ದೇವಿ ತಾನು ತಾನಂದನೆ
ಅಣತಮ್ಮರೇಳು ಜನ ತಾನು ತಾನಂದನೆ
ಕುಂತಿಳ್ಗೆನು ಹಾಕಾರು ತಾನು ತಾನಂದನೆ
ಕಿರಿತಮ್ಮ ಮಲ್ಲೀಗುರಾಯ ತಾನು ತಾನಂದನೆ
ಆನೇ ಲಾಯಕ್ಕೋಗಿದಾನು ತಾನು ತಾನಂದನೆ
ಆನೆ ಬುಟ್ಟೆ ಹೊರಗೆ ಹೊಡುದ ತಾನು ತಾನಂದನೆ
ಆನೆಗರುಜಣ ಬಿಗುದ ತಾನು ತಾನಂದನೆ
ಆನೆ ಮೇಲೆ ಏರೀದಾನು ತಾನು ತಾನಂದನೆ
ಆನೆ ಮೇಲೆ ಏರಿಕೊಂಡು ತಾನು ತಾನಂದನೆ
ಸಂತೀಗೆ ನಡುದಾರು ತಾನು ತಾನಂದನೆ
ಸಂತೀಗೆ ನಡುದಾರು. ತಾನು ತಾನಂದನೆ

ಸಂತೇಲಿ ಇಳಿದಾರು ತಾನು ತಾನಂದನೆ
ಅಂಗಡಿಗೆ ನಡುದಾರು ತಾನು ತಾನಂದನೆ
ಏಳು ಮಾನ ಉಪ್ಪುಕೊಂಡು ತಾನು ತಾನಂದನೆ
ಏಳು ಕಾಯಿ ಬುಡುಸಾರು ತಾನು ತಾನಂದನೆ
ಆನೆ ಮೇಲೆ ಏರಿಕೊಂಡು ತಾನು ತಾನಂದನೆ
ಮನೆಗಾರು ಬಂದಾರಾಗ. ತಾನು ತಾನಂದನೆ

ಅಣ್ಣ ತಮ್ಮಾರೇಳು ಜನ ತಾನು ತಾನಂದನೆ
ಸಂಜೆಯಾದ್ರು ಆದಾವೀಗ ತಾನು ತಾನಂದನೆ
ಊಟಾ ತಿಂಡಿ ಮುಗದಾವೀಗ ತಾನು ತಾನಂದನೆ
ಅಣತಮ್ಮಾರೇಳು ಜನ ತಾನು ತಾನಂದನೆ
ಜಗಲೀಗೆ ಬಂದಾರಾಗ ತಾನು ತಾನಂದನೆ
ಬೆಳುಗಾಗೇಳು ಗಂಟೆಗೆ ತಾನು ತಾನಂದನೆ
ಮರುವೀನ ಬಯಲಿಗೆ ತಾನು ತಾನಂದನೆ
ಅಪ್ಪ ಮಾತು ಕೇಳಿಕೊಂಡು ತಾನು ತಾನಂದನೆ
ಕಾಗದ ಪತ್ರ ಬರೆದುಕೊಂಡು ತಾನು ತಾನಂದನೆ
ಅಣ್ಣ ತಮ್ಮರೇಳು ಜನ ತಾನು ತಾನಂದನೆ
ಬೆಳಗಾಗೇಳು ಗಂಟೆಗೀಗ ತಾನು ತಾನಂದನೆ
ಅವರ್ಹಟ್ಟಿ ಬುಟ್ಟಿ ಬಂದಾರಾಗ. ತಾನು ತಾನಂದನೆ

ಮರುವೀನ ಬಯಲಿಗೆ ತಾನು ತಾನಂದನೆ
ಎಲ್ಲಾರಲ್ಲಿ ಸೇರಿದಾರು ತಾನು ತಾನಂದನೆ
ಕುಂತು ಮಸಲತ್ತು ಮಾಡೀದಾರು ತಾನು ತಾನಂದನೆ
ಹಿರಿಯಣ್ಣ ಸಂಪೀಗಿರಾಯ ತಾನು ತಾನಂದನೆ
ಕಿರಿತಮ್ಮ ಮಲ್ಲಿಗೆರಾಯ ತಾನು ತಾನಂದನೆ
ಬಿಲ್ಲೀಗೆ ಕುಂತೀದಾರು ತಾನು ತಾನಂದನೆ
ಮಿಕವಾರು ನುಗ್ಗೀತಲ್ಲಿ ತಾನು ತಾನಂದನೆ
ಹಿರಿಯಣ್ಣ ಸಂಪೀಗಿರಾಯ ತಾನು ತಾನಂದನೆ
ಕುಂತಂಥ ಬಿಲ್ಲೀಗೆ ನೋಡು ತಾನು ತಾನಂದನೆ
ಮಿಕವಾರು ಹಾರುವಾಗ ತಾನು ತಾನಂದನೆ
ಬಿಲ್ಲೆತ್ತಿ ಹೊಡೆದಾನೆ ತಾನು ತಾನಂದನೆ
ಬಿಲು ಮೆಟ್ಟಿ ಹಾರುವಾಗ ತಾನು ತಾನಂದನೆ
ಕಿರಿತಮ್ಮ ಮಲ್ಲೀಗೆರಾಯ ತಾನು ತಾನಂದನೆ
ಅವ್ರನಾರು ಹೊಡೆದ ಮಿಕವ ತಾನು ತಾನಂದನೆ
ಕಾಲಡಿಗೆ ಎಳುದಾರು ತಾನು ತಾನಂದನೆ
ಹಂಬನೆ ಕಡುದಾರು ತಾನು ತಾನಂದನೆ
ಕಾಲಾನೆ ಕಟ್ಟಾರಯ್ಯ ತಾನು ತಾನಂದನೆ
ಹಂಪಲ್ಲಿ ಹಾಕಾರಿನ್ನು ತಾನು ತಾನಂದನೆ
ನೀರಿರು ತಳಾದಲ್ಲಿ ತಾನು ತಾನಂದನೆ
ಅಡುಗೇಯ ಮಾಡಾರಲ್ಲಿ. ತಾನು ತಾನಂದನೆ

ಹಿರಿಯಣ್ಣನೆಂಡಾತಿ ತಾನು ತಾನಂದನೆ
ಹರಿವ್ರೋಣೆಂಬಾಳು ದೇವಿ ತಾನು ತಾನಂದನೆ
ಕಿರಿತಮ್ಮನೆಂಡಾತಿ ತಾನು ತಾನಂದನೆ
ಸಂಪೂತಿನೆಂಬೋಳಾಕೆ ತಾನು ತಾನಂದನೆ
ಏನೆಂದು ಬಂದಾಳಾಗ ತಾನು ತಾನಂದನೆ
ಹೊತ್ತು ಮುಂಚೆ ಎದ್ದಾಳಾಗ ತಾನು ತಾನಂದನೆ
ಬಾಗಲ ತಗದಾಳಾಗ ತಾನು ತಾನಂದನೆ
ಹಾಳುಮೇಡದ ಜೋಗಿ ಬಂದು ತಾನು ತಾನಂದನೆ
ಬಾಗಲ ಮುಂದೆ ಕುಂತವ್ನೆ ತಾನು ತಾನಂದನೆ
ಹಿರಿಯಣ್ಣನೆಂಡಾತಿ ತಾನು ತಾನಂದನೆ
ಹರಿವ್ರೋಣೆಂಬಾಳುದೇವಿ ತಾನು ತಾನಂದನೆ
ಪಡಿಗೋಳ ತುಂಬಾಳಾಕೆ ತಾನು ತಾನಂದನೆ
ಕೊಳ್ಳಯ್ಯ ಜೋಗಿ ಭಿಕಸ ತಾನು ತಾನಂದನೆ
ನೀ ಕೊಟ್ಟಂಥ ಪಡಿಗಳು ತಾನು ತಾನಂದನೆ
ಮುಟ್ಟಂಥ ಮಗುನಲ್ಲೆ ತಾನು ತಾನಂದನೆ
ಮಲ್ಲೀಗೆರಾಯನು ಹೆಂಡತಿ ತಾನು ತಾನಂದನೆ
ಸಂಪೋತಿ ಇಲುವೇನೆ? ತಾನು ತಾನಂದನೆ
ಸಂಪೋತಿ ಇಲ್ಲ ಕಾಣೋ ತಾನು ತಾನಂದನೆ
ತವ್ರ ಮನೆಗ್ಹೋಗಾಳಾಕೆ ತಾನು ತಾನಂದನೆ
ಕೊಳ್ಳಯ್ಯ ಭಿಕಸ ಜೋಗಿ ತಾನು ತಾನಂದನೆ
ಪಡಿ ಕೊಟ್ರ ಮುಟ್ಟಾನಿಲ್ಲ ತಾನು ತಾನಂದನೆ
ಕುಂತಲ್ಲಿಂದ ಏಳಾಲಿಲ್ಲ ತಾನು ತಾನಂದನೆ
ಬೆಳಗಾಗಾರು ಗಂಟೆಗೆ ತಾನು ತಾನಂದನೆ
ಬಂದಂಥ ಜೋಗಿ ನೀನು ತಾನು ತಾನಂದನೆ
ಹೋಗಂದ್ರೆ ಹೋಗೋದಿಲ್ಲ ತಾನು ತಾನಂದನೆ
ಪಡಿಕೊಟ್ರು ಮುಟ್ಟಾನಿಲ್ಲ ತಾನು ತಾನಂದನೆ
ಅಷ್ಟಂಬ ಮಾತು ಕೇಳಿ ತಾನು ತಾನಂದನೆ
ಸಂಪೋತಿ ಕೊಡ್ಲಿ ಪಡಿಯ ತಾನು ತಾನಂದನೆ
ಸಂಪೋತಿ ಎಂಬೋಳು ತಾನು ತಾನಂದನೆ
ಏಳು ಮ್ಯಾಲುಪ್ಪರಗಿಳಿದಳು ತಾನು ತಾನಂದನೆ
ಏಳು ಮ್ಯಾಲುಪ್ಪರಿಗೆ ಕೆಳಗೆ ತಾನು ತಾನಂದನೆ
ಇಳುದಾರು ಬಂದಾಳಾಕೆ ತಾನು ತಾನಂದನೆ

ಕೊಳ್ಳಯ್ಯ ಜೋಗಿ ಭಿಕ್ಸ ತಾನು ತಾನಂದನೆ
ಹರಿವಾಣಿ ಭಿಕ್ಸಾ ತಂದು ತಾನು ತಾನಂದನೆ
ಮೂರು ಮೆಟ್ಲ ಕೆಳಗೆ ಇಳಿಯೆ ತಾನು ತಾನಂದನೆ
ಅಲ್ಲಿ ಕೊಟ್ರೆ ಮುಟ್ಟುವನಲ್ಲ ತಾನು ತಾನಂದನೆ
ಮೂರು ಮೆಟ್ಲ ಕೆಳಗೆ ಬಂದು ತಾನು ತಾನಂದನೆ
ಕೊಳ್ಳಯ್ಯ ಜೋಗಿ ಭಿಕ್ಸ ತಾನು ತಾನಂದನೆ
ನನ್ನ ಜೋಳಿಗ್ಗೆ ಸುರಿ ಎಂದ ತಾನು ತಾನಂದನೆ
ಜೋಳಿಗ್ಗೆ ಸುರಿವಾಗ ತಾನು ತಾನಂದನೆ
ನಾಗುಬೆತ್ತ ತಗುದಾನೆ ತಾನು ತಾನಂದನೆ
ಬೆನ್ನಮ್ಯಾಲೆ ಎಳುದಾನೆ ತಾನು ತಾನಂದನೆ
ಕರಿನಾಯಿ ಮಾಡಿಕೊಂಡ ತಾನು ತಾನಂದನೆ
ಜೋಗಿ ಮುಂದಿಂದ ಹೊರಟ ತಾನು ತಾನಂದನೆ
ನಾಯಾರಿ ಹಿಂದಿಂದೆ ಓಡಿತ್ತು ತಾನು ತಾನಂದನೆ
ನಾಯಾರಿ ಹಿಂದಿಂದೆ ಓಡಿತ್ತು. ತಾನು ತಾನಂದನೆ

ಹರಿವ್ರೋಣೆಂಬಾಳು ದೇವಿ ತಾನು ತಾನಂದನೆ
ಏಳು ತಿಂಗಳು ಗರುಬಿಣಿ ತಾನು ತಾನಂದನೆ
ಹಿಡಿಯಕ್ಕೆ ಹೋದಾರೆ ತಾನು ತಾನಂದನೆ
ಕಚ್ಚಾಕೆ ಬರುತಾದೆ ತಾನು ತಾನಂದನೆ
ಹಾಳಮಾಡದ ಜೋಗಿ ಅಪ್ಪ ತಾನು ತಾನಂದನೆ
ಕರಿನಾಯಿ ಮಾಡಿ ಒಯ್ದ. ತಾನು ತಾನಂದನೆ

ಅಷ್ಟಂಬಗಳಿಗೆ ಒಳಗೆ ತಾನು ತಾನಂದನೆ
ಬ್ಯಾಟೆಗ್ಹೋದೋರು ಬಂದ್ರು ತಾನು ತಾನಂದನೆ
ಬಚ್ಚಲಿಗೆ ನಡುದಾರು ತಾನು ತಾನಂದನೆ
ಕೈ ಕಾಲು ತೊಳುದಾರು ತಾನು ತಾನಂದನೆ
ಬಳಿಗಾರು ಒಂದರಗಳಿಗೆ ತಾನು ತಾನಂದನೆ
ಹಿರಿಯಣ್ಣ ಸಂಪೀಗೆರಾಯ ತಾನು ತಾನಂದನೆ
ಹಂಪು ಬಿಟ್ಟದ್ದು ಹೆಂಗೆ ತಾನು ತಾನಂದನೆ
ಮಾಂಸ ಹಂಚದ್ದು ಹೆಂಗೆ? ತಾನು ತಾನಂದನೆ
ನೀ ಮಾಂಸ ಬೇಡಾಬೇಕೆ? ತಾನು ತಾನಂದನೆ
ಸಂತೋಸಲಿ ಉಣಾಬೇಕು ತಾನು ತಾನಂದನೆ

ವಷ್ಟಂಬ ಮಾತು ಕೇಳಿ ತಾನು ತಾನಂದನೆ
ಹರಿವ್ರೋಣೆಂಬಾಳು ದೇವಿ ತಾನು ತಾನಂದನೆ
ಆ ಮಾಂಸ ಬೇಸಾಳಾಕೆ ತಾನು ತಾನಂದನೆ
ಊಟಕ್ಕೆ ನೀಡಾಳಂತೆ ತಾನು ತಾನಂದನೆ
ಆರು ಜನ ಅಣತಮ್ಮಾದೀರು ತಾನು ತಾನಂದನೆ
ಊಟಾಕೆ ಕುಂತೀದಾರು ತಾನು ತಾನಂದನೆ
ತಮ್ಮ ಮಲ್ಲಿಗೆರಾಯ ತಾನು ತಾನಂದನೆ
ಉಪ್ಪರುಗ್ಗೆ ನಡುದಾನು ತಾನು ತಾನಂದನೆ
ಪಟ್ಟೆಯ ಮಂಚಾನೇರಿ ತಾನು ತಾನಂದನೆ
ಮೊಕು ಸೆರುಗ ಹೊದ್ದಾನೀಗ ತಾನು ತಾನಂದನೆ
ಮೊಕು ಸೆರಗೆ ಹೊದ್ದಾನಾಗ ತಾನು ತಾನಂದನೆ
ಅಲ್ಲಾರು ಮಲಿಗ್ಯಾನು. ತಾನು ತಾನಂದನೆ

ಆರು ಜನ ಅಣ್ಣತಮ್ಮಾದೀರು ತಾನು ತಾನಂದನೆ
ಅಡಿಗೂಟ ಮಾಡಿಕೊಂಡು ತಾನು ತಾನಂದನೆ
ಕೈ ಬಾಯ ತೊಳುದಾರು ತಾನು ತಾನಂದನೆ
ಜಗಲೀಗೆ ಬಂದಾರಾಗ ತಾನು ತಾನಂದನೆ
ಸಂಪೋತಿನಂಬೋಳು ತಾನು ತಾನಂದನೆ
ಎಲ್ಲಿಗೆ ಹೋದಾಳು ದೇವಿ? ತಾನು ತಾನಂದನೆ
ಹಿರಿಯಣ್ಣ ಸಂಪೀಗೆರಾಯ ತಾನು ತಾನಂದನೆ
ಹರಿವಾಣಂಬೋಳು ದೇವಿ ತಾನು ತಾನಂದನೆ
ಸತ್ಯಾನ ಹೇಳಬೇಕು ತಾನು ತಾನಂದನೆ
ಹೊಡಿತೀನಿ ನಿನ್ನ ನೋಡು ತಾನು ತಾನಂದನೆ
ಸಂಪೋತಿ ಇಲ್ಲ ಸ್ವಾಮಿ ತಾನು ತಾನಂದನೆ
ತವ್ರಮನೆಗ್ಹೋದಾಳಾಕೆ. ತಾನು ತಾನಂದನೆ

ಬಟ್ಟೆ ಕೋಮೀಯ ಎಳುದ ತಾನು ತಾನಂದನೆ
ಜೋಡಿಸಿ ಗುಂಡಾನ ತುಂಬಿ ತಾನು ತಾನಂದನೆ
ಹೆಂಡಾತಿ ಕರುದಾನೆ ತಾನು ತಾನಂದನೆ
ಇದರಾಗೆ ನಿಲ್ಲಾಬೇಕು ತಾನು ತಾನಂದನೆ
ಹರಿವಾಣಂಬೋಳು ದೇವಿ ತಾನು ತಾನಂದನೆ
ಏಳ ತಿಂಗಳ ಗರುಬುಣಿ ತಾನು ತಾನಂದನೆ

ಇದರೀಗೆ ಬಂದಾಳಾಕೆ ತಾನು ತಾನಂದನೆ
ಸತ್ಯಾವ ಹೇಳುತೀನಿ ತಾನು ತಾನಂದನೆ
ಬ್ಯಾಟೆಗ್ಹೋಗಿದ್ರಿ ಸ್ವಾಮಿ ತಾನು ತಾನಂದನೆ
ಹಾಳುಮಾಡದ ಜೋಗಿ ಅಷ್ಟೆ ತಾನು ತಾನಂದನೆ
ಬೆಳಗಾಗಾರು ಗಂಟೆಗೆ ತಾನು ತಾನಂದನೆ
ಬಂದಂತ ಜೋಗಿ ನೋಡಿ ತಾನು ತಾನಂದನೆ
ಬಾಗಾಲ ಕುಂತ್ಯೆದೀಗ ತಾನು ತಾನಂದನೆ
ಪಡಿಕೊಟ್ರೆ ಮುಟ್ಟಾನಿಲ್ಲ ತಾನು ತಾನಂದನೆ
ಹೋಗಂದ್ರೆ ಹೋಗುವನಲ್ಲ ತಾನು ತಾನಂದನೆ
ಸಂಪೋತಿ ಇಲ್ಲಾ ಕಾಣೋ ತಾನು ತಾನಂದನೆ

ತವ್ರಮನೆಗ್ಹೋಗಾಳಾಕೆ ತಾನು ತಾನಂದನೆ
ಎಷ್ಟು ಹೇಳಿದ್ರು ಕೇಳಾನಿಲ್ಲ ತಾನು ತಾನಂದನೆ
ಏಳೇಳುಪ್ಪರಿಗೆ ತಾನಿಳಿದು ತಾನು ತಾನಂದನೆ
ಇಳುದಾರು ಬಂದಾಳಾಕೆ ತಾನು ತಾನಂದನೆ
ಹರುವಣೆ ಭಿಕುಸಾವ ತಂದು ತಾನು ತಾನಂದನೆ
ಕೊಳ್ಳಯ್ಯ ಜೋಗಿ ಭಿಕಸ ತಾನು ತಾನಂದನೆ
ಅಲ್ಲಿ ಕೊಟ್ರೆ ಮುಟ್ಟವನಲ್ಲ ತಾನು ತಾನಂದನೆ
ಮೂರು ಮೆಟ್ಲು ಇಳಿದಿ ಬಾರೆ ತಾನು ತಾನಂದನೆ
ಬಗ್ಗಿ ಜೋಳಿಗ್ಗೆ ಸುರಿಯೆ ತಾನು ತಾನಂದನೆ
ಕರಿನಾಯಿ ಮಾಡಿ ಒಯ್ದು ತಾನು ತಾನಂದನೆ
ನಾಗುಬೆತ್ತ ಎಳುದಾನು ತಾನು ತಾನಂದನೆ
ಜೋಗೇರು ಮುಂದಿಂದ ಹೊರಟ ತಾನು ತಾನಂದನೆ
ನಾಯಾರಿ ಹಿಂದಿಂದ ಹೋತು ತಾನು ತಾನಂದನೆ
ಹರಿವಾಣಂಬೋಳುದೇವಿ ತಾನು ತಾನಂದನೆ
ಹಿಡಿಯಕ್ಕೆ ಹೋದಾಳಾಕೆ ತಾನು ತಾನಂದನೆ
ಕಚ್ಚಾಕೆ ಬರುತಾದೊ. ತಾನು ತಾನಂದನೆ

ಆ ಮಾತು ಕೇಳಿದನಾಗ ತಾನು ತಾನಂದನೆ
ತವ್ರಮನೆಗ್ಹೇಳಿ ಕಳುಗಿ ತಾನು ತಾನಂದನೆ
ತವ್ರಮನೆದಾರು ಸಾವರ ತಾನು ತಾನಂದನೆ
ಗಂಡುನ ಮನೆದಾರು ಸಾವರ ತಾನು ತಾನಂದನೆ

ದಂಡಾಡಿ ಹೋದುವಾಗ ತಾನು ತಾನಂದನೆ
ಹಾಳಮಾಡದ ಜೋಗಿ ಮನೆಗೆ ತಾನು ತಾನಂದನೆ
ಹೋಗಂತ ಸಮಯಾದಲ್ಲಿ ತಾನು ತಾನಂದನೆ
ಬೆಳಗಾಗಾರು ಗಂಟಿಗೆ ತಾನು ತಾನಂದನೆ
ಜಗಲಿಗೆ ಹೊರಟ ಜೋಗಿ ತಾನು ತಾನಂದನೆ
ಸಂಪೋತಿ ಕರುದಾನೆ ತಾನು ತಾನಂದನೆ
ನಿನ್ನ ಗಂಡನ ಮನೆದಾರು ಸಾವ್ರುರ ತಾನು ತಾನಂದನೆ
ತಪ್ರ ಮನೆದಾರು ಸಾವ್ರುರ ತಾನು ತಾನಂದನೆ
ಹನ್ನೆರಡು ಸಾವ್ರುರ ದಂಡು ತಾನು ತಾನಂದನೆ
ಮುಂದೇಲಿ ಬರುವಾಗ ತಾನು ತಾನಂದನೆ
ಸಂಪೋತಿ ಕರುದ್ಧೇಳಿ ತಾನು ತಾನಂದನೆ
ಏಳು ಕಲ್ಲ ಬಿಸಾಕದನಾಗ ತಾನು ತಾನಂದನೆ
ಬಂದಂಥ ದಂಡು ನೋಡು ತಾನು ತಾನಂದನೆ
ಕಲ್ಲಾಗಿ ನಿಂತ್ಕೈದಾವೆ ತಾನು ತಾನಂದನೆ
ಕಲ್ಲಾಗಿ ನಿಂತ್ಕೈದಾನೆ ತಾನು ತಾನಂದನೆ
ಸಂಪೋತಿ ಅಳುವಾಳು ತಾನು ತಾನಂದನೆ
ಹನ್ನೆರಡ ಮಂಡ್ಲನ ಮಾಡಿದ ತಾನು ತಾನಂದನೆ
ಭಿಕ್ಷಾಕೆ ಹೊರಟಾನು ಜೋಗಿ. ತಾನು ತಾನಂದನೆ

ವಷ್ಟಂಬ ಗಳಿಗೀಗೆ ತಾನು ತಾನಂದನೆ
ಮಗನಾರು ಬಂದನಾಗ ತಾನು ತಾನಂದನೆ
ಹಾಳಮಾಡದ ಜೋಗಿ ಮನೆಗ ತಾನು ತಾನಂದನೆ
ಮಗುನಾರು ಹೊರಟಾನು ತಾನು ತಾನಂದನೆ
ಅಲ್ಲೊಬ್ಬಳು ಅಜ್ಜಿ ಮನೆ ತಾನು ತಾನಂದನೆ

ಹಾಳುಮಾಡದ ಜೋಗಿ ಮನೆಲಿ ತಾನು ತಾನಂದನೆ
ಸಂಪೋತಿನೆಂಬೋಳು ತಾನು ತಾನಂದನೆ
ಅಜ್ಜೀ ಮನೆಗಾರು ಬಂದಾನಾಗ ತಾನು ತಾನಂದನೆ
ಮಗನೊಬ್ಬ ಅವನೀಗ ತಾನು ತಾನಂದನೆ
ಕುದ್ರೆ ಏರಿಯೆ ಬಂದ ತಾನು ತಾನಂದನೆ
ಯಾರಮ್ಮ ಮನೆ ಒಳುಗೆ? ತಾನು ತಾನಂದನೆ
ಕರುದಾರೆ ಮಾತೇ ಇಲ್ಲ ತಾನು ತಾನಂದನೆ
ಸಂಪೋತಿನೆಂಬೋಳು ತಾನು ತಾನಂದನೆ
ಹೊರವೀಕೆ ಬಂದಾಳು ತಾನು ತಾನಂದನೆ
ಯಾವ್ರೂರೊ ಎಲು ಮಗನೆ ತಾನು ತಾನಂದನೆ

ಯಾಕಾಗಿ ಬಂದೆ ನೀನು? ತಾನು ತಾನಂದನೆ
ಯಾಕಾಗಿ ಬಂದೆ ಮಗನೆ ತಾನು ತಾನಂದನೆ
ಹಾಳುಮಾಡದ ಜೋಗಿ ಕಂಡ್ರೆ ತಾನು ತಾನಂದನೆ
ಕಂಡಾರೆ ಬಿಡುವ್ರೋಕಿಲ್ಲ ತಾನು ತಾನಂದನೆ
ಬಂದಂಥ ಕಾರಣವೇನು? ತಾನು ತಾನಂದನೆ
ಹೇಳುತೀನ ಕೇಳಮ್ಮ ತಾನು ತಾನಂದನೆ
ಹಿರಿಯಣ್ಣ ಸಂಪಗೀರಾಯ ತಾನು ತಾನಂದನೆ
ಕಿರಿತಮ್ಮ ಮಲ್ಲೀಗಿರಾಯ ತಾನು ತಾನಂದನೆ
ಅವರಾ ಮಡುದೀಯು ತಾನು ತಾನಂದನೆ
ಸಂಪೋತಿ ಎಂಬಾಕೆ ತಾನು ತಾನಂದನೆ
ನಂ ಚಿಕ್ಕಮ್ಮ ಇರುವಾಳು ತಾನು ತಾನಂದನೆ
ಹಾಳುಮಾಡದ ಜೋಗಿ ಅವ್ನೆ ತಾನು ತಾನಂದನೆ
ಕರಿನಾಯಿ ಮಾಡೆ ಒಯ್ದ ತಾನು ತಾನಂದನೆ
ಆ ಮಾತ ಕೇಳುದಾಳಾಕೆ ತಾನು ತಾನಂದನೆ
ಗೋಳಾಡಿ ಅಳುವ್ರೋಳು ತಾನು ತಾನಂದನೆ
ಯಾಕಾರು ಬಂದೆ ಮಗನೆ? ತಾನು ತಾನಂದನೆ
ಹಾಳುಮಾಡದ ಜೋಗಿ ನೋಡು ತಾನು ತಾನಂದನೆ
ಹನ್ನೆರಡು ಸಾವ್ರ ದಂಡು ತಾನು ತಾನಂದನೆ
ಕಲುಮಾಡಿ ನಿಲುಸಾನು ತಾನು ತಾನಂದನೆ
ಚಿಕ್ಕಮ್ಮ ಕೇಳೇ ಮಾತ ತಾನು ತಾನಂದನೆ
ಜೋಗಿ ಜೀವನೆಲ್ಲುಂಟೆ? ತಾನು ತಾನಂದನೆ
ಜೋಗಿ ಜೀವೆಲ್ಲುಂಟು? ತಾನು ತಾನಂದನೆ
ನೀವ್ರು ಕೇಳಬೇಕು ಎನುತಾನೆ. ತಾನು ತಾನಂದನೆ
ಹಸುನದಿಂದಾಲಿ ಕೇಳು ತಾನು ತಾನಂದನೆ
ಕುಸುಲದಿಂದಾಲಿ ಕೇಳು ತಾನು ತಾನಂದನೆ
ವಷ್ಟಂಬ ಮಾತ ಕೇಳಿ ತಾನು ತಾನಂದನೆ
ಮೂರು ಮಣ ಭಂಗೀಯ ಕೊಟ್ಟ ತಾನು ತಾನಂದನೆ
ಆರು ಕೊಪ್ಪರಿಗನ್ನ ಬೇಸು ತಾನು ತಾನಂದನೆ
ಮೂರು ಕೊಪ್ಪರಿಗೆ ಪಲ್ಲೆ ಮಾಡು ತಾನು ತಾನಂದನೆ
ಏಳು ಕೊಪ್ಪರಿ ನೀರು ಕಾಸು ತಾನು ತಾನಂದನೆ
ಸಂತೋಷದಿ ಕೇಳೆ ತಾಯಿ ತಾನು ತಾನಂದನೆ

ವಷ್ಟಂಬ ಮಾತು ಹೇಳಿ ತಾನು ತಾನಂದನೆ
ಕಣ್ಣಿಗೆ ಮರೆಯಾಗಿ ತಾನು ತಾನಂದನೆ
ಅಲ್ಲಿಂದ ಬರುತಾನೆ ತಾನು ತಾನಂದನೆ]
ಮೂರು ಮ್ಯೆಲನಾಗೂರಲ್ಲಿ ತಾನು ತಾನಂದನೆ
ಕುಂತಾನೆ ಆ ಹುಡುಗ ತಾನು ತಾನಂದನೆ
ವಷ್ವಂಬ ಹೊತ್ತಿನಲ್ಲಿ ತಾನು ತಾನಂದನೆ
ಭಿಕ್ಸಾಕೋದಾವ ಬಂದ ತಾನು ತಾನಂದನೆ
ಆರ ಕೊಪ್ಪರಿಗನ್ನ ಬೇಸಿ ತಾನು ತಾನಂದನೆ
ಮೂರು ಕೊಪ್ಪರಿ ಪಲ್ಲೆ ಬೇಸಿ ತಾನು ತಾನಂದನೆ
ಏಳು ಕೊಪ್ಪರಿ ನೀರು ಕಾಸಿ ತಾನು ತಾನಂದನೆ
ಸಂತೋಷದಿ ಸಾನಮಾಡಿ ತಾನು ತಾನಂದನೆ
ಊಟಕ್ಕೆ ನೀಡೀಕೊಂಡು ತಾನು ತಾನಂದನೆ
ಸಂತೋಸಿಲಿ ಊಟಾನಿಕ್ಕಿ ತಾನು ತಾನಂದನೆ
ಊಟೆಲ್ಲನಾದಾವ್ರು ತಾನು ತಾನಂದನೆ
ಭಂಗಿಯಲ್ಲಿ ತಲವಿಗೆ ಏರಿ ತಾನು ತಾನಂದನೆ
ಹಾಸೀಗೆ ಬಿಡುಸ್ಥೆಣ್ಣೆ ತಾನು ತಾನಂದನೆ
ಜತೆಕೂಡಿ ಮಲಗುವಾಗ ತಾನು ತಾನಂದನೆ
ಹಸನಾದಿಂದಾಲಿ ಕೇಳಿ ತಾನು ತಾನಂದನೆ
ಕುಸಲಾದಿಂದಾಲಿ ಕೇಳಿ ತಾನು ತಾನಂದನೆ
ಹಾಳಮಾಡದ ಜೋಗಿ ನೀವ್ರು ತಾನು ತಾನಂದನೆ
ಒಬ್ಬಾರೆ ಇರುವ್ರೋರು ತಾನು ತಾನಂದನೆ
ದೂರಸಾರ ಹೋದ್ರೆ ನೀವ್ರು ತಾನು ತಾನಂದನೆ
ಜೀವಕೇನಾದ್ರು ಆದ್ರೆ ತಾನು ತಾನಂದನೆ
ನಾ ಒಬ್ಬಾಳೆ ಮರುದಾಗೆ ತಾನು ತಾನಂದನೆ
ಯಾಕಾಗಿ ಕೇಳದೆ ಹೆಣ್ಣೆ? ತಾನು ತಾನಂದನೆ
ಹೋದಲ್ಲೇನಾರು ಆದ್ರೆ ತಾನು ತಾನಂದನೆ
ಜೀವಾ ಪಡೆಯೊದೆಂಗೆ ತಾನು ತಾನಂದನೆ
ಮನೆ ಬಾಗಿಲ ಮುಂದಾಗಿ ಕರೆಗೆ ತಾನು ತಾನಂದನೆ
ಕೆರೆ ಒಳಗೆ ನೋಡು ಈಗ ತಾನು ತಾನಂದನೆ
ನಡುಕೆರೆ ಒಳಾಗೀಗ ತಾನು ತಾನಂದನೆ
ದೊಡ್ಡದೊಂದ ಪೆಟ್ಟೆ ಉಂಟು ತಾನು ತಾನಂದನೆ
ಪೆಟಗೇಯ ಒಳಗೀಗ ತಾನು ತಾನಂದನೆ

ಚೆನ್ನಾದ ಗಿಳಿಯು ಉಂಟು ತಾನು ತಾನಂದನೆ
ಗಿಣಿ ಕಾಲ ಮುರಿದಾರೆ ತಾನು ತಾನಂದನೆ
ನನ ಕಾಲೆ ಮುರುದಂಗ ತಾನು ತಾನಂದನೆ
ಗಿಣಿ ರೆಕ್ಕೆ ಮುರುದರೆ ತಾನು ತಾನಂದನೆ
ನನ ರೆಟ್ಟೆ ಮುರುದಂಗ ತಾನು ತಾನಂದನೆ
ಗಿಳಿ ಮೇಣೆ ಮುರುದಾರೆ ತಾನು ತಾನಂದನೆ
ನನ ಮೇಣೆ ಮುರುದಾವು ತಾನು ತಾನಂದನೆ
ಗಿಳಿ ಜೀವ ಹಾರುದರೆ ಹೆಣ್ಣೆ ತಾನು ತಾನಂದನೆ
ನನ ಜೀವ ಹಾರಿಹೋಯ್ತು ತಾನು ತಾನಂದನೆ
ಜೀವಾ ಪಡಿವದ್ಹಂಗೆ ಅಂದ್ರೆ ತಾನು ತಾನಂದನೆ
ಅದು ಒಂದು ಕಾರ‍್ಯವ ಹೇಳಿ ತಾನು ತಾನಂದನೆ
ಏಳು ಕಲ್ಲ ಕೊಟ್ಟಾನೆ ತಾನು ತಾನಂದನೆ
ಜೀವಾದ ಕಾಲುಗ ನೋಡು ತಾನು ತಾನಂದನೆ
ಆ ಮಾತ ಕೇಳುದಳಾಕೆ ತಾನು ತಾನಂದನೆ
ಕುಸಲಾದಿಂದಾಲಿ ಈಗ ತಾನು ತಾನಂದನೆ
ಸಂತೋಷದಿ ಮಲಿಗ್ಯಾರು ತಾನು ತಾನಂದನೆ
ಬೆಳಗಾಗೇಳುಗಂಟೆಗೆ ತಾನು ತಾನಂದನೆ
ಊಟೆಲ್ಲಾ ಮುಗುದಾವೆ ತಾನು ತಾನಂದನೆ
ಸಂತೋಷದಿ ಕೇಳುತಾಳೆ ತಾನು ತಾನಂದನೆ
ಈವತ್ತು ಯಾವ ಹಳ್ಳೀಗೀಗ ತಾನು ತಾನಂದನೆ
ಎಷ್ಟ ಮೈಲ ನಡದೀರಿ ತಾನು ತಾನಂದನೆ
ಹನ್ನೆರಡು ಮೈಲಾವು ತಾನು ತಾನಂದನೆ
ಭಿಕ್ಷಾಕೆ ಹೊರಟೀನಿ ತಾನು ತಾನಂದನೆ
ಆ ಮಾತ ಕೇಳುದಳಾಕೆ ತಾನು ತಾನಂದನೆ
ಸಂತೋಷದಿ ಕಳಿಗಾಳೆ. ತಾನು ತಾನಂದನೆ

ಜೋಗ ಹೋಗಿ ಕಾಲು ಗಂಟೆಗೆ ತಾನು ತಾನಂದನೆ
ಹುಡುಗಾನು ಬಂದಾನಾಗ ತಾನು ತಾನಂದನೆ
ಹೇಳುವ ಮಾತು ಕೇಳುದ್ಯ ತಾನು ತಾನಂದನೆ
ಕೇಳೇನೊ ಎಲು ಮಗನೆ ತಾನು ತಾನಂದನೆ
ಮನೆ ಬಾಗಲ ಮುಂದಾಣ ಕೆರೆ ತಾನು ತಾನಂದನೆ
ನಡುಕೆರೆ ಒಳಾಗೀಗ ತಾನು ತಾನಂದನೆ
ದೊಡ್ಡದೊಂದು ಪೆಟ್ಟಿ ತಾನು ತಾನಂದನೆ
ದೊಡ್ಡದೊಂದು ಪೆಟ್ಗೆ ಒಳುಗೆ ತಾನು ತಾನಂದನೆ

ಚೆನ್ನದೊಂದು ಗಿಳಿ ಉಂಟು ತಾನು ತಾನಂದನೆ
ಚೆನ್ನದೊಂದು ಗಿಳಿಯಾಲಿಗ ತಾನು ತಾನಂದನೆ
·ಗಿಳಿ ಕಾಲ ಮುರುದಾರೆ ತಾನು ತಾನಂದನೆ
ಅವನ ಕಾಲೆ ಮುರುದಾವು ತಾನು ತಾನಂದನೆ
ಗಿಣಿ ರೆಕ್ಕೆ ಮುರುದಾರೆ ತಾನು ತಾನಂದನೆ
ಅವನ ರೆಟ್ಟೆ ಮುರುದಾವು ತಾನು ತಾನಂದನೆ
ಗಿಳಿ ಮೇಣೆ ಮುರುದಾರೆ ತಾನು ತಾನಂದನೆ
ಅವನ ಗೋಣೆ ಮುರುದಾವು ತಾನು ತಾನಂದನೆ
ಗಿಳಿ ಜೀವ ಹಾರೋದ್ರ ನೋಡು ತಾನು ತಾನಂದನೆ
ಅವನ ಜೀವ ಹಾರೋವಾಗ. ತಾನು ತಾನಂದನೆ
ಅಷ್ಟಂಬ ಮಾತು ಕೇಳಿ ತಾನು ತಾನಂದನೆ
ಹಾರೆ ಗುದ್ಲಿ ಹೆಗಲಗಿಟ್ಟ ತಾನು ತಾನಂದನೆ
ಮನೆ ಬಾಗಿಲ ಮುಂದಾಗಿ ಕೆರೆ ತಾನು ತಾನಂದನೆ
ಕೆರೆಕೋಡಿ ಕಡುದಾನ ತಾನು ತಾನಂದನೆ
ನೀರೆಲ್ಲವಿಳುದಾವು ತಾನು ತಾನಂದನೆ
ಕೆರೆಯೊಳಗೆ ಇಳುದಾನು ತಾನು ತಾನಂದನೆ
ಪೆಟ್ಟಿಗೆ ಹಿಡುದಾನು ತಾನು ತಾನಂದನೆ
ಕೆರೆ ಏರಿ ಹತ್ತಾನು ತಾನು ತಾನಂದನೆ

ಜೋಗಿಜನುವಾರು ಬಂದ ತಾನು ತಾನಂದನೆ
ಹುಡುಗಾನ ನೋಡೀಗ ತಾನು ತಾನಂದನೆ
ವಾಪಸ್ಸು ತಿರುಗ್ಯಾನ ತಾನು ತಾನಂದನೆ
ವಾಪಸ್ಸು ತಿರಿಗಾಗ ತಾನು ತಾನಂದನೆ
ಗಿಳಿ ಕಾಲ ಮುರುದಾನು ತಾನು ತಾನಂದನೆ
ಗಿಳಿ ಕಾಲ ಮುರುದಾಗ ತಾನು ತಾನಂದನೆ
ಅವನ ಕಾಲೆ ಮುರುದೋದೊ ತಾನು ತಾನಂದನೆ
ಜೋಗಿ ದೊಗ್ಗಾಲ ಬರುವಾನು ತಾನು ತಾನಂದನೆ
ಮುಂದೆ ಮುಂದೆ ಬರುವಾಗ ತಾನು ತಾನಂದನೆ
ಗಿಳಿ ರೆಟ್ಟೆ ಮುರುದಾನು ತಾನು ತಾನಂದನೆ
ಗಿಳಿ ರೆಟ್ಟೆ ಮುರುದಾಗ ತಾನು ತಾನಂದನೆ
ಅವನ ರೆಟ್ಟೆ ಮುರುದೋದೊ ತಾನು ತಾನಂದನೆ
ಮನೆ ಬಾಗುಲಿಗೆ ಬಂದಾನು ತಾನು ತಾನಂದನೆ
ಏನಂದು ದುಕ್ಕ ಮಾಡಿ ತಾನು ತಾನಂದನೆ

ನನ್ನ ಜೀವಾರು ಬಿಡಿ ಸ್ವಾಮಿ ತಾನು ತಾನಂದನೆ
ಮಾಡುದ್ದ ಕಲಿಯಪ್ಪ ಈಗ ತಾನು ತಾನಂದನೆ
ಹೇಳಾರು ಕಳುಗೇನು ತಾನು ತಾನಂದನೆ
ನಮ ತಂದೇಯ ಜೀವಮುಂಟು ತಾನು ತಾನಂದನೆ
ಬಂದಂಥ ದಂಡು ನೋಡು ತಾನು ತಾನಂದನೆ
ಕಲುಮಾಡಿ ನಿಲುಸೀಯೆ ತಾನು ತಾನಂದನೆ
ಜೀವಾ ಪಡೆಯೋದು ಹೆಂಗೆ? ತಾನು ತಾನಂದನೆ
ಏಳುಕಲ್ಲು ನೋಡುವಾಗ ತಾನು ತಾನಂದನೆ
ಸಂಪೋತಿ ಕರುದಾನೆ ತಾನು ತಾನಂದನೆ
ಏಳ ಕಲ್ಲು ಕೊಡು ಹೆಣ್ಣೆ ತಾನು ತಾನಂದನೆ
ಜೀವಾರು ಪಡಿರೀಗ ತಾನು ತಾನಂದನೆ
ಬಂದಂಥ ದಂಡು ಈಗ ತಾನು ತಾನಂದನೆ
ಜೀವಾರು ಪಡುದಾರು ತಾನು ತಾನಂದನೆ
ಹನ್ನೆರಡು ಸಾವ್ರ ದಂಡು ತಾನು ತಾನಂದನೆ
ಜೀವಾರು ಆದಾವೀಗ. ತಾನು ತಾನಂದನೆ

ಅಷ್ಟಂಬ ಹೊತ್ತಿನಲ್ಲಿ ತಾನು ತಾನಂದನೆ
ಗಿಣಿ ಮೇಣೆ ಮುರುದಾನು ತಾನು ತಾನಂದನೆ
ಅವನ ಮೇಣೆ ಮುರುದೋದೊ ತಾನು ತಾನಂದನೆ
ಗಿಳಿ ಜೀವ ಹಾರುವಾಗ ತಾನು ತಾನಂದನೆ
ಅವನ ಜೀವ ಹಾರೆಹೋದೊ ತಾನು ತಾನಂದನೆ
ಅವನ ಮೈಮೆ ಕೊಂಡಾಡಿ ತಾನು ತಾನಂದನೆ
ಕಲ್ಲಾಗಿ ನಿಂತ ದಂಡು ತಾನು ತಾನಂದನೆ
ಎಲ್ಲಾರು ಜೀವಾಗಿ ಬಂದು ತಾನು ತಾನಂದನೆ
ಕುದರೆ ಏರಿಯ ಕುಂತು ತಾನು ತಾನಂದನೆ
ಯಾವ್ರೂರು ಎಲೆ ಮಗನೆ? ತಾನು ತಾನಂದನೆ
ಯಾವ ದೇಸ ಎಲು ಮಗನೆ? ತಾನು ತಾನಂದನೆ
ಯಾರು ಮಗನಪ್ಪ ನೀನು? ತಾನು ತಾನಂದನೆ
ಅಷ್ಟಂದ 'ಕೇಳುವಾಗ ತಾನು ತಾನಂದನೆ
ಹಿರಿಯ ಸಂಪಿಗೆರಾಯ ತಾನು ತಾನಂದನೆ
ಕಿರಿತಮ್ಮ ಮಲ್ಲಿಗೆರಾಯ ತಾನು ತಾನಂದನೆ
ಅವರಾ ಮಡದೀಯು ತಾನು ತಾನಂದನೆ
ಸಂಪೋತಿ ಎಂಬಾಳಾಕೆ ತಾನು ತಾನಂದನೆ
ಹಾಳುಮಾಡದ ಜೋಗಿ ನೋಡು ತಾನು ತಾನಂದನೆ

ಕರಿನಾಯಿ ಮಾಡಿ ಒಯ್ದು ತಾನು ತಾನಂದನೆ
ಹಿರಿಯಣಿ ಸಂಪೀಗೆರಾಯ ತಾನು ತಾನಂಧನೆ
ಅವನಾರ ಮಗನೆ ನಾನು ತಾನು ತಾನಂದನೆ
ಕುದ್ರೆ ಕೆಳಗಾರು ಇಳುದು ತಾನು ತಾನಂದನೆ
ತನ್ನ ಮಗನ ತಬ್ಬಿಕೊಂಡ ತಾನು ತಾನಂದನೆ
ಮಗನ್ಹುಟ್ಟನ್ನೆರಡೊರುಷ ತಾನು ತಾನಂದನೆ
ಕಲ್ಲಾಗಿ ಹನ್ನೆರಡೊರುಸ ತಾನು ತಾನಂದನೆ
ಗೆದ್ದಾರು ಬಂದ ಮಗನೆ ತಾನು ತಾನಂದನೆ
ಮುದ್ದೀನ ಮಗುನೆ ನೀನು. ತಾನು ತಾನಂದನೆ

◆ ◆ ◆ ◆

ಹಾಡಿದವರು

**ಶ್ರೀಮತಿ ವನಮಾಲಜ್ಜಿ**

ಹೆದ್ದೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

# ೨. ಹೂವಿನ ನಾಗಮ್ಮ

ಹೂವೀನ ನಾಗಮ್ಮ ಶಿವಲಾಲಿ
ಹೂ ಕುಯ್ಯೋಕೋಗವಳೆ ಶಿವಲಾಲಿ
ಹೂ ಕುಯ್ಯೋಕೋಗವಳೆ ಶಿವಲಾಲಿ
ಅವಳು ತಡಿಬೇಯ ದಾಟುವಾಗ. ಶಿವಲಾಲಿ

ನಗರಾದಲರುಸಾರೆ ಶಿವಲಾಲಿ
ಒಂದು ಮರಿಯಾನೆ ಸಾಕ್ಯಾರು ಶಿವಲಾಲಿ
ತಡಿಬೇನೆ ದಾಟುವಾಗ ಶಿವಲಾಲಿ
ನಾಗಮ್ಮಾನ ನೋಡಾದೆ ಶಿವಲಾಲಿ
ಮರಿಯಾನೆನೆಂದಾದೆ ಶಿವಲಾಲಿ
ಮುನಿಸಿಟ್ಟು ಮಲಿಗ್ಯಾದು ಶಿವಲಾಲಿ
ಹುಲುಮೇವು ಬಿಟ್ಟಾದೆ ಶಿವಲಾಲಿ
ನೀರು ಮೇವು ಬಿಟ್ಯಾದೆ ಶಿವಲಾಲಿ
ಆನೆ ಲಾಯಕು ಹೋದಾರು ಶಿವಲಾಲಿ
ಮಲಿಗ್ಯಾದೆ ಮರಿಯಾನೆ ಶಿವಲಾಲಿ
ನಗರಾದಲರಸಾರೆ ಶಿವಲಾಲಿ
ನಾಗಮ್ಮನಪ್ಪಯ್ಯಗೆ ಶಿವಲಾಲಿ
ಒಂದು ಕಾಗೂದ ಕಳಿಗ್ಯಾರು. ಶಿವಲಾಲಿ

ಕಾಗೂದ ಹಿಡಿದಾರು ಶಿವಲಾಲಿ
ಮನುದಾಗೆ ಗುಣಿಸ್ಯಾರು ಶಿವಲಾಲಿ
ಕಣುನೀರ ತಗುದವರೆ ಶಿವಲಾಲಿ
ಮಂಚಾದಲೊರಿಗ್ಯಾರು ಶಿವಲಾಲಿ
ಏಳೊರುಸಾದ ನಾಗಮ್ಮ ಶಿವಲಾಲಿ
ಸಾಲೀಗ್ಹೋದವಳು ಶಿವಲಾಲಿ
ಮನಿಗಾರು ಬಂದಾಳು ಶಿವಲಾಲಿ
ಅಪ್ಪಯ್ನ ಬಳಿಗ್ಹೋದಾಳು ಶಿವಲಾಲಿ
ಮೊಕು ಸೆರುಗ ತಗಿದಾಳು ಶಿವಲಾಲಿ
ಅಪ್ಪಯ್ಯ ಲಪ್ಪಯ್ಯ ಶಿವಲಾಲಿ
ಸಾನಾವ ಮಾಡುದಕೆ ಶಿವಲಾಲಿ
ನಾ ಊಟಾವ ಮಾಡುದಕೆ ಶಿವಲಾಲಿ

ನಗರಾದಲರಸಾರ ಶಿವಲಾಲಿ
ಒಂದು ಕಾಗೂದ ಕಳಿವ್ಯಾರು ಶಿವಲಾಲಿ
ಕಾಗೂದ ಹಿಡಿದ್ಯಾಳು ಶಿವಲಾಲಿ
ಮನುದಾಗೆ ಗುಣಿಸ್ಯಾಳು ಶಿವಲಾಲಿ
ನೀ ಎದ್ದು ಸಾನ ಮಾಡಪ್ಪ ಶಿವಲಾಲಿ
ನೀ ಎದ್ದು ಊಟ ಮಾಡಪ್ಪ ಶಿವಲಾಲಿ
ಸಾನಾಕೆ ಹೋದಾರು ಶಿವಲಾಲಿ
ಸಾನೊಂದೇಲಾದಾವು ಶಿವಲಾಲಿ
ದೇವ್ರು ಪೂಜೆ ಮಾಡಾರು ಶಿವಲಾಲಿ
ನಾಮಾನೆ ಇಟ್ಟಾರು ಶಿವಲಾಲಿ
ಊಟಾಕೆ ಹೋದರು ಶಿವಲಾಲಿ
ಕುಂತೂಟ ಮಾಡಾರು. ಶಿವಲಾಲಿ

ಹೂವೀನ ನಾಗಮ್ಮ ಶಿವಲಾಲಿ
ಸುಂಗಾರವಾದಾಳು ಶಿವಲಾಲಿ
ಕೋಟುಬೂಟ ಹಾಕ್ಯಾಳು ಶಿವಲಾಲಿ
ಬಿಸ್ಲುಕೊಡೆ ಹಿಡಿದಾಳು ಶಿವಲಾಲಿ
ಅಪ್ಪಯ್ಯಗೆ ಸರುಣಂದೆ ಶಿವಲಾಲಿ
ಕಣುನೀರ ತಗುದಾರು ಶಿವಲಾಲಿ
ಎಡಗಯ್ಯಲೊಂದಡಕೆ ಶಿವಲಾಲಿ
ಎಡಗಯ್ಯಲೊಂದೆಲೆ ಶಿವಲಾಲಿ
ಎಡಗಯ್ಯಲ್ಹಿಡುದಾಳು ಶಿವಲಾಲಿ
ಗಿರಕಿಮೆಟ್ಟ ತುಳುದಾಳು ಶಿವಲಾಲಿ
ನಗುರಾದಲರಸಾರು ಶಿವಲಾಲಿ
ಮನಿಗಾರು ಬಂದಾಳು ಶಿವಲಾಲಿ
ಸರಣೆಂದು ಅಂದಾಳು. ಶಿವಲಾಲಿ

ನಾಗಮ್ಮ ನಾಗಮ್ಮ ಶಿವಲಾಲಿ
ನಿಮಗೊಂದ ಕಾಗೂದ ಕಳಿಸೇನು ಶಿವಲಾಲಿ
ನಮದೊಂದೆ ಮರಿಯಾನೆ ಶಿವಲಾಲಿ
ಹುಲುಮೇವು ಬುಟ್ಯಾವು ಶಿವಲಾಲಿ
ನೀರು ಮೇವು ಬುಟ್ಯಾವು ಶಿವಲಾಲಿ
ಆನೇಯ ಮುನಸನ್ನೆ ಶಿವಲಾಲಿ

ಸಮುದಾನ್ನ ಮಾಡೇನು ಶಿವಲಾಲಿ
ಏನು ಕೊಡುತೀರಿ ರಾಯಾರೆ? ಶಿವಲಾಲಿ
ಏನು ಕೊಡುತೀರಿ ಅರುಸಾರೆ? ಶಿವಲಾಲಿ
ಅರುದ ರಾಜ್ಯ ಕೊಡುತೀನು ಶಿವಲಾಲಿ
ಅರುದ ಲಕ್ಷ ಕೊಡುತೀನಿ ಶಿವಲಾಲಿ
ಆರುದ ರಾಜ್ಯ ಬರುದಾರು ಶಿವಲಾಲಿ
ಆರುದ ಲಕ್ಷ ಕೊಟ್ಟಾರು ಶಿವಲಾಲಿ
ಎಡಗಯ್ಯಲೆರಡೈಲೆ ಶಿವಲಾಲಿ
ಎಡಗಯ್ಯಲೆರಡಡಕೆ ಶಿವಲಾಲಿ
ಹಿಡುದಾಳೂ ನಾಗಮ್ಮ ಶಿವಲಾಲಿ
ಮುಂದಿಂದ ಹೊರಟಾಳು ಶಿವಲಾಲಿ
ಆನೆ ಬಿಟ್ಟಿನ್ನು ಹೊಡಿರಂದ್ಲು ಶಿವಲಾಲಿ
ಮೆಟ್ಟ ಮೂರ ನಡುದಾಳು ಶಿವಲಾಲಿ
ಆನೇಯ ಬುಟ್ಟಾರು ಶಿವಲಾಲಿ
ಕೊಂಬೆತ್ತಿ ಸಲಗಾವು ಶಿವಲಾಲಿ
ಅವು ಓಡಾಡಿ ಬಂದಾವು ಶಿವಲಾಲಿ
ಹೂವೀನ ನಾಗಮ್ಮ ಶಿವಲಾಲಿ
ಒಂದು ಕಲ್ಲು ಒಗುದಾಳು ಶಿವಲಾಲಿ
ಮಾದೊಡ್ಡ ಮರ ಬೆಳಿಲಿ ಶಿವಲಾಲಿ
ಮರದಾಚೇಗು ಆನಾಗಲಿ ಶಿವಲಾಲಿ
ಮರದೀಚೇಗು ನಾನಾಗಲಿ ಶಿವಲಾಲಿ
ಮಾದೊಡ್ಡ ಆಲುದ ಮರ ಶಿವಲಾಲಿ
ನಡು ಮಧ್ಯೆ ಬೆಳೆದಾವು ಶಿವಲಾಲಿ
ಮಾದೊಡ್ಡ ಆಲುದ ಮರವ ಶಿವಲಾಲಿ
ಅವು ನಟ್ಟಿ ತುಳಿದೆ ದಾಟ್ಹೋದೊ. ಶಿವಲಾಲಿ

ಮುಂದೆ ಮುಂದೆ ಹೋದಾಗ ಶಿವಲಾಲಿ
ಒಂದು ಕಲ್ಲು ಒಗುದಾಳು ಶಿವಲಾಲಿ
ಮಾದೊಡ್ಡ ಬಿದಿರ್ಹಿಂಡ್ಲು ಶಿವಲಾಲಿ
ನಡುಮಧ್ಯೆ ಬೆಳಿಯಾಲಿ ಶಿವಲಾಲಿ
ಹಿಂಡ್ಲ ಆಚೆಗು ಆನಾಗಲಿ ಶಿವಲಾಲಿ
ಹಿಂಡ್ಲ ಈಚೆಗು ನಾನಾಲಿ ಶಿವಲಾಲಿ
ಮಾದೊಡ್ಡ ಬಿದಿರ್ಹಿಂಡ್ಲು ಶಿವಲಾಲಿ
ಅವು ನಟ್ಟಿ ತುಳಿದೆ ದಾಟ್ಹೋದೊ. ಶಿವಲಾಲಿ

ಮುಂದೆ ಮುಂದೆ ಹೋದಾಗ ಶಿವಲಾಲಿ
ಒಂದು ಕಲ್ಲ ಒಗುದಾಳು ಶಿವಲಾಲಿ
ಮಾದೊಡ್ಡ ಹೊಳಿಯಾಗಲಿ ಶಿವಲಾಲಿ
ಹೊಳೆಯಾಚೆ ಆನೆಯಾಗಲಿ ಶಿವಲಾಲಿ
ಹೊಳಿಯೀಚೆ ನಾನಾಗಲಿ ಶಿವಲಾಲಿ
ಮಾದೊಡ್ಡ ಹೊಳಿಗಾಳು ಶಿವಲಾಲಿ
ಅವು ಹಸುಮೀಸಿ ನಡುದಾವು ಶಿವಲಾಲಿ
ಕುಂಭಸ್ಥಳ ನೀಡಾವು ಶಿವಲಾಲಿ
ನಾಗಮ್ಮನ್ಹೆಗಲೀಗು ಶಿವಲಾಲಿ
ಕುಂಭಸ್ಥಳ ಇಟ್ಟಾವು ಶಿವಲಾಲಿ
ಬಾಳ ತಂಪು ಆಗ್ಯಾವೆ ಶಿವಲಾಲಿ
ಆನೆ ಮನಸೆ ಸರಿಯಾಗಿ ಶಿವಲಾಲಿ
ಎಡಗಯ್ಯಾಗೊಂದಡಕೆ ಶಿವಲಾಲಿ
ಆನೀಗೆ ಕೊಟ್ಟಾಳು ಶಿವಲಾಲಿ
ತಾನೊಂದು ಎಲೆ ಅಡಿಕೆ ಶಿವಲಾಲಿ
ಎಡಗಯ್ಯಾಗೆ ತಿಂದಾಳು ಶಿವಲಾಲಿ
ಇಬ್ಬಾರು ಜತೆಗೂಡಿ ಶಿವಲಾಲಿ
ಸಂತೋಸದಿ ಬರುವಾಗ ಶಿವಲಾಲಿ
ತಿಂಗಳಗೆ ಮುಂದಾಗಿ ಶಿವಲಾಲಿ
ಬಂದ್ಹೋಗೆ ನಾಗಮ್ಮ ಶಿವಲಾಲಿ

◆◆◆◆

ಹಾಡಿದವರು
**ಶ್ರೀಮತಿ ವನಮಾಲಜ್ಜಿ**
ಹೆದ್ದೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

## ೩. ಶಿವಗಂಗೆ

ಒಬ್ಬಾಳೆ ತಾಯಿಗು ರಾಮ ರಾಮ
ಏಳ ಜನ ಮಕ್ಕಾಳು. ರಾಮ ರಾಮ

ಆರು ಜನ ಗಂಡು ಮಕ್ಕಳು ರಾಮ ರಾಮ
ಒಬ್ಬಾಳೆ ಸಿವ್ರುಗಂಗೆ ರಾಮ ರಾಮ
ಒಬ್ಬಾಳೆ ಸಿವ್ರುಗಂಗೆ. ರಾಮ ರಾಮ
ಅಣ್ಣತಮ್ಮರಾರು ಜನ ರಾಮ ರಾಮ
ಅವರೇನೆಲ್ಲ ಕೆಲಸಾವ್ರು ರಾಮ ರಾಮ
ಬೆಳ್ಳಿ ಬೆಟ್ಟದೊಳಗೀಗ ರಾಮ ರಾಮ
ಚಿನ್ನ ಬೆಳ್ಳಿ ಗೆಯ್ಯೊ ಕೆಲಸ ರಾಮ ರಾಮ
ಅಣ್ಣತಮ್ಮರಾರು ಜನ ರಾಮ ರಾಮ
ಹೊತ್ನಮುಂಚೆಲೆದ್ದಾರು ರಾಮ ರಾಮ
ಸಾನ ಜಪ ಮಾಡಾರು ರಾಮ ರಾಮ
ದೇವ್ರು ಪೂಜೆಲಾದಾವ್ರು ರಾಮ ರಾಮ
ಅಣ್ಣತಮ್ಮರಾರು ಜನ ರಾಮ ರಾಮ
ಮಡುದೇರ ಕರುದಾರು ರಾಮ ರಾಮ
ನಮು ತಂಗೆ ಸಿವ್ರುಗಂಗೆ ರಾಮ ರಾಮ
ಬಾಗ್ಯಾದ ಸಿರಿಲಕ್ಷ್ಮಿ ರಾಮ ರಾಮ
ಬಡುಸ್ತಾನ ಬಂದಾವ್ರು ರಾಮ ರಾಮ
ನಮು ತಂಗೆ ಕಷ್ಟಾವೆ ರಾಮ ರಾಮ
ಕೊಡುಬಾರದು ಮಡುದೀರ ರಾಮ ರಾಮ
ನಾವು ಬೆಳ್ಳಿಬೆಟ್ಟಕ್ಹೋಗುತೀವಿ ರಾಮ ರಾಮ
ಚಿನ್ನ ಬೆಳ್ಳಿ ಗೆಯ್ಯೊ ಕೆಲಸ ರಾಮ ರಾಮ
ಮಡುದೇರಗೆ ಹೇಳಾರು. ರಾಮ ರಾಮ

ಹಿರಿಯಣ್ಣ ನಡಿದಾನು ರಾಮ ರಾಮ
ಉಪ್ಪುರಗೆ ಒಳುಗಾಗ ರಾಮ ರಾಮ
ತಂಗೇಯ ಸಿವ್ರುಗಂಗೆ ರಾಮ ರಾಮ
ನಾವು ಚಿನ್ನ ಬೆಳ್ಳಿ ಗೆಯ್ಯಾಕೆ ರಾಮ ರಾಮ
ಹೋಗುತೀವಿ ತಂಗಿ ಕೇಳು ರಾಮ ರಾಮ
ನಿನಗೇನವ್ವ ಬೇಕಮ್ಮ? ರಾಮ ರಾಮ

ನಿನಗೇನೆಲ್ಲ ಬೇಕಮ್ಮ ರಾಮ ರಾಮ
ನಡಿಗು ತಕ್ಕಾದ ಸಾಲೆಯಣ್ಣ ರಾಮ ರಾಮ
ಮೈಗು ತಕ್ಕಾದ ಕುಬಸವಣ್ಣ ರಾಮ ರಾಮ
ಅಷ್ಟು ಮಾತು ಕೇಳವನೆ ರಾಮ ರಾಮ
ಉಪ್ಪುರುಗೆ ಕೆಳಗೆ ಬಂದ. ರಾಮ ರಾಮ
ಮತ್ತೊಬ್ಬ ಅಣ್ಣೋಗಿ ರಾಮ ರಾಮ
ತಂಗೀಯೆ ಸಿವ್ವುಗಂಗೆ ರಾಮ ರಾಮ
ನಾವ್ ಬೆಳಿಬೆಟ್ಟಕ್ಹೋಗುತೀವಿ ರಾಮ ರಾಮ
ನಿನಗೇನೆಲ್ಲ ಬೇಕವ್ವ? ರಾಮ ರಾಮ
ತಲಿಗೆ ತಕ್ಕ ನಾಗೂರ ರಾಮ ರಾಮ
ಬೆರಳಿಗ ತಕ್ಕಾದುಂಗೂರ ರಾಮ ರಾಮ
ಅಷ್ಟು ಮಾತ ಕೇಳಿದಣ್ಣ ರಾಮ ರಾಮ
ಉಪ್ಪುರಿಗೆ ಕೆಳಗೆ ಬಂದ. ರಾಮ ರಾಮ
ಮತ್ತೊಬ್ಬಲಣ್ಣೋದ ರಾಮ ರಾಮ
ತಂಗೀಯೆ ಸಿವ್ವುಗಂಗೆ ರಾಮ ರಾಮ
ನಾವ್ ಬೆಳಿಬೆಟ್ಟಕ್ಹೋಗುತೀವಿ ರಾಮ ರಾಮ
ನಿನಗೇನೆಲ್ಲ ಬೇಕಮ್ಮ? ರಾಮ ರಾಮ
ಕಾಲಿಗು ತಕ್ಕಾದ ಚೈನಣ್ಣ ರಾಮ ರಾಮ
ಸೊಂಟಕು ತಕ್ಕಾದ ಡಾಬಣ್ಣ ರಾಮ ರಾಮ
ಅಷ್ಟು ಮಾತ ಕೇಳವನೆ ರಾಮ ರಾಮ
ಉಪ್ಪುರಗೆ ಕೆಳಗೆ ಬಂದ. ರಾಮ ರಾಮ
ಮತ್ತೊಬ್ಬಲಣ್ಣೋದ ರಾಮ ರಾಮ
ತಂಗೀಯೆ ಸಿವ್ವುಗಂಗೆ ರಾಮ ರಾಮ
ನಾವ್ ಬೆಳ್ಳಿಬೆಟ್ಟಕೋಯ್ತೀವಿ ರಾಮ ರಾಮ
ನಿನಗೇನೆಲ್ಲ ಬೇಕಮ್ಮ? ರಾಮ ರಾಮ
ಬೆರಳೀಗು ತಕ್ಕಾದ ಸಾಲುಂಗರ ರಾಮ ರಾಮ
ಕೊರಳೀಗು ತಕ್ಕಾದ ಚೈನಣ್ಣ ರಾಮ ರಾಮ
ಅಷ್ಟು ಮಾತ ಕೇಳವನೆ ರಾಮ ರಾಮ
ಉಪ್ಪುರಗೆ ಕೆಳಗೆ ಬಂದ. ರಾಮ ರಾಮ

ಹಾಲನ್ನ ಉಂಡಾರು ರಾಮ ರಾಮ
ಒಂದಿಳ್ಳೀವ ತಿಂದಾರು ರಾಮ ರಾಮ
ಆರು ಜನ ಅಣ್ಣದೀರು ರಾಮ ರಾಮ

ಹೇಳಿ ಕೇಳಿ ಹೊರಟಾರು ರಾಮ ರಾಮ
ಆರು ಜನ ಮಡುದೇರ ರಾಮ ರಾಮ
ನನ ತಂಗೀಯು ಸಿವ್ರುಗಂಗೆ ರಾಮ ರಾಮ
ಸಂತೋಷದಿ ಬಾಳಿಸರೆಂದು. ರಾಮ ರಾಮ

ಅಣ್ಣರ್ಹೋದ ಮೂರುದಿನಕೆ ರಾಮ ರಾಮ
ಹಿರಿಯಣ್ಣನೆಂಡಾತಿ ರಾಮ ರಾಮ
ಉಪ್ಪುರಗ್ಗೆ ನಡೆದಾಳು ರಾಮ ರಾಮ
ನಾದೂನಿ ಸಿವ್ರುಗಂಗೆ ರಾಮ ರಾಮ
ಕದ ಬಾಗಿಲು ತಗಿ ಎಂದು ರಾಮ ರಾಮ
ಕದ ಬಾಗಿಲು ತಗಿಸ್ಯಾಳು ರಾಮ ರಾಮ
ಬಾಗಾಲ ಒಳಾಗ್ಹೋಗಿ ರಾಮ ರಾಮ
ರಟ್ಟೇಯ ಹಿಡೀದಾಳು ರಾಮ ರಾಮ
ಎಳಕೊಂತ ತಂದಾಳು ರಾಮ ರಾಮ
ಉಪ್ಪುರಗೆ ಕೆಳಗೆ ಬಂದು ರಾಮ ರಾಮ
ಗಗನ ಜಗುಲೀಲಿ ನಿಲುಸ್ಯಾಳು ರಾಮ ರಾಮ
X X X X X
ಕಟ್ಟೇಯ ಕೊಡುವ್ರೋಳು ರಾಮ ರಾಮ
ಹೊಲಕಾರು ಹೋಗ್ಹೆಣ್ಣೆ ರಾಮ ರಾಮ
ಹೊರೆಹುಲ್ಲ ತಕೊ ಬಾ ಹೆಣ್ಣೆ. ರಾಮ ರಾಮ

ಹೊಲಕಾರು ಹೋದಾಳು ರಾಮ ರಾಮ
ಅಣ್ಣಾರ ಗ್ಯಾನದಲ್ಲಿ ರಾಮ ರಾಮ
ಕಣ್ಣೀರು ಕರೀದಾಳು ರಾಮ ರಾಮ
ಮೂರು ಮುಷ್ಠಿ ಹುಲ್ಲ ಕುಯ್ದು ರಾಮ ರಾಮ
ಐದು ಬೆಳ್ಳಿಗು ಹತವು ಕಟ್ಟಿ ರಾಮ ರಾಮ
ಪಟ್ಟಿ ಸಾಲಿ ಹರೂದಾಳೂ ರಾಮ ರಾಮ
ಕೈಕಟ್ಟ ಹೊಡೂದಾಳು ರಾಮ ರಾಮ
ಮುಷ್ಠಿ ಹೊರೆ ಹುಲ್ಲು ಕುಯ್ದು ರಾಮ ರಾಮ
ಹಟ್ಟಿ ಬಳಿಗು ತಂದಾಳು ರಾಮ ರಾಮ
ಜಗಲೀಗೆ ಹೋಗಾಗ ರಾಮ ರಾಮ
ಹಿರಿಯಣ್ಣನೆಂಡಾತಿ ರಾಮ ರಾಮ
ಸಕನ ಕಟ್ಟಿ ಕೊಡುವ್ರೋಳು ರಾಮ ರಾಮ
ಗುಡ್ಡ ಬೆಟ್ಟಾಕ್ಹೋಗ್ಹೆಣ್ಣೆ ರಾಮ ರಾಮ
ಒಂದ್ಹೊರೆ ಸೊಪ್ಪು ತಾರೆ ರಾಮ ರಾಮ

ಹರಹರಾ ದೇವಾರೆ ರಾಮ ರಾಮ
ಅಣ್ಣಾರ ನ್ಯನುದಾಳು ರಾಮ ರಾಮ
ಬೆಟ್ಟದ ಬಳಿಗೆ ಹೋದಾಳು ರಾಮ ರಾಮ
ಒಂದ್ಹೊರೆ ಸೊಪ್ಪು ಕುಯ್ದು ರಾಮ ರಾಮ
ಹಟ್ಟಿ ಬಳಿಗೆ ತಂದಾಳು ರಾಮ ರಾಮ
ಜಗುಲೀಗು ಬಂದಾಳು ರಾಮ ರಾಮ
ಬಾಯಾರಿ ನೀರು ಕೇಳುದಕೆ ರಾಮ ರಾಮ
ಹಿರಿಯಣ್ಣಾನೆಂಡತಿ ರಾಮ ರಾಮ
ನೀರುಕೊಪ್ಪನೆ ಕೊಡುವಾಳು ರಾಮ ರಾಮ
ಮೊಕದೋರಿ ನಿಲುವ್ರುತಾರೆ ರಾಮ ರಾಮ
ಬಾವಿ ಬಳಿಗ್ಹೋದಾಳು ರಾಮ ರಾಮ
ಬಾಳ ದುಕ್ಕ ಮಾಡಾಳು ರಾಮ ರಾಮ
ನಿಡುದಾರಿ ನೀರು ಸೇದಿ ರಾಮ ರಾಮ
ಮನಿಗಾರ ತಂದಾಳೂ. ರಾಮ ರಾಮ

ಅತಿಗೇರು ಅತಿಗೇರೆ ರಾಮ ರಾಮ
ನಂಗ್ಹಸುವಾರಲಾದಾವೆ ರಾಮ ರಾಮ
ಮೂರುದಿನದ ಹುಳಿ ಗಂಜಿ ರಾಮ ರಾಮ
ಊಟಕ್ಕು ನೀಡಾರು ರಾಮ ರಾಮ
ಮೂರು ತುತ್ತ ಉಂಡಾಳು ರಾಮ ರಾಮ
ಕಣುನೀರ ತಗುದಾಳು ರಾಮ ರಾಮ
ಕಯ್ಯ ಬಾಯ ತೊಳುದಾಳು ರಾಮ ರಾಮ
ಮನೆ ಹಿಂದೆ ಮಾಡೊಳಗೆ ರಾಮ ರಾಮ
ಅಣ್ಣದೀರ ಗ್ಯಾನ ಮಾಡಾಳು. ರಾಮ ರಾಮ

ಬೇಡರಜ್ಜಿ ಬಂದಾಳು ರಾಮ ರಾಮ
ಯಾಕಳತಿ ಎಲುಬಾಲೆ? ರಾಮ ರಾಮ
ನಾ ಒಬ್ಬಳ ತಾಯಿಗು ರಾಮ ರಾಮ
ಏಳು ಜನ ಮಕ್ಕಳು ರಾಮ ರಾಮ
ಆರು ಜನ ಗಂಡು ಮಕ್ಳು ರಾಮ ರಾಮ
ಒಬ್ಬಾಳೆ ಸಿವ್ರುಗಂಗೆ. ರಾಮ ರಾಮ
ನಿನ್ನಣ್ಣಾವ್ರು ಎಲ್ಲಿಗ್ಹೋದ್ರು? ರಾಮ ರಾಮ
ಅಣ್ಣಾವ್ರು ಎಲ್ಲಗ್ಹೋದ್ರು? ರಾಮ ರಾಮ

ಬೆಳ್ಳಿಬೆಟ್ಟಾದೊಳಾಗೀಗ ರಾಮ ರಾಮ
ಚಿನ್ನ ಬೆಳ್ಳಿ ಗೆಯ್ಸು ಕೆಲಸ ರಾಮ ರಾಮ
ಅಷ್ಟು ಮಾತ ಕೇಳುದಳಜ್ಜಿ ರಾಮ ರಾಮ
ಬಾ ಮಗ ಎಂದಾಳು ರಾಮ ರಾಮ
ಬೇಡರಜ್ಜಿ ಕರೂಕೊಂಡು ರಾಮ ರಾಮ
ಬೇಡರಜ್ಜಿ ಮನೀಗ್ಹೋಗಿ ರಾಮ ರಾಮ
ತಂಗಿದ ಮೂರು ದಿನಕು ರಾಮ ರಾಮ
ಅಣ್ಣಾರು ಗ್ಯಾನದಲ್ಲಿ ರಾಮ ರಾಮ
ಕಣುನೀರು ತಗುದಾರು ರಾಮ ರಾಮ
ದಂಡಿನ ರಜ ಕೇಳಾರು ರಾಮ ರಾಮ
ಮನಿಗಾರು ಬಂದಾಗ ರಾಮ ರಾಮ
ಆರು ಜನ ಅಣದೀರು ರಾಮ ರಾಮ
ಅವರಾರು ಜನ ಮಡದೀರ ರಾಮ ರಾಮ
ನೆರಮನೆ ನಾಯಿ ಕರದು ರಾಮ ರಾಮ
ಮೂರು ಮುದ್ದೆ ನೀಡಾರು ರಾಮ ರಾಮ
ನಾಯೀಯ ಹೊಡುದಾರು ರಾಮ ರಾಮ
ಮನೆ ಬಾಗಲ ಮುಚ್ಚಗಂಡೆ ರಾಮ ರಾಮ
ಮುಚ್ಚಿಗಂಡೆ ಒಳಾಗೀಗ ರಾಮ ರಾಮ
ಕಾಟುಗರ ಕರೀಸ್ಯಾರು ರಾಮ ರಾಮ
ಕಟಗೀಯ ಮಾಡುಸ್ಯಾರು ರಾಮ ರಾಮ
ಅಲ್ಲಾರು ಸುಡುಸೇರು ರಾಮ ರಾಮ
ಕರಿಕೊಳ್ಳಿ ಮಾಡಸಾರು ರಾಮ ರಾಮ
ತಂಗೆ ಸತ್ತ ಮೂರು ದಿನಕೆ ರಾಮ ರಾಮ
ಮನವೀಗೆ ಬಂದಾಗ ರಾಮ ರಾಮ
ತಂಗೆಯು ಸತ್ತವಳೆ ರಾಮ ರಾಮ
ನೀವ್ ಹೋಗಿ ಮೂರು ದಿನಕೆ ರಾಮ ರಾಮ
ಹೊಟ್ಟೇದಿ ಆದಾವು ರಾಮ ರಾಮ
ಹೊಟ್ಟೆ ಬೇದಿ ಆದಾವು ರಾಮ ರಾಮ
ಸತ್ತಾರು ಹೋದಾಳು ರಾಮ ರಾಮ
ಅಷ್ಟು ಮಾತ ಕೇಳಿದಾರು. ರಾಮ ರಾಮ

ಮನಿಮಾರ ಬುಟ್ಟಾರು ರಾಮ ರಾಮ
ದೇಸವಾಸಕೆ ಹೊರುಟಾರು ರಾಮ ರಾಮ
ಬೇಡರಜ್ಜಿ ಮನಿಗ್ಹೋಗಿ ರಾಮ ರಾಮ

ಬೀದಿಲ್ಲಿ ಹೋಗುವಾಗ ರಾಮ ರಾಮ
ತಂಗೀಯು ಸಿವ್ವಗಂಗೆ ರಾಮ ರಾಮ
ಅಣ್ಣಾರ ನೋಡೂತ ರಾಮ ರಾಮ
ಅಜ್ಜೀಯ ಕರಿಯ ಕಳುಗಿ ರಾಮ ರಾಮ
ಬಿಸುಲಾಗೆ ಹೋಗುತಾವ್ರೆ ರಾಮ ರಾಮ
ಬಾಯಾರಿಗೆ ಕುಡುದ್ಹೋಗಿ ರಾಮ ರಾಮ
ಹಸುವಿಂದೆ ಹೋಗೋರೆ ರಾಮ ರಾಮ
ಬಿಸಿಯನ್ನ ಉಂಡ್ಹೋಗಿ ರಾಮ ರಾಮ
ಅಜ್ಜಿ ಕೈಲಿ ಹೇಳಾಳು ರಾಮ ರಾಮ
ಬಾಳ ದುಕ್ಕ ಮಾಡಾಳು ರಾಮ ರಾಮ
ದೇಸಾಂತ್ರ ಹೊರುಟವರು ರಾಮ ರಾಮ
ಬೇಡರಜ್ಜಿ ಮನಿಗೀಗ ರಾಮ ರಾಮ
ಅಜ್ಜೀಯ ಮನೆಗ್ಹೋದಾಗ ರಾಮ ರಾಮ
ಬಾಯನೀರ ಕೊಟ್ಟಾಳು ರಾಮ ರಾಮ
ಊಟಾವ ಮಾಡಿಹೋಗಿ ರಾಮ ರಾಮ
ಊಟಾಕೆ ಕುಂತಾಗ ರಾಮ ರಾಮ
ತಂಗೀಯು ಸಿವ್ವಗಂಗೆ ರಾಮ ರಾಮ
ಕಯ್ಯ ಚೇಟಿ ಬರುದಾಳು ರಾಮ ರಾಮ
ಅಣ್ಣಾರ ಮುಂದೆ ನೀಡುವಾಳು ರಾಮ ರಾಮ
ಅಣ್ಣಾರ ಮುಂದೆ ಇಡುವ್ರೋಳು. ರಾಮ ರಾಮ

ಆ ಚೇಟಿ ಓದಾರು ರಾಮ ರಾಮ
ತಂಗೀಯ ಕರೂಕೊಂಡೆ ರಾಮ ರಾಮ
ಅಜ್ಜೀಯ ಕರೂಕೊಂಡು ರಾಮ ರಾಮ
ಮನಿಗಾಗ ಬರುವ್ರೋರು ರಾಮ ರಾಮ
ಆರು ಜನ ಅಣ್ಣದೀರು ರಾಮ ರಾಮ
ಆರು ಜನ ಮಡಾದೀರ ರಾಮ ರಾಮ
ಕರುದಾಗ ನಿಲುಸಾರು ರಾಮ ರಾಮ
ದಂಡಿನ ಕತ್ತಿ ಎಳುದಾರು ರಾಮ ರಾಮ
ತಾವೀಗ ಕಡುದಾರು ರಾಮ ರಾಮ
ಆರು ಜನ ಮಡಾದೀರ್ನ ರಾಮ ರಾಮ
ಬೂದೀಯ ಮಾಡಾರು. ರಾಮ ರಾಮ

**ಹಾಡಿದವರು**
**ಶ್ರೀಮತಿ ವನಮಾಲಜ್ಜಿ, ಹೆದ್ದೂರು**

◆ ◆ ◆ ◆

# ೪. ವೀರ ದಿಮ್ಮವ್ವ

ತಂದನಾನು ತಾನ ॥ ಪಲ್ಲವಿ ॥

ಅಯ್ಯ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ತಂದನಾನು ತಾನೆ
ದಬ್ಬೆಘಟ್ಟ ಗ್ರಾಮದಲ್ಲಿ ಹೋರಿ ನಂಜೇಗೌಡನಂತೆ. ತಂದನಾನು ತಾನೆ
ಹೋರಿ ನಂಜೇಗೌಡನಿಗೆ ಆರು ಜನ ಗಂಡು ಮಕ್ಕಳು ತಂದನಾನು ತಾನೆ
ಆರು ಜನ ಗಂಡುಮಕ್ಕಳ್ಹಿಂದೆ ಒಬ್ಬಾಳೆ ಹೆಣ್ಣು ಮಗಳಂತೆ ತಂದನಾನು ತಾನೆ
ಒಬ್ಬಾಳೆ ಮಗಳಂತೆ ಅವಳ್ಹೆಸರು ತಿಮ್ಮವ್ವ ತಂದನಾನು ತಾನೆ
ಅವಳ ವೀರುದಿಮ್ಮಮ್ಮನಂಥ ಕರದಾರು ಅವಳನ್ನು ತಂದನಾನು ತಾನೆ
ಬಾಲೆ ತಿಮ್ಮಮ್ಮನಾದರೂ ನೀರಿಗೇ ಹೊರಟಾಳು ತಂದನಾನು ತಾನೆ
ಚಿನ್ನಾದ ಕೊಡಕಿನ್ನು ರನ್ನಾದ ಸಿವ್ರುಡ್ಹೂಡಿ ತಂದನಾನು ತಾನೆ
ಬಾವಿ ಹಾದೀಲಿ ಹೊರುಟಾಳೆ ಬಾಲೆ ತಿಮ್ಮವ್ವ. ತಂದನಾನು ತಾನೆ

ಬಾವಿ ಏರಿಮೇಲೆ ಬೇಡರ ಬಮ್ಮಣ್ಣ ತಂದನಾನು ತಾನೆ
ಕಾರೆ ಕೆಂಗನು ತಿಂದು ಎದೆಸೊಕ್ಕಿ ಬಿದ್ದಾನೆ ತಂದನಾನು ತಾನೆ
ಬಾಲೆ ತಿಮ್ಮವ್ವನಾದರೂ ನೋಡುತಾಳೆ ಬಮ್ಮಣ್ಣನ ತಂದನಾನು ತಾನೆ
ಬಾವಿ ಕಲ್ಲಿನ ಮೇಲೆ ಕೊಡನಾದರು ಇರಿಸಾಳೆ ತಂದನಾನು ತಾನೆ
ಹರಿಯುವ ಜಲಧೀಗೆ ಬೇಗದಿಂದ ಹೋಗುತಾಳೆ ತಂದನಾನು ತಾನೆ
ಹರಿಯುವ ಜಲಧೀಗೆ ಮುಂಜೆರಗಜ್ಜಿಕೊಂಡು ತಂದನಾನು ತಾನೆ
ಮುಂಜೆರಗ ಅಜ್ಜಿಕೊಂಡು ಓಡಿಓಡಿ ಬರುತಾಳೆ ತಂದನಾನು ತಾನೆ
ಬಾಯಿಗಾದರು ಹಿಂಡುತಾಳೆ ಎದೆಗಾದರು ಒತ್ತುತಾಳೆ ತಂದನಾನು ತಾನೆ
ಎದಿಗಾದ್ರು ಒತ್ತುತಾಳೆ ತಲಿಗಾದರು ತಟ್ಟುತಾಳೆ ತಂದನಾನು ತಾನೆ
ಬೇಡರ ಬಮ್ಮಣ್ಣ ಧಕ್ಕನೆ ಮೇಲೆದ್ದು ತಂದನಾನು ತಾನೆ
ಸುತ್ತಾಲು ತಿರುಗ್ಯಾನೆ ಏಸತ್ತು ಮಲಗಿದ್ದೆ ತಂದನಾನು ತಾನೆ
ಬಾಲೆ ತಿಮ್ಮವ್ವನಾದರು ಏನಂತ ಹೇಳುತಾಳೆ ತಂದನಾನು ತಾನೆ
ಹೊಟ್ಟೆಗೂಟ ಇಲ್ಲವೇನು ಕಾರೆ ಕೆಂಗನು ತಿಂದು ತಂದನಾನು ತಾನೆ
ಎದೆಸೊಕ್ಕಿ ಬಿದ್ದಲ್ಲೊ ಬೇಡರ ಬಮ್ಮಣ್ಣ ತಂದನಾನು ತಾನೆ
ನಮ್ಮೂರಿಗೆ ಬಂದರೀಗ ಹೊಟ್ಟೆಗ್ಹಿಟ್ಟು ಕೊಡುತೀವಿ ತಂದನಾನು ತಾನೆ
ಹೊಟ್ಟೆಗ್ಹಿಟ್ಟು ಕೊಡುತೀವಿ ಉಡುವ ಬಟ್ಟೆ ಕೊಡುತೀವಿ ತಂದನಾನು ತಾನೆ
ದನವನಾದರು ಕಾಯುತೀಯ ಕಸವನಾದರು ಗುಡುಸುತೀಯ? ತಂದನಾನುತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ. ತಂದನಾನು ತಾನೆ

ಬಾಲೆ ತಿಮ್ಮವ್ವನಾದರೂ ಕೊಡನಾದ್ರು ಎತ್ತುತಾಳೆ ತಂದನಾನು ತಾನೆ
ಮುಂದೆ ತಿಮ್ಮವ್ವನಂತೆ ಹಿಂದೆ ಬಮ್ಮಣ್ಣನಂತೆ ತಂದನಾನು ತಾನೆ

ಕರಕೊಂಡೆ ಬರುತಾಳೆ ಅವರ ಮನಿಗಿನ್ನು ತಂದನಾನು ತಾನೆ
ಹೊರ ಬಾಗಿಲಲ್ಲಿ ನಿಲ್ಲಿಸ್ಯಾಳೆ ಏನಂತ ಹೇಳುತಾಳೆ ತಂದನಾನು ತಾನೆ
ತಾಯಿ ತಂದೆಯನಾದರು ಕೇಳಿಕೊಂಡು ಬರುತೀನಿ ತಂದನಾನು ತಾನೆ
ಹೊರಬಾಗಿಲಲ್ಲಿ ನಿಲ್ಲಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ
ಏಳು ಬಾಗಿಲ ದಾಟುತಾಳೆ ಕೋಣೆ ಬಾಗಿಲು ದಾಟುತಾಳೆ ತಂದನಾನು ತಾನೆ
ಕೋಣೆ ಬಾಗಿಲು ದಾಟುತಾಳೆ ಕೊಡುವನಾದರು ಇಳಿಸಾಳೆ ತಂದನಾನು ತಾನೆ
ತಂದೆಯ ಬಳಿಗಾದರು ಬೇಗದಿಂದ ಹೋಗತಾಳೆ. ತಂದನಾನು ತಾನೆ

ತಂದೆ ತಂದೆ ಕೇಳು ನನು ಮಾತ ನೀನೀಗ ತಂದನಾನು ತಾನೆ
ಇಲ್ಲೊಬ್ಬನಾಳವನೆ ಹೊಟ್ಟೆಗಿಟ್ಟು ಕೊಟ್ಟಾರೆ ತಂದನಾನು ತಾನೆ
ದನವನಾದರು ಕಾಯುತಾನೆ, ಕಸವನಾದರೂ ಗುಡಿಸುತಾನೆ ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಅವರಪ್ಪ ತಂದನಾನು ತಾನೆ
ನಿನಿಗೊಪ್ಪೀಗೆ ಆದ ಮೇಲೆ ನನಿಗೊಪ್ಪು ತಿಮ್ಮವ್ವ. ತಂದನಾನು ತಾನೆ
ತಾಯವ್ವನ ಬಳಿಗಾದರೂ ಬೇಗದಿಂದ ಹೋಗುತಾಳೆ ತಂದನಾನು ತಾನೆ
ತಾಯಿತಾಯಿ ಕೇಳೇ ನಮ ತಾಯಿ ನನು ಮಾತ ತಂದನಾನು ತಾನೆ
ಮಗಳೆ ನಿನಗೊಪ್ಪಿದ ಮೇಲೆ ನನಿಗೊಪ್ಪು ತಿಮ್ಮವ್ವ. ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ಕೊಳ್ಳೊ ಕಾಲಿಗು ನೀರ ತಂದನಾನು ತಾನೆ
ನೀರಾದರು ಕೊಡುತಾಳೆ ಊಟಕಾದರು ಬಡಿಸುತಾಳೆ ತಂದನಾನು ತಾನೆ
ಊಟಕಾದರು ಬಡಿಸುತಾಳೆ ಏನಂತ ಹೇಳುತಾಳೆ ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ನಾನೊಂದ ಹೇಳುವೆನು ಕೇಳು ತಂದನಾನು ತಾನೆ
ದನಕರ ಒಂಬತ್ತು ರಾಸು ಒಡಕೊಂಡೆ ಹೋಗಬೇಕು ತಂದನಾನು ತಾನೆ
ಬೆಳಕಲ್ಲ ಬೆಟ್ಟದ ಕವಲಿಗೆ ಹೊಡೆಯಬೇಕು ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ ತಂದನಾನು ತಾನೆ
ಕರು ದನ ಒಂಬತ್ತು ರಾಸು ಹೊಡಿಕೊಂಡೇ ಹೋಗುತಾನೆ ತಂದನಾನು ತಾನೆ
ಕವಲಿಗು ವಡುದಾನೆ ಬೆಟ್ಟಕಾದರು ಅಟ್ಟುತಾನೆ. ತಂದನಾನು ತಾನೆ

ವೀರದಿಮ್ಮವ್ವನಾದ್ರು ಏನಾದರು ಮಾಡುತಾಳೆ? ತಂದನಾನು ತಾನೆ
ಆರು ಜನ ಅಣುದಿರಗೂ ಊಟನಾದರು ಹೊತ್ತುಕೊಂಡು ತಂದನಾನು ತಾನೆ
ವೀರುದಿಮ್ಮವನಾದರು ಊಟನಾದರು ಹೊತ್ತುಕೊಂಡು ತಂದನಾನು ತಾನೆ
ತಿಮ್ಮವ್ವ ಬರುವದನು ಬಮ್ಮಣ್ಣ ನೋಡುತಾನೆ ತಂದನಾನು ತಾನೆ
ಬೆಳಕಲ್ಲು ಬೆಟ್ಟದಿಂದ ದಡ್ಡನೆ ನೆಗುದಾನೆ ತಂದನಾನು ತಾನೆ
ದಡ್ಡನೆ ನೆಗುದಾನೆ ದುಬ್ಬಾನೆ ಧುಮುಕಾನೆ ತಂದನಾನು ತಾನೆ
ಬೇಡರ ಬಮ್ಮಣ್ಣ ಬೇಲಿ ಸಂದಿಲು ಬಂದಾ ತಂದನಾನು ತಾನೆ

ಅಡ್ಡಬಳಸಿ ಬರುತಾನೆ ಹಿಂಬಾಲಿಸಿ ಬರುತಾನೆ ತಂದನಾನು ತಾನೆ
ತಿಮ್ಮವ್ವನ ಮುಂಜೆರುಗ ಹಿಡುದಾನೆ ಬಮ್ಮಣ್ಣ. ತಂದನಾನು ತಾನೆ
ತಿರುಗಾದರು ನೋಡುತಾಳೆ ಏನಂತ ಹೇಳುತಾಳೆ ತಂದನಾನು ತಾನೆ
ನನಗಿಂತ ಚೆಲುವೆಯ ತಂದು ಮದುವೆಯ್ಯ ಮಾಡಿಸೇನು ತಂದನಾನು ತಾನೆ
ಮದುವೆಯ ಮಾಡಿಸೇನು ಸೋಬನುವ ಮಾಡಿಸೇನು ತಂದನಾನು ತಾನೆ
ನನ್ನ ಮುಂಜೆರುಗ ಬಿಡಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ
ಪಟ್ಟೆಸೆರಗೊಂದ ನೆಟ್ಟಾನೆ ಹರಿದಾನು ತಂದನಾನು ತಾನೆ
ಪುಟ್ಟಾಣಿ ಕುಪುಸಾವ ಪಟ್ಟಾನೆ ಕಿತ್ತಾನೆ ತಂದನಾನು ತಾನೆ
ಗೋಳು ಗೋಳೆನ್ನುತಾಳೆ, ಸಿವಸೋಕ ಮಾಡುತಾಳೆ ತಂದನಾನು ತಾನೆ
ಗೋಳೆಂದು ಹೊರಟಾಳೆ ಹೊಲದ ದಡಕ್ಕಾಗ. ತಂದನಾನು ತಾನೆ

ಅಣ್ಣಯ್ಯ ಅಣ್ಣಯ್ಯ ಊಟ ಇಳುಗಲಿ ಬನ್ನಿ ತಂದನಾನು ತಾನೆ
ಅವರೆಲ್ಲರಿಗೂ ಕಿರಿಯಣ್ಣ ಊಟ ಇಳುಕಲು ಬಂದ ತಂದನಾನು ತಾನೆ
ಇದು ಏನು ತಿಮ್ಮವ್ವ ಮುಂಜೆರಗು ಹರಿದಾವು? ತಂದನಾನು ತಾನೆ
ಪುಟ್ಟಾಣಿ ಕುಪುಸಾವು ಪಟ್ಟುಣ್ಣೆ ಕಿತ್ತಾದು? ತಂದನಾನು ತಾನೆ
ಅಣ್ಣಯ್ಯ ಅಣ್ಣಯ್ಯ ನಾನು ಬರುವಂಥ ದಾರಿಲ್ಲಿ ತಂದನಾನು ತಾನೆ
ಸೀಗೆಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ ತಂದನಾನು ತಾನೆ
ಬಿದುರು ಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ ತಂದನಾನು ತಾನೆ
ಹಂಗಂದ ಮಾತೀಗೆ ಆರು ಜನ ಅಣ್ಣಾದಿರು ತಂದನಾನು ತಾನೆ
ಆರು ಜನ ಅಣ್ಣಾದಿರು ಕುಂತುನಿಂತು ಮಾತನಾಡಿ ತಂದನಾನು ತಾನೆ
ನಮ್ಮ ತಂಗಿ ತಿಮ್ಮವ್ವನ್ನೆ ಮಡುಗೋದು ಸರಿಯಲ್ಲಾ. ತಂದನಾನು ತಾನೆ
ಆರು ಜನ ಅಣದೀರು ಆರೆತ್ತುನ ಬಿಟ್ಟು ತಂದನಾನು ತಾನೆ
ತಂಗಿ ತಿಮ್ಮವ್ವನಿಗೆ ಏನಂತ ಹೇಳುತಾರೆ ತಂದನಾನು ತಾನೆ
ಬೇಗುದಿಂದ ಮನಿಗಾದರೂ ನಡಿಯವ್ವ ಎನ್ನುತಾರೆ ತಂದನಾನು ತಾನೆ
ಬರುವಂತ ಹಾದೀಲಿ ದೊಡ್ಡಮನುಸೆನಾಗವಳೆ ತಂದನಾನು ತಾನೆ
ದೊಡ್ಡಮನಸೆನಾಗವಳೆ ರುತುಮನುಸೆನಾಗವಳೆ ತಂದನಾನು ತಾನೆ
ಮನಿಗಾದರು ಬಂದಾಳೆ ಹೊರಬಾಗಲಲ್ಲಿ ನಿಂತಾಳೆ ತಂದನಾನು ತಾನೆ
ಆರು ಜನ ಅತ್ತಿಗೇರು ನೋಡಾರು ನಾದುನೀಯ ತಂದನಾನು ತಾನೆ
ನಮಗೆ ಇರುವಳೊಬ್ಬಳು ನಾದನಿಯ ಗುಡಲೀಗೆ ಕೂಡಬೇಕು ತಂದನಾನು ತಾನೆ
ಗುಡಲೀಗೆ ಕೂಡಬೇಕು ಒಸಿಗೇಯ ಮಾಡಬೇಕು ತಂದನಾನು ತಾನೆ
ಆರು ಜನ ಅತ್ತಿಗೆರು ಸಂತೋಷದಿಂದಾಲಿ ತಂದನಾನು ತಾನೆ
ಎಲ್ಲರಿಗೂ ಹಿರಿಯಣ್ಣ ಸೋದರಮಾವನ ಕರಸಿ ತಂದನಾನು ತಾನೆ
ತಿಮ್ಮವನ ಗುಡಲೀಗೆ ಕೊನಿಗೋಳ ತರಿಸಾನು ತಂದನಾನು ತಾನೆ

ಅಡಿಯೊಂದು ಹತ್ತಿಯ ಕೊನೆ, ಮೇಲೊಂದು ಹಲಸಿನ ಕೊನೆ ತಂದನಾನು ತಾನೆ
ಮಾವನ ಮಗನಾದರು ಕಡುತಂದು ಕೊನೆಯನ್ನು ತಂದನಾನು ತಾನೆ
ಮಾಳಿಗ್ಗೆ ಇದಿರಾಗಿ ಇರುಸಾನೆ ಕೊನೆಗೋಳ ತಂದನಾನು ತಾನೆ
ಅಡಿಯೊಂದು ಹಲಸಿನ ಕೊನೆ, ಮೇಲೊಂದು ಹತ್ತಿಯ ಕೊನೆ ತಂದನಾನು ತಾನೆ
ಅವರತ್ತೇಯ ಮಗನಾದರು ಕಡುತಂದ ಕೊನೆಯನ್ನಾ ತಂದನಾನು ತಾನೆ
ತೊಟ್ಟಿಮನೆಗೆದುರಾಗಿ ನಿಲ್ಲಿಸಾನೆ ಕೊನೆಯನ್ನಾ ತಂದನಾನು ತಾನೆ
ಅವರಾರುಜನ ಅಣ್ಣದೀರು ಗುಡಲೀಗೆ ಕಾವಲು ತಂದನಾನು ತಾನೆ
ಹೊಕ್ಕೋದನಿವನ್ಯಾರು ಹೊಸಬಂಟ ಈ ಮನೇ? ತಂದನಾನು ತಾನೆ
ಅವರ ಮಾವ್ನ ಮಗನಲ್ಲದೆ ಬದಲಲ್ಲಾ ಕಾಣೆಯಾ ತಂದನಾನು ತಾನೆ
ಆರು ಜನ ಅತ್ತಿಗೇರು ಗುಡಲೀಗೆ ಕೂಡುತಾರೆ ತಂದನಾನು ತಾನೆ
ಗುಡಲೀಗೆ ಕೂಡುತಾರೆ, ಮಡುಲೀಗೆ ತುಂಬುತಾರೆ ತಂದನಾನು ತಾನೆ
ಆರು ಜನ ಅಣ್ಣದೀರು ಕಾದುಕೊಂಡು ಮನಿಗ್ಯಾರೆ. ತಂದನಾನು ತಾನೆ

ಬೇಡರ ಬೊಮ್ಮಣ್ಣ ಕರುದನ ಎಂಬತ್ತುರಾಸು ತಂದನಾನು ತಾನೆ
ಹೊಡಕೊಂಡು ಹೋಗುತಾನೆ ತರುಕೊಂಡೆ ಹೋಗುತಾನೆ ತಂದನಾನು ತಾನೆ
ಕರುದನ ಎಂಬತ್ತು ರಾಸು ತಂದು ದೊಡ್ಡೀಗೆ ಕೂಡಿ ತಂದನಾನು ತಾನೆ
ತಿಮ್ಮವ್ವನ ಗುಡಲನ್ನು ವಾರೀಗಣ್ಣಿನಲ್ಲಿ ನೋಡುತಾನೆ ತಂದನಾನು ತಾನೆ
ವಾರಿಗಣ್ಣಿನಲ್ಲಿ ನೋಡುತಾನೆ ಕಿರುಗಣ್ಣಿನಲ್ಲಿ ನೋಡುತಾನೆ ತಂದನಾನು ತಾನೆ
ಹರಿಯುವ ಜಲಧೀಗೆ ಬೇಗದಿಂದ ಹೋಗುತಾನೆ ತಂದನಾನು ತಾನೆ
ಎಮ್ಮೆ ಸಗಣಿ ತುಂಬೆ ಸೊಪ್ಪು ಬೇಗದಿಂದ ತೆಗೆದುಕೊಂಡು ತಂದನಾನು ತಾನೆ
ಹರಿಯುವ ಜಲದಲ್ಲಿ ಕಜ್ಜಿನೆಲ್ಲುಜ್ಜಿಕೊಂಡಾ ತಂದನಾನು ತಾನೆ
ಕಜ್ಜಿನೆಲ್ಲಾ ಉಜ್ಜಿಕೊಂಡು ಪ್ಯಾಟೆಬೀದಿಗು ಬಂದಾ ತಂದನಾನು ತಾನೆ
ಪ್ಯಾಟೆ ಬೀದಿಗು ಬಂದ ಅಂಗಡಿ ಸಾಲಿಗು ಬಂದಾ ತಂದನಾನು ತಾನೆ
ಕಡಲೆ ಬೆಲ್ಲವನ್ನು ತೆಗೆದು ಪಟುಣಾವ ಕಟ್ಟಿಸಾನೇ ತಂದನಾನು ತಾನೆ
ಹರುಕಲ ಜೇಬಿಗೆ ಹುರುಗಡಲೆ ತುಂಬಿಕೊಂಡು ತಂದನಾನು ತಾನೆ
ತಿಮ್ಮವ್ವನ ಗುಡಲೀಗೆ ನುಗ್ಗುತಾನೆ ಬಮ್ಮಣ್ಣ. ತಂದನಾನು ತಾನೆ

ಆರು ಜನ ಅಣ್ಣದೀರು ಕಾದಿಕೊಂಡೆ ಮನಿಗ್ಯಾರೆ ತಂದನಾನು ತಾನೆ
ಗುಡಲೀಗೆ ನುಗುತಾನೆ ಬೇಡರ ಬಮ್ಮಣ್ಣ ತಂದನಾನು ತಾನೆ
ದಡ್ಡನೆ ಒದ್ದಾಳೆ ತುಪ್ಪಾನೆ ಬಿದ್ದಾನೆ ತಂದನಾನು ತಾನೆ
ಏನೆ ತಿಮ್ಮವ್ವ ದಡ್ಡನೆ ಒದ್ಯಲ್ಲೆ? ತಂದನಾನು ತಾನೆ
ದಡ್ಡಾನೆ ಒದ್ದೆ ೈಲ್ಲೆ ದುಪ್ಪಾವೆ ಬಿತ್ತಲ್ಲೆ? ತಂದನಾನು ತಾನೆ
ಅಣ್ಣಯ್ಯ ಅಣ್ಣಯ್ಯ ಅಗಸಾರ ಕತ್ಯವ್ವಾ ತಂದನಾನು ತಾನೆ

ಅಣ್ಣಾ ಗುಡಲ ಸೊಪ್ಪಿಗು ಬಂತು ದಡ್ಡಾನೆ ಒದ್ದೇನು ತಂದನಾನು ತಾನೆ
ದಡ್ಡಾನೆ ಒದ್ದೇನು ದುಪ್ಪಾನೆ ಬಿದ್ದೀತು. ತಂದನಾನು ತಾನೆ

ಆರು ಜನ ಅಣ್ಣದೀರು ಹುಡಿಕ್ಯಾದರು ನೋಡುತಾರೆ ತಂದನಾನು ತಾನೆ
ಹುಡಿಕ್ಯಾದರು ನೋಡುತಾರೆ ತಡಿಕ್ಯಾದರು ನೋಡುತಾರೆ ತಂದನಾನು ತಾನೆ
ತಂದೇಯ ಬಳಿಗಾದರು ಬೇಗುದಿಂದ ಬರುತಾರೆ ತಂದನಾನು ತಾನೆ
ತಂದೆ ತಂದೇ ಕೇಳು ನಮ ತಂದೆ ನಮ ಮಾತಾ ತಂದನಾನು ತಾನೆ
ನಮ ತಂಗಿ ತಿಮ್ಮವ್ವ ಮಡಗೋದು ಸರಿಯಲ್ಲಾ ತಂದನಾನು ತಾನೆ
ನಮ್ಮ ಪಟ್ಟಣಕೆ ಕೆಟ್ಟೆಸರು ಬರುತ್ತೈತೆ ಎನ್ನುತಾರೆ ತಂದನಾನು ತಾನೆ
ಹಂಗಂದ ಮಾತೀಗೆ ಹೋರಿ ನಂಜೇಗೌಡರಾಗ ತಂದನಾನು ತಾನೆ
ಮಾವನ ಪಟ್ಟಣಕೆ ವಾಲೇಯ ಬರುದಾರು ತಂದನಾನು ತಾನೆ
ನಿಮ್ಮ ಮಗನನ್ನು ಕರಕೊಂಡು ಬರಬೇಕು ಬರುದಾರು ತಂದನಾನು ತಾನೆ
ನಮ್ಮ ಮಗಳನ್ನೆ ಕೊಡುತೀವಿ ಎಂದೀಗ ಬರುದಾರು. ತಂದನಾನು ತಾನೆ
ಮಾವಾನ ಮಗನನ್ನು ಕರಕೊಂಡು ಬರುತಾರೆ ತಂದನಾನು ತಾನೆ
ದಂಡು ದಳವಾಯಿ ಕಟ್ಟಿಕೊಂಡೆ ಬರುತಾರೆ ತಂದನಾನು ತಾನೆ
ಮಂದಿ ಮಾರಬಲ ಕಟ್ಟಿಕೊಂಡೆ ಬರುತಾರೆ ತಂದನಾನು ತಾನೆ
ಆನೆ ಕುದುರೆಸಾಲು, ಒಂಟೆ ಒಡಿಸಾಲು ತಂದನಾನು ತಾನೆ
ಕಟ್ಟಿಕೊಂಡೆ ಬರುತಾರೆ ಅವರ ಪಟ್ಟಣಕಿನ್ನು ತಂದನಾನು ತಾನೆ
ಹೋರಿ ನಂಜೇಗೌಡರಾಗ ಪಟ್ಟಣವ ಸಾರಿಸಾರು ತಂದನಾನು ತಾನೆ
ಆಕಾಶ ಮೇಲ್ಕಟ್ಟು ಚಪ್ಪರವ ಹಾಕಿಸಾರು ತಂದನಾನು ತಾನೆ
ಭೂಮಿ ಅಡ್ಡಗಲದಷ್ಟು ಹಸೆ ಜಗಲಿ ಬರಿದಾರು ತಂದನಾನು ತಾನೆ
ಮದುವೆಯ್ಯ ಮಾಡಿಸಾರು ಸೋಬನಾವ ಮಾಡಿಸ್ಯಾರು. ತಂದನಾನು ತಾನೆ

ತಿಮ್ಮವ್ವನ ಅತ್ತೆಮಾವದಿರು ಏನಂತ ಹೇಳುತಾರೆ ತಂದನಾನು ತಾನೆ
ನನ್ನ ಮಗನನ್ನ ಸೊಸೆಯನ್ನ ಕಳಿಗಾದರು ಕೊಡಬೇಕು ತಂದನಾನು ತಾನೆ
ಹಂಗಂದ ಮಾತೀಗೆ ಏನಂತ ಹೇಳುತಾರೆ ತಂದನಾನು ತಾನೆ
ನಮಗೆ ಇರುವಾಳೊಬ್ಬಳೆ ಮಗಳು ತಂದನಾನು ತಾನೆ
ನಮ್ಮ ಮಗಳನ್ನು ಅಳಿಯನ್ನ ತಿಂಗಾಳು ಮಡಿಕೊಂಡು ತಂದನಾನು ತಾನೆ
ನಿಮ್ಮ ಪಟ್ಟಣಕೆ ನೀವಿನ್ನ ಹೋಗಬೇಕು ಎನ್ನುತಾರೆ ತಂದನಾನು ತಾನೆ
ಹಂಗಂದ ಮಾತೀಗೆ ಬೇಗುದಿಂದ ಹೋಗುತಾರೆ. ತಂದನಾನು ತಾನೆ
ದಂಡು ದಳವಾಯಿನೆಲ್ಲ ಕಟ್ಟಿಕೊಂಡೆ ಹೋಗುತಾರೆ. ತಂದನಾನು ತಾನೆ
ಒಂದುವಾರ ತುಂಬಿದಾವು ಎರಡುವಾರ ತುಂಬಿದಾವು ತಂದನಾನು ತಾನೆ
ಮೂರುವಾರ ತುಂಬಿದಾವು ನಾಲ್ಕುವಾರ ತುಂಬಿದಾವು ತಂದನಾನು ತಾನೆ

ತಿಂಗಾಳೆ ತುಂಬಿದಾವ್ರು ಕಳಿಗಾದರು ಕೊಡಬೇಕು ತಂದನಾನು ತಾನೆ
ನಮಗೆ ಇರುವಾಳೊಬ್ಬಳೆ ಮಗಳು ಕಳಿಸ್ಣೆಂಗೆ ಇರುವಾದು. ತಂದನಾನು ತಾನೆ
ತುಪ್ಪ ಅನ್ನವನ್ನಿಕ್ಕಿ ಮುತ್ತುಮಡಲಿಗೆ ಕಟ್ಟಿ ತಂದನಾನು ತಾನೆ
ತಂದೆಯ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಹಾಲು ಅನ್ನವನಿಕ್ಕಿ ಮುತ್ತು ಮಡಲಿಗೆ ಕಟ್ಟಿ ತಂದನಾನು ತಾನೆ
ಅಣ್ಣಂದಿರ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಮಸರು ಅನ್ನವನಿಕ್ಕಿ ಮುತ್ತ ಮಡಲಿಗೆ ಕಟ್ಟಿ ತಂದನಾನು ತಾನೆ
ಅವರ ಅತ್ತಿಗೆಯರ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಶೋಕ ಮಾಡುತಾಳೆ ತಂದನಾನು ತಾನೆ
ಮಟ್ಟ ಮಂಗಳವಾರ, ನಿಚ್ಚ ಮಧ್ಯಾನುದಲ್ಲಿ ತಂದನಾನು ತಾನೆ
ಬಾಲೆ ತಿಮ್ಮವ್ವನಾದ್ರು ಹೊರುಟಾಳೆ ಬೇಗುದಿಂದ ತಂದನಾನು ತಾನೆ
ಗಂಡಹೆಂಡಿರು ಕೂಡಿ, ನಡುಕಾಡಲ್ಲಿ ಹೋಗುತಾರೆ ತಂದನಾನು ತಾನೆ
ತಿಟ್ಟತ್ತಿ ತಿರುಗ್ಯಾಳು ತವರೂರ ನೋಡುತಾಳೆ. ತಂದನಾನು ತಾನೆ

ಬೇಡಾರ ಬಮ್ಮಣ್ಣ ಬೆನ್ನತ್ತಿ ಹೋಗುತಾನೆ ತಂದನಾನು ತಾನೆ
ನಡುಕಾಡಲ್ಲಿ ಹೋಗುತಾಳೆ ಬಾಲೆ ತಿಮ್ಮವ್ವನಾದರು ತಂದನಾನು ತಾನೆ
ತಿಮ್ಮವ್ವನ ಗಂಡಾನ ತಲೆ ಹಾರಿಸಿ ಹೊಡೆದಾನು ತಂದನಾನು ತಾನೆ
ಹಾರೀಸಿ ಹೊಡುದಾನು ಬೀಸಾದರು ಹೊಡುದಾನು ತಂದನಾನು ತಾನೆ
ತಿರುಗ್ಯಾದರು ನೋಡುತಾಳೆ ಸತ್ಯವಂತೆ ತಿಮ್ಮವ್ವ ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ನಾನೊಂದು ಹೇಳುವೆ ಕೇಳು ತಂದನಾನು ತಾನೆ
ಗಾಳಿಯಾಗಿ, ಪೀಡಾಗಿ ಬಾಳುಗೊಡೋದಿಲ್ಲಾ ತಂದನಾನು ತಾನೆ
ಚುಳ್ಳುಗರ ಕಡಿಯಯ್ಯ ಬೇಗುದಿಂದ ಎನುತಾಳೆ ತಂದನಾನು ತಾನೆ
ಹಂಗಂದ ಮಾತೀಗೆ ಬಗ್ಗಿದಾನೆ ಬಮ್ಮಣ್ಣ ತಂದನಾನು ತಾನೆ
ಮನೆದೇವರು ನೆನೇದಾಳು ಮನದಲ್ಲಿ ತಿಮ್ಮವ್ವ ತಂದನಾನು ತಾನೆ
ದುರುಗೀಯ ನೆನೆದಾಳು ಮನದಲ್ಲಿ ತಿಮ್ಮವ್ವ ತಂದನಾನು ತಾನೆ
ಬಮ್ಮಣ್ಣನ ತಲೆಯನ್ನ ಹಾರೀಸಿ ಹೊಡೆದಾಳೂ ತಂದನಾನು ತಾನೆ
ಹಾರೀಸಿ ಹೊಡೆದಾಳು ಬೀಸಾದರು ಹೊಡೆದಾಳು ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಸೋಕಮಾಡುತಾಳೆ ತಂದನಾನು ತಾನೆ
ಗಂಡನ ತಲೆಯನ್ನು ಮಡಲಲ್ಲಿ ಕಟ್ಟಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗ್ಯೆಯಲ್ಲಿ ಹಿಡುಕೊಂಡು ತಂದನಾನು ತಾನೆ
ಹೋಗಂತ ಹೋಗುತಾಳೆ. ನಡುಕಾಡಲ್ಲಿ ಹೋಗುತಾಳೆ ತಂದನಾನು ತಾನೆ
ಹೋಗಂತ ಹಾದೀಲಿ ಹೆಬ್ಬಾಲದ ಮರವುಂಟೂ ತಂದನಾನು ತಾನೆ
ಹೆಬ್ಬಾಲದ ಮರದಡಿಯ ಕುಂತುಕೊಂಡ ತಿಮ್ಮವ್ವ ತಂದನಾನು ತಾನೆ

ಗೋಳುಗೋಳೆನ್ನುತಾಳೆ ಶಿವಶೋಕಮಾಡುತಾಳೆ ತಂದನಾನು ತಾನೆ
ಇವಳ ಗಂಡನ ತಲೆಯನ್ನು ತೊಡೆಯಮೇಲೆ ಮಡಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗಾಲಲ್ಲಿ ಒದ್ದುಕೊಂಡು ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಸೋಕಮಾಡುತಾಳೆ. ತಂದನಾನು ತಾನೆ

ತಂದೆ ತಾಯಿಗಳಿಗಾದ್ರು ದುರುಸಪನ ಬಡುದಾವು ತಂದನಾನು ತಾನೆ
ಅತ್ತೆಮಾವದಿರುಗು ದುರುಸಪನ ಬಡುದಾವು ತಂದನಾನು ತಾನೆ
ದುರುಸಪನ ಬಡುದಾವು ಬರಸಪನ ಬಡುದಾವು ತಂದನಾನು ತಾನೆ
ನಮ್ಮ ಮಗಳ್ನಾದರು ನೋಡಬೇಕು ಕರದಾರು ಬರಬೇಕು ತಂದನಾನು ತಾನೆ
ಹೋರಿನಂಜೇಗೌಡರಾದರು ಬೇಗದಿಂದ ಹೊರುಟಾರೆ ತಂದನಾನು ತಾನೆ
ತಿಮ್ಮವ್ವನ ಅತ್ತೆಮಾವದಿರು ಬೇಗುದಿಂದ ಬರುತಾರೆ ತಂದನಾನು ತಾನೆ
ತಿಮ್ಮವನ ತಾಯಿ ತಂದೆ ಬೇಗುದಿಂದ ಬಂದಾರು ತಂದನಾನು ತಾನೆ
ಇದು ಏನೆ ತಿಮ್ಮವ್ವ ಅರಬಾಳು ತಿರಿಬಾಳು? ತಂದನಾನು ತಾನೆ
ಸಾಲ ಕೇಳಲಿಲ್ಲ ಸಕುನ ನುಡಿಯಲಿಲ್ಲ ತಂದನಾನು ತಾನೆ
ಅತ್ತಲಿಂದ ಬಂದವರಿಗೆ ಇತ್ತಲಿಂದ ಕೊಟ್ಟಿರಲ್ಲ ತಂದನಾನು ತಾನೆ
ನನ್ನ ಅರಬಾಳು ತಿರಿಬಾಳು ಗತಿಯಾತು ನನ ಶಿವನೆ. ತಂದನಾನು ತಾನೆ

ಹಂಗಂದ ಮಾತೀಗೆ ಹೋರಿನಂಜೇಗೌಡಾರು ತಂದನಾನು ತಾನೆ
ಬಾರಾಲ ತಿಮ್ಮವ್ವ ಮನಿಗಾದರೆನ್ನುತಾರೆ ತಂದನಾನು ತಾನೆ
ಹಂಗಂದ ಮಾತೀಗೆ ಸತಿವಂತೆ ತಿಮ್ಮವ್ವ ತಂದನಾನು ತಾನೆ
ಶಿವಲೋಕದಿಂದಾಲಿ ಸಿರಿಗಂಧಾದ ಕೊರಡು ಬಂದೊ ತಂದನಾನು ತಾನೆ
ಅಂಬಾರದಿಂದಾಲಿ ಧೂಪಾದ ಕೊಡ ಬಂದೊ ತಂದನಾನು ತಾನೆ
ತಿಮ್ಮವ್ವನ ಕೊಂಡಕ್ಕೆ ಸಿರಿಗಂಧ ಅಣಿಯಾದೊ ತಂದನಾನು ತಾನೆ
ಅವಳ ಗಂಡಾನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗಯ್ಯಲ್ಲಿ ಹಿಡಿದುಕೊಂಡೂ ತಂದನಾನು ತಾನೆ
ಸತಿವಂತೆ ತಿಮ್ಮವ್ವ ಕೊಂಡನಾದರೂ ಬಳುಸಾಳು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಕೊಂಡಾಕೆ ಎಸೆದಳು ತಂದನಾನು ತಾನೆ
ಅವಳ ಗಂಡನ ತಲೆಯನ್ನು ಮಡಿಲಿಗೆ ಕಟ್ಟಿಕೊಂಡು ತಂದನಾನು ತಾನೆ
ಸತಿವಂತೆ ತಿಮ್ಮವ್ವ ಕೊಂಡನಾದರೂ ಏರುತಾಳೆ ತಂದನಾನು ತಾನೆ
ಶಿವ ಶಿವ ಎಂದೇಳಿ ಶಿವಲೋಕ ಸೇರಿದಳು ತಂದನಾನು ತಾನೆ
ಹರ ಹರ ಎಂದೇಳಿ ಹರಲೋಕ ಸೇರಿದಳು. ತಂದನಾನು ತಾನೆ

◆◆◆◆

ಹಾಡಿದವರು
**ಡಿ. ಕೆ. ಕೃಷ್ಣೇಗೌಡ**
ದಬ್ಬೇಘಟ್ಟ, ತುರುವೇಕೆರೆ ತಾ॥ ತುಮಕೂರು ಜಿಲ್ಲೆ

# ೫. ಅತ್ತೆ ಸೊಸೆಯರು

## ಸಖಿ

ಸಾಂಬ ನಿಮ್ಮ ನಾಮಸ್ಮರಣೆ ಮಾಡತೀವ ಒಂದ ಶ್ಲೋಕ
ನಿಮ್ಮ ಪಾದ ಸೇವಾಕ
ಪ್ರಸನ್ನದ ವ್ಯಾಖ್ಯಾಕ
ಜಯ ನನ್ನಗನ್ನ
ಹವದು ಕಾಯುವ ಭಗವಾನ.

ಹಾಂ ಗೀಯಗ ಗಾಗೀಯಗ [1]
ಗೀಯ ಗೀಯ ಗೀಯ ಗೀಯ.

ಹತ್ರವಾದೊ ಹಂಬಲಿಸಿ ತರತೇನೊ ಬಾವಿ
ಮುಗುತೇನ ಕೈಯ
ನಾಲ್ಕು ಮಂದಿಯೊಳಗ ದಯ ಇರಲಿ ಅಂತಃಕರುಣ
ಸಭಾದಾಗೆ ಕಾಯೊ ನನ್ನ ಮಾನ. ‖ ಗೀಯಗ ‖

ಬಿದರಿ ಊರ ಬಹುಶಿಸ್ತ
ಮಾಂಡುರಂಗೇಳಿದ ಮಾತ
ಸಭಾತ ಸನ್ಮಾತ
ಜಮಖಂಡಿ ದೊಡ್ಡದಾಗೆದಾನ
ಇರುವುದು ತಿಳಿಯದೊ ಪಟ್ಟಣ ‖ ಗೀಯಗ ‖

ತತ್ವ ನೀತಿಯುಳ್ಳ ಪದದ ಅರ್ಥ ತಿಳಿಯಲಾರದಕ್ಕ
('ಏನ್ಮಾಡ್ತಾರಪ್ಪ'?)
ಕೇಳಪ್ಪ ಹೇಳ್ತೇನಿ
ತತ್ವ ನೀತಿಯುಳ್ಳ ಪದದ ಅರ್ಥ ತಿಳಿಯಲಾರದಕ್ಕ
ದ್ವಾಂತಕವಿ ಬೇಡುತಾಳೆ ಕೂತೆಜನ
ಅತ್ತಿಮನಿ ಸೊಸೆಯಾದೊಂದ ಉತ್ತಮವಾದ ಕಥ ಇದನಾ
ಚಿತ್ತಗೊಟ್ಟು ಕೇಳಬೇಕ ಸಂಪೂರ್ಣ ‖ ಗೀಯಗ ‖

ಪಟ್ಟದಕಲ್ಲು ಎಂಬುವಂತ ಶ್ರೇಷ್ಟವಾದ ಗ್ರಾಮದಲ್ಲಿ
'ಏನಾತಪ?'

ಅಷ್ಟೈಶ್ವರ್ಯ ಸಂಪತ್ತಿನ ಶ್ರೀಮಂತರ
ನಾಲ್ಕು ಮಂದಿ ಗಂಡುಮಕ್ಕಳು ಯಾರಂದ್ದೇನು ಕಡಿಮೆಯಿಲ್ಲ
ಸಾಕು ಬೇಕಾಗುವಷ್ಟು ಬೆಳ್ಳಿ ಬಂಗಾರ ॥ ಗೀಯಗ ॥

ಅತ್ತಿ ತನ್ನ ಸತಿ ಲಕ್ಷ್ಮಿ ಮೆಚ್ಚಿ ವಾಸಮಾಡುತಾಳು
ನುಚ್ಚಿನವರಂತ ಮನಿ ಅಡ್ಡೆಸರ
ತಂದಿ ಪೈಲೆ ತೀರಿದ್ದನು ತಾಯಿಯಾದ ಹೊನ್ನವ್ವ
ಊರ ನಡುಗುತ್ತಿದ್ದಳು ಮನಿ ಕಾರಬಾರ
ನಾಲ್ಕು ಮಂದಿ ಸೊಸ್ದೆರು ನಡೆಯಲಿಕ್ಕ ಬಂದಿದಾರು
ಮುಂದ ಕೇಳಬೇಕ ಇದರ ಚಮತ್ಕಾರ
ಕಿಟಿ ಕಿಟಿ ಹೊನ್ನವ್ವ
ಪಿಟಿಪಿಟಿ ರಾತ್ರಿ ಹಗಲು
ವಟವಟ ಹಚ್ಚಿ ಮಾಡುವಾಕಿ ಜಗಳ ॥ ಗೀಯಗ ॥

ಜೀನಬಾಳ ಹೊನ್ನವ್ವ ಏನ ಖರ್ಚ ಮಾಡ್ವೋಕೆಲ್ಲ
'ಏನ್ ಮಾಡ್ತಿದ್ಲಪಾ?'
ಉಣ್ಣಲಿಕ್ಕ ಭರ್ತಿ ಮುಂಡಿಪಲ್ಲೆಕಾರ
ತನ್ನಂತೆ ಮಂದಿಗೆಲ್ಲ ಅನ್ನಸಾರಿನ ಬೆಟ್ಟಿಯಿಲ್ಲ
ಶನಿಗೇಡಿ ಮುದುಕಿಗೆ ದಯ ಇಲ್ಲಾ ಜರಾ ॥ ಗೀಯಗ ॥

ಅತ್ತೆವ್ವ ಉಪದ್ರವವು ಬಾಳ
ಸೊಸ್ದೆರಿಗೆ ಗೋಳ
ಹೊಡೆನೆ ದುಡಿಸಾಕ
ಅಹೋ ರಾತ್ರಿ ನಗರ ಕಡಿಮಿಲ್ಲ ಕಾರುತಿತ್ತ ಮುದುಕಿ
ಕಾರುತಿತ್ತ ಮುದುಕಿ ॥ ಗೀಯಗ ॥

ಒಣಸಂಶಯ ತಂದ ಮನಿಜೋಳ
ಪಾರ್ವಪಡಿ ಜೋಳ
ಅಳದ ಕೊಡುವಾಕಿ
ಬೀಸುವಾಗ ಮುಂದಕೂತ
ಹಿಟ್ಟ ಅಳದ ನೋಡಾಕಿ ಅಳದ ನೋಡಾಕಿ ॥ ಗೀಯಗ ॥

ತಂಗಾಳ ಕಟಿರೊಟ್ಟಿ ಖಾರ
ಮಜ್ಜಿಗಿಯ ಸಾರ
ಕೂತ ಉಣಸಾಕಿ
ಹೂ ಅಡಿಗೆ ಮಾಡಿದರೆ ಹೊನ್ನವ್ವ ಹಾಕ್ತಾಳ ಧುರಿಕಿ
ಹಾಕ್ತಾಳ ಧುರಿಕಿ ॥ ಗೀಯಗ ॥

ಸಂಗವ್ವ ಶಾಂತಗುಣದಾಕಿ
ನಿಂಗವ್ವ ನಡುವಿನಾಕಿ
ಗಂಗವ್ವ ಗಾಳ ಗಡಕಿ
ಸಣ್ಣ ಸೊಸಿ ಚನ್ನವ್ವ ಯುಕ್ತಿವಂತೆ ಬಲು ಬೆರಕಿ
ಇದ್ಲು ಬಲು ಬೆರಕಿ ॥ ಗೀಯಗ ॥

ಸಂಗವ್ವ ಮುಂದ ನಿಂಗವ್ವ ಹೇಳತಾಳ ಕರದ ॥ ಗೀಯಗ ॥
ಅತ್ತೆವ್ಗೆ ಮರಣ ಬರವಲ್ದ ನಮ್ಮ ಕಣಮುಂದ ॥ ಗೀಯಗ ॥
ಬಂಗಾರ ಆದೀತ ಬೆಲ್ಲ ಆದೀತ ಬೆಲ್ಲ
ಬಾಳವರ್ಷ ಆತೊ ಉಂಡಿಲ್ಲ ॥ ಗೀಯಗ ॥

ಸಿಟ್ಟಾಗಿ ಅತ್ತಿಯ ಮ್ಯಾಲ ಮುದುಕಿಯ ಮ್ಯಾಲ
ಖರಖರ ತಿಂತಾರ ಹಲ್ಲ ॥ ಗೀಯಗ ॥

ಕಷ್ಟ ಮಾತ್ರ ಕಡಿಮಿಯಿಲ್ಲ ಹೊಟ್ಟೆ ತುಂಬ ಅನ್ನ ಇಲ್ಲ
ಎಷ್ಟು ತಾಳಬೇಕ ಅತ್ತಿರೋಷವನ
ಅತ್ತಿಮನಿ ಸೊಸೆದೊಂದ ಉತ್ತಮವಾದ ಕಥಿ ಇದನ
ಚಿತ್ತಗೊಟ್ಟು ಕೇಳಬೇಕ ಸಂಪೂರ್ಣ ॥ ಗೀಯಗ ॥

ತಳಕಮಾರಿ ರಂಡಿ ನಮಗ ಬೆಳಗಿಂದಾನ ನಳ್ಳಸ್ಸಳವ್ವ
ಹರಕರಂಡಿ ಕಾಡುತಾಳ ಒಂದೆಸವನ
ನಾಲ್ಕು ಮಂದಿ ಸೊಸ್ಟೇರು ಏಕಾಗಿ ಮಾತಾಡ್ತಾರ
ಅಕ್ಕಿ ಅನ್ನ ಕಾಣಲಿಲ್ಲ ಒಂದು ದಿನ ॥ ಗೀಯಗ ॥

ಸಾವಿರಾರು ಗೋಧಿಚೀಲ ಸಾಲುನಿಟ್ಟ ಹಚ್ಯಾರವ್ವ
ನಮಗೇನ ಬಂತಕಳಿ ಹುಣಸೀಹಣ್ಣ?
ಹುಳಕರೊಟ್ಟಿ ಮೇಲೆ ಬಾಳದು ಪುಂಡಿಪಲ್ಯ
ತಳಕ ಬಿದ್ದದವ್ವ ಮುಂದ ಮಾಡೋದೇನಾ? ॥ ಗೀಯಗ ॥

ಸಾಯಬೇಕ ನಮ್ಮತಿ ತಾಯಿದುರ್ಗದೇವಿ ಹೋಗಿ
'ಏನ್ಮಾಡ್ತೀಕಂತಾರೊ?'
ಕೈಮುಗಿದ ಕುಳತೀವ ಕಾಯಿ ನಮನ
ಕೆಟ್ಟರಂಡಿ ಎಲ್ಲೆಲ್ಲೇನೇನ್ ಕಟ್‌ಮಾಡಿ ಇಟ್ಟಿದಾಳೊ
ಎಷ್ಟ ಹೇಳಬೇಕೊ ಅಕಿ ದುಷ್ಟಗುಣ ॥ ಗೀಯಗ ॥

ಸುಳ್ಳೆ ಯಾಕೆ ಮಾಡುದವ್ವ ಚಿಂತಿ
ನಾಳಿಗ ಬಂದಾತಿ
ಗುಳೇದ ಗುಳಸಾಂತಿ
ನೂಲೀನ ಶೀಲ ಮಾಡುದಕ ಹೋಗತಾಳ ಅತ್ತಿ
ಹೋಗತಾಳ ಅತ್ತಿ ॥ ಗೀಯಗ ॥

ಗಂಡಸರು ಸೂರ್ಯ ಉದಿಯಾಕ
ಹೋಗುತಾರೆ ಹೊಲಕ
ಕಟ್ಟಿಕೊಂಡ ಬುತ್ತಿ
ಹೊತ್ತ ಮುಳುಗುತನಕ ಮನಿಗೆ ನಾನೆ ಅಧಿಪತಿ
ನಾನೆ ಅಧಿಪತಿ ॥ ಗೀಯಗ ॥

ಬಾಯಿ ಬಿಚ್ಚೋಣ ಗೋದಿಯ ಚೀಲ
ಮಾಡುಣು ಮೊದಲ
ಭಯ ಏನೈತಿ?
ಅಕ್ಕಿ ಬ್ಯಾಳಿ ಬೆಲ್ಲ ತರುವ್ರೂನ ಹೋಗಿ ನಮ ಪೂರ್ತಿ
ಹೋಗಿ ನಮ ಪೂರ್ತಿ ॥ ಗೀಯಗ ॥

ಚಂದ್ರಮುಖಿ ಚಲುವಿ ಚನ್ನವ್ವ
ಬಾರೆ ನಮ್ಮವ್ವ
ಬಾಳೆ ಬುದ್ಧಿವಂತಿ
ನಾವು ಕಬುಲ ಮಾಡಿದೇವ ಬರೊಬ್ಬರಿಂದ ಯುಕ್ತಿ
ಬರೊಬ್ಬರಿಂದ ಯುಕ್ತಿ ॥ ಗೀಯಗ ॥

ಆ ರಾತ್ರಿ ಬೆಳಗವಾದೀತು
ಏರಿತ ಹೊತ್ತು

ಏನ ಬಡದಾತಿ
ಹೊನ್ನವ್ವ ಸಂತಿಗೊಂಟಾಳ ಮಾಡಲಿಲ್ಲ ಸುಸ್ತಿ
ಮಾಡಲಿಲ್ಲ ಸುಸ್ತಿ ॥ ಗೀಯಗ ॥

ಸಂತಿಗೋಗುವಾಗ ಹೊನ್ನವ್ವ ಸೊಸ್ದೇರಿಗೇಳತಾಳ ಕರದ
ಹೇಳತಾಳ ಕರದ ॥ ಗೀಯಗ ॥
'ಏನಂತ ಹೇಳ್ತಾಳೊ?'
ಮನಿಬಿಟ್ಟು ನೀವು ಹೋಗಬ್ಯಾಡಿ ಹೊರಬಿದ್ದ
ನೀವು ಹೊರಬಿದ್ದ ॥ ಗೀಯಗ ॥

ಹೊತ್ತು ಮುಳುಗುದರೊಳಗೆ ಹೋಗಿ ಬರತಿನೆ ಚಂದಾಗಿ
ಬರತಿನೆ ಚಂದಾಗಿ ॥ ಗೀಯಗ ॥

ಇಷ್ಟು ಕೇಳಿ ಅತ್ತಿವ್ವ ಅಗಸಿ ದಾಟೇಸಿ ಬಂದ
ದಾಟೇಸಿ ಬಂದ ॥ ಗೀಯಗ ॥

ಬಾಯಿ ಬಿಚ್ಚಾರೆ ಗೋದೀಯ ಚೀಲ
ಗೋದೀಯ ಚೀಲ ॥ ಗೀಯಗ ॥

ಹೊತ್ತು ಮುಳುಗ ಮಾಡಿದಾರ ಮೊದಲ ॥ ಗೀಯಗ ॥
ತಂದಾರ ಅಕ್ಕಿ ಬ್ಯಾಬೆಲ್ಲ ಅಕ್ಕಿ ಬ್ಯಾಬೆಲ್ಲ
ಸರಿಯೆ ಸಾಲ್ಗೀಟಿ ಮಸಾಲಿ ಮೊದಲ ॥ ಗೀಯಗ ॥

ಆರಸೇರ ಚೆನ್ನಿಸಕ್ರಿ ಮೂರಸೇರ ಬೆಣ್ಣಿ ಮತ್ತ
'ಮತ್ತೇನೇನು ತಂದ್ರಪ?'
ಸಾರಿಗಾಕು ಬೇರೆ ಬೇರೆ ಸಾಮಾನು
ಅತ್ತಿಮನಿ ಸೊಸಿದೊಂದ ಉತ್ತಮವಾದ ಕಥಿ ಇದನ
ಚಿತ್ತಗೊಟ್ಟು ಕೇಳಬೇಕು ಸರವು ಜನ
ಅತ್ತ ಇತ್ತ ಓಡ್ಯಾಡಿ ಕೂಡಿಸ್ಯಾಳ ಸಾಮಗ್ರಿಯ
ಆಡಾಗಿ ಮಾಡಲಿಕ್ಕ ಅದ್ರೆ ತಯ್ಯಾರ
ಅವ್ರು ಮಾಡಲಿಕ್ಕ ಆದ್ರೆ ತಯ್ಯಾರ
ಒಳಗು ಯಾರ್ದು ಬಾರದಾಂಗ
ದ್ವಾರ ಬಾಗಿಲು ಬಂದಮಾಡಿ
ಹಾರ್ಯಾರಿ ಹೂರಣ ಅರಿಯುವರ ॥ ಗೀಯಗ ॥

'ಅಲ್ಲಪ ಹೂರಣ ಹ್ಯಾಂಗ ಅರದವ್ರು?'
ಹೂರಣ ಅರಿಯೊ ಪದ ನೋಡಪ ಬಾಳ ಚಂದ ಹಾಡ್ತಾರ :

**ಧಾಟಿ ಬದಲಾವಣೆ**

ಹೊನ್ನವ್ವ ನಮ್ಮತ್ತಿ ಮಾನ್ಯ ಆಚಾರವಂತಿ
ಚನ್ನಾಗಿ ಸೊಸ್ದೆರಿಗೆ ಅನ್ನ ಹಾಕದಿಲ್ಲ
ಅನ್ಯಾಯವನು ನೋಡಿರೆ.

ಹೋದಂತ ನಮ್ಮತ್ತಿ
ಹಾದ್ಯಾಗೆ ಬರುವಳೆ
ಸಾದಿಸೆ ಹುಲಿಕರಡಿ ಸೇಡಿಸಿ ತಿನ್ನಲಿ.
ಮೋಜಿಲೆ ಉಣ್ಣುವೆವು
ಸರಳಾಗಿ ನಮ್ಮತ್ತಿ
ಮರುಳಿ ಬರುಬಾರದವ್ವ.
ಮರುಳ ಸಿದ್ದೇಶ್ವರನ
ಮಹಾಲಿಂಗ ದೇವನಿಗೆ
ಹರಳಿನುಂಗರ ಇಡುವೆ
ಹೀಗಂದು ನಿಂಗವ್ವ ಗಂಗವ್ವ ಸಂಗವ್ವ
'ಏನ್ಮಾಡ್ತಾರೊ?'
ಕಿಲಿ ಕಿಲಿ ನಗತಾರೆ ತಗದೆ ಸ್ವರ
ಕರಗಡಬ ಬಳ್ಳೆಗಾರಿಗಿ ಹಪ್ಪಳ ಸಂಡಿಗುಪ್ಪಿನಕಾಯಿ
ಕರಕರದ ಇಟ್ಟಾರ ನಾನಾ ತರ ॥ ಗೀಯಗ ॥

ಅಂದೆಮೋರಿ ಅಕ್ಕಿ ಹಾಕಿ
ಅನ್ನಮಾಡಿ ಇಳುವ್ಯಾರವರು.
'ಅಲ್ಲಪ ಅನ್ನ ಹೆಂಗ ನಾರ್ತಿತ್ತು?'
ಕೇಳಪ
ಅಂದೆಮೋರಿ ಅಕ್ಕಿ ಹಾಕಿ
ಅನ್ನಮಾಡಿ ಇಳುವ್ಯಾರವರು.
ದಮ್ಮ ದಮ್ಮ ನಾರತಿತ್ತ ಗರದಿವರ
ಅಷ್ಟ್ರೊಳಗೆ ಅತ್ತಿ ಬಾಗಿಲು ತೆರಿ ಅಂದಾಳು
ಗಾಬ್ರಾಗಿ ಆಡುತಾರೆ ಉಸರ ॥ ಗೀಯಗ ॥

ವಾರಿಜಾಕ್ಷಿ ಚನ್ನಮ್ಮ ಸರಿಯಾಗಿ ಹೇಳುತಾಳು
'ಏನಂತ ಹೇಳ್ತಾಳೊ?'
ಮೂರುಮಂದಿ ಧೈರ್ಯದಿಂದ ಬೇಡ್ರೆ ಜರಾ
ಮಾಡಿದಂತ ಅಡಿಗೆನೆಲ್ಲ ಮುಚ್ಚಿಕಟ್ಟಿ ಇಡುಣವ್ವ
ಹೆಚ್ಚೀಗೆ ಅವಧಿಯಿಲ್ಲ ತೀರಮಾತ ॥ ಗೀಯಗ ॥

ಗಡಿಬಿಡಿಯ ಮಾಡಿದಂತ ಅಡಗಿ
ತುಂಬಿದಾರ ಹೆಡಗಿ
ಒಂದ ಬಿಡಲಿಲ್ಲ
ಓದ ಇಟ್ಟಾರ ದನಕಟ್ಟ ದೊಡ್ಯಾಗ ನೆಲವಿನ ಮ್ಯಾಲ
ನೆಲವಿನ ಮ್ಯಾಲ ॥ ಗೀಯಗ ॥

ಅತ್ತಿಗೆ ತಂದು ಕೊಟ್ಟಾ ಬಿಸಿನೀರ
ಮಾಡಿ ಉಪಚಾರ
ಒತ್ತತಾರ ಕಾಲ
ಕಟಿರೊಟ್ಟಿ ಖಾರಹಚ್ಚಿ ಉಳನೆ ಮಾಡ್ಯಾರ ಶಾರಮಳಲ
ಮಾಡ್ಯಾರ ಶಾರಮಳಲ ॥ ಗೀಯಗ ॥

ದಾರಿ ನಡದ ದಣದ ಬಂದ ಮುದುಕಿ
ಇಲ್ಲ ಎಚ್ಚರಕಿ ನಿದ್ರಿ ಒಳ್ಳೆ ಅಮಲಾ
ಗಂಡಸರು ಊಟ ಮಾಡಿ ಮನಿಗ್ಯಾರ ಎಚ್ಚಾರಿಕಿಲ್ಲ
ಎಚ್ಚರಕಿ ಇಲ್ಲ ॥ ಗೀಯಗ ॥

ಊಟ ಮಾಡಲಿಲ್ಲ ಸೊಸ್ದೇರು
ದೀಪ ತಗದಾರು
ಕಾಳ ಕತ್ತಾಲ
ಚನ್ನವ್ವ ಹೇಳತಾಳ ತಗದ ಬಂದ ಹೊಸಕುಸಲ ॥ ಗೀಯಗ ॥

ದನಿನ ದೊಡ್ಯಾಗ ಇಟ್ಟೇನಿ ಹೆಡಿಗಿ
ತರುವೆ ನಾ ಹೋಗಿ
ಮಾಡಬೇಡ್ರೆ ಗುಲ್ಲ
ಸಪ್ಪಳಾಗದಂಗ ಕೂತ ಊಟ ಮಾಡೋಣ ಕುಸಿಯಾಗು
ಮಾಡೋಣ ಕುಸಿಯಾಗು ॥ ಗೀಯಗ ॥

ಇಷ್ಟು ಹೇಳಿ ಚನ್ನವ್ವ ಎದ್ದ ಹೋದಾಳ ನೆಲವೀಗಿ
ಹೋದಾಳ ನೆಲವೀಗಿ
ತಲೆಮ್ಯಾಲ ಹೊತ್ತುಕೊಂಡಾ ಕಡಬಿನ ಹೆಡಗಿ
ಕಡಬಿನ ಹೆಡಗಿ ॥ ಗೀಯಗ ॥

ಬಗಲಾಗ ಅಡ್ಡ ಹಿಡಿದಾಳ ಅಂಬರದ ಗಡಗಿ
ಅಂಬರದ ಗಡಗಿ ॥ ಗೀಯಗ ॥

ಕ್ವಾಣ ಅಡ್ಡ ಮಲಗಿತ್ತಲ್ಲಿ ಚನ್ನವ್ವ ಬರುವ ದಾರೀಗಿ
ಬರುವ ದಾರೀಗಿ ॥ ಗೀಯಗ ॥

ಕಿಸ್ಗಾಲ ಹಾಕಿ ದಾಟುದರೊಳಗ ಕ್ವಾಣ ಎದ್ದಿತೊ ಲಗಿಬಿಗಿ
ಎದ್ದಿತೊ ಲಗಿಬಿಗಿ ॥ ಗೀಯಗ ॥
ಆ ಕ್ವಾಣಿನ ಮ್ಯಾಲ ಚನ್ನವ್ವ ಕಣತಾಳ ಚಂದಾಗಿ ॥ ಗೀಯಗ ॥

*ಹೇಳುವೆನು ಕೇಳ್ರಿ ಆ ಕ್ವಾಣನ ಸಪ್ಪಳವನ್ನು ಕೇಳೀ
'ಮುಂದೇನಾತಪ?'
ಕೇಳ್ರಿ ಕೇಳ್ರಿ ಆ ಕ್ವಾಣನ ಸಪ್ಪಳವನ್ನು ಕೇಳಿ ಹೊನವ್ವ ಎದ್ದು ದೀಪ ಹಚ್ಚಿದಳು
'ಏನಂತಾಳ?
ಆ ಕ್ವಾಣನ ಮೇಲೆ ಕೂತಿರುವ ಮೂರ್ತಿಯನ್ನು ನೋಡಿ
'ಏನಂತಾಳೊ?'
ಚಟ್ಟನ ಚೀರಿ ನೀನಾರೆಂದು ಕೇಳಿದಳು
ಅಲ್ಲಪಾ ಆ ಕ್ವಾಣನ ಮೇಲೆ ಕೂತಿರುವ ಚನ್ನಮ್ಮನು
ಬೇರೆ ದನಿ ತಗದು ಹೇಳಲಿಕ್ಕೆ ಶುರುಮಾಡಿದಳು
'ಏನಂತ?'

**ಧಾಟಿ ಬದಲಾವಣೆ**[1]

ನಾನು ದ್ಯಾಮವ್ವ ನಾನು ದ್ಯಾಮವ್ವ
ನಾ ದ್ಯಾಮವ್ವ ಕಾಮಾನ ಹಿರಿದೇವತ
ನಿನಗೋಯ್ಲಾಕ ಬಂದೇನಿ ನಾನೆ ಸ್ವತಃ
ಸೊಸ್ದೇರಿಗೆ ಉಪದ್ರವ ಮಾಡೂವೆ
ಊಟಕ್ಕೆ ತಂಗಳ ರೊಟ್ಟಿ ನೀಡೂವೆ
ನೀ ಉಣ್ಣಾದೆ ಗೀರ್ತಾನ ಮಾಡುವಿ

ನಿನ್ನ ಆಯುಷ್ಯ ನಿನ್ನ ಆಯುಷ್ಯ
ನಿನ್ನ ಆಯುಷ್ಯ ಮುಗದಾದ ಈವತ್ತು
ನಿನ ಒಯ್ಲಾಕ ಬಂದೆನಿ ನಾನೇ ಸ್ವತಃ
ಅಯ್ಯೊ ಸಾಯುವೆ ಅಯ್ಯೊ ಸಾಯುವೆ
ಅಯ್ಯೊ ಸಾಯುವೆನೆಂದು ಮದುಕಿ ತಿಳಕೊಂಡಳು
ಆಗ ನಾರಿ ಎದ್ದಿಯ ತಾ ಹೊಡಕೊಂಡಳು
ಇನ್ನ ಜೀವ ತಾನ ಮಾಡದಿಲ್ಲೆ ನೋಡೆವ್ವಾ
'ಮತ್ತೇನಂತಾಳ?'
ನೀ ಹೇಳಿದಂಗ ಕೇಳತೀನಿ ಹಡೆದವ್ವ
ಇನ್ನ ಸ್ವಲ್ಪ ದಿವಸ ಒಯ್ಯಾಬ್ಯಡವ್ವ
ನಾ ದ್ಯಾಮವ್ವ ನಾ ದ್ಯಾಮವ್ವ
ನಾ ದ್ಯಾಮವ್ವ ಕಾಮಾನ ಹಿರಿದೇವತ
ನಿನಗೊಯ್ಲಾಕ ಬಂದೇನಿ ನಾನೆ ಸ್ವತ.

*ಕೇಳೆ ಕೇಳೆ ಹೊನ್ನವ್ವ ನಿನ್ನ ಹಿರಿಸೊಸಿ ಕೈಯಾಗ ಹಿರಿತನ ಕೊಡೆ ಮುರುಗೆವ್ವ
'ಮತ್ತೆನಂತಾಳೆ'?
ಅಂದು ದೂರಾಗತಾವ ನಿನ್ನ ಸಾವ ಇಷ್ಟು ಕೇಳಿ ಸಂದೂಕದ
ಕೀಲಿ ಕೊಟ್ಟಾಳ ಹೊನ್ನವ್ವ ಮತ್ತೆ ಹೇಳತಾಳ ಚನ್ನವ್ವ
'ಏನಂತ?'
ದೀಪ ತೆಗೆದು ಕಣ್ಣಮುಚ್ಚೆ ಮುದುಕೆವ್ವ
ಇಷ್ಟು ಕೇಳಿ ದೀಪ ತೆಗೆದು ಕಣ್ಣು ಮುಚ್ಚಿದಾಳೆ ಹೊನ್ನವ್ವ
ಆಗ ಆ ಕ್ವಾಣನ ಮೇಲಿಂದ ಇಳಿದು ನೆಟ್ಟಗೆ–
ಅಡಗಿ ಮನಿಗೆ ಹೋದಾಳು ಚನ್ನವ್ವ ॥ ಗೀಯಗ ॥
ಸೊಸ್ದೆರಿಗೆ ಆತೊ ಹಿರೆತಾನ ಹಿರೆತಾನ
ಸುಖದಿಂದ ಮಾಡ್ಯಾರು ಕಾಲಹರಣ ॥ ಗೀಯಗ ॥

ಸೇರಹುಡಕೂಂದ ಗುರುವಿನ ಸ್ಥಾನ
ಗುರುವಿನ ಸ್ಥಾನ
(ಆ) ಭೀಮಣ್ಣ ಮಾಡ್ಯಾನ ಈ ಕವನ ॥ ಗೀಯಗ ॥

ನಾಡ ಒಳಗ ಬಲುಪಾಡ ಹುಳಗುಡ
ಶ್ರೀಮದ್ ಗುರುವಿನ ಸ್ಮರಿಸುವೆನಾ.

ಅತ್ತಿಮನಿ ಸೊಸೆದೊಂದ ಉತ್ತಮವಾದ ಕಥಿ ಇದನ
ಚಿತ್ತಗೊಟ್ಟು ಕೇಳಿರಿ ಕುಂತು ಜನ.

**ಧಾಟಿ ಬದಲಾವಣೆ**[1]

**ಕ್ಯಾಲಿ**

ಹರ ಹರಾ ಆ
ಆ ಗೀಯ ಗೀಯ ಗೀಯ ಗೀಯ.

ಬ್ರಹ್ಮ ಕಟ್ಟಿದಂತ ಗುಡಿಯನು
ನೋಡ ನೋಡ ನೋಡ ತಂಗಿ ॥ ಪಲ್ಲವಿ ॥

ಪಾದ ಎಂಬದೊಂದುಪಾಯ ಹಾಕ್ಯನ
ಆಸ್ತಿ ಎಂಬದೊಂದ ಕಲ್ಲ ಜೋಡ್ಸ್ಯನ
ಗಚ್ಚಮಾಂಸ ಅದೆಕೆಲ್ಲ ವರಿಸ್ಯನ
ಬಂದ ಚರ್ಮದ ಗಿಲಾಯ್ ಮಾಡ್ಯಾನ ॥ ಪ ॥

ಒಡ್ಲ ಎಂಬದೊಂದು ಗುಡಿ ಮಾಡ್ಯಾನ
ಶಿರಸನಂಬೊದೊಂದು ಕಳಸ ಇಟ್ಟಾನಾ
ಒಂಬತ್ತು ದ್ವಾರ ಅದಕಂತಿಟ್ಟನಾ
ನಿಯತ ಜೀವಿಗೆರಡು ಲೊಳಲಿಟ್ಟಾನಾ ॥ ಪ ॥

ಆತ್ಮ ಪರಮಾತ್ಮ ಒಳಗ ಇರತನ
ಮುನ್ನೂರು ನದಿ ಹರಿಯುತಾವ ಒಂದೆ ಸವನ
ಸಾಲೋಟಗಿ ಶಿವಯೋಗಿಯ ದ್ಯಾಟಿ
ಅನ್ನರಾಕ ಮಾಡತಾರ ಇದನ್ನ. ॥ ಪ ॥

## ಅಡಿ ಟಿಪ್ಪಣಿಗಳು

ಧಾ. ಬ. ೧ ಧಾಟಿ ಒಂದರ ಸೂಚಕ.
ಈ ಎರಡು ಗೀಯ ಸೊಲ್ಲನ್ನು । ಗೀಯಗ । ಎಂದು ತೋರಿಸಿರುವ ಭಾಗದಲ್ಲೆಲ್ಲ ಹಾಡುತ್ತಾರೆ. ಗೀಯ ಸೊಲ್ಲು ಹೇಳುವ ಹಿಂದಿನ ಸಾಲಿನ ಕೊನೆಯ ಎರಡು ನುಡಿಗಳನ್ನು ಕೆಲವೊಮ್ಮೆ ಎರಡೆರಡು ಬಾರಿ ಹಾಡಿ ನಂತರ ಗೀಯ ಹಾಡುವುದು ಬಹುಪಾಲು ಹಿಮ್ಮೇಳದವರು.

ಧಾ. ಬ. ೨ ಧಾಟಿ ಬದಲಾದ ಸೂಚಕ. ಧಾಟಿ ಎರಡು. ಇಲ್ಲಿ ನಿಧಾನವಾಗಿ ಏಕತಾಳದಲ್ಲಿ ಹಾಡುತ್ತಾರೆ. (?) ಈ ಚಿಹ್ನೆ ಇರುವ ಕಡೆ ಅಂದರೆ ಹಾಡಿನ ಮಧ್ಯದಲ್ಲಿ ಆಗಾಗ ಒಬ್ಬರು ಪ್ರಶ್ನಿಸುತ್ತಾರೆ. ಅದರ ಸೂಚಕ. + ಈ ಚಿಹ್ನೆಯ ಮುಂದಿನ ಗದ್ಯ ಭಾಗವನ್ನು ಗಮಕ ಹೇಳುವಂತೆ ಎಳೆದು ಹೇಳುತ್ತಾರೆ.

ಧಾ. ಬ. ೩ ಬದಲಾದ ಮೂರನೆ ಧಾಟಿಯ ಸೂಚಕ

ಧಾ. ಬ. ೪ ಬದಲಾದ ನಾಲ್ಕನೆ ಧಾಟಿಯ ಸೂಚಕ
ಈ ಚಿಹ್ನೆಯ ಮುಂದಿನ ಪ್ರತಿ ಚೌಪದಗಳಲ್ಲಿಯ ಮೊದಲೆರಡು ಸಾಲುಗಳನ್ನು ಎರಡೆರಡು ಬಾರಿ ಹಾಡುತ್ತಾರೆ.

◆◆◆◆

ಹಾಡಿದವರು

**ಬಸಯ್ಯ ಪರ್ವತಯ್ಯ ಮಠಪತಿ,** ವಯಸ್ಸು–69 ವರ್ಷ

**ಸಾಲೋಟಗಿ**

ಹಿಮ್ಮೇಳ

**ನಿಂಗಪ್ಪ ಶಿವಪ್ಪ ಖೈರಾಟ**

**ವಿರೂಪಾಕ್ಷಯ್ಯ ಬಸಯ್ಯ ಮಠಪತಿ**

**ರೇವಣಸಿದ್ಧಪ್ಪ**

ವಾದ್ಯಗಳ ಬಳಕೆ :

ಡಪ್ಪು, ತಾಳ, ತುಂತುಣಿ.

## ೬. ಮ್ಯಾದರ ಹೆಣ್ಣು

ಬೆಟ್ಟಕ್ಕೆ ಹೋದಾನಮ್ಮ
ಅವನು ಬೆಟ್ಟ ಬಿದುರೆ ಕಡುದಾನಮ್ಮ.

ಅಮ್ಮಮ್ಮ ನನ್ನೆತ್ತ ತಾಯಿ
ಚಾಕರಿಗೆ ನಾನೋಗುತೀನಿ
ಈ ಮ್ಯಾದಾರೆಣ್ಣಿ ಮದುವ್ಯಾಗಬೇಕು
ಅಮ್ಮಮ್ಮ ನನ್ನೆತ್ತ ತಾಯಿ
ಮ್ಯಾದರೆಣ್ಣಿ ಮದುವ್ಯಾಗಬೇಕು.

ಮ್ಯಾದರೆಣ್ಣಿ ಮದುವ್ಯಾದ ಮ್ಯಾಲೆ
ಅವನು ದಂಡಿಗೆ ಚಾಕರಿಗೊಂಟಾನು.
ಸುಲವಲ್ಲ ಸುಲವಲ್ಲರಾಯ
ಅಮ್ಮಮ್ಮ ನನ್ನೆತ್ತ ತಾಯಿ ನಾನು
ದಂಡಿನ ಚಾಕರಿಗೋಗುತೀನಿ
ಮ್ಯಾದರೆಣ್ಣು ಬಹುಜೋಕೆಮ್ಮ
ಸುಲುವಲ್ಲ ಸುಲುವಲ್ಲ ರಾಯ
ಅವನು ದಂಡಿನ ಚಾಕರಿಗೊರಟಾನೆ.
ಸುಲುವಲ್ಲ ಹೋದಾರು ದಿನಕೆ
ಮ್ಯಾದಾರೆಣ್ಣು ಮೈಯ ನೆರದವಳೆ
ಅವಳ ಚಿಕ್ಕ ಮನಿಗಿ ಬಿಟ್ಟವರಮ್ಮ
ಅವಳು ಬೀಗವ ಹಾಕಿಕೊಂಡಾಳು.

ಮಲ್ಲಪ್ಪ ಮಲ್ಲಪ್ಪ ದೊರೆಯೆ
ಅಮ್ಮಮ್ಮ ನನ್ನೆತ್ತ ತಾಯಿ
ನಮ್ಮತ್ತಿಗೆಯು ಮ್ಯಾದರೆಣ್ಣು
ಅವಳೆಲ್ಲಿಗೆ ಹೋಗವಳಮ್ಮ?
ಮಲ್ಲಪ್ಪ ಮಲ್ಲಪ್ಪ ದೊರಿಯೆ
ಅವನು ಬಾಕಲಿಗೆ ಹೋದಾನಮ್ಮ
ಅಮ್ಮ ತೆಗೆಯೆ ಮ್ಯಾದರೆಣ್ಣೆ
ನೀನೆದ್ದು ಬಂದು ಕದವ ತೆಗಿಬಾರೆ.

ಕದವಿನ್ನ ತೆಗಿಯಾಲಿಲ್ಲ
ಅವನು ಕಾಲಲ್ಲಿ ಹೊದ್ದಾನಮ್ಮ

ಕದವಿನ್ನ ಎರಡೇ ತುಂಡಾಯ್ತು
ಅವನು ಚಂದುರಾಯ್ದ ತೆಗೆದುಕೊಂಡಾನು
ಅವನು ಎರಡೇ ತುಂಡಿಗೆ ಕಡದವನಮ್ಮ
ಅವನು ಬೀಗವಿನ್ನ ಹಾಕಿಕೊಂಡಾನು
ಅವನು ದಡದಡ ಓಡಿ ಬಂದಾನು.

ಅಮ್ಮಮ್ಮ ನನ್ನೆತ್ತ ತಾಯಿ
ಏಡು ನೀರನ್ನ ತತ್ತಾರಮ್ಮ
ಚೆನ್ನಾದ ಗಿಂಡೀ ಒಳಗೆ
ಅವಳು ಪನ್ನೀರು ತಕ್ಕೊಂಡು ಬಂದು
ಮಲ್ಲಪ್ಪ ಮಲ್ಲಪ್ಪ ದೊರಿಯೆ
ಇದೇನಪ್ಪ ಬಟ್ಟೆ ಬರಿಯೆಲ್ಲ
ಮೈ ಕೈ ಎಲ್ಲ ರೈತವಾಗ್ಯತೆ?
ಬ್ಯಾಟೀಗೆ ಹೋಗಿದ್ದೆನಮ್ಮ
ಮೊಲವಿನ್ನ ಹೊಡದಿದ್ದೆನಮ್ಮ
ನನ ಮೈ ಕೈ ಎಲ್ಲ ರೈತವಾಗ್ಯತೆ.

ಅಂಡೆ ತುಂಬ ನೀರು ಕಾಸಾಳೆ
ಅವಳು ಜಾಜೀಯ ಸೀಗೆಕಾಯರದು
ಅವಳು ಮಗನೀಗೆ ತಾನಮಾಡಾಳೆ
ಅವಳು ಕಾಣೆಕಾಲಿಗೆ ಕಾಜುಗ ಬರದಾಳೆ
ನೀನೋದ ಆರೇಳು ದಿನಕೆ
ಮ್ಯಾದರೆಣ್ಣು ಮೈಯ ನೆರದಾಳೆ
ಚಿಕ್ಕಮನಿಗೆ ಬಿಟ್ಟಿದಿನಪ್ಪ.

ಬಟ್ಟೆಗಳನೆ ಹಾಕಿಕೊಂಡು
ಮಲ್ಲಪ್ಪ ಮಲ್ಲಪ್ಪ ದೊರಿಯೆ
ಅವನು ದಂಡೀಗೆ ಹೊರಟಾನಮ್ಮ
ಅಣ್ಣಣ್ಣ ನಮ್ಮಣ್ಣ ಕೇಳೊ
ನೀ ಬಂದ ಆರೇಳು ದಿನಕೆ
ನಮ್ಮತ್ತಿಗೆಯು ಮ್ಯಾದರೆಣ್ಣು
ಮೈಯಿನ್ನ ನೆರದವಳಣ್ಣ
ಚಿಕ್ಕಮನಿಗೆ ಬಿಟ್ಟಿದ್ದಿವಣ್ಣ
ಅಂಗಂದ ಮಾತು ಕೇಳಿ

ಅವನಾ ತಿಂಗಳ ಸಂಬಳ ತಕ್ಕೊಂಡು
ಅವನು ಮೂರು ತಿಂಗಳ ರಜ ತಕ್ಕೊಂಡು
ಅವನು ಮೂರೇ ದಿನದ ಪಯಣವಿನ್ನ
ಅವನು ಮೂರೇ ದಿನಕೇ ಬಂದಾನಮ್ಮ.

"ಅಮ್ಮಮ್ಮ ನನ್ನೆತ್ತ ತಾಯಿ
ಒಂದಾರತಿ ತತ್ತಾರಮ್ಮ"
ಚಿನ್ನಾದ ತಟ್ಟೀಯಲ್ಲಿ
ಅವಳು ರನ್ನಾದ ಆರತಿ ಬೆಳಕಂಡು
"ಅಮ್ಮಮ್ಮ ನನ್ನೆತ್ತ ತಾಯಿ
ನೀ ತಂದ ಗೌಡಿ ಎಲ್ಲಮ್ಮ?"
"ಸುಲುವಲ್ಲ ಸುಲುವಲ್ಲರಾಯ
ಅವಳು ನೀನೋದ ಆರೇಳು ದಿನಕೆ
ಮ್ಯಾದರೆಣ್ಣು ಮೈಯ ನೆರದವಳೆ
ಚಿಕ್ಕಮನೆಗೆ ಬಿಟ್ಟಿದ್ದಿನಪ್ಪ".
"ಅಮ್ಮಮ್ಮ ನನ್ತೆತ್ತ ತಾಯಿ
ಚಿಕ್ಕ ಮನೆಯ ಬೀಗದೆಸ್ಟು ಕೊಡೆ"
"ಸುಲುವಲ್ಲ ಸುಲುವಲ್ಲರಾಯ
ನಿನ ತಮ್ಮ ಮಲ್ಲಪ್ಪನತಾವ
ಅವನು ತೋಟಕೆ ಹೋಗ್ಯನಪ್ಪ".

ಹೋದಾನೆ ಸುಲವಲ್ಲರಾಯ
ಅವನು ಬಾಕುಲಾಗೆ ನಿಂತುಕೊಂಡಾನು
"ಮ್ಯಾದರೆಣ್ಣೆ ಮ್ಯಾದರೆಣ್ಣೆ
ಕದವಿನ್ನ ತಗಿಯಬಾರೆ
ಎದ್ದು ಬಂದು ಕದವ ತಗಿಬಾರೆ
ನಿನಗೆ ತಕ್ಕಾದ ಸೀರೆ ತಕ್ಕೊಂಡು
ನಿನಗೆ ತಕ್ಕಾದ ರವಿಕೆ ತಕ್ಕೊಂಡು
ನಿನಗೆ ತಕ್ಕಾದ ಯಲೆ ತಕ್ಕೊಂಡು
ನಿನಗೆ ತಕ್ಕಾದ ಅಡಿಕೆ ತಕ್ಕೊಂಡು
ನೀನು ಎದ್ದು ಬಂದು ಕದವ ತೆಗಿಬಾರೆ"
ಅಂಗಂದ ಮಾತ ಕೇಳಿ
ಅವಳು ಕದವಿನ್ನ ತಗಿಯಾಲಿಲ್ಲ.

ಕದಗಳನೆ ಒದ್ದಾನಾಗ
ಎರ್ಡೆ ತುಂಡು ಬಿದ್ದಾಯಿತಮ್ಮ
ಗೋಳುಗೋಳು ಮಾಡುತಾನೆ
ಶಿವನಿಗೆ ಸಾಪ ಮಡ್ಗತಾನೆ
ಮ್ಯಾದರೆಣ್ಣೆ ಮ್ಯಾದರೆಣ್ಣೆ
ನಿನ ಕೊಂದೋರು ಯಾರು ಹೇಳೆ?
ಶಿವನಿಗೆ ಶಾಪ ಮಡ್ಗುತಾನೆ
ಅವನು ಗುಳುಗುಳಳುತಾನೊ
ಈಶ್ವರ ಪಾರ್ವತದೇವಿ
ಅವರು ರತವೇರಿ ಬಂದರಮ್ಮ.

"ನರಮನುಸ ನರಮನುಸ ನಿನಗೆ
ಏನಯ್ಯ ಕಷ್ಟಾ ಬಂದೊ?
ಅವರಿನ್ನ ಕೇಳುತಾರೆ
ಕಂಡ ಕಂಡ ಕೊಂದಾಚಾರ
ಮುಂಡ ಮುಂಡಗೊಂದೇಳು ಚಾರ
ಮುಂಡ ಮುಂಡಗೊಂದೀಳ್ಯಾರ
ಅವರು ಜೀವಿಗಳ ಕೊಟ್ಟಾರಮ್ಮ
ಅವಳು ಮ್ಯಾಲಕೆ ಎದ್ದು ಕೂತಳು
ಅವರು ಜೀವಗಳ ಕೊಟ್ಟಾರಮ್ಮ
ಅವರು ಮನೆಗಿನ್ನ ನಡಿಯೆಂದಾನು
"ಎಂದಿದ್ದರು ಎಂಜಲು ಸ್ವಾಮಿ
ನಾ ಬರೋದಿಲ್ಲ ಹೋಗಿ ಸ್ವಾಮಿ
ಅಂಗಂದ ಮಾತ ಕೇಳಿ
ಅವನು ಮನಿಗಿನ್ನ ಬಂದಾನಮ್ಮ.

ಅಮ್ಮಮ್ಮ ನನ್ನೆತ್ತ ತಾಯಿ
ಅವಳು ಏಳು ಬಂಡಿ ಸುಣಕಲ್ಲು ಕರಗಿ
ತಾಯಿನ ಕಾರಣವನಾಕಾನೆ
ಅವನು ತ್ವಾಟಕೆ ಬಂದಾನಮ್ಮ
ಸುಲುವಲ್ಲ ಸುಲುವಲ್ಲರಾಯ
ಮಲ್ಲಪ್ಪ ನೀರು ಕಟ್ಟುತ
ಸುವಲ್ಲ ನೀರು ಎತ್ತುವ

ಅವನಳ್ಳಾವ ತೋಡಿ ಮಾಡಾನೆ
ಬಾಳೇಯ ಮಡಿ ಮ್ಯಾಡ್ಯಾನೆ
ಅವೆರ್ಡೆ ತುಂಡಿಗೆ ಹೊಡದವನಮ್ಮ
ಅವನು ಮನಿಗಿನ್ನ ಬಂದವನಮ್ಮ
ಅವನು ಸುಣ್ಣಕಲ್ಲು ತರಿಸ್ಯವನಮ್ಮ
ಅವರಿಬ್ಬಾರು ಕೆಂಡಕೊಂಡಾದೊ.

◆◆◆◆

ಹಾಡಿದವರು

**ಚೌಡಿಕೆ ಸುಬ್ಬಯ್ಯನ ಹೆಂಡತಿ ಮತ್ತು ಅವರ ಹೆಣ್ಣುಮಕ್ಕಳು**

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಗ್ರಹ : 28–7–1980

## ೭. ಗುಲಗಂಜಿ ಚೆನ್ನವ್ವ

ಕತ್ಲೆರಾಜರು ಮಗ ಪುತ್ರ ಕಾಳಿಂಗ ಚಲುವ
ಚಿತ್ರಾ ಗುಲಗಂಜಿ ದೊರಿಮಗ–ಕಾಳಿಂಗ ಚಲುವ
ಹುಲಿ ಬ್ಯಾಟೀಯ ಹೊರುಟಾನೆ.

ಹುಲಿಯಾನೆ ಬ್ಯಾಟೇಯ ಹೊರಟಾನೆ ದೊರಿಮಗ
ಅಲ್ಲೊಬ್ಬ ಇದ್ದ ಗೊಲ್ಲರ–ಹುಡುಗ
ಅರೆಯ ಕಲ್ಲಿನ ಮ್ಯಾಲಗುಸಾರ.

ಅರೆಯ ಕಲ್ಲಿನ ಮ್ಯಾಲಗುಸಾರ ಬರುದಾರೆ
ಅವ್ನು ಅರ್ಧ ಓದಿದ್ರೆ ಮರಣಿಲ್ಲ–ದೊರಿಮಗ
ಪೂರ್ತ ಓದೀದ ಮರಣಾದ.

ಬಾರಪ್ಪ ಪರುದಾನಿ ಬಾರಪ್ಪ ಪರುದಾನಿ
ಮಡಿದೆ ಹೋದಾನೆ ಮನಿಮಗ–ಪರದಾನಿ
ನೀನು ಮುತ್ತಿನ ಕದವ ತೆಗೆಬಾರೋ

ಅಂಗಲವ್ರು ಚಿಗುರ್‍ಯಾರೆ ಏರ್‍ಯಾಣಕೆ ಹೊರಟಾರೆ
'ಸತ್ತ ಹೆಣವನ್ನು ತೆಗುದಾರೆ–ತೆಗುದಾರೆ'[1]
ಅಂಗಳದ ಮ್ಯಾಲೆ ಇಡುತಾರೆ

ಅಂಗಳದಾನೆ ಮ್ಯಾಲೆ ಇಡುತಾರೆ ಹೆಣವನ್ನು
ಅರಮನೆಗೆ ಬೇಗಾನೆ ಬರುತಾರೆ–ಪರುದಾನಿ
ಅರಮನೆ ವಳೀಕೆ ಇಡುತಾರೆ

ಕಟ್ಲೆಯ ಯುವರಾಜ ಏನಂತೇಳಲುತಾರೆ
ಬಾರವ್ವ ನೀನು ಗುಲಗಂಜಿ–ಚನ್ನವ್ವ
ನೀನು ಒಳ್ಳೊಳ್ಳಿ ಅಡಿಗೆ ಮಾಡುಬಾರೆ

ಮಡುದು ಹೋಗ್ಯಾನೆ ಮನಿಮಗ ಚನ್ನವ್ವ
ಸತ್ತೊವ್ನಿಗೆಣ್ಣಿ ತರಬೇಕು

ಒಳ್ಳೊಳ್ಳೆ ಅಡಗೆಯ ಮಾಡ್ಯಾಳೆ ಚನ್ನವ್ವ
ಚಿನ್ನದ ಗಿಂಡೀಲಿ ಪನ್ನೀರು–ತಕ್ಕಂಡು
ಕೊಳ್ಳಪ್ಪ ನೀರ ಪರದಾನಿ

ಕೈ ಕಾಲನೆ ತೊಳೆದು ಒಳವೀಕೆ ಹೋದಾರ
ಊಟಾಕೆ ಬೇಗಾನೆ ಇಕ್ಕುತಾಳೆ–ಚನ್ನವ್ವ

---

1. ಸತ್ತಾನೆ ಹೆಣವನ್ನು ಬೇಗು ಬೇಗಾನ ತೆಗುದಾರೆ.

ಅವರು ಊಟಾ ಬೇಗನೆ ಮಾಡುತಾರೆ
ಕೈ ಬಾಯ ತೊಳುದಾರೆ

ಗಣೆಯ ತುದಿಗೆ ಸವರೊನ್ನು ಕಟಿಗೆಂಡು
ಮುಂದಾಲ ಪಟ್ಣಕೆ ಹೊರಟಾರೆ-ಪರುದಾನಿ
ಸತ್ತೊವ್ನಿಗೆಣ್ಣ ಕೊಡಿರವ್ವ

ಸತ್ತೊವ್ನಿಗೆ ಹೆಣ್ಣ ಕೊಡಿರವ್ವ ಜನದೊಳಗೆ
ಗಣೆಯ ತುದಿಯಾಗಳ ಸವರೊನ್ನು-ಕೊಟ್ಟೇನು
ಸತ್ತೊವ್ನಿಗೆಣ್ಣ ಕೊಡಿರಪ್ಪ

ಹೆಣ್ಣಾನೆ ಕೊಡಿರವ್ವ ಹುಚ್ಚೇನ ಮರುಳೇನೆ?
ಹೆತ್ತೋಳಿಗೆ ಕಣ್ಣು ಇರನಿಲವೇ-ತಡದೊಳಗೆ
ಹೆಣ್ಣುಮಕ್ಕಳೆಲ್ಲ ನಗುತಾರೆ

ಹೆಣ್ಣಾನೆ ಮಕ್ಕಳು ನಗುತಾರೆ ತಡದೊಳಿಗೆ
ಸುತ್ತಾಮುತ್ತೆಲ್ಲ ನೋಡುತಾರೆ-ಅವರು
ಮುಂದಾಲ ಪಟ್ಟಣಕೆ ಹೊರುಟಾರೆ

ಗಣೆಯಾನೆ ತುದಿಯಾಗುಳ ಸವರೊನ್ನು ಕೊಟ್ಟೇನು
ಸತ್ತೊವ್ನಿಗೆಣ್ಣ ಕೊಡಿರವ್ವ

ಹೆಣ್ಣನೆ ಕೊಡುವಾಕೆ ಹುಚ್ಚೇನ ಮರುಳೇನ?
ಹೆತ್ತೋಳಿಗೆ ಕಣ್ಣು ಇರನಿಲುವೆ-ತಡದೊಳಗೆ
ಹೆಣ್ಣಮಕ್ಕಳೆಲ್ಲ ನಗುತಾರೆ

ಸಂಗಕ್ಕೆ ಅರುಮಾಯ ಸಣ್ಣೀರಕ್ಕಿ ಪೇಟೆ
ಬಾರಪ್ಪ ನಾನು ಕೊಡತೀನಿ-ನನ್ನ
ತಾಯಿಲ್ಲದ ಮಗಳ ಕೊಡುತೇನಿ

ಬಾರಯ್ಯ ಎಲಿಮಾಯ ಬೇಗಾನೆ ಬಾರಯ್ಯ
ನಿನ ಅಡ್ಡಗಂಬಳಿ ಹಾಸಯ್ಯ-ಹಾರುವಯ್ಯ
ಗಣೆಯ ತುದಿಯಗಳ ಸವರೊನ್ನು

ಗಣೆಯ ತುದಿಯಗಳ ಸವರೊನ್ನು ಸುರಿದಾರೆ
ಅವನಡ್ಡಾಗಂಬಳಿ ಕಟ್ಟುತಾನೆ-ಅವನು
ಅರಮನೆಗೆ ಬೇಗಾನೋಗುತಾನೆ

ಮಡದೀನೆ ಚನ್ನವ್ವ ಏನಂತೇಳುತಾಳೆ
ನೀನು ಯಾರಮನಿಗೆ ಕನ್ನ ಹಾಕಿದಯ್ಯ
ಕನ್ನಾವು ಹಾಕಲಿಲ್ಲ ಯಾರಮನೆಯ ಬಾಚಲಿಲ್ಲ

ಗುಲುಗಂಜಿ ಚನ್ನವ್ವನ ಕೊಡುತೇನಿ
ಸತ್ತೋವ್ನಿಗೆಣ್ಣ ಕೊಡತೇನಿ

ಹೆಣ್ಣಾನೆ ಕೊಡುವಾಕೆ ಹುಚ್ಚೇನ ಮರುಳೇನ?
ಹೆತ್ತೋಳಿಗೆ ಕಣ್ಣು ಇರನಿಲವೇ–ನಂತೇಳಿ
ಗುಲುಗುಂಜಿ ಚನ್ನವೇನೇಳುತಾಳೆ

ಕೇಳಪ್ಪ ನನ್ನಪ್ಪ ಕೇಳವ್ವ ಚಿಕ್ಕವ್ವ
ನನ್ನ ಹಣೆಯಲ್ಲಿ ನನ ತಂದಿ–ಬರೆದಂಗೆ
ನಾನೇಯ ಈಗ ಹೋಗುತೇನಿ

ಒಳ್ಳೊಳ್ಗನೆ ಅಡಿಗೆ ಮಾಡ್ಯಾಳೆ ಚಿಕ್ಕವ್ವ
ಬಾರಪ್ಪ ನೀನು ಪರುದಾನಿ
ಬಾಲೆ ಮುಖವನ್ನು ತೊಳಿಬಾರೊ

ಚಿನ್ನಾದ ಗಿಂಡೀಲಿ ಪನ್ನೀರ ತಕ್ಕಂಡು
ಕೈ ಕಾಲು ಮುಖವ ತೊಳುದಾನೆ
ಅವನರಮನೆ ವಳಿಕೆ ಹೋಗುತಾನೆ
ಅವಳು ಊಟಾಕೆ ಬೇಗನೆ ಇಕ್ಕುತಾಳೆ

ಊಟಾವು ಮಾಡ್ಯಾಳೆ ಕೈ ಬಾಯ ತೊಳುದಾಳೆ
ಅವಳೂ ಒಳ್ಳೊಳ್ಳೆ ಸೀರಿ ತೆಗುದಾಳೆ
ಅವಳು ಒಳ್ಳೊಳ್ಳೆ ರವಿಕೆ ತೊಡಿಸ್ಯಾಳೆ

ಅವಳ ತಲಿಯ ಬೇಗಾನೆ ಬಾಚುತಾಳೆ
ಅವಳಿಗೆ ಪುಟ್ಟಮಲ್ಲಿಗೆ ಮುಡಿಸ್ಯಾಳೆ–ಚನ್ನವ್ವ
ಅಕ್ಕಸ್ತ್ರಿ ಕುಮಕೂಮ ಧರಿಸ್ಯಾಳೆ–ಚನ್ನವ್ವ
ಬಾರಪ್ಪ ನೀನು ಪರುದಾನಿ

ತಂಗೆಕ್ಕೆ ಅರಬಾಯ ಗುಲಗಂಜಿ ಚನ್ನವ್ವ
ಪರದಾನಿ ಬೇಗಾನೆ ಹೋಗುತ್ತಾರೆ
ಕಲ್ಲೆರಾಜನ ಅರಮನಿಗೆ

ಕಟ್ಲೆಯ ರಾಜನ ಅರಮನಿಗೆ ಹೋಗಲಾಗಿ
ಬಾಗಲಾಗೆ ನಿಂತಗಂಡು ಅಳುತಾಳೆ

ಗುಲಗಂಜಿ ಚನ್ನವ್ವ ಅಲ್ಲಿಗೆ ಬಂದಾಳೆ
ಅವಳ ಮುಖವನ್ನು ನೋಡುತಾಳೆ
ಅವಳು ಗೋಳುಗೋಳಾಡೊಂದಳುತಾಳೆ

ಚೆನ್ನಾದ ಗಿಂಡೀಲಿ ಪನ್ನೀರ ತಕ್ಕಂಡು
ಕೈ ಕಾಲು ಮುಖವನ್ನು ತೊಳುದಾಳೆ
ಅರಮನೆ ವಳೀಕೆ ಹೋಗುತಾಳೆ

ಹೆಣ್ಣನ್ನು ಕೊಡುವ್ರೋಕೆ ಹುಚ್ಚೇನ ಮರುಳೇನ
ಅವಳು ಹೆತ್ತವಳಿಗೆ ಕಣ್ಣು ಇರನಿಲುವೆ?

ಒಳ್ಳೊಳ್ಳೆ ಬಿಸಿಯಡಿಗೆ ಮಾಡ್ಯಾಳೆ ಚನ್ನವ್ವ
ಬೇಗಾನೂಟಾಕೆ ಇಕ್ಕುತಾಳೆ

ಊಟಾವು ಮಾಡ್ಯಾಳೆ ಕೈ ಬಾಯ ತೊಳುದಾಳೆ
ಬೇಗಾನೆ ತಲಿಯ ಬಾಚುತಾಳೆ
ದುಂಡುಮಲ್ಲಿಗೆ ಮುಡಿಸ್ಯಾಳೆ

ಒಳ್ಳೊಳ್ಳೆ ಸೀರೆ ಉಡಿಸ್ಯಾಳೆ
ಅವ್ಳಿಗೆ ಒಳ್ಳೊಳ್ಳೆ ರವಿಕೆ ತೊಡಿಸ್ಯಾಳೆ–ಚನ್ನವ್ವ
ಅಕ್ಕುಸ್ತಿ ಕುಮಕುಮ ಧರಿಸ್ಯಾಳೆ

ಚೆನ್ನಾದ ಬಳೆಯ ತೆಗುದಾಳೆ
ಹೊನ್ನಿನ ಬಳೆಯ ತೊಡಿಸ್ಯಾಳೆ–ಚನ್ನವ್ವ
ಬಾರಪ್ಪ ನೀನು ಪರದಾನಿ

ನೀನು ಮುತ್ತೀನಂದೊಲವ ತಗಿಬಾರೊ
ಅಂದಲವು ತೆಗುದಾರೆ ಚಂದಲವ ತೊಳದಾರೆ
ಸತ್ತ ಹೆಣವನ್ನು ತೊಳುದಾಳೆ

(ಈ) ಅಂದಲದ ಮೇಲೆ ಇಡುತಾರೆ–ಹೆಣವನ್ನು
ಪೂಜೆಕುಪ್ಪಗಳ ಮಾಡುತಾರೆ
ಚಿಗಣಿ ತಂಬಿಟ್ಟು ಇಡುತಾರೆ

ಹಣ್ಣುಕಾಯಿಗಳು ಇಡುತಾರೆ–ಅವ್ರ ತಂದೆ
ಚನ್ನವ್ವ ಬಂದು ಕುತಗಂಡ್ಲು–ಎಡಗಡೆ
ಆಕೆ ಪೂಜೆಕುಪ್ಪಗಳ ಮಾಡುತಾಳೆ.

ಅಕ್ಕುಸ್ತಿ ಕುಮಕುಮ ಇಡುತಾರೆ–ಬೇಗಾನೆ
ಗಂಧಾಕಡ್ಡಿಯ ಬೆಳಗ್ಯಾಳೆ–ಚನ್ನವ್ವ
ಅಡವಿ ಅರಣ್ಯಕೋಗುತಾಳೆ (ನೆ)–ಕಲ್ಲೆರಾಜ
ಅಂದಲ ಬೇಗಾನೆ ಇಡುತಾರೆ
ಈಡು ಪೂಜೆಯ ಮಾಡುತಾರೆ–ಅವ್ರ ತಂದೆ
ಪಟ್ಟಣದವರೆಲ್ಲ ಅಳುತಾರೆ.

ನಾ ಹೋಗಿ ಬರುತೆ ಚದುರೆ ನೋಡಬಾರದು
ಈರುಳ್ಳಿ ಚಚ್ಚಿದರೆ ನೋಡಬಾರದು–ಹಿಂದಕೆ
ನಾವು ಮುಂದಾಕೆ ಓಡಿಹೋಗಾನಂದ್ರ

ಈರುಳ್ಳಿ ಪೂಜೆದುರೆ ಕರಪೂರಗಚ್ಚಾರೆ
ಪಟ್ಟಣದೊರೆಲ್ಲ ಓಡುತಾರ
ಪಟ್ಟಣದೊರೆಲ್ಲ ಓಡೋಡಿ ಹೋದಾರೆ
ಈಡು ಬೇಗನೆ ಕಟ್ಟುತೀತಿ
ಕರಪೂರ ಕಚ್ಚಿ ಇಡುತಾರೆ–ಈಡಿಗೆ
ಬೇಗಾನರಮನಿಗೆ ಬರುತಾನೆ.

ಗಂಡಾನ ತಲೆ ತೊಡಿಮ್ಯಾಲೆ–ಹಕ್ಕೆಂಡು
ಇವಳು ಈಡೀನ ಮೇಲೆ ಕುಂತಿದಾಳೆ.
ಕೃಷ್ಣದೇವ್ರು ಕೃಷ್ಣದೇವ್ರು ಬ್ರಹ್ಮಾನೆ ಬಸವಯ್ಯ
ದೇವಿಂದ್ರರಾಯ ಹೇಳುತಾರೆ
ಅವಳು ಈಡೀಗೆ ಮೇಲೆ ಇರುವಾಳು
ಈಡೀಗೆನೆ ಮೇಲೆ ಇರುವ್ಳೊಳುನೆ ಹೋಗಿ
ಬೇಗಾನೆ ಕರಕೋಡು ಬರುವ್ರೋಗು.

ಅವನು ಬಸವಣ್ಣ ಓಡೋಡೋಗುತಾನೆ
ಈಡೀನ ಮ್ಯಾಲೆ ಇರುವ್ಳೊಳು–ಯಾರಮ್ಮ
ನೀನು ಈಡಿನಿಂದ ಕೆಳಿಕೆ ಇಳಿಯಮ್ಮ

ನಾನು ಈಡಿನಿಂದ ಕೆಳಿಕೆ ಇಳಿಯದಿಲ್ಲ
ನೀನು ಹಣ್ಣು ಕಾಯಿಗಳ ತಿಂದೋಗೊ
ನೀ ಚಿಗಣಿ ತಂಬಿಟ್ಟ ತಿಂದೋಗೋ
ಚಿಗಣಿನೆ ತಂಬಿಟ್ಟ ತಿನ್ನುಲಿಲ್ಲ
ಬರಿಕಾಯನ್ನು ಅವನು ತಿಂದೋದ
ಯಾಕಾಲೆ ಬಸವಣ್ಣ ನೀ ಹಂಗಾವನ ಬಂದೆ

ನೀ ಲಂಚಾವ ತಿಂದು ಬರತೀಯ
ಲಂಚಾವನೆ ತಿಂದು ನಾನುನೆ ಬರಲಿಲ್ಲ
ಅವಳು ಈಡಿನಿಂದ ಕೆಳಿಕೆ ಇಳಿನಿಲ್ಲ
ಬರಿಯ ಕಾಯನ್ನು ತಿಂದು ಬಂದೆ

ಕೃಷ್ಣದೇವ್ರು ಕೃಷ್ಣದೇವ್ರು
ದೇವಿಂದ್ರ ಬಸವಣ್ಣ
ಬ್ರಹ್ಮ ಐದು ಜನ ಬರುತಾರೆ.

ಈಡಿನಿಂದ ಕೆಳಕೆ ಇಳಿಯಮ್ಮ
ಈಡಿನಿಂದಾನೆ ಕೆಳಿಕೆ ನಾನು ಇಳಯೊದಿಲ್ಲ

ನಿನ್ನ ಹಣೆಯಲ್ಲಿ ಬರಿದದ್ದೆ
ನಿನ್ನ ಗುಣವನ್ನು ನಾನು ಮೆಚ್ಚಿದೆ
ಹಾಗಂತ ಹೇಳೀ ಮಾಯವಾದ

ಬ್ರಹ್ಮನೇ ಹೇಳಿ ಬೇಗಾನೆ ಮಾಯವಾದ
ದೇವಿಂದ್ರ ಹೋಗಿ ಕೂರುತಾನೆ
ಅವ್ರು ಕೊಡುಗಲ್ಲಿನ ಮ್ಯಾಲೆ ಕೂರುತಾರೆ

ತಲಿಯನ್ನು ಕಡಿಯಿಂದ ಈಡನ್ನು ಕಚ್ಚಾತೆ
ಧಗಧಗನೆ ಈಡು ಉರಿತೈತೆ
ದೇವಿಂದ್ರ ಈಡ ತೆಗಿದಾರೆ.

ಆರಂಭ ಅಡಿವೀಲಿ ಬೋರೆಂಬೊ ಗುಡ್ಡದಲ್ಲಿ
ಗುಲಗಂಜಿ ಚನ್ನವ್ವ ಶೋಕಮಾಡುತಾಳೆ

ಅವಳು ಈಡೀನ ಮ್ಯಾಲೆ ನಿಂತಗಂಡು
ಅವಳುವೆ ಪಾರ್ವತಿಗೆ ಅಳಪಡಿ ಅಳೆಕಂಡು
ಕಡಿನಲ್ಲಿ ಅವರು ಬರುತಾರೆ.

ಹೆಣ್ಣಕ್ಳು ಶೋಕ ಮಾಡುತವರೆ
ತಂಗೀನೆ ಹೋಗಿ ನೋಡುನ

ಶಿವನೂವೆ ಪಾರ್ವತಿ ಅಲ್ಲಿಗೆ ಬರೋರೆ
ಯಾಕಮ್ಮ ಶೋಕ ಮಾಡುತೀಯ?
ಸತ್ತೆಣಿಗೆ ಮದುವೆ ಮಾಡಸಿದಾರೆ

ಅತುಲಾಗೆ ನೋಡಬ್ಯಾಡ
ಇತುಲಾಗೆ ಹುಡುಗಿ ನಿಂತುಗೊಳೇ
ಜೀವಾಳ್ದ ಕಡ್ಡೀಲೆ ನಿವಾಳದು

ಜೀವಾಳ್ದ ಕಡ್ಡೀಲೆ ನಿವಾಳದಿದುದಾರೆ
ಬೇಗಾನೆ ಎದ್ದು ನಿಂತುಗಂಡು
ಈಡೀನ ಮ್ಯಾಲೆ ಇರುವ್ವೋಳು–ಯಾಕಮ್ಮ
ನೀನು ಈಡಿನಿಂದ ಕೆಳಕೆ ಇಳಿಯಮ್ಮ

ಈಡಿನಿಂದ ಕೆಳಕೆ ನಾನು ಇಳಿಯೋದಿಲ್ಲ
ಸತ್ತೇಣಿಗೆ ಮದುವೆ ಮಾಡದರೆ–ನೇನಿನ್ನು
ನಡಿರಿ ಹೋಗಾನ ಅರಮನೆಗೆ
ನಿಮ್ಮ ತಾಯಿತಂದೆಗಳ ಕೇಳಾಣ.

ಅಲ್ಲಿಂದಾನೆಲ್ಲೀಗೆ ಅವರು ಅರಮನೆಗೆ ಬಂದಾರೆ
ಊರು ಮುಂದೆ ಬಂದು ನಿಲುತಾರೆ
ಮುತ್ತಿನಾರಾತಿ ಬೆಳಿಗ್ಯಾರೆ

ಮುತ್ತಿನ ಆರತಿ ರತ್ನದ ಆರತಿ
ಹೆಣ್ಣುಮಕ್ಕಳೆಲ್ಲ ಬೆಳಿಗ್ಯಾರೆ
ಅವ್ರು ಅರಮನೆಗೆ ಬೇಗಾನೆ ಹೋಗುತಾರೆ.

ಅವ್ರ ತಂದೆ ಏನಂತ ಕೇಳತಾರೆ
ಕಟ್ಲೆರಾಜರ ಪುತ್ರ ಕಾಳಿಂಗ ಚಲುವ
ಚಿತ್ರ ಗುಲಗುಂಜಿ ದೊರಿಮಗ–ಕಾಳಿಂಗ ಚಲುವ
ನೀನು ಹುಲಿಯ ಬ್ಯಾಟೇಯ ಹೊರಟೆಲ್ಲ–ದೊರಿಮಗ
ಅಲ್ಲೊಬ್ಬನಿದ್ದ ಗೊಲ್ಲರುಡುಗ

ಅರಿಯ ಕಲ್ಲಿನಮ್ಯಾಲ ಅಗುಸಾರ–ಬರೆದಿದ್ರೆ
ನೀನರ್ಥ ಓದಿದ್ರೆ ಮರಣೆಲ್ಲ–ದೊರಿಮಗ
ನೀನು ಪೂರ್ತ ಓದಿದ್ರೆ ಮರಣಾದೆ.

ನಾ ಸಂಜಕ್ಕಿ ಹಾರುವಯ್ಯನ ಮಗಳ (ನೆ)–ತಂದು
ನಿನಗೆ ಮದುವೆ ಮಾಡಿದೆ.

ಬಾರಪ್ಪ ಪರುದಾನಿ ಬಾರಯ್ಯ ಪರುದಾನಿ
ಕಲ್ಲೆರಾಜನ ಮಗನಂದು
ಮತ್ತೆ ಮದುವೆಯ ಮಾಡುತಾರೆ–ನನ್ ಕೇಳೀ
ಪಟ್ಟಣದೊಳಗೆಲ್ಲ ಬೇಗಾನೆ ಬಂದಾರೆ
ಅವಳು ತಲಿಯ ಬೇಗಾನೆ ಬಾಚುತಾರೆ
ಜಾಜಿ ಮಲ್ಲಿಗೆ ಮುಡಿಸ್ಯಾರೆ.

◆ ◆ ◆ ◆

ಹಾಡಿದವರು : **ತಿಮ್ಮಮ್ಮ**, 60 ವರ್ಷ, ಹರಿಜನ
ಸಿದ್ದಾಪುರ, ಹಳೆಬೀಡು ಹೋಬಳಿ, ಬೇಲೂರು ತಾ॥, ಹಾಸನ ಜಿಲ್ಲೆ.

## ೮. ಕೆರೆಕಟ್ಟೋ ಒಡ್ಡರಯ್ಯ

ಒಂದೊರ ಕೊಟ್ಟೇನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಒಂದೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ಎರಡೊರ ಕೊಟ್ಟೇನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಎರಡೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ಮೂರೊರ ಕೊಟ್ಟೇನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಮೂರೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ನಾಕೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ನಾಕೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ಐದೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಐದೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ಆರೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಆರೊರ ಕೊಟ್ಟರೆ ಸುವ್ವಲಾಲಿ
ಕೆರೆಯೆ ನಿಲ್ಲದು ಗೌಡ ಸುವ್ವಲಾಲಿ
ಏಳೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ
ಏಳೊರ ಕೊಟ್ಟರೆ ಸುವ್ವಲಾಲಿ
ಕೆರೆ ನಿಲ್ಲದು ಗೌಡ ಸುವ್ವಲಾಲಿ
ಎಂಟೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟೊ ಒಡ್ಡರುಡುಗ ಸುವ್ವಲಾಲಿ

ಎಂಟೊರ ಕೊಟ್ಟರೆ ಸುವ್ವಲಾಲಿ
ಕೆರಿಯೆ ನಿಲ್ಲದು ಗೌಡ ಸುವ್ವಲಾಲಿ
ಒಂಬತ್ತೊರ ಕೊಟ್ಟೆನು ಸುವ್ವಲಾಲಿ
ಕೆರೆಕಟ್ಟು ಒಡ್ಡಾರುಡುಗ ಸುವ್ವಲಾಲಿ
ಒಂಬತ್ತೊರ ಕೊಟ್ಟಾರೆ ಸುವ್ವಲಾಲಿ
ಕೆರೆಯೆ ನಿಲ್ಲದು ಗೌಡ ಸುವ್ವಲಾಲಿ
ಹಂಗಂದ ಮಾತಿಗೆ ಸುವ್ವಲಾಲಿ
ಮಂಚದಡಿ ಮನಿಕೊಂಡ. ಸುವ್ವಲಾಲಿ

ಅಡುಗೆಯ ಮಾಡಿದಾಳು ಸುವ್ವಲಾಲಿ
ಮಾವಯ್ಯ ಮಾವಯ್ಯ ಸುವ್ವಲಾಲಿ
ಊಟಕ್ಕೆ ಏಳೀಗ ಸುವ್ವಲಾಲಿ
ಊಟವ ಮಾಡೋದು ಸುವ್ವಲಾಲಿ
ಕೆರೆಯ ನಿನ್ನ ಕೇಳುತಾದೆ ಸುವ್ವಲಾಲಿ
ನಾನು ಊಟವ ಒಲ್ಲೆನವ್ವ ಸುವ್ವಲಾಲಿ
ಕೆರಿಯೆ ನಿನ್ನ ಕೇಳುತಾದೆ ಸುವ್ವಲಾಲಿ
ಅದಕ್ಕೀಗ ಹೆದಿರ್‍ಕೊಂಡ್ರ? ಸುವ್ವಲಾಲಿ
ನಾನೇನು ಹೋಯ್ತೀನಿ ಸುವ್ವಲಾಲಿ
ನೀವು ಊಟ ಮಾಡೇಳಿ ಸುವ್ವಲಾಲಿ
ನೀನೆಯ ಹೋಗೊಳು ಸುವ್ವಲಾಲಿ
ತೌರಿಗೆ ಹೋಗವ್ವ ಸುವ್ವಲಾಲಿ
ನಿಮ್ಮ ತಾಯ್ತುಂದೀಗೆ ಹೇಳಿಬಾರೆ ಸುವ್ವಲಾಲಿ
ಅವಳು ತೌರೀಗೆ ಹೋದಾಳು. ಸುವ್ವಲಾಲಿ

ತಾಯಮ್ಮ ತಾಯಮ್ಮ ಸುವ್ವಲಾಲಿ
ತ್ವಾಟಕ್ಕೆ ಹೋಗವ್ವ ಸುವ್ವಲಾಲಿ
ಬಾಳೆಯ ಎಲೆತಾರೆ ಸುವ್ವಲಾಲಿ
ನೀನು ಅಕ್ಕೀಯ ಹಾಕವ್ವ ಸುವ್ವಲಾಲಿ
ನೀನು ಅನ್ನವ ಮಾಡವ್ವ ಸುವ್ವಲಾಲಿ
ಊಟಕ್ಕೆ ಇಕ್ಕವ್ವ ಸುವ್ವಲಾಲಿ
ನಿನ್ನ ಕೈಲಿ ಊಟವ ಉಣಬೇಕು ಸುವ್ವಲಾಲಿ
ನಾನು ಕೆರಿಗೀಗ ಹೋಗುತೀನಿ. ಸುವ್ವಲಾಲಿ
ಅಕ್ಕಿಯ ಹಾಕಿದೋಳು ಸುವ್ವಲಾಲಿ
ಅವ್ರ ತಾಯಮ್ಮ ಅನ್ನಾವ ಮಾಡ್ಯಾಳು ಸುವ್ವಲಾಲಿ

ಬಾಳೆಯ ಎಲೆ ಹಾಕಿ ಸುವ್ವಲಾಲಿ
ಅವಳು ಊಟಕ್ಕೆ ಬಡಿಸ್ಯಾಳು. ಸುವ್ವಲಾಲಿ
ತಂಗಮ್ಮ ತಂಗಮ್ಮ ಸುವ್ವಲಾಲಿ
ನಾವಿಬ್ಬಾರು ಊಟ ಮಾಡಾನ ಸುವ್ವಲಾಲಿ
ನನ್ನೊಂದಿಗೆ ಬಾರಮ್ಮ ಸುವ್ವಲಾಲಿ
ಅಕ್ಕತಂಗೇರು ಕೂಡಿ ಸುವ್ವಲಾಲಿ
ಅವರಿಬ್ಬಾರು ಒಂದಿಗೂಟ ಸುವ್ವಲಾಲಿ
ಅನ್ನಾವ ಎರಡು ಭಾಗಮಾಡಿ ಸುವ್ವಲಾಲಿ
ನನಿಗರ್ಧ ಬಾಳೀಗ ನಿನಿಗರ್ಧ ಬಾಳೀಗ ಸುವ್ವಲಾಲಿ
ನನ್ನ ಮಗನ ಸಾಕವ್ವ ಸುವ್ವಲಾಲಿ
ನನಿಗರ್ಧ ಬಾಳೀಗ ನಿನಿಗರ್ಧ ಬಾಳೀಗ ಸುವ್ವಲಾಲಿ
ನನ್ನ ಮಗನ ಸಾಕವ್ವ ಸುವ್ವಲಾಲಿ
ನಮ್ಮ ರಾಯರ ಮದಿವಾಗೆ ಸುವ್ವಲಾಲಿ
ನಾನು ಕೆರಿಗೀಗ ಹೋಗುತೀನಿ ಸುವ್ವಲಾಲಿ
ಬಾಳೆಯ ಎಲಿ ಈಗ ಸುವ್ವಲಾಲಿ
ಬೆಟ್ಟಲ್ಲಿ ಗೀರಾಳು ಸುವ್ವಲಾಲಿ
ಅತ್ತರಧ ಇತ್ತರಧ ಸುವ್ವಲಾಲಿ
ಆ ಹಾಳೇಲಿ ಅವಳುಂಡ್ಲು ಸುವ್ವಲಾಲಿ
ಈ ಕಡೆ ಹಾಳೆಲಿ ಇವಳೂಟ. ಸುವ್ವಲಾಲಿ
ತಾಯಮ್ಮ ತಾಯಮ್ಮ ಸುವ್ವಲಾಲಿ
ನಾನು ಕೆರೆಗೀಗ ಹೋಗುತೀನಿ ಸುವ್ವಲಾಲಿ
ತಂಗಿಯ ಕೊಟ್ಟೀ ಸುವ್ವಲಾಲಿ
ನೀನು ಮದುವೆಯ ಮಡವ್ವ ಸುವ್ವಲಾಲಿ
ಅಣ್ಣಯ್ಯ ಅಣ್ಣಯ್ಯ ಸುವ್ವಲಾಲಿ
ನಾನು ಕೆರಿಗೀಗ ಹೋಗುತೀನಿ ಸುವ್ವಲಾಲಿ
ತಂಗಿಯ ಕೊಟ್ಟು ಮದುವೆಯ ಮಾಡು ಸುವ್ವಲಾಲಿ
ಅಪ್ಪಾಜಿ ಅಪ್ಪಾಜಿ ಸುವ್ವಲಾಲಿ
ನಾನು ಕೆರೆಗೀಗ ಹೋಗುತೀನಿ ಸುವ್ವಲಾಲಿ
ಕೆರೆಗೀಗ ಹೋಗುತೀನಿ ಸುವ್ವಲಾಲಿ
ಮಗುಳಾನೆ ಕೊಟ್ಟು ಮದುವೆ ಮಾಡು ಸುವ್ವಲಾಲಿ
ಅಪ್ಪಾಜಿ ಅಪ್ಪಾಜಿ ಸುವ್ವಲಾಲಿ
ನನ್ನ ಮಗ ಜೋಪಾನ ಸುವ್ವಲಾಲಿ

ಹೆಂಗಂದ ಮಾತಿಗೆ ಸುವ್ವಲಾಲಿ
ಅವಳು ಊರಿಗೆ ಬಂದಾಳು. ಸುವ್ವಲಾಲಿ

ಅತ್ಯಮ್ಮ ಅತ್ಯಮ್ಮ ಸುವ್ವಲಾಲಿ
ನನೆಯಕ್ಕಿ ನೆನೆಗಡಲೆ ಸುವ್ವಲಾಲಿ
ಚಿಗುಳಿ ತಂಬಿಟ್ಟು ಮಾಡೆ ಸುವ್ವಲಾಲಿ
ನನ್ನ ಮುತ್ತೈದೆ ಮಡುಲಕ್ಕಿ ತುಂಬೆ. ಸುವ್ವಲಾಲಿ ೧೦೦
ಅವ್ರು ಗಂಗೆಯ ಪೂಜೆ ಮಾಡುತಾರೆ ಸುವ್ವಲಾಲಿ
ನೆನೆಯಕ್ಕಿ ನೆನೆಗಡಲೆ ಸುವ್ವಲಾಲಿ
ಚಿಗಳಿ ತಂಬಿಟ್ಟುನುಂಡೆ ಸುವ್ವಲಾಲಿ
ನನ್ನ ಮುತ್ತೈದೆ ಮಡಲಕ್ಕಿ ಹುಯ್ದೀಗ ಸುವ್ವಲಾಲಿ
ಅವ್ರು ಗಂಗೆಯ ಪೂಜೆ ಮಾಡುತಾರೆ ಸುವ್ವಲಾಲಿ
ಗಂಗೆಯ ಪೂಜೆ ಮಾಡಿದೋಳು ಸುವ್ವಲಾಲಿ
ಮುಂಗಾಲು ಮುಳಕೀದೊ ಸುವ್ವಲಾಲಿ
ಮಂಡಿತಕ್ಕ ನೀರು ಬಂದೊ ಸುವ್ವಲಾಲಿ
ಅವಳ ನಡಿತಕ್ಕ ಸೊಂಟತಕ್ಕ ನೀರುಬಂದೊ ಸುವ್ವಲಾಲಿ
ಸೊಂಟತಕ್ಕ ನೀರು ಬಂದೊ. ಸುವ್ವಲಾಲಿ ೧೧೦
ಅತ್ಯಮ್ಮ ಅತ್ಯಮ್ಮ ಸುವ್ವಲಾಲಿ
ನಾನು ಗಂಗೀಗೆ ಹೋಗುತೀನಿ ಸುವ್ವಲಾಲಿ
ಸೊಂಟತಕ್ಕ ನೀರೀಗ ಸುವ್ವಲಾಲಿ
ಎದಿಗೆ ಬಂದೊ ನೀರೀಗ ಸುವ್ವಲಾಲಿ
ತಾಯಮ್ಮ ತಾಯಮ್ಮ ಸುವ್ವಲಾಲಿ
ನಾನು ಈಗೀಗ ಮುಳಿಕೀನು ಸುವ್ವಲಾಲಿ
ನನ್ನ ಮಗು ಜೋಪಾನ ತಾಯಮ್ಮ ಸುವ್ವಲಾಲಿ
ಎದಿಗೆ ಬಂದ ನೀರೀಗ ಸುವ್ವಲಾಲಿ
ಕುತ್ತೀಗೆ ಬಂದಾವು ಸುವ್ವಲಾಲಿ
ತಂಗ್ಯಮ್ಮ ತಂಗ್ಯಮ್ಮ ಸುವ್ವಲಾಲಿ ೧೨೦
ನನ ಮಗು ಜೋಪಾನ ಈಗೀಗ ಸುವ್ವಲಾಲಿ
ನಾನು ಮುಳುಗೇಯ ಹೋಯ್ತೀನಿ ಸುವ್ವಲಾಲಿ
ನನ್ನ ಮಗುವಾನೆ ಹೊಡಿಬ್ಯಾಡಿ ಸುವ್ವಲಾಲಿ
ಹಾಲಂತ ಅಳುವಾಗ ಸುವ್ವಲಾಲಿ
ತಾಯಂತ ಅಳುತಾನೆ ಸುವ್ವಲಾಲಿ
ತಂಗ್ಯಮ್ಮ ತಂಗ್ಯಮ್ಮ ಸುವ್ವಲಾಲಿ

ನಾನು ಭಾಷೆಯ ಕೊಟ್ಟಿವ್ನಿ ಸುವ್ವಲಾಲಿ
ಭಾಷೆಯ ಕೊಟ್ಟಿವ್ನಿ ಸುವ್ವಲಾಲಿ
ನೀನು ಮೋಸಾವ ಮಾಡುಬ್ಯಾಡ ಸುವ್ವಲಾಲಿ
ಕುತ್ತೀಗೆ ಬಂದೀಗ ಸುವ್ವಲಾಲಿ
ಕುತ್ತಿಗೆ ಬಂದಾಳು ಗಂಗಮ್ಮ ಸುವ್ವಲಾಲಿ
ನಾನು ಮುಳುಗೇಯ ಹೋದೇನು ಸುವ್ವಲಾಲಿ
ಕುತ್ತಿಗೆ ಬಂದಾವು ಸುವ್ವಲಾಲಿ
ನಾನು ಮುಳುಗೆಯೆ ಹೋದೇನು ಸುವ್ವಲಾಲಿ
ಮಾವಯ್ಯ ಮಾವಯ್ಯ ಸುವ್ವಲಾಲಿ
ನಿನಗೆ ಹೆಸರಾಗಿ ಇರಲಯ್ಯ ಸುವ್ವಲಾಲಿ
ನಾನು ಗಂಗೆಯ ಪಾಲಾದೆ ಸುವ್ವಲಾಲಿ.

◆◆◆◆

ಹಾಡಿದವರು : **ಕಾಡಸೂರು ಮುದಿಗೆರೆ ಗಿರಿಯಮ್ಮ**
**ಆದಿಜಾಂಬವ ಜಾತಿ**

## ೯. ಶೆಟವಿ ಕಥೆ

ಒಣಕಿ ತಗಂಡು ಕೂಸಿದ ತೆಲಿಯ ಒಡಿಬೇಕೆಂಬುದೇಕ
ಕೊಲ್ಲಿ ನಾಡ ಮ್ಯಾಲೋಗಬೇಕೆಂಬ ಮಸುಲಾತಿ
ತೆಲಿ ಒಡೆದು ಆದಿತು ಮೈಯಲ್ಲಿ ರಕ್ತ
ಅಷ್ಟೋತ್ತಿಗೆ ಆಕಿ ಗಂಡ ಬಂದನು
ನಂದೆ ಕೂಸಿನ ಕೊಂದದಿ ವ್ಯರ್ಥ ಇದು ಏನಂಥ?

ಮೋಸಮಾಡಿ ನನ ಲಗ್ನವಾಗಿದಿ
ಜಾತಿಯೊಳಗೆ ಮಾಡಿದಿ ಘಾತ
ಈ ಕೂಸಿನಾಸೆ ನನುಗೇನಂತ
ಅಂಶ ಹುಡಿಯಲಿಕ್ಕೆ ಮಾಡಿದಿ ಮಸ್ತ
ನಿನ್ನ ಮನೆಯಲಿ ಮುಂದೆ ಇರುವಣಿಲ್ಲ
ತಾನೆ ನಡೆದಳು ಹಣಿಹಣಿ ಬಡಿಕೋತ ಶ್ರಾಪ ಕೊಡುತ.

ದಾರು ಹೇಳಿದವರು ಕೇಳಲಿಲ್ಲ ನಾರಿ
ಹೊಂಟಳ ಹಣಿಹಣಿ ಬಡಿಕೋತ
ತಾಯಿ ಬರದಿದ್ದು ತಪ್ಪಲಿಲ್ಲ ಈ ಲಿಖಿತ
ದೇಶಬಿಟ್ಟು ಪರದೇಶಕ ಹೋದಳ
ಖಾಸನಗರ ಕಂಡಳ ತುರ್ತ ಆದಳು ಶಾಂತ.

ನಗರ ಹೊಕ್ಕ ನೋಡ್ಯಾಳ ದೊಡ್ಡ ಶಹರ
ಪಗಡಿ ಬಜಾರ ಕಾಣೋದು ಬರುತಿ
ಇಲ್ಲಿ ಇರುಬೇಕೆಂಬ ಸ್ಥಿತಿ.

ನಡುಪ್ಯಾಟ್ಯಾಗೆ ಮನಿ ಹಿಡದಾಳ
ಗಾಯನ ಮಾಡುವಳ ನಿತ್ಯ ದಿನಂಪ್ರತಿ
ಉತ್ತಮನಸಿ ಕೊಂಡಾಳ ಗುಣವಂತಿ
ತಾಯಿ ಹೋದ ಮೇಲೆ ತಂದಿ ಮಗನಿಗಿ.

ಬೂಂದೆದೆಸನ ತಿನಸಿದನಲ್ಲ
ಆನಂದದಿ ಕುಡಸಿದ ಸಕ್ಕರಿಹಾಲ
ಆ ಕಂದನಾದನೊ ಪ್ರಭಾಲ
ಲಾಲಿಸಿ ಸಮಗಾರ ಬಾಲಕ ಹೇಳ್ತಾನ
ಹೊಲಿಲುಕು ಕಲಿಬೇಕ ಇನ್ನಮ್ಯಾಲ ನಮ್ಮ ಕಸುಬೆಲ್ಲ.

ಹೇಸಿ ಕೆಲಸ ನಾ ಮಾಡೊದಿಲ್ಲ ತಂದಿ
ಸಾಲಿಗಾಕುಬೇಕು ತಿಳಿ ಕುಶಲ
ಸಾಲಿ ಕಲಿತರ ನಮಗೇನು ಕಡಿಮಿಲ್ಲ
ಶ್ಯಾಣ್ಯಾನಂಬರು ನಮಗೆ ಜನರೆಲ್ಲ
ಹರುಷವಾಗಿ ತಂದಿ ಸಾಲಿಗೆ ಹಾಕಿದಾನ
ಹುಡಗರೊಳಗೆ ಅದಾನ ಮಿಗಲ ವಿದ್ಯದ ಕೋಮಲ.

ಹನ್ನೆರಡು ವರುಷ ಸಾಲಿ ಕಲಿತಾನ
ಆರೆ ಕನ್ನಡ ಬಾಳಬದ್ದನೆಲ್ಲ
ಮೀರಿ ವಿದ್ಯಾ ಕಲಿತರೀನು ಉಳಿಯಲಿಲ್ಲ
ತನ್ನ ತಂದಿಗೆ ಹೇಳುತಾನ ಬಿದ್ದು ಪಾದದ ಮ್ಯಾಲ
ಮುತ್ತು ಮಾಣಿಕಗಳೂ ಯಾವ್ರುಕರ ಹೋಗುತೀನಿ
ಎತ್ತ ನೂರಾರು ನನಗ್ಗ ಬೇಕಲ್ಲ ಹೋಗುವೆನಲ್ಲ.

ತಂದಿ ತಂದ ಕೊಟ್ಟಾನ ತುರ್ತ
ಬೇಕಾದಂತ ಎತ್ತ
ಮಗನಿಗೊಪ್ಪುಸ್ಯಾನ
ಬೇಡಿದಷ್ಟು ದ್ರವ್ಯ ಕೊಡುತಾನ
ನನ ಹೊಟ್ಟೆಲಿದ್ದಿ ಒಬ್ಬವನೆ
ಹೇಳೊ ನನ ಮಗನೆ ಬರುವ್ರುದೆಂದೊ ನೀನು?
ನನ ಜೀಂವದಾಗಿಲ್ಲ ಸಮದಾನ
ಎಂಟೆ ದಿವಸಕೆ ಬರುವೆನು ನಾನು
ತಂದಿಗೇಳಿದನು ದಾರಿಹಿಡದನು
ಮುಂದಕೆ ಪೇಟರೆ ಮಾಡ್ಯಾನು.

ತಿಂಗಳ ಹ್ವಾರಿ ಮ್ಯಾಲ ಹೋದನು ಯಾ ಪ್ರಕಾರ
ಅದೇ ನಗರಕ ಇಳದನು ತಾನು
ಖರೀದಿ ಮಾಡಿದ ಮುತ್ತ ಮಾಣಿಕ್ಯ ತುಂಬಿದನು
ಅಲ್ಲಿ ನಾಲ್ಕಾರ ಹುಡಗರು ಕೂಡಿದರು
ಕುದರಿ ಹೊಕ್ಕ ನಾರಿ ಮಾಡೋದ ನೋಡಿದನು ಆಕಿ ಯಾರೆಂದನು.

ಅಲ್ಲಿ ಇಲ್ಲಿ ಆಕಿ ಇಕಿ ಯಾರಿಗು ಕೆಟ್ಟಿಲ್ಲ
ಯಸಸ್ ಸ್ತ್ರೀಯಳು ಇದ್ದಳು ತಾನು
ಗಾಯನ ಮಾಡುವಳು ನಿತ್ಯ ದಿನಪ್ರತಿಯವನು
ಬ್ರಾಂತಿಯ ಬಡಿದು ಹೋದನು ಆಕಿಮನಿಗೆ

ಹೆಣ್ಣಿನ ಸುಂದರತನಗೊನ್ನು ದಂಗಲಾದನು
ಕಾಂತೆ ನಿನ್ನ ಬೆಲಿಯನ್ನು ಹೇಳಂತಾನ
ಆಕಿ ಅಂತಳ ಇಂತ ಕೆಲಸ ಇಲ್ರಿ ನಾನು.
ಕುಲ್ಲಲೋಚನೆ ಒಲ್ಲನುಬ್ಯಾಡ
ನಿನ್ನ ಮ್ಯಾಲ ನನ್ನ ಪ್ರೀತಿಯನು ಮನ ತಾಪವನು.

ಮನಸೆಲಾಸಿ ಮಾಡ್ಯಾಳ ನೀರನೀರ
ಬಾರ ನನ ಹಾರ ಮಂಚಕ ಕರದಾಳ
ಗಜಗಮನಿ ಮುದ್ದ ಕೊಡತಾಳ
ತೆಕ್ಕಿಮುಕ್ಕಿ ಬಿದ್ದಾರ ಖಬರಿಲ್ಲ ಭೋಗ ನಡೆದಲ್ಲ
ಶಾಂತಮನದೊಳು ತೆಲಿಮ್ಯಾಲಿನ ಕಚ್ಚ ನೋಡ್ಯಾಳು
ಆಕಿ ಅಂತಾಳ ನೀವು ಯಾ ಊರವ್ರು?
ಹೇಳಿ ಅಂದಾಳ.

ಸಮಗಾರನ ಮಗನೆಂದು ಕೇಳು
ನಮ ತಾಯಿ ಶಟವಿ ಹೊಟ್ಟಕ್ಕಿ
ಸಮಗಾರ್‍ನ ಲಗ್ನಾಗಿ ನನ್ನ ಹಡದಾಳ
ಐದ ವರುಷದವನ ಬಿಟ್ಟಾಳ.
ಅಷ್ಟೊತ್ತಿಗೆ ಬೆಳಗಾಯಿತು ಬೇಗನೆ
ಹಿಡಿದಾನು ತಮ್ಮೂರು ದಾರಿಯನು.
ಆಕಿ ಗಾಬ್ರಾಗಿ ಕುಂತಾಳ ಇಲ್ಲ ಸೈನ.
ಶ್ರೀಹರಿ ಮುನಿದಿ ನನಗ ಬಗುವಾನ.
ಮೂರುಲೋಕ ಬರಿವಂಥ ಶಟವಿ
ತನ್ನ ಮಗಳ ಅಂಶ ತಿಳಿಲಿಲ್ಲವೇನು?
ಬಂದ ಲಿಖಿತವನು?
ಅದೇ ಗರ್ಭಿಣ್ಯಾಗಿ ಬಸುರನಾದಳು
ಯಸದಿಯೊಳಗೆ ಶಿಶು ಕೇಳಿ ಜನ.

ಅದು ದಿನ ದಿನಕೆ ಬೆಳೆವುದು ಸಾಗರ
ನವಮಾಸ ತುಂಬಿ ಹಡದಾಳು ಇಂದ.
ಹುಟ್ಟಿದೈದೆ ದಿವಸಕೆ ಬಣ್ಣದ ತೊಟ್ಲು ಕಟ್ಟಿ
ಮ್ಯಾಡ್ಯಾರ ನಿತ್ಯನೇಮವನು ಹೆಸರಿಡುವ್ರುವರು.
ಮಗನ ಮಗ ಬಾರೋ ಮೇಲಿನ ಮಗ ಬಾರೋ
ಕರ್ಮದ ಮಗನೆ ಬಾರೋ ನೀನು
ಹೀಂಗ ಹಾಡ್ಯಾಡಿ ಇಡತಾರ ಜೋಗುಳನು

ಮಾಡಬಾರದು ಮಾಡಿದೇನಾಯ್ತು?
ಭೋಗದೊಳಗ ಇದ್ದಿದ್ದಾಯ್ತು
ಕರ್ಮವನು ನನ ದೈವವನು.

ಜೋಪಾನ ಮಾಡುತಲಿದ್ದಾಳು
ಕೇಳ್ರಿ ಜನದೊಳು ಕರ್ಮ ಹೆಚ್ಚೈತಿ
ಧರ್ಮ ಹೋಗಿ ಅಡವಿ ಸೇರೈತಿ
ಎಲ್ಲ ಕೆಟ್ಟ ನಿಂತತ್ರಿ ಸರ್ವನಾಡ
ಪಾಪಾದ ನಾಡ ಕೇಳ್ರಿ ಜನದೊಳು
ಬಾಳೆ ನಿಮಗೆ ಏನು ಹೇಳುದೈತಿ?

ತಾಯಿ ತಂದಿಗಿ ಮಗ ಸೇರಂಗಿಲ್ಲ
ಮಡದಿ ಮ್ಯಾಲ ಕ್ಯಾಲ
ಹೀಗ ನಡದೈತಿ
ಅದರಿಂದ ಮಳಿ ಬೆಳಿ ಕಡಿಮ್ಯೆತಿ.

◆◆◆◆

ಹಾಡಿದವರು
**ನೀಲಮ್ಮ**
ಹರಿಜನ
ಬೇಲೂರು, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

# ೧೦. ಹೊಲೆಯರ ಹೈದ

ತಂದನ್ನ ತಾನೆ ತಂದೇನಾನಾ–ತಂದನ್ನ [1] ॥ ಸೊಲ್ಲು ॥

ಅಡವೀ ಕಟ್ಟಿದಳೇ ಬೆಡಗೀನೊಂದರಮನಿಯ
ಕಂಬಿದ್ದರೇನು ತೊಲಿಯಿಲ್ಲ–ತಂದನ್ನ....
ಕಂಬಿದ್ದರೇನು ತೊಲಿಯಿಲ್ಲ ಪಂಚಮರ್‍ದ್ಧಡಗಿ
ರಂಬಿದ್ದರೇನು ಕರಿಚಲುವೇ–ತಂದನ್ನ....
ರಂಬಿದ್ದರೇನು ಕರಿಚಲುವೇ–ಪಂಚಮರ್‍ದ್ಧಡುಗಿ
ಬೇರೊಂದೂರಲಿ ಮರಗೆಲಸ–ತಂದನ್ನ....
ಬೇರೊಂದೂರಲಿ ಮರಗೆಲಸಕ್ಹೋಯ್ತೀನಿ
ಜ್ವಾಕೆ ಕಾಣ್ಹೆಣ್ಣೆ ಮನೆ ಕಡೆ–ತಂದನ್ನ....
ನೀರಿಗು ನೀನು ಕಳುಗಲುಬ್ಯಾಡ
ಸವದೀಗು ನೀನು ಕಳುಗಲುಬ್ಯಾಡ–ತಂದನ್ನ....
ಸವದೀಗು ನೀನು ಕಳುಗಲುಬ್ಯಾಡನ್ನುತ್ಹೇಳಿ
ಮಡದಿಗೆ ಬುದ್ಧಿ ಹೇಳುತಾನೆ–ತಂದನ್ನ....

ಅವನು ಆರು ತಿಂಗಳ ಪಯಣ ಮೂರೆ ತಿಂಗಳು–ತಂದನ್ನ....
ಊರು ಮಕ್ಕಳೆಲ್ಲ ನೀರೀಗೆ ಹೋಯ್ತಾರ
ತಾನು ತಾಯಮ್ಮ ಹೋಗತೀನಿ–ತಂದನ್ನ....
ಊರೊಳ್ಳೆದಲ್ಲಾ ಕೇರೀ ಒಳ್ಳೇದಲ್ಲಾ
ನೀನು ನೀರಿಗು ಹೋಗಬ್ಯಾಡ–ತಂದನ್ನ....
ಅವಳು ತಾಯಿ ಮಾತು ಕೇಳದೆ ಪಂಚಮರ್‍ದ್ಧಡುಗಿ
ಎರುಕೊಳ್ಳಾಕೆ ಕೂತವಳೆ–ತಂದನ್ನ....
ಚಿನ್ನದ ಸಿಕ್ಕಟಿಗೆ ತಗುದಳು
ರನ್ನದ ಬಾಚಣಿಗೆ ತಗೆದಾಳು–ತಂದನ್ನ....
ಬಾಚಿ ಬಕುತಲೆಯ ತಗುದಾಳು–ತಂದನ್ನ....
ಬಾಚಿ ಬಕುತಲೆಯ ತಗುದಾಳು ಪಂಚಮರ್‍ದ್ಧಡುಗಿ
ಸಣ್ಣ ಗುಬ್ಬೀನ ಧರಸ್ಯಾಳು–ತಂದನ್ನ....
ಮುಂಡಲಿಗೆ ಮಲಕ ಧರಸ್ಯಾಳು–ತಂದನ್ನ....
ಜಡಿಗೆ ಜಡೆಹೂವ ಧರಿಸ್ಯಾಳು–ತಂದನ್ನ....
ಅವಳುಟ್ಟುಕೊಂಡಾಳು ಪಟ್ಟೆಸೀರೆಯ–ತಂದನ್ನ....

---

1. ಈ ಸೊಲ್ಲನ್ನು 'ತಂದನ್ನ' ಎಂದು ಮುಮ್ಮೇಳದವರು ಹೇಳಿದಮೇಲೆ ಹಿಮ್ಮೇಳದವರು ಹಾಡುತ್ತಾರೆ.

ಅವಳು ತೊಟ್ಟುಗೊಂಡಾಳು ಮುತ್ತೀನ ರವಕೆಯ–ತಂದನ್ನ....
ನಿಲುಗನ್ನಡಿ ಮನೆಗೆ ಹೋದಾಳು ಪಂಚಮರ್‍ಥುಡುಗಿ
ಹಣೆಗೆ ಹಣೆಬಟ್ಟು ಧರಿಸ್ಯಾಳು–ತಂದನ್ನ....
ಚೀಟಿ ಚೀಲಾನೆ ತಗುದಾಳು–ತಂದನ್ನ....
ಕತ್ತರಿಸಿದ ಕಳಿಯಡಕೆ ತಗುದಾಳೂ–ತಂದನ್ನ....
ಉತ್ತರಿಸಿದ ಬಿಳಿಯಲೆಯ ತಗುದಾಳು–ತಂದನ್ನ....
ಚಿನ್ನದ ಚವರೀಗೆ ರನ್ನದ ಸಿವಡಾನ್ಹಾಕಿ
ನಿಲಗನ್ನಡಿ ತಾಕೆ ಹೋದಾಳು–ತಂದನ್ನ....
ಅವಳಂದ ಚಂದಾವ ನೋಡುತಾಳೆ–ತಂದನ್ನ....
ಅವಳುದ್ದ ಭೂಷಣವ ನೋಡುತಾಳೆ–ತಂದನ್ನ....
ಉದ್ದ ಭೂಷಣವ ನೋಡುತಾಳೆ ಪಂಚಮರ್‍ಥುಡುಗಿ
ಮೂಡಕ್ಕಿ ಕೊಳಕೆ ನೀರೀಗ್ಹೋದಾಳು–ತಂದನ್ನ....
ಮೂಡಕ್ಕಿ ಕೊಳಕೆ ನೀರೀಗೆ ಹೋಗುವಾಗ
ಸಂಗಾತಿರೆಲ್ಲಾ ಬರುತಾರೆ–ತಂದನ್ನ....
ಸಂಗಾತಿರೆಲ್ಲಾ ಬರುವಾಗೇನಂದಾಳು
ನಾನೂ ಬತ್ತೀನಿ ನಿಂತುಗಳರೇ–ತಂದನ್ನ....
ನಮ್ಮವ್ವ ನನಗೆ ಬಯ್ಯುತಾಳೆ–ತಂದನ್ನ....
ನಮ್ಮವ್ವ ನನಗೆ ಹೊಡೀತಾಳೆ–ತಂದನ್ನ....
ನಮ್ಮವ್ವ ನನಗೆ ಹೊಡೀತಾಳೆ ಅನ್ನತ್ಹೇಳಿ
ಸಂಗಾತೀರೆಲ್ಲ ಹೊಂಟೇ ಬಂದರು–ತಂದನ್ನ....
ಇವಳು ಒಬ್ಬಾಳೆ ಇದಾಳಲ್ಲೋ. ತಂದನ್ನ....

ಇವಳು ಒಬ್ಬಾಳೆ ಆದಳಲ್ಲೋ ಪಂಚಮರ್‍ಥುಡುಗಿ
ಆನೇಕಟ್ಟಾರ ಉಳುತಾನೆ–ತಂದನ್ನ....
ಯಾವ ರಾಜ್ಯಾದ ದೊರಿಮಗಳೇ–ತಂದನ್ನ....
ನೀನ್ಯಾವ ಸೀಮೇಯ ದೊರೆಮಗಳೇ–ತಂದನ್ನ....
ಯಾವ ಊರಾದರೇನೊ ಯಾವ ಕೇರಿ ಆದುರೇನೊ
ಯಾರ ಮಗಳಾದುರೆ ನಿನಗೇನು?–ತಂದನ್ನ....
ಯಾರ ಮಗಳಾದುರ ನಿನಗೇನು ಅಂದುಬುಟ್ಟು
ಮೂಡಕ್ಕಿ ಕೊಳಕೆ ನೀರಗ್ಹೋದಾಳು–ತಂದನ್ನ....
ಅವಳು ನೀರಳಚಿ ನೀರ ಮಗಿವಾಗ–ತಂದನ್ನ....
ನೀರಳಚಿ ನೀರ ಮಗಿವಾಗ ಹೊಲೇರ್‍ಯೆದ
ಅವನು ಹೋಗಿ ಮುಂಗೈಯ್ಯ ಹಿಡುದಾನು.–ತಂದನ್ನ....

ಕತ್ತರಿಸಿದ ಕಳಿಯಡಕೆ ಕೊಡಲ್ಲೆಣ್ಣೆ–ತಂದನ್ನ....
ಕತ್ತಿರಿಸಿದ ಬಿಳಿಯಲಿಯ ಕೊಡಲ್ಲೆಣ್ಣೆ–ತಂದನ್ನ....
ಕತ್ತಿರಿಸಿದ ಕಳಿಯಡಕೆ ಕೊಡುವಾಕೆ ನಾನಿನ್ನ
ಅಣ್ಣನೇನೋ ತಮ್ಮನೇನೋ? –ತಂದನ್ನ....
ನಿಮ್ಮ ಅಣ್ಣ ತಮ್ಮದೇರಿಗೆ ಬಾಮ್ಮೈದಲ್ಲವಾ–ತಂದನ್ನ....
ನಿಮ್ಮಪ್ಪ ಅವ್ವರಿಗೆ ಅಳೀಮಯ್ಯಾ–ತಂದನ್ನ....
ನಿಮ್ಮಪ್ಪ ಅವ್ವರಿಗೆ ಅಳೀಮಯ್ಯಾ ಅಂತ್ಹೇಳಿ
ಅವಳ ತಲಿಯ ಕೆದರಿಬುಟ್ಟ–ತಂದನ್ನ....
ಅವಳು ಇಕ್ಕೀದ ಬಟ್ಟ ಕೆಡಿಸಿಬುಟ್ಟ–ತಂದನ್ನ....
ಅವಳ ಚೀಟಿ ಚೀಲಾನೆ ಕಿತ್ತೀಗೊಂಡ–ತಂದನ್ನ....
ಆಕೆ ಚೀಲಾನೆ ಕಿತ್ಕೊಂಡ ಹೊಲೇರೈದ
ಅವಳುಟ್ಟಿದ್ದ ರವಕೆ ಗೀಳೀಬುಟ್ಟ–ತಂದನ್ನ....
ರವಕೆ ಗೀಳಿಬುಟ್ಟು ಹೊಲೇರೈದ
ಓಡೋಡಿ ಹೋಗುತಾನೆ. –ತಂದನ್ನ....

ಅವಳು ಅಳುತಾ ಮನಿಗೆ ಬಂದಳಲ್ಲೋ–ತಂದನ್ನ....
ಅಳುತಾ ಮನೆಗೆ ಬಂದಳು ಪಂಚಮರ್ದುಡುಗಿ
ಮಂಚದ ಮ್ಯಾಲೆ ಮಕಾಡೆಯ್ಯ–ತಂದನ್ನ....
ಯಾರು ನನ ಕಂದ ಹೊಡದೋರು?–ತಂದನ್ನ....
ಯಾರೂ ಹೊಡಿಲಿಲ್ಲ ಯಾರೂವೆ ಬಯ್ಯಲಿಲ್ಲ
ನಮ್ಮ ತಾಯಿ ಮಾತ ಕೇಳಾಲಿಲ್ಲ–ತಂದನ್ನ....
ನಮ್ಮ ತಾಯಿ ಮಾತ ಕೇಳದೇನೆ ಹೋಗೊತ್ತಿಗೆ
ಕಷ್ಟ ಬರುತಲ್ಲೋ–ತಂದನ್ನ....
ಮೂಡಕ್ಕೆ ಕೊಳುಕೇ ನೀರೀಗೆ ಹೋಗುವಾಗ
ಸಂಗಾತೀರೆಲ್ಲ ಹೊರಟೇ ಬಂದಾರು–ತಂದನ್ನ....
ನಾನೂ ಒಬ್ಬಾಳೇ ಆದನಲ್ಲೋ
ನಾನೂ ಒಬ್ಬಳೆ ಆದೆ ನನ್ನ ತಾಯಿ
ಆನೆಕಟ್ಟಾರ ಉಳುತಿದ್ದ–ತಂದನ್ನ....
ಬಂದು ಮುಂಗಯ್ಯ ಹಿಡಿದಾನು–ತಂದನ್ನ....
ಕತ್ತರಿಸಿ ಕಳಿಯಡಿಕೆ ಕೊಡಲ್ಲೆಣ್ಣೆ–ತಂದನ್ನ....
ಕತ್ತರಿಸಿ ಬಿಳಿ ಎಲೆಯ ಕೊಡಲ್ಲೆಣ್ಣೆ–ತಂದನ್ನ....
ಎಲೆಯ ಕೊಡುವಾಕಿ ಅಣ್ಣನೇನೊ ತಮ್ಮನೇನೊ
ನಿನಗೇನೂ ನಾನು ಕೊಡುವ್ರೋದು?–ತಂದನ್ನ....

ನಿಮ್ಮ ಅಣ್ಣ ತಮ್ಮಂದಿರಿಗೆ ಬಾಮೈದಲ್ಲುವಾ–ತಂದನ್ನ....
ನಿಮ್ಮ ಅವ್ವ ಅಪ್ಪರಿಗೆ ಅಳೀಮಯ್ಯ–ತಂದನ್ನ....
ಅವ್ವ ಅಪ್ಪರಿಗೆ ಅಳೀಮಯ್ಯ ಅಂತ್ಹೇಳಿ
ಬಾಚೀದ ತಲೆಯ ಕೆದರಿಬಿಟ್ಟಾ –ತಂದನ್ನ....
ಇಕ್ಕೀದ ಬಟ್ಟೆ ಕೆಡಿಸೇಬುಟ್ಟಾ–ತಂದನ್ನ....
ಚೆಟಿ ಚೀಲಾವ ಕಿತ್ತುಗೊಂಡು ನನ್ನ ತಾಯಿ
ಓಡೋಡಿ ಅವನು ಓಡಿ ಬಂದ–ತಂದನ್ನ....
ಹೊಲೇರ ವಂಸಾವ ತೊಡಿಸವ್ವ–ತಂದನ್ನ....

ತಂದೆ ಇರುವ್ರೋದು ಹನ್ನೆರಡು ಗಾವುದ
ಹ್ಯಾಗೆ ನನ ಕಂದ ಕರಿಸ್ಯಾಲೊ?–ತಂದನ್ನ....
ಕಾಗೆ ಕರಿಸವ್ವ ಕಾಗುದವ ಬರಿಸವ್ವ
ಕಾಗೆ ತಲೆಮ್ಯಾಲೆ ಮಡಗವ್ವ–ತಂದನ್ನ....
ಕಾಗೆ ತಲೆಮ್ಯಾಲೆ ಮಡಗವ್ವ ನಮ್ಮ ತಾಯಿ
ತಂದೆ ಊಟಾವ ಮಾಡುತಾರೆ.–ತಂದನ್ನ....

ಅದು ಕರ್ರ ಕರ್‍ರಾನೆ ಅರಚುತಾದೆ–ತಂದನ್ನ....
ಆಗ ನಮ್ಮ ತಂದೆ ನೋಡುತಾರೆ.–ತಂದನ್ನ....
ಕಾಗೆ ಕರಿಸ್ಯಾಳು ಕಾಗದವ ಬರಿಸ್ಯಾಳು
ಕಾಗೆ ತಲೆಮ್ಯಾಲೆ ಮಡುಗ್ಯಾಳು–ತಂದನ್ನ....
ಕಾಗೆ ತಲೆಮ್ಯಾಲೆ ಮಡುಗ್ಯಾಳು ಪಂಚಮರ್‍ಧುಡುಗಿ
ತಂದೆ ಊಟಾವ ಮಾಡುತಾರೆ–ತಂದನ್ನ....

ಇದು ಕರ್‍ರಾನೆ ಅರಚುತಾದೆ–ತಂದನ್ನ....
ಕರ್ರ ಕರ್‍ರಾನೆ ಅರಚುತಲೆ ಪಂಚಮ
ಆರು ತಿಂಗಳ ಪಯಣ ಮೂರೆ ತಿಂಗ್ಳಿಗೆ ಬಂದೋನು
ಕೇಳ್ತಾನೆ ಮಗಳ ಹೇಳುತಾಳೆ–ತಂದನ್ನ....
ಹೊಲೇರ ವಂಸವ ತ್ಯೊಡಿಸಪ್ಪ–ತಂದನ್ನ....
ಹೊಲೇರೆಲ್ಲಾವ ಊಟಾಕೆ ಬರಬೇಕು–ತಂದನ್ನ....
ಅಂತ ವಾಲೆನಾದರೆ ಬರುದಾನು–ತಂದನ್ನ....
ಅವರ ತೊಟ್ಟುಲ ಸಿಸುವೆಲ್ಲ ಬರಬೇಕು–ತಂದನ್ನ....
ತೊಟ್ಟುಲ ಸಿಸುವೆಲ್ಲ ಬರಬೇಕು ಅಂತ್ಹೇಳಿ
ವಾಲೆನಾದರೂ ಬರುದಾನು. ತಂದನ್ನ....
ವಿಷದ ಕಜ್ಜಾಯ ಮಾಡಿಸ್ಯಾನು–ತಂದನ್ನ....

ಶಿಶುವೆಲ್ಲಾ ಬಂದಾರು ಹೊಲೇರು
ಊಟಕಾದಾರು ಕೂತರಲ್ಲೋ.–ತಂದನ್ನ....

ಅವರು ಊಟಕಾದರ ಇಕುತಾರೆ–ತಂದನ್ನ....
ಊಟ್ಟಾಕುತಲೇ ಎಲ್ಲಾವ ತಿಂದಾರು
ಇವನು ತಗದಿ ನಾಯೆಡೆ ಮಡಗಾನು–ತಂದನ್ನ....
ಅವರ ಹಿಂಡು ಮಂದೆಲ್ಲ ಸತ್ತೆ ಹೋದರು–ತಂದನ್ನ....
ಹೊಲೇರ ವಂಶಾವ ತೊಡಿಸಿಬುಟ್ಟೆ ನನ್ನ ಕಂದ
ಈಗ ನಿರಾಳ ಆಗುತಾವ್ವ?–ತಂದನ್ನ....
ನಿನಗೀಗ ಸಂತೋಷ ಆಗತವ?–ತಂದನ್ನ....
ಇನ್ನೂ ನೀರಾಳ ಆಗಿಲ್ಲ ನಮ್ಮ ತಂದೆ
ಇಸದ ಕುಂಟೇಲ್ಲಿ ಹರಗುಬೇಕು–ತಂದನ್ನ....
ಇಷದ ಗುಂಟೆಲ್ಲಿ ಹರಗುವಾಗ ಪಂಚಮ
ಎದ್ದಿ ವಾಟಾವಾ ಹೊಡೀತಾನೆ–ತಂದನ್ನ....
ಸತ್ಹೆಣ ಮ್ಯಾಲೆ ಎಳಿಕೊಂಡು ಮನಗಿದ್ದು
ಎದ್ದಿ ವಾಟಾವಾ ಹೊಡೀತಾನೆ–ತಂದನ್ನ....
ಅಯ್ಯೋ ಇದರಲ್ಲಿ ನಾನು ಸೋತೇನಲ್ಲೊ–ತಂದನ್ನ....

ಇದರಲ್ಲು ನಾನು ಕೆಟ್ಟನಲ್ಲಂತ್ಹೇಳಿ
ಓಡಿಸಿಕೊಂಡು ಹೋಗುತಾನೆ ತಂದನ್ನ
ಮಡಿವಾಳ ಮಾಚಯ್ಯ ಬಟ್ಹೇಹೇರ–ತಂದನ್ನ....
ಮಡಿವಾಳ ಮಾಚಯ್ಯ ಬಟ್ಟೆಯ ಒಗೆಯೂತ
ಅಲ್ಲಿಗೆ ಹುಡುಗಾದರೆ ಓಡುತಾನೆ–ತಂದನ್ನ....
ನೀನ್ಯಾರೋ ನನ್ನ ಕಂದ ಹೊಡದೋರು?–ತಂದನ್ನ....
ಹೊಲೇರ ವಂಶಾವ ತೊಡಿಸಿಬುಟ್ಟ ಪಂಚಮ
ಇಷಾದ ಕುಂಟೆಲ್ಲಿ ಹರಗೂತಾನೆ –ತಂದನ್ನ....
ಅವನು ಕರಿದಿ ಬಾನೀಯ ದಬ್ಬಾಕ್ಯಾನು–ತಂದನ್ನ....
ಕರಿದಿ ಬಾನೀಯ ದಬ್ಬಾಕ್ಯಾನು ಮಡಿವಾಳ ಮಾಚಯ್ಯ.
ಒಂದ್ಹುಡುಗ ಬತ್ತಲ್ಲೊ ಎತ್ತಾಗ್ಹೋಯ್ತೋ?–ತಂದನ್ನ....
ಎತ್ತಾಗಿ ಹೋಯ್ತೋ ಅರಸೋಗೊ ಅನ್ನೊತ್ತಿಗೆ
ಬಾನಿಯ ಎತ್ತಂತ ಹೇಳುತಾನೆ ತಂದನ್ನ
ಅವನು ನನ್ನ ಮಗ ಕಾಣೋ ಬಿಸಲಂದೂ ತಂದನ್ನ
ನನ್ನ ಮಗ ಕಾಣೊ ಬಿಸಲಂತ ದಬ್ಬಾಕಿವಿನಿ

ನೀನು ಹೋಗಯ್ಯ ಅರಸ್ತೊಗೋ–ತಂದನ್ನ....
ನಿನ್ನ ಮಗ ಆದಾರೆ ನಿನ್ನ ಕುಟ್ಟಿಕುಂಡಿಸಿಕೊಂಡುಣ್ಣಬೇಕು
ಅಲ್ಲಿದೆ ಇದ್ದಾರೆ ಬಿಡೋದಿಲ್ಲ.–ತಂದನ್ನ....

ಆಗ ಹೋದಾಳು ಮಡಿವಾಳ ಮಾಚಯ್ಯನ ಹೆಂಡತಿ
ಮಲ್ಲಿಗುದೇನಿ ಅವಳು ಹೋಗುತ್ತಾಳೆ–ತಂದನ್ನ....
ಅವಳು ಆಟ್ಟಾಕೆ ಹನ್ನೆರಡು ಕಾಲೇಣಿನಿಯ ಹಾಕುತಾಳೆ–ತಂದನ್ನ....
ಅವಳು ಸಣ್ಣಕ್ಕಿ ಸಣ್ಣಬ್ಯಾಳೆ ತಗುದಾಳೆ ತಂದನ್ನ
ಸಣ್ಣಕ್ಕಿ ಸಣಬಾಳೆ ತಗುದಾಳು ಮಲ್ಲಿಗುದೇವಿ
ಅಡುಗೆನಾದರೆ ಮಾಡುತಾಳೆ–ತಂದನ್ನ....
ಅವಳು ಅಗ್ರು ಬಾಳೆಲೆಯ ತಗುದಾಳು–ತಂದನ್ನ....
ಅಗ್ರ ಬಾಳೆಲೇಲಿ ಊಟಾವ ಬಡಿಸ್ಯಾಳು
ಮಧ್ಯೆ ಕಿರುಬೆಳ್ಳ ಗೀಚುತಾನೆ–ತಂದನ್ನ....
ಮಧ್ಯೆ ಕಿರುಬೆಳ್ಳ ಗೀಚಾನು ಮಡಿವಾಳ ಮಾಚಯ್ಯ
ಒಂದೀಗೆ ಕುಂಡ್ರಸಿಕೊಂಡು ಉಣ್ಣಾತಾನೆ ತಂದನ್ನ
ಆಚೆಗೆ ನೀನುಣ್ಣು ಈಚೆಗೆ ನಾನು ತಂದನ್ನ
ಈಚೀಗೆ ನಾನು ಉಣ್ಣಾತೀನಿ ನನ್ನ ಕಂದ
ಮಧ್ಯೆ ಕಿರುಬೆಳ್ಳ ಗೀಚುತಾನೆ–ತಂದನ್ನ....
ಅವನಾಗ ಬುಟ್ಟುಬುಟ್ಟು ಹೋಗುತಾನೆ. –ತಂದನ್ನ....

ಬಲಗೈ ಬನ್ನಂತ್ರದಲ್ಲಿ ಹನ್ನೆರಡು ತಾಳಾ ಹನ್ನೆರಡು ಮ್ಯಾಳಾವ
ಕಲಿತಿರೋನಾದರೆ ತರುಬೇಕು –ತಂದನ್ನ....
ಹನ್ನೆರಡು ತಾಳ ಹನ್ನೆರಡು ಮ್ಯಾಳಾವಾ ತರದೇ ಇದ್ದಾರೆ
ನಿನ್ನ ಕಲ್ಲುಗಾಣಕ್ಹಾಕಿ ಅರಸೇವ್ರು–ತಂದನ್ನ....
ಕಲ್ಲುಗಾಣಕ್ಹಾಕಿ ಅರಸೀವಂತ್ಹೇಳಿ
ಪಂಚಮನಿಗೆ ಮಾರಾಜ್ರು ವಾಲೆ ಬರದವರೇ ತಂದನ್ನ
ಹೊಲೇರ ವಂಶಾವ ತೊಡಿಸಿಬಿಟ್ಟು ನಾನೀನ್ನು
ನಾನು ಎಲ್ಲಿಂದ ತರಲೀಗ?–ತಂದನ್ನ....
ಅವನು ಮಂಚಾದ ಮ್ಯಾಲೆ ಮಕಾಡೆಯ್ಯ. ತಂದನ್ನ....

ಮಡಿವಾಳ ಮಾಚಯ್ಯನ ಮಗಳೂವೆ ಪಂಚಮರ ಹುಡುಗೀವೆ
ಸಂಗಾತಿರಿಬ್ಬರೂ ನೀರಿಗೋದರು–ತಂದನ್ನ....
ಯಾಕಕ್ಕಾ ನೀನು ಅಳುತಿದ್ದೀ?–ತಂದನ್ನ....
ಹೊಲೇರೊಂಸಾವ ತೊಡಸಿಬುಟ್ಟು ನಾನಿನ್ನು

ಮಾರಾಜ್ರು ವಾಲೆ ಕಳುಸವರೆ–ತಂದನ್ನ....
ಅವರು ಹನ್ನೆರಡು ತಾಳವ ಹನ್ನೆರಡು ಮ್ಯಾಳಾ
ನರನರನೆ ಕಡ್ಡಿ ಮುರಕಂಡು–ತಂದನ್ನ....
ನರನರನೆ ಕಡ್ಡಿ ಮುರಕಂಡ್ಹೊಲೇರೈದ
ಹನ್ನೆರಡು ತಾಳವ ಹನ್ನೆರಡು ಮ್ಯಾಳಾ–ತಂದನ್ನ....
ನಿಮ್ಮಪ್ಪನಿಗಾದಾರೆ ಹೇಳುಹೋಗೊ–ತಂದನ್ನ....

ಪಂಚಮರ್ಹುಡುಗಿ ಅವಳು ಹೋಗಿ ಹೇಳುತಲೆ–ತಂದನ್ನ....
ಪಂಚಮರ್ಹುಡುಗಿ ಅವಳು ಹೋಗಿ ಹೇಳುತಲೆ
ಜೋಳೀಗೆ ಹಣವ ತರುತಾನೆ–ತಂದನ್ನ....
ಜೋಳೀಗೊನ್ನುವ ತುಂಬಿಕೊಂಡು ಪಂಚಮ
ಮಡಿವಾಳ ಮಾಚಯ್ಯನತಕ್ಕೆ ಬರುತಾನೆ–ತಂದನ್ನ....
ಅವನುದ್ದ ಹಣವ ಸುರಿಸೇನು–ತಂದನ್ನ....
ಅವನುದ್ದ ಹಣವ ಸುರಿಸಿ ಮಡಿವಾಳ ಮಾಚಯ್ಯ
ನಿನ್ನ ಮಗನ ನೀನು ಕಳುಸಾಬೇಕು–ತಂದನ್ನ....
ಅವನುದ್ದ ಹಣವ ಸುರಿದರೂ ನಾನಿನ್ನು
ನಾನು ನನ್ನ ಮಗನ ಕಳಿಸೋದಿಲ್ಲ–ತಂದನ್ನ....
ಹೆದರಿಕೋಬ್ಯಾಡ ನೀನು ಹಣವಾನೆ ಈಸುಗಪ್ಪ
ನಾನು ಹೋಗಿದ್ದಿಬರತೀನಿ–ತಂದನ್ನ....
ನಾನು ಹೋಗಿದ್ದಿಬರತೀನಿ ನನ್ನ ತಂದೆ
ಹಣವನಾದಾರೆ ಈಸುಗಪ್ಪ–ತಂದನ್ನ....
ಅವರು ಮಾರಾಜ್ರು ಹತ್ತರಕೆ ಹೋಗುತಾರೆ. ತಂದನ್ನ....

ಮಾರಾಜ್ರ ಮುಂದೆ ನಿಂತುಕಂಡು ಹೋಲೇರ್ಹುಡುಗ
ಹನ್ನೆರಡು ತಾಳಾವ ಹನ್ನೆರಡು ಮ್ಯಾಳಾ–ತಂದನ್ನ....
ಹನ್ನೆರಡು ತಾಳಾವ ಹನ್ನೆರಡು ಮ್ಯಾಳಾ ಮಾಡೋತ್ತಿಗೆ
ನೀನೇನು ಬೇಡ್ಕಂಡಿ ಬೇಡಿಕಪ್ಪಾ?–ತಂದನ್ನ....
ನಾನು ಬೇಡಿಕೊತ್ತೆಲ್ಲ ನಿಮ್ಮ ಪಾದದಲ್ಲಿರಲಿ ಸ್ವಾಮಿ
ಆಚಾರಿ ಮನೆ ಹೆಣ್ಣ ತಂದಿ–ತಂದನ್ನ....
ಆಚಾರಿ ಮನೆ ಹೆಣ್ಣ ತಂದಿ ನಮ್ಮ ತಂದೆ
ನಾನು ಲಗ್ಗುನವ ಆಗಬೇಕು. ತಂದನ್ನ....
ಅವರಾಗ ಮಾರಾಜ್ರು ಹೇಳುತಾರೆ–ತಂದನ್ನ....
ನೀನು ನಿನ್ನ ಮಗಳ ಕೊಟ್ಟಿನ್ನು ಪಂಚಮ

ಲಗುನನಾದಾರೆ ಮಾಡಬೇಕು–ತಂದನ್ನ....
ಅವರಾಗ ಮದುವೆಯ್ಯ ಮಾಡುತಾರೆ.–ತಂದನ್ನ....

ಮದುವೆ ಮಾಡುತಲೆ ಮನೀಗೆ ಬತ್ತಾಲೆ
ವಿಷದ ಕಜ್ಜಾಯ ಮಾಡುತಾರೆ–ತಂದನ್ನ....
ನಿನ್ನ ಗಂಡನಿಗೆ ಇಕ್ಕಂತ ಕೊಡುತಾರೆ–ತಂದನ್ನ....
ಗಂಡನಿಗಿಕ್ಕಂತ ಕೊಡುತ್ಲೆ ಪಂಚಮರ್ಲುಡುಗಿ
ಅವಳಣ್ಣದೀರಿಗೆ ಅವಳೇ ಇಕ್ಕುತಾಳೆ–ತಂದನ್ನ....
ಅವರ ಪಂಚಮರ ವಂಶಲ್ಲ ಅಡಗೇ ಹೋಯ್ತು. ತಂದನ್ನ....

◆◆◆◆

ಹಾಡಿದವರು :
**ಹೊನ್ನಮ್ಮ ಕೋಂ ಚನ್ನಯ್ಯ**
50 ವರ್ಷ, ಹರಿಜನ
**ಚಿಕ್ಕಾಡೆ, ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ**
ಸಂಗ್ರಹ : 1–6–1986

# ೧೧. ಹಾರುವಯ್ಯ ಮಾದಗಿತ್ತಿ ಹಾಡು

ಈ ಕಥನ ಕಾವ್ಯದ ಬಗೆಗೆ ಎಚ್. ಎಲ್. ನಾಗೇಗೌಡರು ಹೀಗೆ ಒಕ್ಕಣಿಸಿದ್ದಾರೆ : ಸುಮಾರು ಮೂರು ವರ್ಷಗಳ ಹಿಂದೆ (1982) ದೊಡ್ಡಬಳ್ಳಾಪುರ ತಾಲ್ಲೂಕು ಕನಸವಾಡಿಯ ಶನಿದೇವರ ಸನ್ನಿಧಿಯಲ್ಲಿ ನಡೆದ ಜನಪದ ಕಲಾಮಹೋತ್ಸವದಲ್ಲಿ ಮೊದಲಿಗೆ ಈ ಹಾಡು ನನ್ನ ಕಿವಿಗೆ ಬಿತ್ತು. 80 ವರ್ಷದ ಹರಿಜನ ಹೆಂಗಸು ಈ ಹಾಡು ಹಾಡಿದಳು. ಅಂದಿನಿಂದ ನಾನು ಕರ್ನಾಟಕದಲ್ಲಿ ಹೋದೆಡೆಗಳಲ್ಲೆಲ್ಲಾ 'ನಿಮಗೆ ಈ ಹಾಡು ಬರುತ್ತದೆಯೆ?' ಎಂದು ಕೇಳಿ, ಬಂದರೆ ಹಾಡಿಸಿ ಧ್ವನಿಮುದ್ರಿಸಿಕೊಳ್ಳುತ್ತಾ ಬಂದಿದ್ದೇನೆ. ಈಗ ನಮ್ಮ ಟ್ರಸ್ಟಿನಲ್ಲಿ ಎಂಟು ತಂಡಗಳು ಹಾಡಿದ ಹಾಡುಗಳಿವೆ.

ಮೇಲುಕುಲದ ಹಾರುವನೊಬ್ಬ ಕೆಳಕುಲದ ಅದರಲ್ಲಿಯೂ ಅಸ್ಪೃಶ್ಯ ವರ್ಗಕ್ಕೆ ಸೇರಿದ, ಮಾದಿಗರ ಹೆಣ್ಣನ್ನು ಮೋಹಿಸಿದ ಹಾಡು ಇದು. ಹತ್ತು-ಹದಿನೈದು ನಿಮಿಷಗಳ ಈ ಹಾಡು ದೊಡ್ಡಬಳ್ಳಾಪುರ, ನೆಲಮಂಗಲ, ಬೆಂಗಳೂರು ಉತ್ತರ ತಾಲ್ಲೂಕುಗಳಲ್ಲಿ, ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕು ಬಾಚಗೊಂಡನಹಳ್ಳಿಯಲ್ಲಿ, ಚಿತ್ರದುರ್ಗದಲ್ಲಿ ಮತ್ತು ಬಿಜಾಪುರ ಜಿಲ್ಲೆ ಮುದ್ದೇಬಿಹಾಳ್ ತಾಲ್ಲೂಕು ಮೂಕಿಹಾಳದಲ್ಲಿ ಕೇಳಿಬಂತು. ಹಾಡಿದವರೆಲ್ಲ ಹೆಚ್ಚಾಗಿ ಮಾದಿಗರು ಅಥವಾ ಆದಿಕರ್ನಾಟಕರು.

ಮಾದಗಿತ್ತಿಯನ್ನು ಮೋಹಿಸಿದ ಹಾರುವಯ್ಯ ಅವಳನ್ನು ಮದುವೆಯಾದನೋ ಇಲ್ಲವೋ ಗೊತ್ತಿಲ್ಲ. ಮೂಲ ಹಾಡಿನಲ್ಲಿ ಇದಕ್ಕೆ ತಕ್ಕ ಉತ್ತರ ಸಿಕ್ಕುವುದಿಲ್ಲ. ಅದು ಹೇಗಾದರೂ ಇರಲಿ. ಬ್ರಾಹ್ಮಣನೊಬ್ಬ ಮಾದಗಿತ್ತಿಯನ್ನು ಮೋಹಿಸಿದ ಪ್ರಸಂಗ ಅಪರೂಪ. ಗುಟ್ಟಾಗಿ ಎಷ್ಟೋ ನಡೆದಿರಬಹುದು. ಆದರೆ ಇಲ್ಲಿ ಬಹಿರಂಗವಾಗಿ ನಡೆದುದು ಹಾಡಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಹಾಡುವ ಹೆಂಗಸರು ಕೊಂಚ ಅಂಜಿಕೆಯಿಂದಲೇ ಈ ಹಾಡು ಹಾಡುತ್ತಾರೆ. ಏಕೆಂದರೆ ಅವರ ಪ್ರಕಾರ ಇದು ಅವರ ಮೇಲೆಯೇ ಬರುತ್ತದೆ. ಮಾದಿಗರ ಮನೆಗಾಗಲೀ ಕೇರಿಗಾಗಲೀ ಬೇರೆ ಜಾತಿ ಜನ ಬರುವುದು ಕ್ಷೇಮವಲ್ಲ. ಹೀಗಿರುವಾಗ ಅವರ ಹೆಣ್ಣನ್ನೇ ಬ್ರಾಹ್ಮಣನೊಬ್ಬ ಮೋಹಿಸಿದಾಗ ಇಬ್ಬರಿಗೂ ಸಮಾಜದಲ್ಲಿ ಆಗುವ ಅಪಾಯ ಅಷ್ಟಿಷ್ಟಲ್ಲ. ಅನುಲೋಮ ಮತ್ತು ಪ್ರತಿಲೋಮಗಳೆಂಬ ಮದುವೆಗಳು ಹಿಂದೆ ಇದ್ದವಂತೆ. ಮೇಲ್ಕುಲದವನು ಕೆಳಕುಲದ ಹೆಣ್ಣನ್ನು ಮದುವೆಯಾದರೆ ಅನುಲೋಮ, ಕೆಳಕುಲದವನು ಮೇಲ್ಕುಲದ ಹೆಣ್ಣನ್ನು ಮದುವೆಯಾದರೆ ಪ್ರತಿಲೋಮ. ಅನುಲೋಮಕ್ಕೆ ಸಮಾಜದ ಒಪ್ಪಿಗೆ ಇತ್ತು. ಪ್ರತಿಲೋಮಕ್ಕೆ ವಿರೋಧ ಇತ್ತು. ಇಲ್ಲಿ ನಡೆದುದು ಅನುಲೋಮ. ಇದಕ್ಕೆ ಆಗ ಸಮಾಜದ ಒಪ್ಪಿಗೆ ಸಿಕ್ಕಿದ್ದರೂ ಸಿಕ್ಕಿರಬಹುದು. ಈಚೀಗೆ ಅಂತಹ ಸಂಬಂಧಕ್ಕೂ ನಿಷೇಧ ಬಂದುಬಿಟ್ಟಿತು. ಈ ಕಾರಣದಿಂದ ಈ ಹಾಡು ಹಾಡುವುದು ಕಡಿಮೆ. ಒತ್ತಾಯ ಮಾಡಿದಾಗ ಮಾತ್ರ ಹಾಡುತ್ತಾರೆ. ಯಾವಾಗ ಒಂದು ಹಾಡು ಸಾರ್ವತ್ರಿಕವಾದ ಮನ್ನಣೆ ಪಡೆಯುವುದಿಲ್ಲವೋ ಆಗ ಅದನ್ನು ಹಾಡದೇ ಹೋಗುವುದೂ ಹಾಡದೇ ಹೋದಾಗ ಮರೆಯುವುದೂ ಹಾಡಿದರೂ ನೆನಪಿದ್ದಷ್ಟು ಮಾತ್ರ ಹಾಡಿಬಿಡುವುದು ನಾವು ಜನಪದ ಗಾಯಕರಲ್ಲಿ ಕಾಣುವ ರೀತಿ.

ನಾಲ್ಕೈದು ಜನರ ಬಾಯಲ್ಲಿ ಕೇಳಿಬಂದ ಮಾದಗಿತ್ತಿಯ ಜೊತೆ ಹಾರುವಯ್ಯ ಹೋಗುವುದು, ಅಲ್ಲಿ ಅವನಿಗೆ ಮಾದಿಗರ ಕಸಬನ್ನು ಮಾಡುವಂತೆ ಹೇಳುವುದರವರೆಗೆ ಬರುವ ಹಾಡುಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಇಲ್ಲಿ ಕೊಡಲಾಗಿದೆ :

ಅಚ್ಚ ಮಾದಿಗರ ಹೆಣ್ಣು ನಿಚ್ಚಳದ ನಿಜಗೊಂಬೆ
ನಿಚ್ಚಳದ ನಿಜಗೊಂಬೆ ನೀರಿಗೊರಟಾಳು.
ಚಿನ್ನದ ಸಿವಡಿಕ್ಕಿ ರನ್ನದ ಕೊಡನೊತ್ತು
ಮುತ್ತಿನಷ್ಟೆ ಬೊಟ್ಟಿಕ್ಕಿ ನೀರಿಗೊರಟಾಳು.

ನೀರಿಗ್ಹೋಗೋ ಹಾದಿವಳಗೆ ಅಲ್ಲೊಬ್ಬ ಹಾರವಯ್ಯ
ಅಲ್ಲೊಬ್ಬ ಹಾರುವಯ್ಯ ಜಪಮಾಡುತ್ತಿದ್ದ
ಜಪವ ಮಾಡೋದು ಬಿಟ್ಟು ಕಣ್ಣೆತ್ತಿ ನೋಡುತಾನೆ
ಅತ್ತ ಬುಡದೆ ಇತ್ತ ಬುಡದೆ ಅಡ್ಡಾಕಿಕೊಂಡ.
ಹರಿವಿನ್ನ ತೊಳಿಲೀಸ ನೀರನ್ನ ಮಗಿಲೀಸ
ನೀರನ್ನು ಮಗಿಲೀಸ ದಾರೀಗೆ ಬರಲೀಸ.

**ಮಾದಗಿತ್ತಿ** :
ಬ್ಯಾಡ ಬ್ಯಾಡಾರುವಯ್ಯ ಬ್ಯಾಡ ನನ್ನ ಗುರುವೆ
ಇದುವೇನು ಹಾರುವಯ್ಯ ಈ ಕರುಮ ಈಗ
ಮಾದಗಿತ್ತಿ ನಾನು ಹಾರುವಯ್ಯ ನೀನು
ಮಾದಗಿತ್ತಿ ಸಂಗಾವು ನಿನಗೆ ಬ್ಯಾಡಾರುವಾ
ಬ್ಯಾಡಕಾಣಾರುವಾ ಬೇಡಿಕೊಂಬೆನು ನಿನ್ನ
ಮಾದಗಿತ್ತಿ ಅಂಬೋದ ಅರಿಯೇನೊ ಹಾರುವಾ?

**ಹಾರುವಯ್ಯ** :
ಮಾತು ಮಾತಿಗೆ ನೀನು ಮಾದಗಿತ್ತಿ ಅನ್ನಲುಬೇಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ಮಾದಗಿತ್ತೆನ್ನಲುಬೇಡ ಮದನಗೋಪಾಲದೆಣ್ಣು
ಸುರುಜ ಚಂದುರರಿಗಿಂತ ನೀನು ಹೆಚ್ಚು ಕಾಣೆ
ಮಾದಗಿತ್ತಿ ನೀನಲ್ಲ ಮಾಯ್ಕಾರಿ ಹೆಣ್ಣು
ಮಾದಗಿತ್ತಿ ಆದಾರೆ ಮತ್ತೆ ಒಳ್ಳೇದಾಯ್ತು
ಮಾದಗಿತ್ತಿ ಸಂಗಾವು ಮಧ್ಯಾಹ್ನ ಸಾಕು
ಮಾದಗಿತ್ತೆನ್ನಲುಬ್ಯಾಡ ಮದನಗೋಪಾಲದೆಣ್ಣೆ
ನಿನ್ನೆಡಪಾದದಡಿಯೆ ಎನ್ನ ಸಿರಸ ಕಡಿವೇ.

ಹಾರುವಯ್ಯ ಮಾದಗಿತ್ತಿ ಹಾಡು

**ಮಾದಗಿತ್ತಿ** :

ನನ್ನಿಂದೆ ನೀ ಬಂದರೆ ಹೆಂಡ ಕುಡಿಯಲು ಬೇಕು
ಹೆಂಡ ಕುಡಿಯಲುಬೇಕು ಕಂಡ ಕಚ್ಚಲುಬೇಕು
ಬ್ಯಾಡಯ್ಯ ಹಾರುವಯ್ಯ ಮಾದಗಿತ್ತಿ ಸಂಗಾವು.

**ಹಾರುವಯ್ಯ** :

ಮಾತು ಮಾತಿಗೆ ನೀನು ಮಾದಗಿತ್ತೆನ್ನಲು ಬ್ಯಾಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ನೀ ಕುಡಿಯೋ ಹೆಂಡ ನಾನು ಕುಡಿದೇನು
ನೀ ಕಚ್ಚೋ ಕಂಡ ನಾನು ಕಚ್ಚೇನು
ಮಾದಗಿತ್ತೆನ್ನಲು ಬ್ಯಾಡ ಮದನಗೋಪಾಲದೆಣ್ಣೆ
ನಿನ್ನ ಪಾದದ ಮೇಲೆ ಬಿದ್ದು ಪ್ರಾಣ ಬಿಟ್ಟೇನು.

(ಹೀಗೆಂದು ಹೇಳಿ ಹಾರುವಯ್ಯ ಆಕೆಯ ಸೆರಗು ಹಿಡಿಯುತ್ತಾನೆ.)

**ಮಾದಗಿತ್ತಿ** :

ಬ್ಯಾಡ ಬ್ಯಾಡ ಹಾರುವಯ್ಯ ಬೇಡಿಕೊಂಬೆನು ನಿನ್ನ
ನಮ್ಮಣ್ಣೋರು ಕಂಡಾರೆ ಏನ ಮಾಡಿಸ್ಯಾರು?
ನಮ್ಮಪ್ಪೋರು ಕಂಡಾರೆ ಹೇಗೆ ಬಿಟ್ಟಾರು?
ಕುಲವಲ್ಲದ ಕುಲವ ಜಾತಿ ಕೆಡಿಸ್ಯಾರು
ಜಾತಿನ್ನ ಕೆಡಿಸ್ಯಾರು ರೀತಿ ಕೆಡಿಸ್ಯಾರು.

**ಹಾರುವಯ್ಯ** :

ನಾ ಜಾತಿ ಕೆಟ್ಟರೂ ಸರಿಯೆ ರೀತಿಗೆಟ್ಟರೂ ಸರಿಯೆ
ನಿನ್ನಿಂದ ನಾನು ಬರುವುದೇ ಸರಿಯೇ
ಹಿಡಿದಿರುವ ಸೆರಗ ನಾ ಬಿಡಲಾರೆ ಇನ್ನು
ತಲೆ ನೋಡೆ ನಿನ್ನ ತಲೆ ಬುಗರಿಯ ಚಂಡು
ಕಣ್ಣು ನೋಡೆ ನಿನ್ನ ಕಣ್ಣು ಕಾಡಿಗೆ ಭರಣಿ
ಮೂಗು ನೋಡೆ ನಿನ್ನ ಮೂಗು ಸಂಪಿಗೆ ಎಸಳು
ಬಾಯಿ ನೋಡೆ ನಿನ್ನ ಬಾಯಿ ಬಚ್ಚರಣೆ ಭರಣಿ
ಹಲ್ಲು ನೋಡೆ ನಿನ್ನ ಹಲ್ಲು ದಾಳಿಂಬೆ ಬೀಜ
ತುಟಿ ನೋಡಿ ನಿನ್ನ ತುಟಿ ತೊಂಡೆಯ ಹಣ್ಣು
ತೋಳು ನೋಡೆ ತೋಳು ಬಾಳೆಯ ದಿಂಡು
ತೊಡೆ ನೋಡೆ ನಿನ್ನ ತೊಡೆ ಕದಳೀಯ ಕಂಬ
ಬೆನ್ನು ನೋಡೆ ನಿನ್ನ ಬೆನ್ನು ಬೆತ್ತದ ಹಲಿಗೆ

ಸೊಂಟ ನೋಡೆ ನಿನ್ನ ಸೊಂಟ ನಾಗಾರಾವಿನ ಸೊಂಟ
ಸುರಜ ಚಂದುರರಗಿಂತ ಹೆಚ್ಚು ಕಾಣೆ ನೀನು
ಬಿಳಿಯಾಲೆ ಕಳಿಯಡಕೆ ಮೆಲುಬಾರೆ ಹೆಣ್ಣೇ
ತೊಡೆ ಮ್ಯಾಲೆ ತೊಡೆಹಾಕಿ ಮಾತಾಡು ಬಾರೆ.

ಮಾದಗಿತ್ತಿ ಮುಂದುಗಡೆ ಹಾರುವಯ್ಯ ಹಿಂದುಗಡೆ
ಅವರು ಹಿಂದು ಮುಂದುಗಡೆ ಹೋಗುತಾರೆ ಆಗ.

**ಅವಳ ತಾಯಿ** :
ಏನಪ್ಪ ಎಲೆ ಮಗನೆ ಏನಪ್ಪ ಇದು ಕರುಮ?
ಮಾದಗಿತ್ತಿ ಅಂಬೋದ ಅರಿಯೇನೊ ಮಗನೆ?
ಇದುವೇನೊ ಎಲೆ ಮಗನೆ ಈ ಕರುಮ ಈಗ?

**ಹಾರುವಯ್ಯ** :
ಮಾತುಮಾತಿಗೆ ನೀನು ಮಾದಗಿತ್ತೆನ್ನಲು ಬ್ಯಾಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ಸುರಜ ಚಂದುರರಿಗಿಂತ ಹೆಚ್ಚು ಕಾಣೀ ಇವಳು.

**ಅವಳ ತಾಯಿ** :
ಬಾಡೀನ ಮಡಿಕ್ಯಾಗೆ ನೀರಾನೆ ಕಾಸೀವಿ
ಜನಿವಾರ ತಗುದಾಕಿ ತಾನ ಮಾಡುಬಾರೊ.
ಅತ್ತಿ ಆಲದ ಮರದಡಿ ಎತ್ತು ಕರ ಸತ್ತಾವೆ
ಕತ್ತಿ ಚೂರಿ ತಕ್ಕೊಂಡು ಕುಯ್ಬಾರೊ ಹಾರುವ
ರಕ್ತ ಕುಸುವಿದ ಗಡಿಗ್ಯಾಗೆ ನೀರಾವ ಕಾಸೀವಿ
ಜನಿವಾರ ಬಿಚ್ಚಿಟ್ಟು ಜಪಮಾಡು ಬಾರೊ.

ಎಣ್ಣೆ ಹಚ್ಚಿ ಮಾಡೀವಿ ಹನ್ನೊಂದು ಬಾರುಕೋಲಾ?
ಅಣ್ಣಾನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ.
ತುಪ್ಪ ಹಚ್ಚಿ ಮಾಡೀವಿ ಇಪ್ಪತ್ತು ಬಾರಕೋಲ
ಅಪ್ಪನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ
ಹಣ್ಣಿನಂತ ಹಾರುವಯ್ಯ, ಕುಲಗೆಟ್ಟ ನನ್ನಾರುವಯ್ಯ
ಅಣ್ಣನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ

ಹಾರುವಯ್ಯ ಆಮೇಲೆ ಏನು ಮಾಡಿದ? ಮಾದಿಗರ ಜಾತಿಯ ಕಸಬನ್ನು ಮಾಡಿದನೆ? ಆಕೆಯನ್ನು ಕೂಡಿದನೆ? ಮದುವೆಯಾದನೇ? ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಕ್ಕುವುದಿಲ್ಲ. ಮುದ್ದೇಬಿಹಾಳ್ ತಾಲ್ಲೂಕು ಮೂಕಿಹಾಳದ ಭಜನಾ ಮಂಡಲಿಯವರು ಭಜನೆ ಮಟ್ಟಿನಲ್ಲಿ ಹೀಗೆ ಹಾಡುತ್ತಾರೆ :

ಏನ್ ಸೋತಿನಪ್ಪ ಮಾದ್ರಾಕಿಗೆ
ನಾ ಎಂತ ಮನಸು ಕೊಟ್ಟಿನಪ್ಪ ಮಾನ್ಗೇಡಿಗೆ ॥ ಪ ॥

ಬಾಡ್ಬೇಸಿದ ಮಡಿಕ್ಯಾಗೆ ನೀರನ್ನು ಕಾಸ್ಯಾಳ
ಕೂಡಿ ಜಳ್ಕ ಮಾಡಾವಂದ್ರೆ ಕುಲದಲ್ಲಿ ಮಾದ್ರಾಕಿ ॥ 1 ॥

ಹೆಂಡದ ಗಡಿಗ್ಯಾಗ ದುಂಡಗಡ್ಬ ಮ್ಯಾಡ್ಯಾಳ
ಕೂಡಿ ಊಟ ಮಾಡಾಣಾಂದ್ರೆ ಕುಲದಲ್ಲಿ ಮಾದ್ರಾಕಿ ॥ 2 ॥

ಎಲವಿನಂದರ ತೊಗಲಿನ ಚಪ್ಪರ ಬಿಗುದು
ಕೂಡಿ ಮಲಿಕೊಳನಾಂದ್ರೆ ಕುಲದಲ್ಲಿ ಮಾದ್ರಾಕಿ ॥ 3 ॥

ಸಣ್ಣಹಳ್ಳಿ ಬೂದಿಬಸ್ವ ರಾಮಾಪುರದ ಚಿಕ್ಕ
ತನ್ನೊಳು ತಾ ತಿಳದು ಕವಿಮಾಡಿ ನಕ್ಕ ॥ 4 ॥

ಈ ಹೊಯ್ದಾಟದಲ್ಲಿಯೇ ಇದ್ದಿರಲಾರ. ಅಂಥ ಮನಮೋಹಿಸುನ ಹೆಣ್ಣನ್ನು ಬಿಡಲಾರದೆ ಹೋಗಿರಬೇಕು . ಅತ್ತ ಮಾದಿಗರ ಬಾಳಿಗೆ ಹೊಂದಿಕೊಂಡು ಹೋಗಲೂ ಅಸಾಧ್ಯವಾಗಿರಬೇಕು. ನಂಟು ಗಂಟು ಎರಡನ್ನೂ ಉಳಿಸಿಕೊಳ್ಳುವ ಆಲೋಚನೆ ಮಾಡಿ ಮಾದಿಗರವಳೊಡನೆ ತನ್ನ ಮನೆಗೆ ಬಂದವನು–

ಅಮ್ಮಮ್ಮ ನನ್ನೆತ್ತ ತಾಯೆ ಸೊಸೆಯ ತಂದಿವಿನಿ
ಸೊಸೆಯ ತಂದಿವಿನಿ ನೀರುಕೊಡು ತಾಯಿ

ಎನ್ನುತ್ತಾನೆ. ತಾಯಿ ಕೊಟ್ಟ ನೀರು ಈಸಿಕೊಂಡು ಇಬ್ಬರೂ ಕೈಕಾಲು ಮುಖ ತೊಳೆದುಕೊಂಡರು. ಸೊಸೆಯ ಅಂದ ಚೆಂದವನ್ನು ತಾಯಿ ತಂದೆ ಮೆಚ್ಚಿಕೊಂಡರು. ಮದುವೆ ಮಾಡಿದರು.

ಹಾರುವಯ್ನ ತಾಯಿ ತಂದೆ ಕುಂತು ನಿಂತು ಮಾತಾಡಿ
ನಿನ್ನಣೆಯಲಿ ಬರೆದ ಬರಣೀಕೆ
ನಾನು ಬರೆದಿದ್ದಲ್ಲ ನೀನು ಬರದಿದ್ದಲ್ಲ.

ಇದು ಮಂಡೆಮ್ಯಾಲೆ ಬರದ ಬರಣೀಕ
ಆಕಾಶದಷ್ಟೆ ಹಸೆ ಬರೆದು ಭೂಮಿಯಷ್ಟೆ ಚಪ್ಪರಾಕಿ
ಹಾರುವಯ್ಯಗು ಮಾದಗಿತ್ತಿಗೂ ಮದುವೆಯ ಮಾಡ್ಯಾರೆ.

ಆಕೆ ಮಾದಗಿತ್ತಿ ಎಂದು ತಿಳಿದೂ ಮದುವೆ ಮಾಡಿದರೆ? ಇರಲಾರದು. ಹಾರುವಯ್ಯ ಸುಳ್ಳು ಹೇಳಿರಬೇಕು. ಆಕೆಯ ರೂಪಿಗೆ ಮಾರುಹೋಗಿ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದು ನಮ್ಮ ನಾಣ್ಣುಡಿಯೇ ಇರುವಾಗ ಒಂದೇ ಒಂದು ಸುಳ್ಳು ಹೇಳಿದರೆ ಏನಾಯಿತು?

ಇನ್ನೊಬ್ಬರು ಹಾಡುವ ಹಾಡಿನ ಪ್ರಕಾರ ಹಾರುವಯ್ಯ 'ನಿಮ್ಮ ಕಷ್ಟದ ಕೆಲಸ ನಾ ಮಾಡಲಾರೆ. ಮಾದಗಿತ್ತಿ ಸಂಗ ಬಲು ಬಂಗ' ಎಂದು ಹೇಳಿ ಹೊರಟುಹೋಗುತ್ತಾನೆ. ಹೀಗಿದ್ದರೂ ಇರಬಹುದು. ಕಾಮದ ಕಾವು ಇಳಿದ ಮೇಲೆ ರಂಭೆ ತಾನೆ ಏಕೆ ಬೇಕು!

ಸೊಂಡೇಕೊಪ್ಪದ ಒಬ್ಬ ಒಕ್ಕಲಿಗ ತಮಾಷೆಗಾರ ಒಂದು ಚುಟುಕು ಹಾಡುತ್ತಾನೆ :

ಕುತ್ತನೂರು ಕುರುವೇಕೆರೆ ಮತ್ತೆ ಬಂದ ಶ್ಯಾನುಬಾಗಾ
ಇಂತ ಕುತ್ತನೂರು ಊರು ಮುಂದೆ ಸಿಕ್ಕಿದೇನೊ ಹಾರುವಾ
ಏನು ಕೆಟ್ಟು ಮಾದಗಿತ್ತಿಯ ಕೂಡಿದೋ
ಅಯ್ಯಯ್ಯೊ ಶಿವನೆ ನಾನ್ಯಾತರವಳೆಂಬುತಿದ್ದೆನೋ!

◆◆◆◆

ಹಾಡಿದವರು :

ಅ. **ಪುಣ್ಯಮ್ಮ,** 80 ವರ್ಷ
ಹೊನವಾರ, ದೊಡ್ಡಬಳ್ಳಾಪುರ ತಾಲ್ಲೂಕು

ಆ. **ಚಾಮುಂಡಮ್ಮ,** 80 ವರ್ಷ
ಸುರಧೇನಪುರ, ಬೆಂಗಳೂರು ಉತ್ತರ ತಾಲ್ಲೂಕು.

ಇ. **ದುರುಗಮ್ಮ,** 50 ವರ್ಷ
ಕನಸವಾಡಿ, ದೊಡ್ಡಬಳ್ಳಾಪುರ ತಾಲ್ಲೂಕು.

ಈ. **ಪೂಜಮ್ಮ,** 80 ವರ್ಷ
ಚೆನ್ನಾದೇವಿ ಅಗ್ರಹಾರ, ದೊಡ್ಡಬಳ್ಳಾಪುರ ತಾಲ್ಲೂಕು.

ಉ. **ಲಕ್ಕವ್ವ,** 60 ವರ್ಷ
ಚಾಚಗೊಂಡನಹಳ್ಳಿ

ಊ. **ಬೋವಿ ದಾನಜ್ಜಿ,** 60 ವರ್ಷ
ಚಿತ್ರದುರ್ಗ ಬೋವಿ ಕಾಲೋನಿ.

ಋ. **ಮರಿಲಿಂಗಪ್ಪ ತಳವಾರ, ನಿಂಗಪ್ಪ,** ಹರಿಜನ
ಮೂಕಿಹಾಳ, ಮುದ್ದೆಬಿಹಾಳ ತಾಲ್ಲೂಕು.

ೠ. **ನಿಂಗಪ್ಪ**
ಸೊಂಡೆಕೊಪ್ಪ, ನೆಲಮಂಗಲ ತಾಲ್ಲೂಕು.

## ೧೨. ಅಣ್ಣ ತಂಗಿಯರ ಹಾಡು

ದ್ರೋಹಿ ಜಾತಿಯನು ಮ್ಯಾಲೊಂದು ಮನುಸರಣ್ಣಾ
ನಮ್ಮಣ್ಣಯ್ಯ ಕೇಳು.

ಅಕ್ಕ ತಂಗ್ಯವರು ನಾವಾರು ಮಂದೀ
ನಿನ್ನ ಕೂಡ ನಾವ್ಯೇಳೇ ಮಂದೀ
ಆರು ಮಂದೀ ನೀ ಹಿಂದು ಹುಟ್ಟಿದಲ್ಲೋ
ಉರಿಯದಲ್ಲಿ ಹುಟ್ಟಿದಂಥ ಮಗುನೋ.

ಮನಿಯ ಒಳುಗೇ ಮಡುಗುವರು ನಿನ್ನ
ಕಣ್ಣುಕಟ್ಟಿ ನಿನ್ನ ಕಾಡೀಗೆ ಬಿಟ್ಟರು.

ಅತ್ತೇ ಚಿತ್ತೇಯ ಮಳೆಗಾಳಿ ಹುಯಿದು
ಮತ್ತೆ ರಾಸೀಯ ತೆನೆಗಾಳ ತುಂಬೀ

ಕುಕ್ಕಳಿಸಿ ಕೋಡಿಗಳೆ ಹರುದವಣ್ಣಾ
ನಮ್ಮಣ್ಣಯ್ಯ ಕೇಳು.

ಕುಕ್ಕಳಿಸೀ ಕೋಡೀಯರು ತಾವು
ತೊಟ್ಟಿಲಾಧಾರೆ ಮುಚಿಗಂಡು ಹೋಗೀ

ಅಂಬಿಗಾರಾನ ಮರೆಯಾದೆ ಹಾದು
ಅವನೆ ನಿನ್ನು ಎತ್ತಿ ಸಾಕವನೇ
ಚಿಕ್ಕೋನ ದೊಡ್ಡೋನ ಮಾಡೀ
ದ್ವಾಡ್ಡೇನ ಚಿಕ್ಕೇನ ಮಾಡೀ
ಹಾರಿಗೋಲಿಗೇ ಕಾವಾಲೊಂದಿಟ್ಟರಲ್ಲೋ
ನಮ್ಮಣ್ಣಯ್ಯ ಕೇಳೊ

ನೋಡಿದೇನಮ್ಮ ಗೆಳತಿ ಗಂಗಮ್ಮಾ
ನಮ್ಮಣ್ಣನಾಡೀದ ಮಾತ?
ನೋಡಿ ನಮ್ಮಣ್ಣನಾಡೀದ ಮಾತ
ಈ ಕರ್ಮ ನಾನೆಲ್ಹೋಗಿ ಕಳೆಯಲಣ್ಣಾ
ನಮ್ಮಣ್ಣಯ್ಯ ಕೇಳು

ಹುಟ್ಟಿ ಬೆಳೆದೆ ನಾನ್ ಹನ್ನೆರಡೇ ವರುಷ
ಮೈನೆರೆದೇ ನಾ ಇನ್ನ ಮೂರೇ ತಿಂಗಾಳು
ಮರಿಯ ಕಂಡಾ ಗುರುತು ನಾನರಿಯೆನಲ್ಲೋ
ನಮ್ಮಣ್ಣಯ್ಯ ಕೇಳು

ನಮ್ಮಪ್ಪಾನು ಮಾಡೀದ ಮದುವೇ
ಯಪ್ಪ ತಂದೇ ತಾ ಕಾಡೀಗೆ ಹೋದಾ

ಹಸುರು ಸೀರೇ ನಾನ್ ಹರಿಯಲಿಲ್ಲಣ್ಣಾ
ಮಡುಲಕ್ಕೀಯ ನಾ ಬಿಚ್ಚಲಿಲ್ಲಾ
ಕಾಲಗಿರುವಂಥ ಕಣಿಗಾರ ಹೆಣ್ಣಾ
ಅಳಿಯಲಿಲ್ಲಾ ನಮ್ಮಣ್ಣಾ ಕೇಳೋ

ಮನಿಯ ಗಂಡಾನ ಗುರುತು ನಾನರಿಯೆನಲ್ಲೋ
ನಮ್ಮಣ್ಣಯ್ಯ ಕೇಳೋ
ಮಾತು ಮಾತಿಗೂ ಕೇಳಲ್ಲ ಹೆಣ್ಣೇ
ಅಣ್ಣನಪ್ಪಾ ಎನ್ನು ನೀ ಬಾಳ ಕಾಣೇ
ಹೋಗುಬಾರೆಂದೆನು ಬ್ಯಾಡ ಕಾಣೇ
ನೀನು ತಾನೆಂದೆನು ಬ್ಯಾಡ ಕಾಣೇ.

ನಿಮ್ಮಪ್ಪಾನು ಮಾವಾನು ಬೇಕು
ನಿನ್ನ ತಂಗೀಯು ನಾದಾನಿ ಕಾಣೋ
ಹೆಣ್ಣೇ ತಂದಾಗಿನ್ನಾ ಋಷಿಗಂಡ ನಾನೇ ಎಂದಾ
ಪಾಪಿ ದೋಸುಮಾರ
ನಮ್ಮಣ್ಣಯ್ಯ ಕೇಳೋ.
ಅಣ್ಣನಾಡೀದ ಮಾತಾನೆ ಸ್ವಾಮೀ
ಕಣ್ಣಿನೊಳಗೇ ನೀರಾರ ತುಳುಕೀ

ಬುಳುಬುಳನಾ ದುಕ್ಕವ ಮಾಡೀ
ಬಣ್ಣದಂಥಾ ಎದಿಯಾರ ಮ್ಯಾಲೇ
ಮುತ್ತಿನೋಲೆರಡು ಕಣ್ಣೀರ ಸುರಿಸೀ
ನೋಡಿದೇನವ್ವ ಗೆಳತಿ ಗಂಗಮ್ಮ?
ಪಾಪಿ ನಮ್ಮಣ್ಣನಾಡೀದ ಮಾತ
ದ್ರೋಹಿ ನಮ್ಮಣ್ಣನಾಡೀದ ಮಾತ
ಈ ಕರ್ಮ ನಾನೆಲ್ಹೋಗಿ ಕಳೆಯಲಮ್ಮಾ?
ಜಲಧೀ ಗಂಗಮ್ಮಾ

ಶಿವಗಂಗಿಗೆ ನಾನ್ಹೋಗುಬೇಕು
ಶಿವನ ಪೂಜೆಯ ನಾ ಮಾಡಬೇಕು
ಗಂಗಾಧರನಿಗೆ ವರವಾ ನಾ ಬೇಡಿ
ವಾಲೆ ಹೊನ್ನಮ್ಮನ ಪೂಜೆಯ ಮಾಡಿ
ದಿಂಡುರುಳುಸ್ಯಾವೇ ನಾ ಮಾಡಬೇಕು
ಅನ್ನದಾನವ ನಾ ಮಾಡಬೇಕು

ವಸ್ತ್ರದಾನಾವ ನಾ ಮಾಡಬೇಕು
ಕಾವೀನಲ್ಲಿ ನಾ ವರಗಳ ಬೇಡಿ
ಕಜ್ಜಿಬಿಳುದಾಗ ನಾ ಸ್ನಾನಾವ ಮಾಡೀ
ತಿರುಗ ಬರುವಾಗ ನಾನಿಲ್ಲೆ ಬರುತಿನಣ್ಣಾ
ನಮ್ಮಣ್ಣಯ್ಯ ಕೇಳೋ.

ಶಿವಗಂಗೀ ಎಂಬೋದು ನೋಡೇ
ಕಳ್ರ ಕಾಟ ಬಲುಕಾಟ ಕಾಣಣ್ಣಾ
ರಾಕ್ಷನಾ ಬರಿಗಾಲ ಹೆಣ್ಣೇ
ಶಿವಗಂಗೀಗೆ ನೀನೋಗುಬ್ಯಾಡಾ
ಶಿವನ ಪೂಜೇಯ ನೀ ಮಾಡುಬ್ಯಾಡಾ
ಗಂಗಾಧರನೀಗೆ ವರಗಳ ಬೇಡ
ವಾಲೆ ಹೊನ್ನಮ್ಮನ ಪೂಜೇಯು ಬ್ಯಾಡ
ಅಲ್ಲಿ ಮಾಡೂವ ಪೂಜೆ ನೀನಿಲ್ಲಿ ಮಾಡೇ
ಕಂದನ ತಾಯಾಗು ಬಾರೇ.

ನಂಜನಗೂಡಿಗೆ ನಾನ್ಹೋಗುಬೇಕಣ್ಣಾ
ನಂಜುಂಡೇಸಾನ ನಾ ನೋಡುಬೇಕು
ಚಂದು ಧೂಪಾನ ನಾನುರುಸುಬೇಕು
ಮಂಡೆ ಕೂದಾಲ ನಾ ತೆಗೆಸಬೇಕು
ಅಲ್ಲಿ ನನಗೊಂದು ತಪಸುಂಟು ಎಣ್ಣಾ
ಅಲ್ಲಿ ನನಗೊಂದು ವರವುಂಟು ಎಣ್ಣಾ
ತಿರುಗಿ ಬರುವಾಗ ನಾನಿಲ್ಲಿ ಬಂದೋ ಏನೋ
ನಮ್ಮಣ್ಣಯ್ಯ ಕೇಳೋ.

ನಂಜನಗೂಡಿಗೆ ನೀನು ಹೋಗುಬಾರಾದೇ
ನಂಜುಡೇಸಾನ ನೋಡುಬಾರಾದೇ
ಶಂಕುಧೂಪಾವ ನೀ ಕೊಡುಸಬ್ಯಾಡಾ
ಮಂಡೆ ಕೂದಲ ನೀ ತೆಗಸಬ್ಯಾಡಾ
ಅಲ್ಲೇ ಮಾಡುವ ಪೂಜೆ ನೀನಿಲ್ಲಿ ಮಾಡೋ
ಕಂದನ ತಾಯಾಗು ಬಾರೇ.

ಇಷ್ಟೊಂದಾನೇ ಹೇಳಿದಾರಿನ್ನಾ
ಕೇಳನಲ್ಲವ್ವ ಪಾಪಿಗಾರಣ್ಣಾ
ಕೇಳನಲ್ಲವ್ವ ಕರಿನಿಕಾರಣ್ಣಾ
ಅಣ್ಣಾ ನೀ ಎನ್ನ ಸೆರಗ್ಹಾಸೋ ಬದಲೂ

ಜೋಗಿ ಜಂಗಾಮರ್ದಿಂದೆ ಹೋದಾರೇ
ಅಲ್ಲಿ ನನ್ನಾ ಪಾಪ ಕಡುದಾವೇ
ಅಲ್ಲಿ ನನ್ನಾ ಕರುಮ ಕಡುದಾಡೀ
ಈ ದೋಸಕ್ಕೆ ಗುರಿ ಎಂಗೆ ಆಗಲವ್ವಾ
ಗಂಗಮ್ಮ ತಾಯೀ.

ಅರಅರದ ವಾಲೆ ಕೊಳ್ಳಣ್ಣಾ
ಅರ್ಧಪಾಲು ಬಂಗಾರ ಕೊಳ್ಳೋ
ಕಪ್ಪುಚಿತ್ರಾದ ವಾಲೇಯ ಕೋಳ್ಳೋ
ಗೀರುಪಂಕ್ತಿಯ ಕಡಗಾವ ಕೊಳ್ಳೋ
ನಡುಗೀನಾ ತಾಳ ಅಡಿವಾಳ ಕೊಳ್ಳೋ
ಮುತ್ತೀನಾ ಮೂಗತಿಯ ಕೊಳ್ಳೋ
ಹತ್ತು ಬೆರುಳಿನ ಉಂಗ್ರಾವ ಕೊಳ್ಳೋ
ತೇಲ್ಕಟ್ಟೀನ ಚವುನವ ಕೊಳ್ಳೋ
ಗಂಡಕಟ್ಟಿರುವ ಮಾಂಗಲ್ಯ ಕೊಡಲೇನಣ್ಣಾ?
ನಮ್ಮಣ್ಣಯ್ಯ ಕೇಳೋ.

ಒಡವೆಯಾ ತೆಗೆದು ನೀರಲ್ಲಿ ಹಾಕೋ
ಸೀರೆಯಾ ತೆಗೆದು ಬೆಂಕ್ಯಲ್ಲಿ ಹಾಕೋ
ಚಿಕ್ಕಪ್ರಾಯಾದ ಸತಿಯಲ್ಲೆ ನೀನು?
ನಿಲುವು ಕನ್ನಡಿ ಏಕಾದ ಚೆಲುವೇ
ಗ್ವಾಡೆಯಾ ಮೇಲೆ ಬರೆದಿರುವಂಥಾ
ನವರಂಗಾದ ಗೊಂಬೆ ಕಾಣ್ದೆಣ್ಣೇ
ನಿನ್ನಾ ಕಟ್ಟು ನೆರಿಗೇಯ ಮ್ಯಾಲೆ ಒರಗೇನಂದಾ
ಪಾಪಿ ದುಸುಮಾನ.

ಇಷ್ಟೊಂದಾನೇ ಯೇಳಿದಾರಿನ್ನ
ಕೇಳಾನಲ್ಲವ್ವ ಕರಣಿಕಾರಣ್ಣಾ ಕೇಳಾನಲ್ಲವ್ವ ಪಾಪಿ
ನೋಡಿದೇನವ್ವ ಜಲಧಿ ಗಂಗಮ್ಮ
ಈ ದೋಸ ನಾನೆಲ್ಹೋಗಿ ಕಳೆಯಲಮ್ಮಾ?
ಜಲಧಿ ಗಂಗಮ್ಮಾ.

ಅದು ಅಲ್ಲಾದೆ ಕೇಳೋ ನಮ್ಮಣ್ಣಾ
ನನ್ನ ಮ್ಯಾಲೆ ನಿನ್ನ ಮನಸೇನೋ ಯಣ್ಣಾ?
ಹತ್ತು ವಾರಾ ದೇಸಾವ ತಿರುಗೀ

ನನಗಿಂತಾ ಕಡುಚೆಲುವೆ ತಂದೂ
ಬಿದುರಾಕಾರ ಚೆಲುವೇಯ ತಂದೂ
ನನ್ನ ರೂಪೀನ ಪಟುವಾಳ ಹೊಡುಸೀ
ಮೆಚ್ಚಿ ಕಲ್ಯಾಣ ನಿನಗೆ ನಾ ಮಾಡುವೆನೋ
ನಮ್ಮಣ್ಣಯ್ಯ ಕೇಳೋ.

ಎಷ್ಟು ದೇಸಾವ ತಿರುಗೀದರ್ಥೆಣ್ಣೇ
ನಿನ್ನಂಥಾ ಕಡುಚೆಲ್ವಿ ಉಂಟಾ?
ನಿನ್ನಂಥಾ ಪತಿವ್ರತೆ ಉಂಟಾ?
ಕಾಲು ನೋಡೆಣ್ಣೆ ಕದಳಿಯ ಕಂಬಾ
ತೊಳು ನೋಡೆಣ್ಣೆ ಬಾಳೆಯ ದಿಂಡೂ
ಹಲ್ಲ ನೋಡ್ಡೆಣ್ಣೆ ಸೀಗೆಯ ಬೀಜಾ
ನಿನ್ನ ಮಂಡೆ ಕೂದಲಿನ ಸರಿಸಮಕೆ ಬಂದರೇನೇ?
ಸಣ್ಣ ಪ್ರಾಯದ ಬಾಲೇ.

ಅಣ್ಣಾನಾಡೀದ ಮಾತೀಗೆ ಸ್ವಾಮೀ
ಕಣ್ಣಿನೊಳಗೇ ನೀರಾನ ಸುರಿಸೀ
ಗುಳಗುಳನಾ ದುಃಖವ ಮಾಡೀ
ಆಕಾಸಾವಾಡಿ ನೀನಾರ ನೋಡು
ಚಂದ್ರ ಸೂರ್ಯನೆ ನೀನಾರ ನೋಡು
ಭೂಮಿ ತಾಯವ್ವ ನೀನಾರ ನೋಡು
ಪಾಪಿ ನಮ್ಮಣ್ಣನಾಡಿದ ಮಾತ
ದ್ರೋಹಿ ನಮ್ಮಣ್ಣನಾಡೀದ ಮಾತ
ಈ ಕರ್ಮನಾನೆಲ್ಲ್ಹೋಗಿ ಕಳೆಯಲಮ್ಮಾ?
ಓ ಅಮ್ಮಾ ತಾಯೀ.

ಉತ್ತುರಾನೇ ಮೈಲಾರಲಿಂಗ
ಉಕ್ಕಿಉಕ್ಕೀ ಬರುವ್ಹೋಳು ಗಂಗೀ
ಬೆರುಳಿಬೆರುಳೀ ಬರುವ್ಹೋಳು ಗಂಗೇ
ತಾಯಿ ಗಂಗಮ್ಮ ಎನ ಮೇಲೆ ಹಗಿಯಾದಳೇ
ಜಲಧೀ ಗಂಗಮ್ಮಾ
ಭೂಮಿ ಸಾಕಿ ಎನ ಮೇಲೆ ಮನಸೇನಣ್ಣಾ?
ನಮ್ಮಣ್ಣ ಕೇಳೋ.

ಅಣ್ಣನ್ವಸಾ ಆಗೂದು ಬದುಲೇ
ಹರಿಯೋ ಗಂಗಮ್ಮಾಗೆ ಹೋಗೋದು ಲೇಸು.
ಉಟ್ಟಿರುವಂಥಾ ಸೀರೇಯಸೆಳೆದು
ತೊಟ್ಟಿರ್ತಕ್ಕಂಥ ಆಭರಣ ಕಳಚೀ
ತೋಳು ರವಿಕೇಗೆ ಕಂಕಣ ಕಟ್ಟೀ
ಆಚೆ ದಿಕ್ಕೀಗೆ ಎಸೆದಾಳೆ ಬಾಲೀ
ಸಮುದ್ರಕ್ಕೆ ಪತಿವ್ರತೆ ಧುಮುಕುತಾಳೇ.
ಹೋಗಿ ಬರುತೀಯ ಬಾಲೆ.

ಸಮುದ್ರಕ್ಕೆ ಬಾಲೆ ಧುಮುಕುತಾಳೇ
ಇವಳ ಸತ್ಯಾ ದೃಢವಾನ ಮೆಚ್ಚೀ
ಜಲಧೀಯ ಗಂಗಮ್ಮ ತಾಯೀ
ಅತ್ಲ ಗಂಗಮ್ಮ ಅತ್ತೆ ವಾರ್‍ಯಾಗೀ
ಇತ್ಲ ಗಂಗಮ್ಮ ಇತ್ತೆ ವಾರ್‍ಯಾಗೀ
ನಟ್ಟ ನಡುವೇ ದಾರಿಯ ಬಿಟ್ಟಳಲ್ಲಾ
ಜಲಧಿ ಗಂಗಮ್ಮಾ.

ನಟ್ಟ ನಡುವೇ ದಾರಿಯ ಬಿಟ್ಟೂ
ಹೋಗುತಾಳವಳೆ ಪತಿವರುತೆ ಬಾಲೆ
ಹೋಗುವಂಥಾ ಹೆಣ್ಣಾನೆ ನೋಡೀ
ಹೋತೀಯೇನ್ಹೇಳೇ ಎಲೆ ಬಾಲೆ ನೀನು?
ಎಲ್ಲೀಗ್ಹೋದಾರು ನಿನಗಂಡ ನಾನೇ
ಅವಳು ಧೂಮುಕೀದ ಜಾಗಾದ ವಳಗೇ
ಪಾಪೀ ಇವನೂ ಧುಮುಕ್ಯಾನವಳಣ್ಣ
ಅವಳ ಮಟ್ಟೀಗೆ ದಾರಿಬಿಡುತಾಳೇ
ಇವನ ಮಟ್ಟೀಗೆ ಕೂಡಿಬರುತಾಳೆ
ನಟ್ಟನಡುವಂತ್ರ ಸಮುದ್ರದೊಳಗೇ
ತೇಲುತಾಲವನೆ ಮುಳುಗುತಾಲವನೆ
ಗುಟುಕು ನೀರಾ ತಾ ಕುಡೀತಲವನೇ
ಕೊಟ್ಟಿ ಓತಾನೆ ಸಮುದ್ರದಾ ಹೊಳಿಯ ವಳುಗೇ
ಪಾಪಿ ದುಸುಮಾನ.
ತೇಲುತಾನೆ ಸಮುದ್ರದಾ ಹೊಳಿಯ ವಳುಗೇ
ಪಾಪಿ ನಮ್ಮಣ್ಣ.

ಇವಳ ಸತ್ಯ ದೃಢುವಾನು ಮೆಚ್ಚೀ
ಜಲಧೀಯ ಗಂಗಮ್ಮ ತಾಯೀ.

ಆಗ ತಂಗಿಯಾಗಿರ್‍ತಕ್ಕಂಥಾವ್ಳು ನಿಂತಕಂಡು, ಗಂಗಮ್ಮನಿಗೆ ವರಾ ಕೇಳ್ತಾಳೆ. ದುಶುಮಾನ ನಮ್ಮಣ್ಣ, ಪಾಪಿ ನನ್ನ ಮ್ಯಾಲೆ ಭ್ರಮೆಪಟ್ಟು ಬಂದ–

ಹಳ್ಳಕೊಳ್ಳಾಕೆ ಹಾಕುಬೇಡಮ್ಮಾ
ಕಲ್ಲು ಮುಳ್ಳಾಗೆ ಎಸಿಯಬೇಡಮ್ಮಾ
ನನಿಗೋಸ್ಕಾರ ನಮ್ಮಣ್ಣ ಬಂದಾ
ಹೊಳಿಯಾ ಒಳುಗೇ ಕೊಚ್ಚೋಗುತಾನೇ
ಕಲ್ಲುಮುಳ್ಳಾಗೇ ತುಳಿಯಬೇಡಮ್ಮಾ
ನಮ್ಮಣ್ಣಾನ ಪ್ರಾಣ ನೀನುಳುಸೆಯಮ್ಮಾ
ಜಲಧೀ ಗಂಗಮ್ಮ.

ಇಂಥ ಮಾತಾ ಗಂಗೆ ಕೆಳಲಿಲ್ಲಾ
ಕೊಚ್ಚಿಕಂಡೇ ಹೋತಾಳೆ ಪಾಪೀ
ಅಡ್ಡಬಳಸೀ ಓಡೋಡಿ ಅವಳೂ
ಅಡ್ಡಬಳಸೀ ಓಡಿಬಂದವಳೇ.
ಉಟ್ಟಿರುವಂಥಾ ಸೀರೇಯ ಸೆಳೆದೂ
ಸಮುದ್ರಕ್ಕೆ ಎಸೆದವ್ಳೆ ಬಾಲೆ
ಚೆತ್ರೇ ಸೆರಗಾ ಹಿಡುಕಂಡನಾಗ
ಸಮುದ್ರದ ದಿಡ್ಡೀಗೆ ಎಳಕಂಡಳೋ
ಸತುವಂತೆ ಬಾಲೆ.

ಸಮುದ್ರದ ದಿಡ್ಡಿಗೆಳುದವಳೇ
ತಂಗಿ ಮಾನಾವ ಕಾದೆ ನೋಡವಳೇ
ಹೋದಿಯೆಲ್ಲಿಗೆ ಎಲೆ ಬಾಲೆ ನೀನು?
ಎಲ್ಲಿಗೋದಾರು ನಿನು ಗಂಡ ನಾನೇ ಎಂದಾ
ಪಾಪೀ ದುಸುಮಾನ.

ಪಾಪಿಯಾಗಿರ್‍ತಕ್ಕಂಥಾ ಅಣ್ಣ ನಿನ್ನಂಥ ಅಣ್ಣನ್ನ ನಾನೆಲ್ಲೂ ನೋಡಲಿಲ್ಲ. ಈಯಮ್ಮ ಕ್ವಾಪಾರೂಢಳಾಗಿ

ಅಕ್ಕ ತಂಗಿಗೆ ನೀನಾಸಿ ಬಿದ್ದವನೂ
ಲೋಕದೊಳಗೇ ನೀನಿರಬಾರದಣ್ಣಾ
ಭೂಮಿ ಮ್ಯಾಲೇ ನೀ ತಿರಗಾಡಬ್ಯಾಡ

ಹೊಳೆಯನ ದಿಣ್ಣೀಯ ಮ್ಯಾಲೇ
ಗುಂಡುಕಲ್ಲಾಗಿ ಸುಳೆಮಗನೆ ಸುಡಿಸಿಕಳ್ಳೋ
ಪಾಪಿ ದುಶುಮಾನ.

ಅಕ್ಕ ತಂಗಿ ಶಾಪಕ್ಕೆ ಭಗ್ನೆಭಸ್ಮವಾಗಿ ಹೋದ. ಆಗ ಪತುವ್ರತೆಯಾಗಿರ್ತಕ್ಕಂಥಾವ್ಳು ಹೇಳಿದ್ದು–

ಹಂಗೂ ನಾನೇ ಕೂಡಿದವಳಾದೇ
ಹಿಂಗೂ ನಾನೇ ಕೂಡಿದವಳಾದೇ
ಸಾಗವಳಿಯಾಗಿ ನಾನ್ಹುಟ್ಟುತೇನೇ
ಗುಂಡುಕಲ್ಲಾಗಿ ನೀನ್ಹುಟ್ಟೇಯಣ್ಣಾ
ನನ್ನ ಗಂಡವರು ಅಡಿಕೇಯದಾಗೀ
ಮೂವರೊಬ್ಬಾರು ಬಾಯಲ್ಲಿ ಕರಗಲ್ಹೋಗೂ
ದ್ರೋಹಿ ದುಶುಮಾನ.

ಯಣ್ಣಾ, ಅಲ್ಲಿ ನಮ್ಮಾ ವೈಭೋಗ ತೀರ್ಹೋಗಲೀ
ದ್ರೋಹಿ ದುಸುಮಾನಾ
ಅಣ್ಣನೀಗೆ ಶಾಪ ಕೊಟ್ಟವಳೇ
ಹೋಗಿ ಬರುತೇನೇ ತಾಯಮ್ಮ ನಾನು
ನಿನ್ನ ಸತ್ಯಾವ ನಾನು ಕಂಡಿಲ್ನೀ
ನನ್ನ ಸತ್ಯಾವ ನೀನು ಕಂಡ್ಹಿಡುದೇ
ನಿನ್ನ ಪೂಜೇಯ ನಾನೀಗ ಮಾಡುವೇನೀ
ಹೊಳಿಯ ಚಿಟ್ಟೇಯ ಮ್ಯಾಲೆ.

ಅಮ್ಮ ಇಲ್ಲಿತನಕಾ ಗಂಗಮ್ಮನಲ್ಲಿ ಸತ್ಯವಿದೆ ಅಂತ ನಾವು ತಿಳಕಂಡಿರ್ಲಿಲ್ಲ. ಸತ್ಯವಾಗಿರುವವರಿಗೆ ಸತ್ಯವಿದೆ ಅಂತ ನಾನೀಗ ತಿಳಕಂಡೆ. ಆದರೆ ಆಕಾಸ ಭೂಮಿತಾಯಿ, ಚಂದ್ರ ಸೂರ್ಯಾದಿಗಳು ಇರೋತನಕಾ 'ಗಂಗೇಪೂಜೆ' ಅಂತೇಳಿ ಮಾಡಲಿ. ಇವತ್ತು ನಿನ್ನ ಪೂಜೆ ಮಾಡ್ತೀನಿ ಅಂತ್ಹೇಳಿಬಿಟ್ಟು, ಈ ಯಮ್ಮ–

ಹೊಸ ಸೀರೇ ಹೊಸ ರವಿಕೇ
ತಿಂಗಳು ತುಂಬಟಾ ಗುಂಡೀ
ನ್ಯನೀ ಅಕ್ಕೀ ನೆನಿಗಡಲೇ
ಗೊನಿಯಾ ಬಾಳೆಯಾ ಹಣ್ಣೂ
ಏಳು ಬೆನಕಾನ ಪೂಜೆಯ ಮಾಡುತಾಳೇ
ಹೊಳೆಯಾ ಚಿಟ್ಟೇಯ ಮ್ಯಾಲೆ.
ಗಂಗಮ್ಮಾನ ಪೂಜೇಯ ಮಾಡೀ
ಪತಿವರುತೀ ತಾಯಮ್ಮನಾಗ

ಬಾಳೆಪಟ್ಟೇಯ ಸೀರೆಯುನುಟ್ಟು
ಬಾಗಿಬರುತಾಳೆ ಗಂಡನ ಅರಮನಿಗೇ
ಹೋಗಿ ಬರುತೀಯ ಬಾಲೆ?

ಗಂಡಾನ ಮನಿಗಿನ್ನು ಬಂದು
ಸಿರುಗಂಧಾದ ಸೌದೇಯ ತರುಸೀ

ಸ್ವಾಮಿ ನನ್ನ ಲಗ್ನವಾಗಿ ಒಂದು ತಿಂಗಳಾಯ್ತು. ಮಡುಲಕ್ಕಿ ಬಿಚ್ಚುವಾಗ್ಗೆ, ನಾನು ನಿಮ್ಮ ಮನಿಗೆ ಬರುವಾಗ್ಗೆ, ನಮ್ಮಣ್ಣನಾಗಿರತಕ್ಕಂಥಾವ್ನು ಸಿಕ್ಕ. ನನ್ನ ನಡುನೀರಿನಲ್ಲಿ ಸಿಕ್ಕಿಸಿಕಂಡು ನನ್ನ ಮೇಲೆ ಭ್ರಮೆಯನ್ನು ಪಟ್ಟ. ಆಗ ಆತನಿಗೆ ನಾನು ಮನಸ್ಸನ್ನು ಕೊಡದೆ ಶಾಪವನ್ನು ಕೊಟ್ಟು, ನಂಬಿಕೆಯಿಂದ ನಾನು ಬಂದಿದ್ದೀನಿ. ನೀವು ನಾವು ಈ ಭೂಮಿ ಮ್ಯಾಲೆ ಬದುಕ್ಬಾರ್ದು. ನಾವಿಬ್ರೂ ಕೆಂಡಕೊಂಡವಾಗೋಣ ಎಂದಳು.

ನೀರು ಗಂಧಾದ ಸೌದೇಯ ತಂದು
ಗಂಡಹೆಂಡಾರವರಿಬ್ಬರಾಗ
ಕೆಂಡಕೊಂಡಾರಾದರೀ ಭೂಮಿ ಮ್ಯಾಲೆ
ಹೋಗಿ ಬರುತೀಯ ಬಾಲೆ.

ಮದಗದ ಏರಿಯ ಮೇಲೇ
ಚಿಗರೆಗೌಡಾರ ತ್ವಾಟಾದ ವಳುಗೇ
ಸಾಗವಳಿಯಾಗಿ ಇರಮ್ಮ ನೆಲಸೀ
ಅಡಕೆ ಮರವಾಗಿ ಗಂಡನಾಗವನೆ
ಗುಂಡುಕಲ್ಲಾಗಿ ಅಣ್ಣನವನೆ
ಮೂವರೊಬ್ಬರು ಬಾಯಲ್ಲಿ ಕರಗುತಾರೇ
ನರಲೋಕದ ಮ್ಯಾಲೆ.

ಸ್ವಾಮೀ ಇಲ್ಲೀಗವರಾ ಐಭೋಗ ತೀರ್‍ಹೋಯಿತು
ನಮ್ಮ ಲೋಕದ ಮ್ಯಾಲೆ.

ಸತ್ಯವೇ ಸತ್ಯ, ಅವಸತ್ಯವೇ ಅವಸತ್ಯ. ಈ ಯಮ್ಮನಾಗಿರತಕ್ಕಂಥಾವ್ಳು ಸಾಗವಳಿಯಾದಳು. ಅಣ್ಣ ಅಡಿಕೆ ಮರವಾದ, ಗಂಡ ಸುಣ್ಣವಾದ. ಈ ಪರಪಂಚದಲ್ಲಿ ಮೂವರು ಒಬ್ಬರ ಬಾಯಲ್ಲಿ ಕರಗುವ ಹಾಗಾದ್ರು. ಇಲ್ಲಿ ಏನಾದ್ರೂ ಒಂದು ಮದುವೆಯಾಗ್ಲಿ ಅಥವಾ ಒಂದು ಪರೀಕ್ಷೆಯಾಗಲೀ, ಕಲ್ಲು ಅಂತ ಏನಾದ್ರೂ ಒಂದು ಬಾಯಲ್ಲಿ ಸಿಕ್ಕಿದ್ರೆ–

ನಿನ್ನಾ ಬಚ್ಚಲುದಂಡಿಗೆ ಸುಳಿಮಗನ ತುಳಿಯಲೇಳೋ .
ಪಾಪಿ ದುಶುಮಾನಾ.

◆◆◆◆

ಹಾಡಿದವರು : **ಚೌಡಿಕೆ ಸುಬ್ಬಯ್ಯ**, ನೆಲಮಂಗಲ.

## ೧೩. ಸತಿ ಪುರುಷರ ಹಾಡು

ಅವರು ಸತಿಯು ಪುರುಸರೆಂದರೆ ಮಾನ್ಯವರು
ಪಿರಿತ್ತಿಲ್ಯೆದಾರೇ–ಸ್ವಾಮಿ
ಪಿರಿತ್ತಿಲ್ಯೆದಾರೇ ॥

ಅವಳು ಮರುಗದಿಂದಲಿ ಮಾವನ ಬಳಿಯಲಿ
ವರವ ಬೇಡವಳೆ–ತಾಯಿ
ವರವನು ಬೇಡವಳೆ ॥

ಅವಳ ಗಂಗಚಂದರ ಎಂಬಂಥವನ
ಕಂದನ್ನಾಡಿದವಳೆ ಸ್ವಾಮೀ
ಕಂದನ್ನಾಡಿದವಳೇ ॥

ಅವಳೂ ಸೂರ್ಯಚಂದರ ಎಂಬಂಥವನ
ಕಂದನ್ನಾಡಿದವಳೇ ಸ್ವಾಮೀ
ಕಂದನ್ನಾ ಪಡೆದವಳೇ ॥

ಅವಳೂ ಅಂದ ಚಂದದ್ವೈಭೋಗದಿಂದ
ಕಂದನ ತೂಗವಳೇ–ಬಾಲೀ
ಕಂದನ ತೂಗವಳೇ ॥

ಅವಳು ಕಂದನುಟ್ಟಿದಾ ಪುಣ್ಣೀವುದಿಂದ
ಜಾತುರಿ ಬಂತಲ್ಲಾ–ಸ್ವಾಮಿ
ಜಾತರಿ ಬಂತಲ್ಲಾ ॥

ನನ್ನ ಕಂದನ್ಹುಟ್ಟಿದ ಪುಣ್ಣೀವುದಿಂದ
ಜಾತುರಿ ಬಂತಲ್ಲಾ–ನಾನು
ದಂಡಿಗ್ಹೋಗುತೀನಿ ॥

ಸ್ವಾಮೀ ನೀವುನಾದರೆ ದಂಡಿಗ್ಹೋಗ್ತೀರಾ
ಯಾವತ್ತು ಬರುತೀರಾ–ನೀವು
ಯಾವತ್ತು ಬರುತೀರಾ?

ನಾನು ಎಂಟು ತಿಂಗಳಾ ತುಂಬುಲುವಾಗ್ಗೆ
ಖಂಡಿತ ಬರುತೀನಿ ನಾನು
ಖಂಡಿತ ಬರುತೀನಿ ॥

ಅವಳೂ ಹೋಗೋ ಗಂಡಗೆ ಲುಗಬಿಗುನೆದ್ದು
ಅಡಿಗೆ ಮಾಡುತಾಳೆ–ಬಾಲೆ
ಅಡಿಗೆ ಮಾಡುತಾಳೆ ॥

ಅವಳೂ ನೆಲುವಿನ ಮ್ಯಾಗಳ ಮೊಸಾರು ತೆಗದು
ಆಮರು ಕಾಸ್ಯಾವಳೇ–ಅವಳು
ಆಮರು ಕ್ಯಾಸ್ಯವಳೇ ॥

ಅವಳು ಹೋಗೋ ಗಂಡಗೇ ಲಗುಬಿಗುನೆದ್ದು
ಊಟಕೀಡುತಾಳೆ–ಅವಳು
ಬುತ್ತಿ ಕಟ್ಟುತಾಳೆ ॥

ಸ್ವಾಮೀ ನದೀದಾರಿ ಪರಿಯಂತರ ಗಂಡನ
ಸಾಧನ ಕಳಿಸ್ಯವಳೆ–ಬಾಲೆ
ಸಾಧನ ಕಳಿಸ್ಯವಳೆ ॥

ಸ್ವಾಮಿ ನೀವುನಾದರೆ ದಂಡಿಗೋತೀರ.
ಕಂದಗೇನು ತರತೀರಾ–ಸ್ವಾಮಿ
ಬಾಲಗೇನು ತರುತೀರಾ?

ಕಂದಗೆ ಚಾರುಮೆಟ್ಟಿನಾ ಜರತರ ಟಂಕಿ
ಟೋಪಿಯ ತರುತೀನಿ–ನಾನು
ಟೋಪಿಯ ತರುತೀನಿ ॥

ಕಂದಗೆ ಅಂಚುಳ್ಳ ಕಾಲಿಗೆ ಮಿಂಚುಳ್ಳ
ಗಿಲಿಗಿಲಿ ತರುತೀನಿ–ನಾನು
ಗಿಲಿಗಿಲಿ ತರುತೀನಿ ॥

ಸ್ವಾಮಿ ಕಂದಗಾದರೆ ತರುವುದು ಸರಿಯೆ
ನನಗೇನ ತರುತೀರಾ–ಸ್ವಾಮಿ
ನನಗೇನು ತರತೀರಾ?

ನಿನಗೆ ಪಟ್ಟೆಸೀರೆ ಒಂದ್ ಪುಟಾಣಿ ರವಿಕೆ
ಸಬಿಂದ್ ತುರುತೀನಿ–ನಾನು
ಸಬಿಂದ್ ತರುತೀನಿ ॥

ನಿನಗೇ ಅಂಚುಳ್ಳ ಕಾಲಿಗೆ ಮಿಂಚುಳ್ಳ ಬಿಲ್ಲೆ
ಬೇಗನೆ ತರುತೀನಿ–ನಾನು
ಬೇಗನೆ ತರತೀನಿ ॥

ಅವಳು ಹರೀಬಾರಿ ಪರಿಯಂತ ಗಂಡನ
ಸಾಗುನ್ಹಾಕುತಾಳೇ–ಸ್ವಾಮಿ
ಸಾಗುನ್ಹಾಕುತಾಳೇ ॥

ಅವಳೂ ಸಾಗುನುಕಳುವಿ ಮನೀಗೆ ಬಂದು
ಚಿಂತೆ ಮಾಡುತಾಳೆ–ಅವಳು
ಚಿಂತೆ ಮಾಡುತಾಳೆ ॥

ನನ್ನ ಗಂಡನಾದರೆ ದಂಡಿಗೆ ವ್ಹೋದಾ
ಹ್ಯಾಗೆ ಮಾಡುಲಪ್ಪಾ–ನಾನಿನ್
ಏನು ಮಾಡುಲಯ್ಯಾ?

ನನ್ನಾ ವಾರವಾರ ಗೆಳತಿಯರ ಕೂಡ
ನೀರಿಗೆ ಹೋಗಬೇಕು–ಸ್ವಾಮಿ
ನೀರಿಗೆ ಹೋಗುಬೇಕು.

ಅವಳು ಅಟ್ಟಕಾದರೆ ಮೆಟ್ಟಲನಾಕಿ
ಏಣಿಯ ಇಡಸವಳೆ–ಅವಳು
ಪೆಟ್ಟಿಗೆ ಇಳಿಸವಳೆ

ಅವಳು ಪಟ್ಟಸೀರೆ ಕುದುರೆ ರವಿಕೆ
ಸಬಿಲ್ಲಿ ತೊಟ್ಟವಳೆ –ಅವಳು
ಸಬಿಲ್ಲಿ ತೊಟ್ಟವಳೆ ॥

ಅವಳು ಚಿನ್ನಾದ ಕೊಡವಾ ರನ್ನಾದ ಸಿವ್ರುಡಾ
ತಲೆಮ್ಯಾಲೆ ಹೊತ್ತವಳೆ–ಬಾಲೆ
ತಲೆಮ್ಯಾಲೆ ಹೊತ್ತವಳೆ ॥

ಅವಳು ನೀರಿಗ್ಹೋಗುತಾ ನೀಟುಮಾಡುತಾ
ಸನ್ನೆಮಾಡುತಾಳೆ–ಅವಳು
ಕಣ್ಣಮಿಸುಕುತಾಳೇ ॥

ಅಲ್ಲಿ ನೀರುತಾರುತ ಲಲ್ಲಾನ ಕಂಡು
ಮೋಜುಮಾಡುತಾಳೆ–ಅವಳು
ಮೋಜುಮಾಡುತಾಳೆ

ನನ್ನ ಗಂಡನಾದರೆ ಮನೆಯೊಳಗಿಲ್ಲ
ಬಾರೋ ನನ ಮನೆಗೇ–ನೀನು
ಬಂದ್ಹೋಗೋ ನನ ಮನೆಗೇ ॥

ನಿನ್ನ ಮನೆಗೆ ನಾ ಬಂದರೆ ನನಗೆ
ಏನುಂಟು ಏನಿಲವೇ–ಜಾಣೇ
ಏನುಂಟು ಏನಿಲವೇ?

ಜಾಣಾ ನನ್ನ ಮನೆಗೆ ನೀ ಬಂದರೆ ಈಗ
ಸಣ್ಣಕ್ಕಿ ಸವಿ ಉಂಟು–ಓ ಜಾಣಾ
ಹೋಳಿ ತುಪ್ಪುಂಟು.

ಅವಳು ಅವನ ಮನಿಗೆ ಕರ್ಕಂಡು
ಮನಿಗೆ ಬಂದಳಲ್ಲಾ–ಸ್ವಾಮಿ
ಮನಿಗೆ ಬಂದಳಲ್ಲಾ ॥

ಅವಳು ಅಟ್ಟಕಾದರೆ ಮೆಟ್ಟಲ್ಹಾಕಿ
ಪೆಟಿಗೇನಿಳಸವ್ಳೆ–ಬಾಲೀ
ಪೆಟಿಗೇನಿಳಸವ್ಳೆ ॥

ಅವಳೂ ಸಣ್ಣಕ್ಕಿ ಸ್ಯಾವಿಗೆ ಹೋಳಿಗೆ ತುಪ್ಪಾ
ಅಡಿಗೆ ಮಾಡುತಾಳೆ–ಗುರುವೇ
ಅಡಿಗೇ ಮಾಡುತಾಳೆ ॥

ಅವಳು ಬಂದ ಗೆಣೆಯಗೆ ಊಟಕೆ ನೀಡಿ
ಮಂಚನ್ಹಾಸುತಾಳೇ–ಅವಳೇ
ಮಂಚನಾಸುತಾಳೇ ॥

ಅವಳು ಸಣ್ಣಕ್ಕಿ ಸ್ಯಾವಿಗೆ ಹೋಳಿಗೆ ತುಪ್ಪಾ
ಊಟಕ್ಕಿಡುತಾಳೇ–ಜಾಣಗೆ
ಊಟಕ್ಕಿಡುತಾಳೆ ॥

ಅವಳೂ ಹಟ್ಟಿಲಾಡುವಾ ಮಗನ್ನ ಕರದೂ
ಸಂಚು ಕಟ್ಟುತಾಳೆ–ಸ್ವಾಮೀ
ಸಂಚುಕಟ್ಟುತಾಳೆ

ಅವಳೂ ಕೊಬರಿ ಬೆಲ್ಲ ಸಯವಾಗಿ ಕಂದಗೆ
ಮಡುಲು ಕಟ್ಟುತಾಳೆ–ಕಂದನ್ನ
ಆಡಕೆ ಕಳುವ್ಯವ್ಳೆ–ಜಾಣೆ
ಆಡಕೆ ಕಳುಸವಳೇ ॥

ನೀನೂ ಆಡಿಪಾಡಿಕಂದ್ ಹಸುಕಂದಯ್ಯಾ
ಮನಿಗೆ ಬರುಬ್ಯಾಡಾ–ನೀನು
ಮನಿಗೆ ಬರಲುಬ್ಯಾಡಾ ॥

ಇಬ್ಬರೊಂದು ಮಂಚಾದು ಮ್ಯಾಲೆ
ಸೊಗಸು ಮಾಡುತಾರೇ–ಸ್ವಾಮಿ
ನೀಟುಮಾಡುತಾರೇ ॥

ಆಡಿಪಾಡಿ ಬಂದ ಹಸುಕಂದಯ್ಯ
ಮನೀಗೆ ಬಂದವ್ನೆ–ಸ್ವಾಮೀ
ಮನೀಗೆ ಬಂದವ್ನೆ ॥

ನನ್ನ ಅಪ್ಪನಾದರೆ ದಂಡಿಗೆ ವ್ಹೋದ
ಅವ್ವಾ ಇವನ್ನ್ಯಾರೇ –ತಾಯೇ
ಅಮ್ಮಾ ಇವನ್ನ್ಯಾರೆ?

ನಿನ್ನ ಅಪ್ಪ ಇಲ್ಲ ಇವ ಚಿಕ್ಕಪ್ಪನಲ್ಲವಾ
ಚಿಕ್ಕಪ್ಪನಲವೇನೊ–ಕಂದಾ
ಚಿಕ್ಕಪ್ಪನಲವೇನೋ?

ಅಮ್ಮಾ ಎಂಟು ತಿಂಗಳಿಗೆ ಅಪ್ಪ ಬಂದರೆ
ಕಂಡಿತ ಯೆಳುತೀನೇ–ನಿನ್ನಾ
ದೂರುಮಾಡುತೀನೀ–ನಿನ್ನಾ
ದಿವಾಸ ತೆಗಿತೀನೀ ॥

ನನ್ನ ಜೀವಕೇ ಉಂಬಾಳ ಬಂತು
ಹ್ಯಾಗೆ ಮಾಡುಲಯ್ಯ–ನಾನು
ಇನ್ನೇನು ಮಾಡುಲಯ್ಯಾ?

ಯೆಂಗಾದರೂ ಮಾಡೀ ಕಂದನ
ಕೊಲ್ಲಲು ತಾ ಬಿಡೇ–ನಾನು
ಕೊಲ್ಲಲು ಬಿಡೇ ॥

ಅವಳು ಅಟ್ಟಕಾದರೆ ಏಣಿಯನಾಕೀ
ಪೆಟಿಗನಿಳುಸವಳೇ–ಸ್ವಾಮಿ
ಪೆಟಿಗೇನಿಳುಸವಳೇ ॥

ಅವಳು ಸಣ್ಣಕ್ಕಿ ಸ್ಯಾವಿಗೆ ಹೋಳಿಗೆ ತುಪ್ಪಾ
ಅಡಿಗೆ ಮಾಡುತಾಳೆ–ಬಾಲಗೆ
ಅಡಿಗೆ ಮಾಡುತಾಳೆ ॥

ಅವಳ ಚಿಕ್ಕಮನೆಗೆ ಕಂದನ ಕರೆದು
ಊಟಕೆ ನೀಡುತಾಳೇ–ತಾಯೀ
ಊಟಕೆ ನೀಡುತಾಳೆ ॥

ಅವನು ಊಟ ಮಾಡುವ ಸಮಯದಲ್ಲಿ
ಕೈಕಲು ಕಡುದಾಳೆ–ಕಂದನ
ಕೈಕಲು ಕಡುದಾಳೆ ॥

ಅವ್ವಾ ಹತ್ತು ತಿಂಗಳಿಗೆ ಅಪ್ಪ ಬಂದರೇ
ಖಂಡಿತ ಹೇಳದಿಲ್ಲಾ–ನನ್ನಾ
ಪ್ರಾಣ ತೆಗೆಯಬೇಡಾ ॥

ಅವಳು ಮಂಚದ ಮ್ಯಾಗಳ ಗೆಣಿಯನ ಕರದೂ
ಶವ ತೆಗೆಸುತಾಳೇ–ಕಂದನ
ಕುತ್ತಿಗೇ ಮುರಿಸ್ಯವಳೇ–ತಾಯೀ
ಕುತಿಗೇ ಮುರಿಸ್ಯವಳೇ ॥

ಕಂದನ ಪ್ರಾಣಕೊಂದ ಸುದ್ವ್ಯಾರು ಕಂಡರು?
ಗೌಡಿಯು ಕಂಡವಳೇ–ಪಕ್ಕದ
ಗೌಡಿಯು ಕಂಡವಳೇ–ಸ್ವಾಮೀ
ಗೌಡಿಯು ಕಂಡವಳೇ ॥

ಕಂದನ ಪ್ರಾಣಾ ಕೊಲ್ಲುವ ಬದುಲೇ
ನನ್ನೇ ಕೊಲ್ಲಿರವ್ವಾ–ನೀವಾ
ನನ್ನೇ ಕೊಲ್ಲಿರವ್ವಾ ॥

ನಾಳೇನಾದರೂ ಗೌಡಿ ಹೇಳ್ಯೇಳೆಂದು
ಗೌಡಿಯ ಕೊಲಿಸವಳೆ–ಸ್ವಾಮೀ
ಗೌಡಿಯ ಕೊಲಿಸವಳೇ.

◆◆◆◆

ಹಾಡಿದವರು :
**ಚೌಡಿಕೆ ಸುಬ್ಬಯ್ಯ**, ನೆಲಮಂಗಲ

## ೧೪. ಭುಜಂಗರಾಯ

ಸ್ವಾಮಿ ನೀರ ತಂದು ಕೊಡಿ ನನಿಗೆ
ಸ್ವಾಮಿ ನೀರ ತಂದು ಕೊಡಿ ನನಿಗೆ

ನನಿಗೆ ಬಾಯಿ ಆರುತಾದೆ ಸ್ವಾಮಿ
ಭುಜಂಗರಾಯಾರೆ.

ಜಾಲಾಮರದೆಡೆ ಹೋಗಿ ನಿಂತಕೊಂಡು ಅವ್ರು ಪ್ರಾರ್ತ್ನೆ ಮಾಡಿ ಕೇಳಕೊಂಡಿದಾರೆ ಭುಜಂಗರಾಯರು :

ನಿನ್ನಣಿಯ ಬರಕೀಗ
ನಿನಿಗೆ ಹನ್ನೆರಡು ವರುಸಾವು
ನಿನಿಗೆ ನೀರೇ ಇಲುವಲ್ಲ
ನಾನ್ನೀನು ಮಾಡಲಯ್ಯ?
ಸ್ವಾಮಿ ಭುಜಂಗರಾಯರೆ
ನಿನ್ನ ಮಗನೆ ಅವ್ನೆ ನೋಡು
ಅವ್ನು ಸಂಗಪ್ಪ ದೊರಿಮಗ.
ನಿನ್ನಾ ಸೊಸೆ ಅವ್ಳೆ ನೋಡು
ಅವಳು ಪದ್ಮಾವ್ರೋತಿ ಹೆಣ್ಣು.
ಅವರಿಬ್ರೂನು ಕಡಿದು
ಬಾವಿಗೆ ಆವಾತಿ ಕೊಟ್ಟಾರೆ
ಒಂದು ದಿನ ಮದ್ದೀನ ನೋಡು
ನಿನಿಗೆ ನೀರು ಸಿಕ್ಕುತಾದೆ
ಅಯ್ಯಾ ಭುಜಂಗರಾಯಾರೆ.

ನಿನ್ನ ಮಗ ಸಂಗಪ್ಪ, ಸೊಸೆ ಪದ್ಮಾವತಿ ಹೆಣ್ಣು ಇವರಿಬ್ರುನೂ ಕಡುದು ಬಾವಿಗಾವ್ರುತಿ ಕೊಟ್ಟರೆ ಭುಜಂಗರಾಯ ಒಂದಿನ ಮದ್ದೀನ ನೀರು ಸಿಕತದೆ ಅಂತೇಳಿ ಶಿವನು ಪಾರ್ವತಿ ಹೇಳುದ್ರು. ಸಂಗಪ್ಪನಾಗಿದ್ದವನು ಬ್ಯಾಟೆಗ್ಹೋಗಿದ್ದಾನೆ. ಈ ಮಾತು ಸೊಸೆ ಕೇಳುಸಕೊಂಡ್ಲು. ಗಂಡ ಬ್ಯಾಟೆಗ್ಹೋಗಿ ಮನೆಗೆ ಬಂದ–

ಇವಳು ಚಿಂತೆ ಮಾಡುತಾಳೆ
ಇವಳು ಚಿಂತೆ ಮಾಡುತಾಳೆ.
ನಿನ್ಯರು ಬಯ್ದಾರ್ಧೇಳೆ?
ನಮ್ಮ ತಂದೆ ಬಯ್ದರೇನೆ?
ನಮ್ಮ ತಾಯಿ ಬಯ್ದರೇನೆ?
ನಮ್ಮ ನೆರೆ ಬಯ್ದರೇನೆ?

ನಮ್ಮ ಹೊರೆ ಬಯ್ದರೇನೆ?
ನಮ್ಮ ಮಾವ ಬಯ್ಯಲಿಲ್ಲ
ನಮ್ಮ ಅತ್ತೆ ಬಯ್ಯಲಿಲ್ಲ
ನಮ್ಮ ನೆರೆ ಬಯ್ಯಲಿಲ್ಲ
ನಮ್ಮ ಹೊರೆ ಬಯ್ಯಲಿಲ್ಲ
ನನಗೆ ಭಾಳ ಚಿಂತೆ ಸ್ವಾಮಿ
ಅಯ್ಯೋ ನಿಮ್ಮನ್ನು ಕಡುದು
ಸ್ವಾಮಿ ನನ್ನನ್ನು ಕಡುದು
ಬಾವಿಗೆ ಆವ್ರೂತಿ ಕೊಟ್ಟಾರೆ
ಒಂದ ದಿನ ಮದ್ದಾನವು
ನೀರು ಸಿಕ್ಕುತಾದೆ
ಸ್ವಾಮಿ ಸತ್ಯಾನು ಹೇಳವರೆ.

ಸ್ವಾಮಿ, ನೀವು ನೆನ್ನೆ ಹನ್ನೆರಡು ಗಂಟೆಗೆ ಬ್ಯಾಟೆಗೋಗಿದ್ರಿ. ಶಿವನು ಪಾರ್ವತಿ ಅಂತೆ, ಅವ್ರು ಬಂದು ನಿಮ್ಮ ತಾಮುರದ ಬಾವಿಲ್ಲಿ ನೀರ ಕುಡದರಂತೆ. ಆ ಸುದ್ದಿಯನ್ನು ದನ ಕಾಯುವ ಹುಡುಗರು ಬಂದ್ಹೇಳುದ್ರು. ನಿಂ ತಂದೆಯವ್ರು ಹೋಗಿ ನೋಡುವಾಗ್ಗೆ ಜಲ ಮಥನವಾಗಿತ್ತಂತೆ. ಆಗ ಸ್ವಾಮಿ ನೀರ ತಂದಕೊಡಿ ಅಂತ ಕೇಳುವಾಗ್ಗೆ ನಿನ್ಹತೆ ಬರುಕ್ಕೆ ನೀರಿಲ್ಲ. ನಿನ್ನ ಮಗನಾಗಿರುತಕ್ಕಂಥ ಸಂಗಪ್ಪ, ನಿನ್ನ ಸೊಸೆಯಾಗಿರತಕ್ಕಂಥ ಪದ್ಮಾವತಿ ಇವರಿಬ್ರೂನು ಕಡದಬುಟ್ಟು ಬಾವಿಗಾವ್ರುತಿ ಕೊಟ್ರೆ ಒಂದಿನ ಮದ್ದೀನ ನೀರ ಸಿಕ್ಕತದೆ ಅಂತೇಳಿ ಅವ್ರು ಸತ್ಯಾನು ಹೇಳುದರಂತೆ. ಅದುಕ್ಕೆ ನನುಗೆ ಚಿಂತೆ. ಓಹೋ ನನ್ನೂ ನಿನ್ನೂ ಬಾವಿಗೆ ಅವ್ರುತಿ ಕೊಟ್ರೆ ಒಂದಿನ ಮದ್ದಾನ ನೀರು ಸಿಕ್ಕುದಾದರೆ ಆಗಲಿ–

ನಾನೂ ಹೋಗುಲ್ಹೇಳೆ ಅಯ್ಯೋ
ನೀನೂ ಹೋಗುಲೇಳೆ?
ನನ್ನ ತಂದೆ ತಾಯಿಗಳು
ನೀರ ಕುಡಿಯಲೇಳೆ ಸ್ವಾಮಿ?
ನಮಿಗೆ ಮುಕ್ತಿಯಲ್ಲವೇನೆ
ನಮಿಗೆ ಮುಕ್ತಿಯಲ್ಲವೇನೆ?

ನಂ ತಂದೆ ತಾಯಿಗಳಿಬ್ರು ನೀರ ಕುಡುದ್ರೆ ನಮ್ಮ ಜಲಮ ಸಾರ್ಥಕವಾಯ್ತು. ನಂ ತಂದೆ ತಾಯಿಗಿನ್ನ ದೇವರ್ಯಾವದು? ಅವ್ರು ನೀರ ಕುಡದು ಮುಕ್ತಿ ಹೊಂದಬೇಕಾದ್ದು, ಸ್ವಾಮಿ ನನಿಗೆ ಅದಕೆ ಚಿಂತೆ ಇಲ್ಲ. ನಿಂ ಪ್ರಾಣವ್ರೂ ಹೋಗಲಿ ನನ್ನ ಪ್ರಾಣವ್ರೂ ಹೋಗಲಿ–

ನನ್ನ ಗರಬದಲ್ಲಿ ನೋಡ ಸ್ವಾಮಿ
ಸಂತಾನ ಮೂಡ್ಯತೆ.
ಸ್ವಾಮಿ ಅದಕೆ ಚಿಂತೆ ನನಗೆ

ಸ್ವಾಮಿ ಅದಕೆ ಚಿಂತೆ ಮಾಡುತೀನಿ.
ಸ್ವಾಮಿ ಸಂಗಪ್ಪ ದೊರಿಮಗನೆ.
ಹೌದೇನೆ ಹೆಣ್ಣೆ ನೀನು ಗರಬತಿಯೇನೆ?
ಇದು ಸತ್ಯವೇನೆ ಹೆಣ್ಣೆ?
ಅಯ್ಯೋ ಅಕ್ಕೀಯ ಹಾಕೆಣ್ಣೆ
ಅಯ್ಯೋ ಬುತ್ತೀಯ ಕಟ್ಟೆಣ್ಣೆ
ನಾವು ರಾತ್ರಿಂದ ರಾತ್ರೀನೆ
ನಾವು ಪಯಣ ಮಾಡುವೇಳೆ

ಶಿಶುಹತ್ಯ, ಗೋಹತ್ಯ ಭಾಳ ಪಾಪವಾಗಿರತಕ್ಕದ್ದು. ಇದನ್ನ ನಾವು ಮಾಡಬಾರದು. ಹಂಗಿದ್ದ ಮೇಲೆ ಅಕ್ಕಿಹಾಕಿ ಬುತ್ತಿ ಕಟ್ಟು. ನಂ ತಂದೆ ತಾಯಿಗೆ ಪತ್ತವಿಲ್ಲದಂತೆ ನಾವು ಈ ಗ್ರಾಮ ಬಿಟ್ಟು ಹೊಂಟೋಗುವ–

ಅಕ್ಕಿ ಹಾಕುತಾಳೆ ಅವಳು
ಬುತ್ತಿ ಕಟ್ಟುತಾಳೆ
ಅವ್ರು ರಾತ್ರಿಂದ ರಾತ್ರೀನೆ
ಸ್ವಾಮಿ ಪಯಣ ಮಾಡುತಾರೆ.
ಸ್ವಾಮಿ ಮುಂದುಕೋದರಲ್ಲ

ನಡದ ಕಾಲು ಹೊಪಳಾಯ್ತು, ಬೀಸುವ ತೋಳು ಬೆರಗಾಯ್ತು, ಕಾಂತಾರ ಸಿಕ್ತು. ಅಲ್ಲಿ ಕೀಕಾರಣ್ಯದಲ್ಲಿ ನರಸಂಚಾರವಿಲ್ಲದ ಕಾಂತಾರದಲ್ಲಿ ಯಾವ ಗುಡಿಸಲಲ್ಲಿ ಬಾಳಬೇಕು? ಊರಿಲ್ಲ ಮನೆ ಇಲ್ಲ ಅಂತೇಳಿ ಯೋಚ್ನೆಮಾಡಕೊಂಡು–

ಅಲ್ಲೊಂದು ಆಲಾದ ಮರವಿತ್ತು
ಅಲ್ಲೇ ಗುಡಸಲು ಕಟ್ಟಿ
ಅದರೊಳಗೆ ವಾಸಮಾಡುತಲವರೆ.

ಆಲದ ಮೊದೆಯನ್ನು ಕಿತ್ತು ಅಲ್ಲೇ ಗುಡಿಸಲನ್ನು ಕಟ್ಟಿ ಅದರೊಳಗೆ ವಾಸಮಾಡತಾವ್ರೆ. ಈ ಸಂಗಪ್ಪನಾಗಿರತಕ್ಕಂಥವನು ಯಾವಾಗಲೂ ಬ್ಯಾಟೆಗೋಗಿ ಆಹಾರ ತಕ್ಕಂಡ ಬಂದು ಊಟ ಮಾಡಕೊಂಡು ನರಸಂಚಾರವಿಲ್ಲದ ಕೀಕಾರಣ್ಯದಲ್ಲಿ ವಾಸಮಾಡಕೊಂಡಿರುವಾಗ್ಗೆ, ಈವಮ್ಮನಾಗಿರುವಂಥವಳಿಗೆ ಏಳು ನವನಾರು ಒಂಭತ್ತು ತಿಂಗಳು ತುಂಬುವಾಗ್ಗೆ, ಸಪ್ಪಟ್ಟು ಸರಿರಾತ್ರಿ ಹೊತ್ನಲ್ಲಿ–

ನನಿಗೆ ಬಾಯಿ ಆರುತಾದೆ
ನನಿಗೆ ನೀರ ತಂದುಕೊಡಿ.

ಸ್ವಾಮಿ ಸಂಗಪ್ಪ ದೊರಿಮಗನೆ
ನೀರಿಗೋದರಲ್ಲ ಅವರು.

ನೀರಿಗೋದರಲ್ಲ ಅವರು
ಅಪ್ನು ಪೇಟವ ಹರೀತಾನೆ
ಅಪ್ನು ದಾರವ ಕಟ್ಟುತಾನೆ
ಅಪ್ನು ಕಲ್ಲೀನ ನೆಲುಕೆಲ್ಲ
ಅಪ್ನು ಸುರುದು ಮಡುಗುತಾನೆ
ಅಪ್ನು ಗಿಡ ಕೀಳುತಾನೆ
ಅಪ್ನು ರಸ್ತೆ ಮಾಡುತಾನೆ
ಸ್ವಾಮಿ ನೀರಿಗೋಗುತಾನೆ
ಅವನು ನೀರಿಗೋಗುತಾನೆ.

ಬರುವಾಗ ಕೀಕಾರಣ್ಯದಲ್ಲಿ ದಾರಿತಪ್ಪೋಗಬುಡತದೆ ಅಂತೇಳಿ ಗಿಡ ಕಿತ್ತು ರಸ್ತೆ ಮಾಡತಾನೆ. ಬರುವಾಗ ಕಲ್ಲಿನ ಮೇಲೆ ಕಲ್ಲ ಗುರುತಮಡಗತಾನೆ. ಪೇಟಹರಿತಾನೆ. ದಾರ ಕಟ್ಕೊಂಡು ಹೋಯ್ತನೆ. ಅಲ್ಲಿ ಒಂದು ತಾಂಬುರದ ಕಲ್ಯಾಣಿ. ಅಲ್ಲೊಂದು ಕಾಗೆ ಒಂದ ಗೂಬೆ ಕಾವಲು. ಗೂಬೆ ಕಾವಲಿರುವಾಗ ಈತನಾಗಿದ್ದವನು ಹೋಗಿ ನೀರಮೊಗದ. ಬುಡುಬುಡು ಸಬುತವಾಯ್ತು.

ಕಾಗೆ ಕಾರಿತಲ್ಲ ಸ್ವಾಮಿ
ಗೂಬೆ ಕೂಗಿತಲ್ಲ.
ಯಮ್ಮಂಬೊ ರಾಕ್ಕಸು ಬಂದಿತಲ್ಲ
ಇವನ ನುಂಗುಬುಡತಲ್ಲ ಸ್ವಾಮಿ
ನುಂಗೆಬುಡುತುದಲ್ಲ?

ಕಾಗೆ ಕರ್ರಂತು. ಗೂಬೆ ಗುಕ್ಕಂತು. ಯಮ್ಮಂಬೊ ರಾಕ್ಷ ಬಂದು ಇಪ್ನು ಊಟಮಾಡಬುಡತು. ಸಪ್ಪಟ್ಟು ಸರೊತ್ತು ಕಾರಂಬೊ ರಾತ್ರಿ ಹೊತ್ತನಲ್ಲಿ ಈಯಮ್ಮನಾಗಿದ್ದವಳಿಗೆ ಹಡಿಯೋ ನೋವು ಬಂತು. ಇವ್ರುಳ ಕಷ್ಟ ನೋಡಲಾರದೆ ಸಾಕ್ಷಾತ್ ಭಗವಂತನಾಗಿದ್ದವನು ಒಬ್ಬುಳ ದಾದಿ ಕಳುಸಕೊಟ್ಟ. ರಾತ್ರಿ ಮೂರಗಂಟೆ ಟೇಮನಲ್ಲಿ ಒಂದ ಗಂಡುಮಗು ಹಡದ್ಲು ಈವಮ್ಮ. ಆ ಗಂಡುಮಗುನಗೆ ಈ ದಾದಿಯಾಗಿದ್ದವಳು ರಣಶೂರ ಅನ್ನು ಎಸುರು ಕಟ್ಟುದ್ಲು. ರಣಶೂರ ಹುಟ್ಟುದ ಹನ್ನೆರಡ ಗಂಟೆಗೆ ತಾಯಿ ಎದರು ಎದ್ದು ಕುಳಿತುಕೊಂಡು–

ಅಂಬು ಕೊಡೆ ಯವ್ವ
ನನಿಗೆ ಅಂಬು ಕೊಡೆ ಯವ್ವ
ನನಿಗೆ ಬಿಲ್ಲು ಕೊಡೆ ಯವ್ವ
ನಾನು ಬ್ಯಾಟೆ ಹೋಗುತೀನಿ
ನಾನು ಶಿಕಾರಿ ಹೋಗುತೀನಿ
ನಾನು ಬ್ಯಾಟೆ ಹೋಗುಬೇಕು
ಯವ್ವ ನನ್ನಾ ತಾಯಿ ಕೇಳೆ

ಯಮ್ಮ ನಾನು ಬ್ಯಾಟೆಗ ಹೋಗಬೇಕು. ಅಂಬು ಬಿಲ್ಲು ಕೊಡು. ಪರಮಾತ್ಮನಗರಿವಾಯ್ತು. ಏನು? ರಾತ್ರಿ ಮೂರ ಗಂಟೆನಲ್ಲಿ ಹುಟ್ಟಿ ಹನ್ನೆರಡ ಗಂಟೆ ಹೊತ್ಗೆ ಅಂಬು ಬಿಲ್ಲು ಕೇಳತಾನೆ ರಣಶೂರ ಮಗ. ಮಹಾ ಮಂತ್ರವನ್ನ ಜಪಿಸಿ ಒಂದು ಅಂಬು ಬಿಲ್ಲುಗಳನ್ನು ಹಿಡದುಕೊಂಡು–

ಬ್ಯಾಟೆ ಹೋಗುತಾನೆ ಸ್ವಾಮಿ
ಬ್ಯಾಟೆಗ್ಹೋಗುತಾನೆ ಸ್ವಾಮಿ.
ಒಂದು ಹೊಂಗೆ ಮರುದಡೆ
ಗುಬ್ಬಚ್ಚಿ ಕೂತುಕೊಂಡು
ಸ್ವಾಮಿ ಗಿಜುಗಿಜುನಾದಾರೆ
ಸ್ವಾಮಿ ಶಬ್ದ ಮಾಡುತಾವೆ.
ಇವ್ನು ಕಣ್ಣಿಂದ ಗುರಿಮಾಡಿ
ಸ್ವಾಮಿ ಅಂಬುಗಳನಾದಾರೆ
ಸ್ವಾಮಿ ಜಂಗಿಸಿ ಬಾಣವ
ಅಯ್ಯ ಬಿಟ್ಟನಲ್ಲೊ ನನು ಕಂದ
ಸ್ವಾಮಿ ರಣಾಶೂರ ಮಗುನೆ.

ಅಂಬುಗಳನ್ನು ತಂದು ತುಂಬಲಿ ಮನೆಮಾಡಿ ಬಂಗಿಸಿ ಬಾಣವನ್ನು ಬಿಟ್ಟ. ಆ ಹೊಂಗೆ ಮರದಲ್ಲಿ ಒಂದು ಎಲೆ ಇಲ್ಲದಂತೆ, ಅಲ್ಲಿ ಕೂತಿರುವಂಥ ಹಕ್ಕಿಗಳು ಒಂದೂ ಇಲ್ಲದಂತೆ ಎಲ್ಲಾ ಬಿದ್ದೋದೊ. ಅವ್ನು ವ್ಯಾಲಾಕೊಂಡಿರುವಂಥ ವಲ್ಲಿಬಟ್ಟೆ ಒಳಗೆ ಎಲ್ಲಾನು ಗಂಟಾಕಿಕೊಂಡು ಬಂದು ತಾಯಿ ಮುಂದೆ ಸುರದ.

ಅಪ್ಪಾ ಹಕ್ಕಿ ಹೊಡಿಯಬೌದ?
ಮಗುನೆ ಪಕ್ಷಿ ಹೊಡಿಯಬೌದ?
ಒಂದು ರಾಕ್ಷಸ ಕೊಲ್ಲಯ್ಯ
ಒಂದು ಹುಲಿಯನ ಕೊಲ್ಲಯ್ಯ
ಒಂದು ಕರಡಿಯ ಕೊಲ್ಲಯ್ಯ
ಒಂದು ಸಿಂಹವ ಕೊಲ್ಲಯ್ಯ ಅಯ್ಯ
ಹಕ್ಕಿ ಹೊಡಿಯಬೌದ
ಕಂದ ಪಕ್ಷಿ ಹೊಡಿಯಬೌದ?

ಅಪ್ಪಾ ನರಸಂಚಾರವಿಲ್ಲದ ಕಾಂತಾರದಲ್ಲಿ ಹಾಳೂರ ಕಾಯುವಂಥ ಹಕ್ಕಿ ಪಕ್ಷಿಗಳ ಹೊಡುದ್ರೆ ಧರ್ಮವಲ್ಲ. ರಾಕ್ಷಸ ಕೊಲ್ಲು, ಶಿಮ್ಮುನನ್ನ ಕೊಲ್ಲು, ಕರಡಿಯನ್ನು ಹೊಡಿ, ಅದೆಲ್ಲ ದೊಡ್ಡ ದೊಡ್ಡ ಪ್ರಾಣಿಗಳು. ಅಂಥ ಮೃಗಗಳನ್ನು ಕೊಂದ್ರೆ ನಿನಗೆ ಒಳ್ಳೇದಾಗತದೆ. ಇದು ಬ್ಯಾಡಪ್ಪ. ನಿಜವ ತಾಯಿ? ನಿಜಕಂದ.

ಬ್ಯಾಟಿ ಹೋಗುತಾನೆ ಕಂದ
ಬ್ಯಾಟಿಗ್ಹೋಗುತಾನೆ ಕಂದ.

ಸ್ವಾಮಿ ಹೋಗುವಂಥ ದಾರಿ
ಸ್ವಾಮಿ ರಾಜಗೌಳ ನೋಡಿ
ಹಕ್ಕಿ ಮ್ಯಾಲೆ ಹಕ್ಕಿ
ಮೆಟ್ಟುತಾವೆ ಕಂದ
ಅಯ್ಯ ಮೆಟ್ಟುತಾವೆ ಕಂದ
ಸ್ವಾಮಿ ಭುಜಂಗರಾಯಾರೆ.

ರಾಜಗೌಳ ಹಕ್ಕಿಮ್ಯಾಲ ಹಕ್ಕಿ ಕೂತಕೊಂಡು ಮೆಟ್ಟುದ ನೋಡಿ, ಏನಾಶ್ಚರ್ಯ ? ಪ್ರಪಂಚದಲ್ಲಿ ಇರುವೆಂಬತ್ತೇಳು ಕೋಟಿ ಜೀವರಾಶಿಗೆಲ್ಲ ಗಂಡ ಹೆಂಡತಿ ಮಾಡಿದ್ದಾನೆ ಪರಮೇಶ. ಆದ್ರೆ ನಂ ಅವ್ವನಿಗೆ ಗಂಡ ಯಾರು? ನನಿಗೆ ತಂದೆ ಯಾರು? ನಮ್ಮವ್ವ ಕೀಕಾರಣ್ಯದಲ್ಲಿ ಒಬ್ಬಳೇ ಇದಾಳಲ್ಲ ಯಾಕೆ? ಇದುನ್ನ ಕೇಳಬೇಕು ಅಂತೇಳಿ ಮುಂದಕ್ಹೋಗುದ ಬುಟಬುಟ್ಟು ಹಿಂದಕ ತಿರಿಕೊಂಡು ತಾಯಿ ಹತ್ರುಕ ಬಂದ–

ನನಿಗೆ ತಂದೆ ಯಾರೆ ಅವ್ವ?
ನಿನಿಗೆ ಗಂಡನ್ಯಾರ ಅವ್ವ?
ನನಗೆ ಹೇಳಕೊಡೆ ತಾಯಿ
ಅಯ್ಯಾ ರಣಾಶೂರ ಮಗುನೆ.

ಪರಪಂಚದಲ್ಲಿ ಹಕ್ಕಿ ಪಕ್ಕಿಗೆಲ್ಲ ಗಂಡ ಇದ್ದಾನೆ. ಹೋಗತಕ್ಕಂಥ ದಾರಿ ಒಳಗೆ ಒಂದ ರಾಜಗೌಳ ಹಕ್ಕಿಮ್ಯಾಲಕ್ಕಿ ಕೂತುಕೊಂಡು ಮೆಟ್ಟುತಾ ಇತ್ತು. ನಾನೂ ಯೋಚನೆಮಾಡಿದೆ. ತಾಯಿ ಗರಬದಲ್ಲಿ ನಾನು ಹೆಂಗೆ ಹುಟ್ಟಿದೆ? ನನಿಗೆ ತಂದೆ ಯಾರು ಎಂಬುದಾಗಿ ಕೇಳೂಕ ಬಂದೆ. ನನ್ನ ತಂದೆ ಎಲ್ಲಮ್ಮ ಅಂದ. ಪರಮಾತ್ಮ ನಾನ್ಹೇನೇಳಲಿ? ನನಿಗೆ ನೀರು ತರುವುದಕ್ಕೆ ಹೋದಂಥ ನನ್ನ ಪತಿಯಾಗಿದ್ದವರು ಹಿಂದಕೆ ಬರಲೇ ಇಲ್ಲ. ನನ್ನ ಮಗ ಕೇಳುವಂಥ ಪ್ರಶ್ನೆಗೆ ನಾನೇನುತ್ತರ ಹೇಳ್ಲಿ ಅಂತ ಯೋಚ್ನೆ ಮಾಡುದ್ಲು.

ಅಪ್ಪಾ ಮಗುನೆ ಭುಜಂಗರಾಯರ ಪಟ್ಟಣದಿಂದ ನಿನ್ನ ಪ್ರಾಣ ಹತವಾದದು ಅಂತೇಳಿ ನಿಂ ತಂದೆ ಸುಳ್ಳೇಳಿ ನನ್ನ ಕರಕೊಂಡು ಬಂದ್ರು. ಇಲ್ಲಿ ಕೀಕಾರಣ್ಯ. ಈ ಕೀಕಾರಣ್ಯದಲ್ಲಿ ನನಗೆ ಬಾಯಾರತು. ನೀರು ತರುವುದಕೋಗಿರುವಂಥ ತಂದೆ ಇಂದಿಗೂ ಬರಲಿಲ್ಲ. ಕೊಕ್ಕನ ಕೋಳಿಕೂಗಿ ಬೆಳದೇವ್ರು ಮೂಡೋ ಮೂರು ಗಂಟೆ ಟೇಮಿನಲ್ಲಿ ನೀನು ಹುಟ್ಟಿದೆ. ನೀನು ಬ್ಯಾಟೆಗೆ ಹೋಗುವಾಗ್ಗೆ ಈ ಮಾತು ಕೇಳತಿದೀಯ. ನಾನೇನ ಹೇಳ್ಲಿ? ಆದ್ರೆ ನಿಂ ತಾತ ಆಗಿರುವಂಥ ಭುಜಂಗರಾಯ ಅಂತ ವಿಳಾಸವಿರು ಮಿಳ್ಳೆ ಚಂಬ ತಗೊಂಡೋಗಿದ್ದಾರೆ. ಮಿಳ್ಳೆ ಚಂಬು ಎಲ್ಲಿ ಸಿಕತದೊ ಅಲ್ಲೇ ನಿಂ ತಂದೆ ಮೃತಪಟ್ಟು ಹೋಗಿದ್ದಾರೆ ಹೊರತು ಅಲ್ಲೀತನಕ ನಾನೇನು ಹೇಳಾಕಾಗುದಿಲ್ಲ ಅಂತ ಮಗುನಗೆ ತಾಯಿ ಹೇಳಿದ್ಲು.

ನೋಡುಬೇಕು ನಾನು
ನೋಡುಬೇಕು ಎಂದು
ಅವ್ವ ಗಿಡಮರ ಕೇಳುತಾನೆ

ಅವ್ನು ರಸ್ತಿ ಮಾಡುತಾನೆ
ಸ್ವಾಮಿ ಅದೇ ಜಾಡಿನಲ್ಲಿ
ಸ್ವಾಮಿ ಪೇಟುವ ಹರುದವನಂತೆ
ಅವ್ನು ದಾರವ ಕಟ್ಟುತಾನೆ
ಅದೇ ಜಾಡಿನಲ್ಲಿ ಮಗ ಹೋದುನಲ್ಲ?
ಅಲ್ಲಿ ತಾಮುರುದ ಬಾವಿ
ಸ್ವಾಮಿ ಕಾಗೆ ಕಾರಿತಲ್ಲ?
ಅಲ್ಲಿ ಗೂಬೆ ಕೂಗಿತಲ್ಲ?
ಇದು ಯಮ್ಮಮ್ಮೊ ರಾಕ್ಷಾವ್ರು
ಎದ್ದು ಬಂದಿತಲ್ಲ ಸ್ವಾಮಿ
ಎದ್ದು ಬಂದಿತಲ್ಲ ಸ್ವಾಮಿ.

ಅಂಬುಗಳ ತಗದು ಇವನು
ತುಂಬೆಯ ಮರೆಮಾಡಿ
ಇವ್ನು ಬಾಣ ಬಿಡುವಾಗ
ರಾಕ್ಷ ಓಡಿ ಹೋದ.
ಇವ್ನು ಪಾದಕಟ್ಟಿಕೊಂಡ
ರಾಕ್ಷ ಪಾದಕಟ್ಟಕೊಂಡ
ನನ್ನ ಹೊಡಿಯಬ್ಯಾಡವಯ್ಯ
ನಿನಗೆ ಆಳನಾಗುತೀನಿ
ನನ್ನ ಕೊಲ್ಲುಬ್ಯಾಡವಯ್ಯ
ಅಯ್ಯಾ ರಣಾಶೂರು ಮಗುನೆ.

ಅಪ್ಪಾ, ನಾನು ಎಂತೆಂಥವ್ರನೊ ನೋಡಿದೆ. ನನ್ನ ಮಾತ್ರ ನೀನು ಕೊಂದಾಕಬ್ಯಾಡ. ನಿನಗಾಳಾಗಿ ಹೇಳುದ ಘಾತ ಕೇಳಕೊಂಡು ನಿನ್ನ ಮನೆ ಒಳಗೆ ಜೀತಮಾಡತೀನಪ್ಪ ಅಂತೇಳಿ ರಾಕ್ಷನಾಗಿರತಕ್ಕಂಥವ್ನು ಹುಡುಗನಿಗೆ ಶರಣಾಗತನಾದ–

ರಾಕ್ಷನ ಮುಂದಾಲೆ ಹಿಡುಕೊಂಡ
ರಾಕ್ಷನ ಪಟ್ಟಗೆ ಹಿಡುಕೊಂಡ.
ಸ್ವಾಮಿ ಅಲ್ಲೊಂದ ಅರಮಾನೆ
ನೋಡೀಗ ನವದ್ವಾರ ಬಾಕಾಲು
ಅದರಲಿ ಒಂದ ಮನೆ ಒಳಗ್ಹಾಕವನೆ
ಅವನು ಬೀಗವನ್ಹಾಕವನೆ
ಅವನು ರಣಾಶೂರ ಮಗುನೆ
ಸ್ವಾಮಿ ರಣಶೂರ ಮಗುನೆ.

ರಾಕ್ಷಸ ಮುಂದಲೆ ಹಿಡಕೊಂಡ ಬಂದು ಅರಮನೆ ಕ್ವಾಣೆ ಒಳಗೆ ಹಾಕಿ ಬೀಗಹಾಕಬುಟ್ಟು ತಾಯಿಗ್ಹೇಳಿದ. ಅಮ್ಮ ಇದು ರಾಕ್ಷಸ ಮನೆ. ಈ ಅರಮನೇಲಿ ಹನ್ನೊಂದು ನವದ್ವಾರ ಬಾಕಲು. ಹತ್ತು ನವದ್ವಾರ ಬಾಕಲಲ್ಲಿ ಯಾವ ರೂಂನಲ್ಲಾದ್ರು ಓಡಾಡು. ನಿನಿಗೇನ ಚಂತೆ ಇಲ್ಲ. ಇದೊಂದ ರೂಮುಗ ಮಾತ್ರ ಪ್ರವೇಶಮಾಡಬ್ಯಾಡ ಅಂತೇಳಿ ತಾಯಿಗ ಬುದ್ಧಿ ಹೇಳಬುಟ್ಟು ಶಿಕಾರಿ ಹೊರಟ. ಈಯಮ್ಮನಾಗಿದ್ದಂಥವಳು ತಿಳಕೊಂಡ್ಲು. ನನ್ನ ಮಗ ಹುಟ್ಟಿ ಇನ್ನ ಮೂರ್‍ನಾಲ್ಕು ದಿನಾನು ಆಗಲಿಲ್ಲ. ಆಗಲೇ ಸೂಳೆ ತಗಂಡ ಬಂದು ಈ ರೂಂನಲ್ಲಿಟ್ಟಕೊಂಡು ನನಿಗೇ ಮರುಮಾಚಿ ಹೇಳತಾವನಲ್ಲ. ಏಷ್ಟು ಮೋಸ ಇರಬೌದು ಅಂತೇಳಿ–

ಬೀಗ ತಗುದವಳೆ ಅವಳು
ಬೀಗವ ತಗುದವಳೆ.
ಒಳೀಕೆ ಹೋಗುವಳೆ ಅವಳು
ಅವಳು ಒಳೀಕೆ ಹೋಗವಳೆ.
ಸ್ವಾಮಿ ಮುಂದಾಲೆ ಹಿಡುಕೊಂಡ
ರಾಕ್ಷ ಮುಂದಾಲೆ ಹಿಡುಕೊಂಡ.
ನನ್ನ ತಿನ್ನುಬ್ಯಾಡವಯ್ಯ
ನಿನಿಗೆ ಹೆಂಡೀರಾಗುತೀನಿ
ನಿನಿಗೆ ಮಡದಿಯಾಗುತೀನಿ
ನೀನು ತಿನ್ನುಬ್ಯಾಡವಯ್ಯ
ಒಳ್ಳೆ ಯಮ್ಮಮ್ಮ ರಾಕ್ಷಾರೆ.

ನನಗೆ ಗಂಡನೂ ಇಲ್ಲ. ನನ್ನ ಊಟ ಮಾಡಬ್ಯಾಡ. ನಿನಿಗೆ ಹೆಂಡರಾಗಿದ್ದಬುಡತೀನಿ ಸರಿ. ನನಿಗೆ ನೀನು ಹೆಂಡರಾಗಬೇಕಾದ್ರೆ ನಿನ್ನ ಮಗ ಇದ್ದಾನಲ್ಲ ಆ ರಣಾಶೂರ. ಅವ್ನ ಕೊಂದಾಕತೀನಿ. ಸರಿ. ಅಂತೇಳಿ ನನಿಗೆ ಭಾಷೆಕೊಟ್ರೆ ಸರಿ. ಇಲ್ಲದೇ ಇದ್ರೆ ಆ ರಣಾಶೂರನಾಗಿರತಕ್ಕಂಥ ಮಗ ನಿನ್ನೂ ಬುಡಲ್ಲ ನನ್ನೂ ಬುಡಲ್ಲ. ತಾಯಿ ಕೈಯಿಂದಲೇ ಅವ್ನ ಮರಣ ಆಗಬೇಕು ಅಂದ. ಆಗ ಅವಳು ನಾನು ಕೊಂದಾಕತೀನಿ ಏನು ಮಾಡಬೇಕು ಹೇಳು? ನೀನೇನು ಮಾಡಬ್ಯಾಡ ನಿನ್ನ ಮಗ ಬರೊ ಸಮಯ ನನುಗ್ಗೊತ್ತು. ನಾನು ಹೇಳಬುಡತೀನಿ. ಆಗ ನೀನು ಬೀಗಹಾಕೊಂಡು ಆಚೆಗೋಗು. ನನ್ನ ಎರಡ ಕಣ್ಣು ಹೊಂಟೋದೊ ಅಂತ ಕೂತಕೋ. ಏನಾಯ್ತು ಅಂತ ಕೇಳತಾನೆ. ಹುಲಿ ಹಾಲತಂದು ನನ್ನ ಕಣ್ಣುಗ ಬುಟ್ರೆ ನನ್ನ ಕಣ್ಣು ಬತ್ತಾವೆ ಅಂತೇಳು. ಆಗ ಹಾಲ ತರೊಕೋಯ್ತಾನೆ. ಹುಲಿ ಆಗಿರುವಂಥದ್ದು ಅವ್ನ ಮೃತಪಡಿಸಬುಡಬೌದು. ನೀನಷ್ಟು ಕೆಲಸಮಾಡು–

ಅದೋ ಬತ್ತ ನೋಡೆ
ನಿನ್ನಾ ಮಗ ಬಂದ ನೋಡೆ
ನೀನು ಆಚೀಗೆ ಹೋಗೆಣ್ಣೆ

ನೀನು ಬೀಗಹಾಕ್ಹಣ್ಣೆ
ನೀನು ಪದ್ಮಾವ್ರೋತಿ ಹೆಣ್ಣೆ.
ಅವಳು ಬೀಗವನ್ಹಾಕವಳೆ
ಅವಳು ಈಚೇಗೆ ಬಂದವಳೆ
ಅವಳು ಕಣ್ಣ ಮುಚ್ಚಿಕೊಂಡು
ಅವಳು ಕೂತುಕೊಂಡವಳಲ್ಲ
ಸ್ವಾಮಿ ಕೂತುಕೊಂಡವಳಲ್ಲ.

ಎರಡ ಕಣ್ಣುಮುಚ್ಚಿಕೊಂಡು ಕೂತುಕೊಂಡಿದ್ದಾಳೆ. ಮನಿಗೆ ಮಗ ಬಂದ. ಅಮ್ಮಾ ಇದೇನು?

ಕಣ್ಣು ಹೋದುವಲ್ಲೋ ಮಗುನೆ
ನನಿಗೆ ಕಣ್ಣು ಹೋದುವಲ್ಲೋ
ನಾನಿನ್ನೇನು ಮಾಡಲಯ್ಯ
ನನ್ನ ರಣಾಶೂರು ಮಗುನೆ?

ಅಮ್ಮಾ, ಏನ ಕಾರಣದಿಂದ ನಿನಗೆ ಕಣ್ಣೋದೊ ತಾಯಿ? ಅಪ್ಪಾ ಕಂದ ಅದೇನು ಕಾರಣವ್ರೋ ನೆನ್ನೆದಿನ ಯಾರೋ ಜೋಗಿ ಭಿಕ್ಷುಕ ಬಂದ. ಅವರೇಳಿದಾರೆ. ಹುಲಿಹಾಲ ತಂದು ಕಣ್ಣುಗೆ ಬುಟ್ರೆ ಕಣ್ಣು ಬರತಾವೆ ಅಂತ.

ಹೆದುರಬ್ಯಾಡವಮ್ಮ ನೀನು
ಹೆದುರಬ್ಯಾಡಮ್ಮ ನೀನು.
ನಾನು ಹುಲಿಯ ಹಾಲನು ತಂದು
ನಿನ್ನ ಕಣ್ಣೀಗೆ ಬಿಡುತೀನಿ
ನಿನ್ನ ಕಣ್ಣಗಳ ಉಳಸುತೀನಿ
ನಾನು ರಣಾಶೂರ ಮಗನು
ನಿನ್ನಾ ಗರುಬಾದಲ್ಲಿ
ನಾನು ಜನಿಸಿದಿನಿ
ನೀನಿನೆದುರು ಬ್ಯಾಡವಮ್ಮ
ನಮ್ಮಾ ತಾಯಿ ಕೇಳಿ.

ಅಮ್ಮಾ ಪರಮೇಶ್ವರನ, ವರದಿಂದ ನಿನ್ನ ಗರಬದಲ್ಲಿ ರಣಶೂರ ಎಂಬೊ ಮಗ ಹುಟ್ಟಿದೀನಿ. ಆ ಹುಲಿಹಾಲಿಗೆ ನೀನು ಹೆದುರಕೋಬ್ಯಾಡ–

ಹೋಗುತಾನೆ ಕಂದ ಸ್ವಾಮಿ
ಹೋಗುತಾನೆ ಕಂದ ಸ್ವಾಮಿ.

ಇನ್ನೊಂದೆ ವೇಜಾನ
ಅವ್ನು ಮುಂದಾಕೆ ಹೋದಾನು
ಅಲ್ಲಿಯ ಗವಿಯು ಕಂಡೀತಲ್ಲ
ಅಲ್ಲಿ ಹುಲಿಯ ಮರಿಗೋಳು
ಮರಿಗೋಳು ಆಟಾವ ಆಡುತಾವ
ತಾಯಿ ನೀರೀಗೆ ಹೋಗ್ಯೆತೆ.
ಅಲ್ಲಿ ಶಿಮ್ಮ ಬಂದು ನೋಡು
ಮರಿಯ ತಿನ್ನುಕೆ ಸ್ವಾಮಿ
ಕಾದೆ ಕುಳಿತಾದೆ ಗುರುವೆ.

ಗವಿಯಲ್ಲಿ ಹುಲಿ ಮರಿಮಾಡಬುಟ್ಟು ನೀರತರೂಕ ಹೊಂಟೋಗಿದೆ. ಶಿಮ್ಮ ಬಂದ ಕಾಯ್ಕೊಂಡದೆ ಮರಿತಿನ್ನೂಕೆ. ನೋಡಿದ. ಆಹಾ, ಪರಮಾತ್ಮ ತಾಯಿ ಆಚುಗೆ ಹೊರಟೋಗಿರುವಾಗ ಶಿಮ್ಮ ಬಂದದಲ್ಲ ಮರಿ ತಿನ್ನುಕೆ ಅಂತೇಳಿ–

ಅಂಬುಗಳ ತಗುದ ಇವ್ನು
ತುಂಬೇಲಿ ಮರೆಮಾಡಿ
ಇವ್ನು ಜಂಗಿಸಿ ಬಾಣಾವ
ಇವ್ನು ಬಿಟ್ಟನಲ್ಲ ಗುರುವೆ
ಶಿಮ್ಮ ಪ್ರಾಣ ಹೋಯಿತಲ್ಲ
ಶಿಮ್ಮ ಪ್ರಾಣ ಬಿಟ್ಟೀತಲ್ಲೋ.

ಯಾವಾಗ ಈ ಶಿಮ್ಮುನ ರಣಶೂರ ಹೊಡದನೋ ಆವಾಗ ರಾಕ್ಷುನಿಗೆ ಶಪನ ಬಿಳತು. ಯೋಚ್ನೆಮಾಡಕೊಂಡು ರಾಕ್ಷ ಹೇಳತಾದೆ. ಅಂಥಾ ಶಿಮ್ಮಾನೆ ಕೊಂದಾಕಬುಟ್ನಲ್ಲ ನಿನ್ನ ರಣಶೂರ ಮಗ ಅಂತೇಳಿ ಯೋಚ್ನೆ ಮಾಡುವಾಗ್ಗೆ ಈ ಕಡೆ ದೊಡ್ಡ ಹುಲಿ ಮಕ್ಕಳುಗೆ ಮೇವು ತಗಂಡು ಬತ್ತು. ಮರಿ ಏನೇಳತಾವೆ–

ಕೊಲ್ಲಬಾರದಮ್ಮ ಅವನ
ಕೊಲ್ಲಬ್ಯಾಡಮ್ಮ ಅವನ.

ಅಮ್ಮಾ ಆತುನ ಮಾತ್ರ ಕೊಲ್ಲಬ್ಯಾಡ. ಇಲ್ಲೀಗಂಟ ನೀನೆಷ್ಟು ಮಕ್ಕಳನ ಈದೀದು ಹೊರಟೋಗಿದ್ದಿ. ನಿನ್ನ ಮಕ್ಕಳೆಲ್ಲ ಎಲ್ಲಿ? ಅಪ್ಪಾ ನಾನು ಈದಬುಟ್ಟು ಆ ಮರಿಗೋಳಿಗೆ ಮೇವು ತರೋಕೆ ಹೋಗಿ ಬರುವಾಗ್ಗೆ ಆ ಮರಿಗೋಳು ಉಳಿತಿರಲಿಲ್ಲ. ಕೇಳಮ್ಮ ಈ ಶಿಮ್ಮ ನಿನ್ನ ಮಕ್ಕಳನೆಲ್ಲ ಊಟಮಾಡಿತು. ಆದ್ರೆ ಈ ನರಮಾನ್ಯನಾಗಿರತಕ್ಕಂಥವನು ನಮ್ಮನ್ನ ಉಳಸಿದ್ದಾನೆ. ಅವನಿಗೇನ ಸಹಾಯ ಬೇಕೊ ಅದುನ್ನ ಕೊಟ್ಟು ಸುಕುವಾಗಿ ಆಚುಗ ಕಳಸು. ಅಪ್ಪಾ ಏನು ಕಾರಣಾದಿಂದ ಬಂದೆ? ತಾಯಿ ನಮ್ಮ ತಾಯಿಗೆ ಎರಡು ಕಣ್ಣು ಹೊಂಟೋಗಿದ್ದಾವೆ. ನಿನ್ನ ಹಾಲಿಗೋಸ್ಕರವಾಗಿ ಬಂದೆ. ಆಗ ಆ ಹುಲಿ ಆನಂದದಿಂದ ಮನೀಕಂತು.

ಒಂದು ಚಂಬು ತಂದ
ಅವ್ನು ಕರದುಕೊಂಡ ಸ್ವಾಮಿ
ಅವ್ನು ಹಾಲ ತಾನೆ ಕುಡುದನಲ್ಲ
ಇನ್ನೊಂದು ಚಂಬಾನೆ ಕರದುಕೊಂಡ ಸ್ವಾಮಿ
ಅವ್ನು ಹೊರಟನಲ್ಲ ಶಿವನೆ
ಅವ್ನು ರಣಾಶೂರನ ಮಗನೆ.

ಒಂದ ಚಂಬ ಹಾಲು ಕರದು ತಾನು ಕುಡಕೊಂಡು, ಇನ್ನೊಂದ ಚಂಬ ಕರದು ಕೈಲಿಡಕೊಂಡು ಹೊರಡುವಾಗ್ಗೆ ಸಣ್ಣ ಹುಲಿಮರಿಗಳು ಹುಲಿಯನ್ನು ಅಮ್ಮಾ ನಾವು ನಿನ್ನ ಹಿಂದ ಇರುದಿಲ್ಲ. ಈ ನರಮಾನ್ಯವರ ಹಿಂದೆ ಹೊರಟೋಗಬುಡತೀವಿ ಅಂತೇಳಿಬುಡತಾವೆ.

ಅದೋ ಬತ್ತನ ನೋಡೆ
ನಿನ್ನ ಮಗಾ ಬತ್ತ ನೋಡೆ.
ನೀನು ಆಚೆಗೆ ಹೋಗೆಣ್ಣೆ
ನೀನು ಬೀಗವ ಹಾಕೆಣ್ಣೆ.
ನೀನು ಆಚೆಗೆ ಹೋಗೆಣ್ಣೆ
ಅಯ್ಯೊ ಪದ್ಮಾವ್ರೋತಿ ಹೆಣ್ಣೆ.

ಹುಲಿಹಾಲ ತಗಂಡು ಹುಲಿಮರೀನು ಜತೇಲಿ ತಗಂಡ ಬತ್ತಾ ಇದಾನೆ. ಇನ್ನೆಂಥ ಹತಾಸೂರನಿರಬೇಕು? ಅಗೋ ನೀನಾಚೆಗೆ ಹೋಗಿ ಕೂತಕೋ. ಆ ಹುಲಿಹಾಲ ತಂದು ನಿನ್ನ ಕಣ್ಣುಗ ಬುಡತಾನೆ. ಇನ್ನ ಕಣ್ಣು ಬರಲಿಲ್ಲ ಅಂತೇಳಿ ಮ್ಯಾಲಕ್ಹಾರಿ ಬಿದ್ದಬುಡು. ಇನ್ನೇನ ತಾಯಿ ಅಂತ ಕೇಳತಾನೆ. ಅಪ್ಪಾ ಹೆಣ್ಣಭೇರುಂಡ, ಗಂಡಭೇರುಂಡ ಆ ಪಕ್ಷಿ ಹಾಲನ್ನ ತಂದು ನನ್ನ ಕಣ್ಣುಗ ಬುಟಬುಟ್ರೆ ನನ್ನ ಕಣ್ಣ ಬತ್ತದೆ ಅಂತೇಳಬುಡು. ಗಂಡಭೇರುಂಡ ಹೆಣ್ಣಭೇರುಂಡ ಅನ್ನು ಪಕ್ಸಿ ತಾವುಕ ಹೋದ್ರೆ ಯಾವ ನರಮಾನ್ಯರು ಉಳಿಯೋದಿಲ್ಲ. ಆವಾಗ ನಾನು ನೀನು ಗಂಡ ಹೆಂಡರಾಯ್ತೀವಿ......? ಹಾಲ ತಗಂಡ ಬಂದು ಕಣ್ಣಗಬುಟ್ಟ. ಮೇಕ್ಹಾರಿ ಕೈಳಾಕ ಬಿದ್ದುಬುಟ್ಲು. ಯಾಕಮ್ಮ ? ನನಗಿದರಲ್ಲೂ ಕಣ್ಣುಬರಲಿಲ್ಲ. ಗಂಡಭೇರುಂಡ ಹೆಣ್ಣುಭೇರುಂಡ ಪಕ್ಸಿಗಳ ಹಾಲನ್ನ ತಕ್ಕಂಡು ಬಂದು ನನ್ನ ಕಣ್ಣುಗ ಬುಟ್ರೆ ನನ್ನ ಕಣ್ಣ ಬರತಾವೆ ಅಂತೇಳುದ್ಲು–

ಹೆದರುಬ್ಯಾಡವಮ್ಮ ನೀನಿನ್ನು
ಹೆದರುಬ್ಯಾಡವಮ್ಮ ನೀನಿನ್ನು.
ನಾನು ಹೋಗುತೀನಿ ತಾಯಿ
ಅವ್ರುನ ಆಚೀಗೆ ಕಳುಸವರೆ
ಇವಳು ಬೀಗವ ತಗುದವಳೆ
ಇವಳು ವಿಲಾಸ ನಡುಸವಳೆ
ಇವಳು ತಮಾಸೆ ನಡುಸವಳೆ

ಕಂದನ ಆಚೆಗೆ ಕಳುಸವಳೆ
ಅವಳು ಪದ್ಮಾವ್ರೋತಿ ಹೆಣ್ಣೆ

ಕಂದುನ್ನಾಚುಗೆ ಕಳುಸಬುಟ್ಟು ಬೀಗ ತಗದು, ರಾಕ್ಷಸು ಇವಳು ವಿನೋದ ಆಡತಾವ್ರೆ. ರಣಾಶೂರ ಮುಂದುಕ ಒಂದ ವೇಜನ ಹೋದ. ಅಲ್ಲಿ ಒಂದ ಅರಾಬಿ ಆಲದ ಮರ. ಆಲದ ಮರದಡೆ ಗಂಡಭೇರುಂಡ ಹೆಣ್ಣಭೇರುಂಡ ಪಕ್ಷಿಗಳು ಮರಿಮಾಡಬುಟ್ಟು ಮೇವು ತರೋಕೆ ಹೊಂಟೋಗಿದ್ದಾವೆ. ಇವ್ನು ಆಯಾಸವಾಗಿ ಕುತಕೊಂಡ. ಆಗ ಏಳ ತಲೆ ಸರಪ ಬಂದು ಮರಿಗಳ ನುಂಗಾಕ್ಹೋಯ್ತು. ಮನಿಗಿದ್ದವನು–

ಅಂಬುನಾರೆ ತಗುದ ಸ್ವಾಮಿ
ದುಂಬಿಲೆ ಮರೆಮಾಡಿ
ಝುಂಗಿಸಿ ಬಾಣಾವ
ಬಿಟ್ಟನಲ್ಲೊ ಗುರುದೇವ
ಸ್ವಾಮಿ ಪಡಾ ಹೊಂದಿತಲ್ಲ.
ಸರಪ ಪಡಾ ಹೊಂದಿತಲ್ಲ

ಅಂಬುಗಳನ್ನು ತೆಗೆದು ದುಂಬಿಲೆ ಮರೆಮಾಡಿ ಜಂಗಿಸಿ ಬಾಣ ಬಿಟ್ಟೇಟಿಗೆ ಏಳ್ಹೆಡೆನು ಕತ್ತುರಸೋಗಿ ಒಂದೆಡೆ ಬಂದು ಇವ್ನು ಮುಟಬುಡತು–

ಪ್ರಾಣ ಹೋಯಿತಲ್ಲೊ ಕಂದನ
ಜೀವಹೋಯಿತಲ್ಲೊ ಕಂದನ
ಪ್ರಾಣಹೋಯಿತಲ್ಲೋ ಅಯ್ಯೋ
ಹೋಯಿತಲ್ಲೋ ಗುರುವೆ.

ಅಷ್ಟೊತ್ಗೆ ಗಂಡಭೇರುಂಡ ಹೆಣ್ಣುಭೇರುಂಡ ಪಕ್ಷಿ ಬಂದೊ. ಮರಿಗಳಗೆ ಮೇವು ಕೊಡೂಕೋದ್ರೆ ಅವು ಊಟಮಾಡಲಿಲ್ಲ.

ಊಟ ಬ್ಯಾಡಮ್ಮ ನಮಿಗೆ
ಊಟ ಬ್ಯಾಡಮ್ಮ ನಮಿಗೆ.

ತಾಯಿ ನಮಿಗೋಸ್ಕರವಾಗಿ ಈ ನರಮಾನ್ಯನು ಪಾಣತ್ಯವಾಗಿದ್ದಾನೆ; ಅವ್ನ ಜೀವ ಉಳಿಸೋಗಂಟ ನಾವು ಊಟಮಾಡೂದಿಲ್ಲ. ಈ ಎರಡ ಪಕ್ಷೀನು ಪುನಾ ಹೊಂಟೋಗಿ ಶಿವನಾಂಬು ಹಣ್ಣು ಪರಮಾಂಬು ಹಣ್ಣು ಕಚ್ಚಕೊಂಡು ಬಂದು ಕಡದಿರುವಂಥ ಜಾಗಕ್ಕೆ ಮೂತಿಲ್ಲಿ ಚುಚ್ಚಿ ಮಡಗುದುವು. ಎಷ್ಟೊತ್ತು ಮನಗಿದ್ದನಪ್ಪ ಅಂತ ಮ್ಯಾಲುಕ್ಕೆದ್ದ. ಅಮ್ಮಾ ಅವನಿಗೇನ ಕಷ್ಟವ್ರೋ ಏನೋ. ಆ ಕಷ್ಟ ಪರಿಹಾರ ಮಾಡೂಗಂಟ ನಾವು ಊಟಮಾಡೂದಿಲ್ಲ.

ಏನ ಕಷ್ಟವಯ್ಯ ನಿನಿಗೆ
ಏನ ಕಷ್ಟವಯ್ಯ ನಿನಿಗೆ?

ನಮಿಗೆ ಹೇಳುಕೊಡೋ ಕಂದ
ನಮಿಗೆ ಹೇಳುಕೊಡೋ ಕಂದ.

ತಾಯಿ ನನಗಿನ್ಯಾವ ಕಷ್ಟವು ಇಲ್ಲ. ನಂ ತಾಯಿಗೆ ಎರಡು ಕಣ್ಣುಹೊಂಟೋಗಿದ್ದಾವೆ. ನಿಂ ಹಾಲು ತಗಂಡ ಬಂದು ಕಣ್ಣುಗಬುಟ್ರೆ ಕಣ್ಣು ಬತ್ತಾವೆ ಅಂದ–

ಸುಳ್ಳು ಕಾಣೊ ಕಂದ ಇದು
ಸುಳ್ಳು ಕಾಣೋ ಕಂದ ಇದು
ಅಕ್ಕಿ ಪಕ್ಸೀಗೆ ಹಾಲುಂಟೆ ಮಗುನೆ?

ಯಾರಪ್ಪ ನಿನಗೇಳದವ್ರು? ಹಕ್ಕಿ ಪಕ್ಸಿಗೆ ಹಾಲುಂಟೆ? ಕುಕ್ಕಬಾಯಿಂದ ತಂದು ನಾವು ಹಕ್ಕಿ ಪಕ್ಷಿ ಸಾಕತೀವಿ. ನಿನ್ನ ತಾಯಿಯಾಗಿರತಕ್ಕವಳು. ರಾಕ್ಷಸ ಮಡಿಕೊಂಡು ಈ ಮಾಯವನ್ನು ಹೇಳತಾ ಇದ್ದಾಳೆ, ನಿನ್ನ ಪ್ರಾಣತ್ಯ ಮಾಡೂ ಸಲುವಾಗಿ. ಇದು ನಿಜವಾದ ಮಾತು ಅಂತೇಳಿ ಎರಡ ಪಕ್ಷಿಗಳು ನುಡಿದಿದ್ದಾವೆ. ಆವಾಗ ತಾಯಿ ಕಡೆ ಹಿಂದರಗಿ ಹೊರಟನಲ್ಲ? ಆಗ ಎರಡು ಮರಿಯೂ ಇವ್ನ ಜತೆಬಿದ್ದೊ. ನಾವು ನಿಂ ಜತೇಲಿ ಇರೋದಿಲ್ಲ. ಎಂದಿದ್ರು ಇವನ ಪ್ರಾಣಹತವಾಯ್ತದೆ ಅಂತ ನೀವೇಳಿದ್ದೀರಿ. ಈ ನರಮಾನ್ಯವನ ಪ್ರಾಣಾನ ನಾವೇ ಉಳುಸಬೇಕಾಗಿರುವುದು. ನಿಂ ಜತೇಲಿ ನಾವಿರೋದಿಲ್ಲ ಎಂಬುದಾಗಿ ಎರಡು ಪಕ್ಷಿಮರಿ, ಹುಲಿಮರಿಗಳೂನು ರಣಾಶೂರುನ ಜತೇಲಿ ಹೊಂಟೊ.

ಈ ಕಡೆ ರಾಕ್ಷಸನಾಗಿರುವದು ಏನೇಳತಾದೆ ಅಂದ್ರೆ, ಅದರಲ್ಲಯೂ ನಿನ್ನ ಮಗ ಉಳಕೊಂಡ. ಈಗ ಬೀಗಹಾಕೊಂಡು ಆಚಗೊಂಟೋಗು. ನನ್ನ ಕಣ್ಣುಬಂದಬುಟ್ಟೊ ಅಂತೇಳು. ಹಾಲು ಪಂಚಾಮೃತದಡಗೆ ಮಾಡಕೊಂಡು ಊಟ ಮಾಡಬುಟ್ಟು, ಅಪ್ಪಾ ನಾನು ನೀನು ಪಗಡೆ ಆಡಬೇಕು ಅಂತೇಳು. ಆಗ ನಿನ್ನ ಮಗ ಅಮ್ಮಾ ಸತಿ ಪುರುಷಗೆ ಪಗಡೆ. ತಾಯಿ ಮಕ್ಳುಗೆ ಎಲ್ಲಾದ್ರು ಪಗಡೆ ಉಂಟೇನಮ್ಮ ಅಂತಾನೆ. ಅಪ್ಪಾ ಇಲ್ಲಿ ಈ ಕೀಕಾರಣ್ಯದಲ್ಲಿ ನನ್ನೊಬ್ಳುಗೆ ಬಾಳ ಬೇಜಾರಾಗದೆ. ನೀನು ನಾನು ಪಗಡೆ ಆಡಲೇಬೇಕು ಅಂತ ಹೇಳು. ಆಗ ಪಗಡೇಗೆ ಕುಂತುಕೋತಾನೆ. ಪಗಡೆ ಒಳಗೆ ನಾನು ಬಾಳ ನಿಸ್ಸೀಮನಾಗಿದ್ದೀನಿ. ಅವ್ನು ಪಗಡೆ ಕೈಗೆ ತಕಳುವಾಗ ಇದರೇನಪ್ಪ ಪಂಥ ಅಂತ ಅವ್ನ ಕೇಳು. ಏನಮ್ಮ ಅಂತಾನೆ. ನೀನೇನಾದ್ರು ಸೋತ್ರೆ ನನ್ನ ಚಂದ್ರಾಯಧದಿಂದ ನಿನ್ನ ಕುತ್ತಿಗೆ ಕೂದು ಸಮುದ್ರಕ ಹಾಕತೀನಿ. ನಾನೇನಾದ್ರು ಸೋತ್ರೆ ನಿನ್ನ ಚಂದ್ರಾಯಧದಿಂದ ನನ್ನ ಕುತ್ತಿಗೆ ಕೂದು ಸಮುದ್ರಕ ಹಾಕು ಅಂತ ಪಂಥಮಾಡು. ಅವ್ನ ಪಗಡೇಲಿ ಸೋತ ಮೇಲೆ ನಿನ್ನ ಚಂದ್ರಾಯಧದಿಂದ ಕುತ್ತಿಗೆ ಕೂದು ಸಮುದ್ರಕ ಎತ್ತಿ ಬಿಸಾಕಬುಡು. ನೋಡು ಬರತಾವ್ನೆ. ಬೀಗ ಹಾಕೊಂಡು ಆಚೆಗೋಗು ಅಂತ ರಾಕ್ಷ ಕೇಳತಾವ್ನೆ.

ಬರತಕ್ಕಂಥ ದಾರಿ ಒಳಗೆ ಒಬ್ಬ ದೊರಿ ಮಗಳು ಹನ್ನೆರಡ ವರ್ಸದಿಂದ ಕಾಯುತಾವಳೆ. ಹುಲಿಮರಿ, ಗಂಡಭೇರುಂಡ ಹೆಣಭೇರುಂಡ ಅನ್ನೂ ಪಕ್ಷಿ ಯಾರು ತರತಾನೊ ಅಂಥಾವನನ್ನೆ ನಾನು ಲಗ್ನವಾಗಬೇಕು. ಅಲ್ಲೀತನಕ ನಾನು ಲಗ್ನವಾಗುವುದಿಲ್ಲ, ಅಂತ ಶಪಥ

ಮಾಡಕೊಂಡಿದಾಳೆ. ಉಪ್ಪರಗೆ ಮ್ಯಾಲೆ ನಿಂತು ನೋಡತಿದಾಳೆ. ರಣಶೂರ ಬರತಕ್ಕಂಥ ಜಾಡನ್ನ ನೋಡಕೊಂಡ್ಲು. ಹುಲಿಮರಿ ಮುಂದೆ ಬರುತಾ ಇದೆ. ಎರಡ ಪಕ್ಷಿಗಳು ಎರಡ ಭುಜದ ಮ್ಯಾಲೆ ಕುಂತದೆ. ನೋಡುದ್ಲು. ಆಗ ಅರಮನೆ ಒಳಗಿದ್ದ ದೂತನ ಕಳಸುದ್ಲು. ದೂತ ಬಂದು ನಮ್ಮ ದೊರೆಮಗಳು ಕರೀತಾಳೆ ಅಂತ ಕರಕೊಂಡು ಬಂದ. ಸ್ವಾಮಿ ನಾನು ಇಲ್ಲಿಗೆ ಹನ್ನೆರಡ ವರ್ಸದಿಂದ ಹುಲಿಮರಿ ಹೆಣ್ಣಭೇರುಂಡ ಗಂಡಭೇರುಂಡ ಪಕ್ಷಿಗಳನ ಯಾರು ತರತಾರೋ ಅವ್ರುರನ್ನೆ ಲಗ್ನವಾಗಬೇಕು ಅಂತ ನಿಶ್ಚಯಿಸಿಕೊಂಡಿದ್ದೆ. ಈವತ್ತು ನನಿಗೆ ವರ ಸಿಕ್ತು. ಅದಕ್ಕೆ ರಣಾಶೂರ ಈ ಟೇಮಿನಲ್ಲಿ ನಾನಿರುವುದಿಲ್ಲ. ನಮ್ಮ ತಾಯಿಗೆ ಎರಡ ಕಣ್ಣು ಪ್ರೋಂಟೋಗಬುಟ್ಟು ಪ್ರಲಾಪಿಸುತಾ ಇದಾಳೆ. ಹೋಗಿ ನೋಡಿಕೊಂಡು ಬರತೀನಿ ಎಂಬುದಾಗಿ ತಂದಿರುವಂತ ಶಿವನಾಂಬು ಹಣ್ಣು. ಪರಮಾಂಬು ಹಣ್ಣು ಅಲ್ಲೇ ಬುಟಬುಟ್ಟು ಅದೇ ಸಾಕ್ಷಿ ಮಾಡಬುಟ್ಟು ಹೊರಟಬಂದಬುಟ್ಟ.

ರಣಾಶೂರನ ತಾಯಿ ಅಪ್ಪ ನಿನ್ನ ಕರುಣಕಟಾಕ್ಷದಿಂದ ನನಗೆರಡ ಕಣ್ಣು ಬಂದೊ. ಮಗ ಆಯಾಸದಿಂದ ಬಂದಿದ್ದವನು ಮಲೀಕೊಂಡ. ತಾಯಿ ಅಡಗೆ ಮಾಡುದ್ಲು. ತಾಯಿಮಕ್ಕಳು ಇಬ್ರು ಜತೇಲಿ ಊಟಮಾಡುದ್ರು. ಊಟಮಾಡಿಯಾದಮೇಲೆ ಅಪ್ಪಾ ನನಿಗೆ ಬೇಜಾರಗತದೆ. ನೀನು ನಾನು ಪಗಡೆ ಆಡಬೇಕು. ತಾಯಿ ತಾಯಿ ಮಕ್ಕುಳಗೆಲ್ಲಾದ್ರು ಪಗಡೆ ಉಂಟೆ? ಸತಿಪುರುಷರಿಗೆ ಪಗಡೆ ಉಂಟು. ಇದು ಯಾವ ಧರ್ಮವಮ್ಮ?

ಆಡಬೇಕು ಕಂದ ನಾನು
ಪಗುಡೆ ಆಡಬೇಕು
ನನಿಗೆ ಬೇಜಾರವಾಗುತ್ತೈತಿ
ಅಯ್ಯಾ ರಣಾಸುರ ಮಗುನೆ

ಅಪ್ಪಾ ತಾಯಿ ಮಕ್ಕಳಾದರೇನು? ಸಂತೋಸಕ್ಕಾಡೂದು ತಾನೆ? ಅಂದಾಗ ತಾಯಿ ಮಾತ ಮೀರಬಾರದು ಅಂತೇಳಿ ರಣಾಸೂರ ಪಗಡೆ ಎತ್ತುಕೊಂಡ. ತಾಯಿ ಕೈ ಹಿಡಕೊಂಡ್ಲು. ತಾಯಿ ಮಕ್ಕಳಾದರೇನು? ಬಾಯಿ ಮಾತು ಚನ್ನಾಗಿರಬೇಕು. ಮಗನೆ ಪಗಡೆ ಆಟದಲ್ಲಿ ನೀನು ಸೊತರೇನು, ನಾನು ಸೋತರೇನು? ನನಗೇನು ಗೊತ್ತಿಲ್ಲಮ್ಮ. ನೀನೇ ಹೇಳಬೇಕು. ಅಪ್ಪಾ, ನೀನೇನಾದರೂ ಸೋತರೆ ನನ್ನ ಚಂದ್ರಾಯುಧದಲ್ಲಿ ನಿನ್ನ ಪ್ರಾಣತ್ಯ ಮಾಡಿ ಸಮುದ್ರಕಾಕತೀನಿ. ನಾನೇನಾದರೂ ಸೋತರೆ ನಿನ್ನ ಚಂದ್ರಾಯುಧದಲ್ಲಿ ನನ್ನ ಪ್ರಾಣತ್ಯ ಮಾಡಿ ಸಮುದ್ರಕ ಹಾಕು. ಇಷ್ಟ ಮಾತು. ತಾಯಿ ಹ್ಯಾಗೆ ಹೇಳತೀಯೊ ಹಾಗೇ ಸರಿ.

ಪಗಡೆ ಹಿಡಿದುಕೊಂಡ ಆಗ
ಪಗಡೆ ಹಿಡಿದುಕೊಂಡ ಆಗ
ಅವನು ಪಗಡೆ ಬುಟ್ಟನಲ್ಲ
ಅವನು ಸೋತುಬಿಟ್ಟನಲ್ಲ.
ಕಂದ ಸೋತುಬಿದ್ದನಲ್ಲ?

ಮತ್ತೊಂದು ಸಾರೀಯ
ಅವನು ಪಗಡೆ ಹಿಡಿದುಕೊಂಡ
ಅವನು ಪಗಡೆಯ ಬುಟ್ಟವನೆ
ಕಂದ ಸೋತು ಬಿದ್ದನಲ್ಲ?
ಕಂದ ಜೂಜನಾಡುತಾನೆ ಅವನು
ಇನ್ನೊಂದು ಸಾರೀಯ
ಪಗಡೆ ಎತ್ತುಕೊಂಡ ಅಯ್ಯೊ
ಸೋತು ಬಿದ್ದನಲ್ಲೋ ಗುರುವೇ
ರಣಾಸೂರ ಮಗನೆ

ಮೂರ ಸಾರೀನು ಸೋತೋದ. ಆಗ ತಾಯಿ ಏನ ಮಾಡಿದ್ಲು ಅಂದ್ರೆ–

ಚಂದ್ರಾಯುಧ ಹಿಡುದವರೆ
ಮಗನ ಕುತಿಗೇಯ ಕೂದವಳೆ
ಅವಳು ಮೂಟೆಯ ಕಟುತಾಳೆ
ಸ್ವಾಮಿ ಸಮುದ್ರಕಾಕವಳೆ
ಅಯ್ಯೊ ರಣಾಸೂರ ಮಗುನೆ

ಮಗನ ಕುತ್ತಿಗೆ ಕೂದು ಸಮುದ್ರಕಾಕಬುಟ್ಟು ತಾಯಿ ಆಗಿರತಕ್ಕವಳು_

ಬೀಗವ ತಗುದವಳೆ ಅವಳು
ಒಳೀಕೆ ಹೋಗವಳೆ
ರಾಕ್ಷ ಮುಂದಲೆ ಹಿಡುಕೊಂಡ.

ನಮಿಗ್ಯಾವ ಪಟ್ಟವ್ರೊ ಗೊತ್ತಿಲ್ಲ. ತೋರುಸತೀನಿ ನಡಿ ಅಂದು ಕರ್‍ಕೊಂಡು ಬಂದ. ಅದೇ ಬುಜಗಂಗರಾಯ್ನ ಊರ ಮುಂದೆ ಇವರಿಬ್ರು ನಿಂತುಕೊಂಡು ಆಗ ಭುಜಂಗರಾಯನ ಕರುಸುದ್ರು. ನಿನ್ನ ಮಗನಾಗಿರುವಂಥ ಸಂಗಪ್ಪ ನಿನ್ನ ಸೊಸೆಯಾಗಿರುವಂಥ ಪದ್ಮಾವ್ರೋತಿ ಅವರ ಗರ್ಭದಲ್ಲಿ ಹುಟ್ಟಿರುವ ಮಗ ಇವ್ನು–

ನಿನ್ನ ಹಣೆಯ ಬರಹಕೀಗ
ನಿನಿಗೆ ಹನ್ನೆರಡ ವರುಸಾವ್ರು
ನಿನಿಗೆ ನೀರೆ ಇಲ್ಲವಲ್ಲ
ಶಿವನು ಸಾತಾನು ಮಾತೀಗ
ನಾನು ನಿಜವ ಮಾಡುತೀನಿ
ಇವನಿಗೆ ಪಟ್ಟವ ಕೋಡುಬೇಕು
ಇವನಿಗೆ ಪಾಳ್ಯಾವ ಕೊಡುಬೇಕು

ಸ್ವಾಮಿ ಕೇಳುತಾಳೆ ಆಗ
ಮಲಿಗಮ್ಮ ಎಂಬುವಳೊ

ಶಿವನು ಪಾರ್ವತಿ ಆಗಿದ್ದವರು, ನಿನ್ನ ಮಗ ಸಂಗಪ್ಪ, ನಿನ್ನ ಸೊಸೆ ಪದ್ಮಾವತಿ, ಇಬ್ರೂನು ಕಡುದು ಈ ಬಾವಿಗೆ ಆವೃತಿ ಕೊಟ್ರೆ, ದಿನ ಮದ್ದೀನ ನೀರು ಸಿಕ್ತದೆ ಅಂತ ಹೇಳಿದ್ದು ನಿಜವ? ನಿಜ ಸ್ವಾಮಿ. ಆಗ ಈ ಮಿಳ್ಳೆಚಂಬನಲ್ಲಿರತಕ್ಕಂಥ ಬೂದಿಯನ್ನ ತಗದಕೊಂಡು ಬಂದು ಆ ಬಾವಿ ಒಳೀಕ ಹಾಕುದ್ರು.

ನೀರು ಬಂದವಲ್ಲ ಸ್ವಾಮಿ
ನೀರು ಬಂದವಲ್ಲ ಸ್ವಾಮಿ
ಎಡುಗೈಲಿ ಹಿಡುಕೊಂಡ ಸ್ವಾಮಿ
ತಾಮುರುದು ಚಂಬ
ಬಲಗೈಲಿ ಹಿಡುಕೊಂಡು
ಒಂದು ಚಂಬ ಮೊಗುದರಲ್ಲಿ
ಸ್ವಾಮಿ ನೀರ ಕುಡುದರಲ್ಲ.

ಆಗ ಭುಜಂಗರಾಯನಾಗಿದ್ದವನು ಸತ್ಯವಾದ ಮಾತು, ಇವನೇ ನನ್ನ ಮೊಮ್ಮಗ ಅಂತೇಳಿ ತನ್ನ ರಾಜ್ಯವನ್ನ ಮೊಮ್ಮಗನಿಗೆ ಕೊಟ್ಟು ರಾಜ್ಯಾಭಿಷೇಕ ಮಾಡಿದ_

ನೀವು ತೂಗೀರಿ ರಂಗಾನ ತೂಗೀರಿ ಬಲಾನ
ತೂಗೀರಿ ಆನಂದ ಅಚ್ಚುತಾನ.
ನಮ್ಮ ಮಾಗಾಡಿ ರಂಗಾನ ತೂಗೀರಿ
ನಮ್ಮ ಬಯಲು ಹನುಮಂತರಾಯನ ತೂಗೀರಿ.
ನಮ್ಮ ರೇಣಿಕೆ ಬ್ರಹ್ಮಾನ ತೂಗೀರಿ ನೀವು
ಮಂಗಾಳ ಜಯ ಮಂಗಾಳ
ಮಂಗಾಳ ಸುಖ ಮಂಗಾಳ.
ಸುಬುದಲ್ಲಿ ಎತ್ತೀರಿ ಮಂಗಳಾರತಿಯ
ಸತ್ಯಾವಿದ್ದಾರೆ ನಮ್ಮ ಮಾತಾಯೀಗೆ
ಸತ್ಯಾವಿದ್ದಾರೆ ನಮ್ಮ ಮಾತಾಯಿಗೆ ಎಲ್ಲವ್ವಾಗೆ
ಸತ್ಯಾದಿಂದಾರುತಿ ತಂದೆತ್ತೀರೊ. ‖ ಮಂಗಳ ‖

◆◆◆◆

ಹಾಡಿದವರು : **ಚೌಡಕಿ ಸುಬ್ಬಯ್ಯ**, ನೆಲಮಂಗಲ

# ೧೫. ಚದುರಂಗ ಮಹಾರಾಜ

ಪನ್ನಂಗಧರನೆ ನಿನ್ನಾ 'ಪಾದವ'[1] ಸ್ತುತಿಸುವೆ ನಾವು
ಹರಿಯೇ ಶಂಭು ಮಾದೇವನ ಕರುಣಾ ಹೊಂದಿರಲು ಶಂಕರಾ.

ಕೇಳಿರಿ ಮಹರಾಜನ ಕತೆಯ ಕೇಳಿರಿ ವನವಾಸದ ಕತೆಯ
ಕೇಳಿರಿ ಪಡಲಾರದ ಕತೆಯ, ಕೇಳಿರಿ ಮೈಲಾರನ ಕತೆಯ
ಕೇಳಿರಿ ಪರದೇಸರ ಕತೆಯ, ಕೇಳಿರಿ ಬಡತನದ ಕತೆಯ
ನೀವು ಲಾಲಿಸಿ ಕೇಳಿರಿ ಸ್ವಾಮಿ ಬಡತನದ ಕತೆಯಾ
ಹೊನ್ನಿದ್ದಾರೇನು ನಮಗೇ ಚಿನ್ನಿದ್ದಾರೇನು ನಮಿಗೆ
ಬಂಗಾರವಿದ್ದರೇನು ಬಂಗಾರವಿದ್ದರೇನು?
ನಮಗೇ ಬಂದಿಲ್ಲಿ ಉಣ್ಣುವಂಥಾ ಸಂತಾನವಿಲ್ಲವ್ರೋ ಸಂತಾನವಿಲ್ಲವ್ರೋ.

ಚದುರಂಗ ಮಹರಾಜನ ಪಟ್ಟಣವೆಂದರೆ ಹದಿನಾರು ಗಾವುದಾ. ಎತ್ತ ನೋಡಿದರೂ ಭಜಂತ್ರಿ ಭಜಂತ್ರಿ, ಡೋಲು, ನಾಟಕಗಳುಂಟಲ್ಲ ಸ್ವಾಮಿ. ಅನ್ನದಾನಗಳು, ಕನ್ಯದಾನಗಳು, ಗೋವುದಾನಗಳು ಮಾಡುವ ರಾಜಾಧಿರಾಜರು–

ಅವರಣ್ಣ ತಮ್ಮಂದಿರಾಗಿರತಕ್ಕಂಥಾ ಐರವತಿ ರಾಜ,
ಮೈರವತಿ ರಾಜ, ನೀಲಕಂಠರಾಜ, ಭಕ್ತೇಶ್ವರ ರಾಜರುಂಟಂತಲ್ಲ?
ಅವರು ನಾಲಕು ಜನಕೂ ಪುತ್ರಸಂತಾನ ಉಂಟಂತಲ್ಲ?

ಈ ಚದುರಂಗ ಮಹರಾಜನಿಗೆ ಪುತ್ರ ಸಂತಾನವಿಲ್ಲವಲ್ಲ ಪರಮಾತ್ಮನೇ–

ಅವನು ಒಬ್ಬ ತಾಯ ಮಕ್ಕಳೆಲ್ಲಾ ಮೆಚ್ಚಿ ಏಳುಜನ(ರನ್ನು)
ಲಗ್ನವಾಗಿದ್ದನಲ್ಲ_
ಅವರು ಏಳು ಜನ ಗರ್ಭದ ಒಳುಗೇ ಸಂತಾನ ಇಲ್ಲವ್ರೋ
ಸೌಭಾಗ್ಯ ಇಲ್ಲವ್ರೋ
ಅಯ್ಯಾ ಏನು ವನವಾಸವು ತಂದೊ
ಗವಿಯ ಗಂಗಾಧರಾ ಗವಿಯ ಗಂಗಾಧರಾ.

ಇವರಣ್ಣ ತಮ್ಮಂದಿರೈದು ಜನಾ ಕೂತುಕಂಡು ಪರಮಾತ್ಮನಾಗಿರತಕ್ಕಂಥ ಗವಿಗಂಗಾಧರ, ರಾಜೂಟಿ ವೀರಭದ್ರ, ನನ ಮನೆದೇವರಾಗಿರತಕ್ಕಂಥಾ ಮರುಳು ಸಿದ್ದೇಶ್ವರ, ನನ್ನ ಏಳು ಜನ (ರಾಣಿಯರ) ಗರ್ಭಕ್ಕೂ ಸಂತಾನ ಕೊಡಲಿಲ್ಲ. ನಾನು ಇಷ್ಟು ಧರ್ಮಮಾಡಿ ನನಗೆ ಪ್ರಯೋಜನವೇನು ಬಂದಂಗಾಯ್ತು? ನಾನು ಮನೆದೇವರಾಗಿರತಕ್ಕಂಥಾ ಮರುಳು ಸಿದ್ಧೇಶ್ವರನ ದೇವಸ್ಥಾನದಲ್ಲಿ ಹೋಗಿ, ನನ್ನಣ್ಣ ತಮ್ಮಂದಿರೆಲ್ಲ ಹೋಗಿ, ನನಗೆ ಮಕ್ಕಳಾತವ್ರೋ

1. ಪಾರವ

ಇಲ್ಲವ್ರೋ ಕೇಳುಬೇಕು ಅಂತ ಹೇಳಿ, ಅವರು ಐದು ಜನ ಅಣ್ಣ ತಮ್ಮಂದಿರೆಲ್ಲ ಸೇರಿಕೊಂಡು, ಅವರ ಮನೆದೇವರಾಗಿರತಕ್ಕಂಥ ಮರುಳು ಸಿದ್ಧೇಶ್ವರನ ದೇವಸ್ಥಾನಕ್ಹೋಗಿ, ಪೂಜೆ ಮಾಡೋ ಸಮಯದಲ್ಲಿ–

ಅಲ್ಲಿ ಒಲಿದು ಬಂದವರಲ್ಲೊ ಗವಿಯ ಗಂಗಾಧರಾ
ಗವಿಯ ಗಂಗಾಧರಾ.

ಒಂದು ಸನ್ಯಾಸಿ ವ್ಯಾಸವನ್ನು ತಾಳುಕಂಡು ಏನ್ರಯ್ಯಾ? ಐರವತಿ ರಾಜ, ಏನೀ ಸ್ವಾಮಿ ಐರವತಿ ರಾಜ, ನೀಲಕಂಠರಾಜ, ಭಕ್ತೇಶ್ವರ ರಾಜುರೆ, ನೀವು ಗಂಡಸರೇ ಬಂದು ಇಲ್ಲಿ ಪೂಜೆ ಮಾಡಿದಿರಿಲ್ಲಿ ನಿಮಗೆ ಪುತ್ರ ಸಂತಾನ ದೊರೆಯುವುದಿಲ್ಲ. ಈ ಚದುರಂಗ ಮಹಾರಾಜನ ಹೆಂಡತಿಯಾಗಿರತಕ್ಕಂಥ ದೊಡ್ಡೋಳು ಚಂದ್ರಕಾಂತಿಯನ್ನು ಕರದುಕಂಡು ಬಂದು ಪೂಜೆಮಾಡಿ ಪ್ರಸಾದವನ್ನು ಕೊಟ್ಟರೆ, ಪರಮಾತ್ಮನಾಗಿರತಕ್ಕಂಥವ್ನು ಕರುಣವಿಟ್ಟು ಪುತ್ರಸಂತಾನವನ್ನು ಕರುಣಿಸುತ್ತಾನೆ, ಎಂಬುದಾಗಿ ಸನ್ನಾಸಿ ವೇಷದಿಂದ ಹೇಳುತ್ತಾ ಇದ್ದಾನೆ ಪರಮಾತ್ಮ–

"ಬಾರಯ್ಯ ಪರುಧಾನಿ, ಬುದ್ಧವಂತ ಪರುಧಾನಿ. ನೀನು ವ್ಹೋಗಿ ನನ್ನಾ ಎಲ್ಲಕ್ಕೂ ದೊಡ್ಡವಳಾಗಿರತಕ್ಕಂಥ ಚಂದ್ರಕಾಂತಿಯನ್ನು ದೇವಸ್ಥಾನಕ್ಕೆ ಕರದುಕೊಂಡು ಬಾರಯ್ಯ" ಎಂಬುದಾಗಿ ಚದುರಂಗ ಮಹರಾಜರು ಪ್ರಧಾನಿಗ್ಹೇಳಿದ್ದಾರೆ. ಪ್ರಧಾನಿ ಹೋಗಿ–

'ಯಮ್ಮ ರಾಜನಪ್ಪಣೆಯ ಮ್ಯಾಲೆ ಹೊರುಡಮ್ಮ ತಾಯೀ
ಹೊರಡಮ್ಮ ತಾಯಿ' ಎಂದನು.

ಏನಯ್ಯ ಪರುಧಾನಿ ಬುದ್ಧಿವಂತ ಪರುಧಾನಿ, ಭವಜ್ಞಾನಿ, ನನ್ನ ಮೈದುನರಾಗಿರತಕ್ಕಂಥವರಿಗೆಲ್ಲ ಸಂತಾನ ಉಂಟು. ಪರಮಾತ್ಮನಾಗಿರತಕ್ಕಂಥ ಗವಿಯ ಗಂಗಾಧರ ನಮಗೆ ಸಂತಾನ ಕೊಡ್ಲಿಲ್ವಲ್ಲಾ–

ಅವರಾ ಸಂತಾನವುಳ್ಳವರ ಮುಂದೆ ಬರಬೋದೆ ಹೇಳಯ್ಯಾ
ಬರಬಹುದೆ ಹೇಳಯ್ಯಾ?

ಪ್ರಧಾನೀ, ಬರೆಯೋರ ಮುಂದೆ ತಿರಿಯೋರು ಹೋಗಬಾರ್ದು. ಸರಿಯಾಗಿ ನಡಿತಕ್ಕಂಥಾವ್ರ ಮುಂದೆ ನಮ್ಮಂಥಾ ಪಾಪಿಗ್ಳು ಹೋಗಬಾರ್ದು. ನಾನು ಮಕ್ಕಳಿಲ್ಲದಿರತಕ್ಕಂಥ ನಿಕ್ಕರ್ಜಿ ಬಂಜೆ. ಆದರೆ ನನ್ನ ಮೈದಂದ್ರು ಎಲ್ಲಾ ಪುತ್ರ ಸಂತಾನವಿರತಕ್ಕಂಥಾವ್ರು. ಅಂಥಾವ್ರ ಮುಂದೆ ನಾನು ಬಂಜೆ ಓಗಿ ನಿಂತುಕಂಡು ಯಾವ ಪ್ರಕಾರವಾಗಿ ದೇವರ ಪ್ರಸಾದವನ್ನು ತೆಗೆದುಕೊಂಡು ಹ್ಯಾಗೆ ಬರಲಿ?

"ಅಮ್ಮಾ ವ್ಯಾಳೆ ಆತು. ರಾಜನಪ್ಪಣೆಯಾಗಿದೆ. ಹೊರಡಮ್ಮ ದೊರೆಸಾನಿ" ಎಂದು ಪ್ರಧಾನಿಯಾಗಿರತಕ್ಕಂಥವ್ನು ದೊರೆಸಾನಿಗೆ ಬುದ್ಧಿಮಾತುಗಳನ್ನು ಹೇಳಿ ಆ ಪ್ರಧಾನಿಯೂ ದೊರೆಸಾನಿಯು ಬರುತಾ ಇದ್ದರಲ್ಲ ದಾರಿವಳುಗೆ.

ಆ ದಾರಿವಳಗೇ ಒಬ್ಬ ದೊರೆಮಗ ಸಿಂಹದ ಕತ್ತಿಗೆ ಕೈ ಇಡಕಂಡು ಬಂಗಾರದ ಟೋಪಿ ತಲೆಮೇಲಿಟ್ಟುಕಂಡು ಆಡ್ತಾ ಇದ್ದ-

'ನೋಡಿದೇನಯ್ಯ ಪರುಧಾನಿ, ಬುದ್ಧಿವಂತ ಪರಧಾನಿ ಭವಜ್ಞಾನಿ? ಲಾಲಿಸಯ್ಯ ಪ್ರಧಾನಿ ಸಾಕ್ಷಾತ್ ಭಗವಂತ ಎಲ್ಲರಿಗೂ ಪುತ್ರಸಂತಾನ ಕೊಟ್ಟಿದ್ದಾನೆ. ನನಗಿಲ್ಲವಲ್ಲಾ'- ಎಂದು ಆ ಕಂದನನ್ನು-

ಕಟುಕಾನ ಬೆಳ್ಳನ ಬೆಳದೂ ರಪ್ಪಾನ ನೆಲಕ್ಕೆ ಬಡದೂ
ಅವಳೂ ಗುಳಗುಳನೆ ಸ್ವಾಕವೆ ಇನ್ನಾ ಮಾಡುತಾಳೆ ದೊರೆಸಾನಿ
ಅಮ್ಮ ಕಂಡವರ ಮಕ್ಕಳ ನೋಡೀ ಕಣ್ಣುಗಳ ಗೊಂಬೇ ಸತ್ತೋ
ಯಾಕಮ್ಮಾ ಚಿಂತೇ ನಿನಗೇ
ಯಾಕವ್ವಾ ದುಕ್ಕ ನಿನಗೇ?
ರಾಜನಪ್ಪಣೆಯ ಮ್ಯಾಲೀ ಹೊರಡೇ ದೊರೆಸಾನಿ
ಬರಬೇಕು ದೊರೆಸಾನೀ.

ಅಮ್ಮ, ಕಂಡವರ ಮಕ್ಕಳನ್ನು ನೋಡಿ ಕಣ್ಣಿನ ಗೊಂಬೆ ಸತ್ತಹಾಗೆ ಯಾಕೆ ಚಿಂತೆಮಾಡ್ತಿ? ಅವರು ಮಾಡತಕ್ಕಂಥ ಫಲ ಅವ್ರಗೆ, ನೀನ್ ಮಾಡಿರ್ತಕ್ಕಂಥಾ ಫಲ ನಿನ್ಗೆ. ಆದರೆ ಅವರು ಮಾಡಿರತಕ್ಕಂಥ ಫಲವನ್ನು ನೋಡಿ ನೀನು ಕಣ್ಣಾಗೆ ನೀರಾಕಿದ್ರೆ ಏನು ಸಾರ್ಥಕವಾಗ್ತದೆ? ದೇವರು ಒಂದಲ್ಲ ಒಂದು ದಿನ ನಿನಗೆ ಆ ಪುತ್ರ ಸಂತಾನವನ್ನು ನೀಡಬಹುದು. ಪೂಜೆಯ ವೇಳೆಯಾಯ್ತು. ರಾಜನಪ್ಪಣೆಯಾಗಿದೆ. ದೇವಸ್ಥಾನದಲ್ಲಿ ನಿನ್ನ ಮೈದುನಂದ್ರೆಲ್ಲಾ ನಿನ್ನ ಎದುರು ನೋಡ್ತಾ ಇದಾರೆ. ಹೊರಡಮ್ಮ ದೊರೆಸಾನಿ ಎಂಬುದಾಗಿ ಬುದ್ಧಿ ಮಾತುಗಳನ್ನು ಏಳಿಕಂಡು ಮುಂದಕ್ಕೆ ಹೊರಟರಲ್ಲ ಸ್ವಾಮಿ.

ಹರಿಯೇ ಶಂಭೂ ಮಾದೇವನ ಕರುಣಾ ಹೊಂದಿರಲೂ ಶಂಕರಾ
ಹೊಂದಿರಲೂ ಶಂಕರಾ

ಅಲ್ಲಿ ಒಂದು ಅತ್ತೀವೃಕ್ಷ. ಅದರಲ್ಲಿ ಒಂದು ಕೋತಿ ಮಗುವನ್ನು ಹೊಟ್ಟೆಯಲ್ಲಿ ಕಚ್ಚಿಕೊಂಡು ಆ ಮರದಿಂದ ಈ ಮರಕ್ಕೆ ಬರ್ತದೆ. ಈ ಮರದಿಂದ ಆ ಮರಕ್ಕೆ ಬರ್ತದೆ. ಆ ಕೋತಿಯನ್ನು ನೋಡಿ ಈ ಬಂಜೆಯಾಗಿರತಕ್ಕಂಥಾವ್ಳು ಹಣೇ ಮುಟ್ಟುಕಂಡು ಏನ್ ಶಬ್ದಾರ್ಥ ಮಾಡ್ತಾಳೆ-

ಕೈಯ ಜಾರಿ, ಕೆಳಗೇ ಬೀಳಬಾರದಾ
ಕಾಲು ಜಾರಿ ಕೆಳಗೇ ಬೀಳಬಾರದಾ?
ನನ್ನ ಪ್ರೀತಿ ನಾ ಕಳಕಂಡೆನಲ್ಲಾ
ಬಂಜೆಯಾಗಿ ನಾ ಶುದ್ಧವ ತೋರಿ
ನಾನೆ ಕೋತಿ ಕಪ್ಪಾಳಕ್ಕೆ ಹೊಡದು
ಬೇಡಿದಾ ನನ್ನ ಕಂದಮ್ಮ ನೀನು
ಕೈಯ ಜಾರಿ ಕೆಳಕೆ ಬೀಳಬೇಡ

ಅದೂ ತಾನೂ ಕಟ್ಟಿಕೊಂಡಿರತಕ್ಕಂಥ ಮರಿಗೆ ಬುದ್ಧಿ ಏಳ್ಳದೆ : ಕೈ ಜಾರಿಯಾಗಲೀ, ಕಾಲು ಜಾರಿಯಾಗಲೀ, ಕೆಳಗೆ ಇರತಕ್ಕಂಥಾವ್ನು ನಿನ್ನ ಮುಟ್ಟಕಂಡ್ರೆ ನೀನೂ ಬಂಜೆ- ಎಂಬುದಾಗಿ.

ಯಾಕಮ್ಮ ದೊರೆಸಾನಿ ಬುದ್ಧಿವಂತ ದೊರೆಸಾನಿ, ಭವಜ್ಞಾನಿಯೇ ಲಾಲಿಸಮ್ಮ ದೊರೆಸಾನಿ. ನಾನಾಗಲೇ ಏಳಲಿಲ್ಲವೇನಮ್ಮ? ಕಂಡವರ ಮಕ್ಕಳು ನೋಡಬಾರದು, ಕರುಬಬಾರದು, ಅಂತ್ಹೇಳಿ. ತಿರುಗಿ ಬಂದು ಈ ಕಪಿ ಮಗಾ ನೋಡಿ ನೀನು ಕರುಬಿಕಂತ ಇದೀಯಲ್ಲ, ಇದು ಧರ್ಮವಲ್ಲಮ್ಮ.

'ಪ್ರಧಾನಿ ಆಗಬಹುದು. ಹೊರಡು ಪ್ರಧಾನಿ' ಎಂದು ಮುಂದಕ್ಕೆ ಕರದುಕೊಂಡು ಹೋದಳು. ಅಲ್ಲಿ ಒಂದು ಹೂವಿನ ವನಾಂತರ ಸಿಕ್ಕಿತು.

ಪ್ರಧಾನಿ ತಾವು ಹೊರಟಿರತಕ್ಕಂಥಾ ಕಾರ್ಯ ಶುಭಕಾರ್ಯ. ಮನೆದೇವರಾಗಿರತಕ್ಕಂಥಾ ಮರುಳು ಸಿದ್ಧೇಶ್ವರನ ದೇವಸ್ಥಾನದಲ್ಲಿ ಹೋಗಿ ಪುತ್ರ ಸಂತಾನಪಡೆಯುವುದು.

ಹೂವಕುಯ್ಯನ ಬಾರಯ್ಯ-ಮನೆದೇವರ ಗುಡಿಗೆ
ಹೂವ ಎತ್ತಾನ ಬಾರಯ್ಯಾ
ದುಂಡುಮಲ್ಲಿಗೆ ಕೆಂಡಸಂಪಿಗೆ ವನ್ಯರಾಜ ದೇವಮಲ್ಲಿಗೇ
ಹೂವ ಕುಯ್ಯಾನ ಬಾರಯ್ಯಾ.

ಆಯಮ್ಮ ಈ ಹೂವನ್ನೆಲ್ಲಾ ಕುಯ್ದುಕೊಂಡು, ಒಂದು ಹೂವಿನ ಕಡ್ಡಿ ಕೈಲ್ಹಿಡಿದುಕೊಂಡು ದೇವಸ್ಥಾನದ ಬಾಕಲಲ್ಲಿ ಓಗಿ ನಿಂತುಕೊಂಡು ಯೋಚನೆಮಾಡಿದಳು. 'ದೇವಸ್ಥಾನದಲ್ಲಿ ನನ್ನ ಮೈದಂದಿರಾಗಿರತಕ್ಕಂಥಾವ್ರು ಕೂತಿದ್ದಾರೆ. ನಾನು ಏಕಾಂಗಿಯಾಗಿ ದೇವಸ್ಥಾನಕ್ಕೆ ಹೊರಟ್ಹೋದ್ರೆ ನಾನು ನಾರಿಯಲ್ಲ, ಮಮ್ಮಾರಿ ಸಮಾನ. ನೆರೆಗಂಜಿ ಹೊರೆಗಂಜಿ, ಅತ್ತೆ ಮಾವಂದಿರಿಗಂಜಿ, ತನ್ನ ಮೈದಂದ್ರಿಗಂಜಬೇಕೆಂಬುದಾಗಿ ಧರ್ಮಶಾಸ್ತ್ರ ಹೇಳಿದೆ. ನಾನು ಏಕಾಂಗಿಯಾಗಿ ಹೊರಟ್ಹೋದ್ರೆ, ನನ್ನ ಪತಿಗೆಂದು ಅಪಮಾನವಾಗಬಹುದು. ಹೋಗಬಾರದು ಎಂದು ಯೋಚಿಸಿ ಬಾಕುಲಲ್ಲಿ ನಿಂತಕಂಡು ತನ್ನ ಎಲ್ಲಕ್ಕು ಚಿಕ್ಕ ಮೈದುನ್ನ ಕುರಿತು ಹೇಳಿದ್ಲು.

ಕೊಳ್ಳೊ ಮೈದಯ್ಯ ಹೂವ ಮಾಡೋ ಮನೆದೇವರ ಪೂಜೆ
ದುಂಡುಮಲ್ಲಿಗೆ ಕೊಳ್ಳೋ ಕೆಂಡಸಂಪಿಗೆ ಕೊಳ್ಳೋ
ವನರಾಜು ದೇವಮಲ್ಲಿಗೇ ಸುರುಬು ಸಾವಂತಿಗೆ ಕೊಳ್ಳೋ
ಮಾಡೋ ಮನೆದೇವರ ಪೂಜೆ ಕಳುವ್ರೋ ಬಸುವಣ್ಣಾಗೇ
ಕಳುವ್ರೋ ಬಸುವಣ್ಣಾಗೇ.

ಮುಟ್ಹೋದಿಲ್ಲವ್ವ ನಿನ್ನಾ ಬಂಜೆ ಕೈಯಗಳ ಹೂವ
ನಡಿ ನಡಿಯಾಚೆಗೇ ಗುಡಿಬಿಟ್ಟಾಚೆಗೇ.
ಕುತ್ತಿಗೆ ಹಿಡಿದೀಗ ಸ್ವಾಮಿ ಆಚೆಗೆ ತಳ್ಳ್ಯಾನಲ್ಲೋ
ಆಚೆಗೆ ತಳ್ಳ್ಯಾನಲ್ಲಾ.

ಅಯ್ಯಾ, ನಾನು ಎಷ್ಟು ಪ್ರೀತಿಯಿಂದ ಹೂವಿನ ಕಂಡಿಗೆಯನ್ನು ತಂದಿವ್ನಿ ಕೊಳ್ಳಯ್ಯ ಮೈದಯ್ಯ, ಮನಿದೇವರ ಪೂಜೆಮಾಡು ಎಂದು ಕೊಟ್ಟಾಗ, ಕೈ ಹಿಡಿದು ತಳ್ಳಿದನಲ್ಲ. ಪತಿಗಿರತಕ್ಕಂಥ ಹಕ್ಕು ನನಗಿಲ್ಲವೆ ಎಂದು ಯೋಚ್ನೆಮಾಡಿಕಂಡು, ಮೊಟ್ಟಮೊದಲೇ ನಾನು ಯಾರನ್ನೂ ಕೇಳದಂತೆ ದೇವಸ್ಥಾನದಲ್ಲಿ ಹೋಗಿ ಪೂಜೆಮಾಡಬೇಕಾಗಿತ್ತು. ನಾನು ತೃಪ್ಪು ಮಾಡಿಕೊಂಡಿದ್ದಕ್ಕೆ ಈಗಲಿಗೆ ಅಪಮಾನವಾಯಿತು. ಪರಧಾನಿ ನಾನು ಮನೆಯಿಂದ ಹೊರಡುವಾಗ್ಗೆ ಏನು ಹೇಳಿದೆ? ಸರಿಯಾಗಿ ನಡತಕ್ಕಂಥಾವ್ರ ಮುಂದೆ ನನ್ನಂಥಾವ್ರು ಹೋಗಬಾರದು ಅಂದೆ. ನನ್ನ ಮಾತು ನೀನು ಕೇಳಲಿಲ್ಲ. ನನ್ನನ್ನು ಕರದಕೊಂಡು ಬಂದು ಈ ಸಭಿಕರ ಮುಂದೆ ನನಗೆ ಅಪಮಾನ ಮಾಡಿಸ್ದೆ. ಆದ್ರೂ ಚಿಂತಿಯಿಲ್ಲ ಎಂದು ಈಯಮ್ಮ–

ಹಿಂದಲ ಹೆಜ್ಜೆ ತೆಗದು ಮುಂದಕ್ಕೆ ಮಡುಗವಳಲ್ಲ
ಸ್ವಾಮಿ ನೂರೊಂದು ಜ್ಯೋತಿಗೊಳೆಲ್ಲ ಪಕ್ಕಾದಾರ್ಹೋತೋ,
ಲಯವಂದೆ ಹೋದವ್ರೋ,
ದೇವಸ್ಥಾನದಲ್ಲಿ ಉರಿತಕ್ಕಂಥಾ ನೂರೊಂದು ಜ್ಯೋತಿಗಳೆಲ್ಲಾ
ಮಸಣವಾಗಿ ಹೋದ್ಲೋ ಗುರುದೇವಾ.

"ಅಪಮಾನವಾಯಿತಯ್ಯ ಪ್ರಧಾನಿ, ಅಪಮಾನವಾಯಿತು. ಮಕ್ಕಳಿದ್ದರೆ ಒಂದು ಚಿಂತೆ, ಮಕ್ಕಳಿಲ್ಲದಿದ್ದರೂ ಚಿಂತೆ. ಚದುರಂಗ ಮಹಾರಾಜನ ದೊಡ್ಡ ಹೆಂಡತಿ ಚಂದ್ರಕಾಂತ, ದೇವಸ್ಥಾನದೊಳಕ್ಕೆ ಕಾಲಿಟ್ಟಳಂತೆ, ನೂರೊಂದು ಜ್ಯೋತಿಗಳೆಲ್ಲ ಮಸಣವಾದಂತೆ–ಅಂದರೆ ಈ ಕರ್ಮವನ್ನು ನಾನು ಎಲ್ಹೋಗಿ ಕಳೆಯಲಿ? ಈ ಅಪಮಾನವನ್ನು ನಾನು ಎಲ್ಹೋಗಿ ಕಳಿಯಲಿ?

ನನಗೆ ದಂಡು ಬ್ಯಾಡಯ್ಯ, ನನಗೆ ದಳ ಬ್ಯಾಡಯ್ಯ, ನನಗೆ ಮಂದಿ ಬ್ಯಾಡ, ಮಾರ್ಬಲಾ ಬ್ಯಾಡಯ್ಯಾ; ಈ ಪಟ್ಟಪಾಳ್ಯವೇ ನನಗೆ ಬೇಕಿಲ್ಲ. ನನಗೆ ಅಣ್ಣ ತಮ್ಮಂದಿರೇ ನನಗೆ ಬೇಕಿಲ್ಲ. ನನ್ನ ಏಳು ಜನ ಹೆಣತಿಯರು ಬೇಕಿಲ್ಲ. ಒಂಭತ್ತು ಜನಾ ಗವಡೀರು ಬೇಕಿಲ್ಲವಯ್ಯಾ ಪ್ರಧಾನಿ. ಈ ಪಟ್ಟಪಾಳ್ಯ, ಈ ರಾಜ್ಯವೇ ನನಗೆ ಸಮಾಧಾನ ಇಲ್ಲ ಎಂದು ಹೆಗಲ ಮ್ಯಾಲ್ಹಾಕಿರತಕ್ಕಂಥಾ ಚಿನ್ನವಲ್ಲಿ ತೆಗೆದು ಮಕದ ಮ್ಯಾಲೆಸೆದುಕೊಂಡು 'ಅವನು ಗುಳುಗುಳನೆ ಸ್ವಾಕವ ಇನ್ನ ಮಾಡ್ಯಾನೆ ಸ್ವಾಮೀ, ಮಾಡ್ಯಾನೆ ಸ್ವಾಮೀ. ಗುಳುಗುಳು ಸ್ವಾಕಮಾಡಿಕಂಡು ಇದೇನು ಅನ್ಯಾಯ, ಇದೇನು ಧರ್ಮ ಎಂದು ಯೋಚನೆಮಾಡಿಕೊಂಡು, ಪಟ್ಣಬಿಟ್ ಹೊರಡ್ತಾನೆ. ಆಗ–

ಸ್ವಾಮಿ, ಇಷ್ಟೊಂದು ದಾನಗಳು ನಡಿತಕ್ಕಂಥಾ ಈ ಪಟ್ಟವನ್ನು ತಾವು ಬಿಟ್ಟುಹೋದರೆ ಬಡವರು ಬಗ್ಗರಿಗೆ ಏನು ಗತಿಯಾಗ್ಬೇಕು? ನಿನ್ನ ನಿರೀಕ್ಷೆ ಮಾಡಿಕಂಡು, ನಿನ್ನಿಂದ ಕಾಲಹರಣ ಮಾಡತಕ್ಕಂಥ ಸುತ್ತೇಳು ಹದಿನಾರು ಗಾವುದದಿಂದ ಬಂದು ನಿನ್ನನ್ನ ನೋಡತಕ್ಕಂಥಾ ಪ್ರಜೆಗಳ್ನ ಬಿಟ್ಟುಬಿಟ್ಟು ನೀವು ಆಚೆಗ್ಹೋಗ್ತೀನಿ ಅಂತ ಹೇಳ್ತಾ ಇದ್ದೀರಲ್ಲಾ. ಇದು ಯಾವ

ಧರ್ಮ? ನೂರಾರು ಬಿಳೀಕಾಗಿಗಳನ್ನಾದರೂ ನೋಡಬಹುದು. ಟೈಮ್‌ನಲ್ಲಿ ಅತ್ತೀ ಹೂವನ್ನಾದರೂ ನೋಡಬಹುದು. ಸ್ತ್ರೀಯ ಮನಸ್ಸನ್ನು ಹಿಡಿಯುವುದಕ್ಕೆ ಹರಿಹರನಿಂದ ಸಾಧ್ಯವಿಲ್ಲ. ಅವರ ಮಾತಿಗೋಸ್ಕರವಾಗಿ ನೀವು ಅರಣ್ಯವಾಸಕ್ಕೋಗ್ತಿನಿ ಅಂತ ಹೇಳ್ತೀರಲ್ಲ? ನಮ್ಮನ್ನೆಲ್ಲ ಏನು ಮಾಡ್ತೀರಿ ಅಂದ ಪ್ರಧಾನಿ.

"ಪ್ರಧಾನಿ ಇಲ್ಲಿಗೆ ನಿಮ್ಮನ್ನೆಲ್ಲ ತೊರೆಯಬೇಕು. ಇಲ್ಲಿಗೆ ನನಗೆ ಅಪಮಾನವಾಯ್ತು. ನನಿಗೆ ಯಾವ ದಂಡು ಬೇಕಿಲ್ಲ. ಯಾವ ದಳವ್ರೂ ಬೇಕಿಲ್ಲ. ನನ್ನ ಅಣ್ಣತಮ್ಮಂದಿರು, ಏಳು ಜನ ಹೆಣತೀಯರು, ಒಂಬತ್ತು ಜನ ಗವಡೇರು–ಯಾರಿಗೂ ನನಿಗೆ ಸಂಬಂಧವಿಲ್ಲದಂಗಾಯ್ತು. ನಾನೀ ಪಟ್ಣವನ್ನು ತೊರೆದೆ :

ಸ್ವಾಮಿಯೇ ಅರಣ್ಯ ಮಾರ್ಗವಾಗಿ ಹೋತನೆ ಮಹರಾಜಾ.

ಸ್ವಾಮಿ ನಡದು ಕಾಲು ಕೊಳೆಯಾಯಿತು. ಬಾಯಾ ಬಿಡುತಯ್ಯ ಹುಡಿಯಾಯಿತಯ್ಯ. ಅಲ್ಲಿಗೆ ಸಾಯಂಕಾಲವಾಯಿತು. ಆಗ ಅಲ್ಲಿ ದಾರೀವಳಗೆ ಒಂದು ಹೂವಿನ ವನ. ಆ ವನದಲ್ಲಿ ಒಂದು ಈಶ್ವರನ ದೇವಸ್ಥಾನ. ಆ ದೇವಸ್ಥಾನದ ಪಕ್ಕದಲ್ಲಿ ಒಂದು ತಾಮ್ರದ ಕಲ್ಯಾಣಿ, ಆ ಕಲ್ಯಾಣಿ ಪಕ್ಕದಲ್ಲಿ ಹಲಸು, ತೆಂಗು, ಬಾಳೆ, ಬದನೆ ಮುಂತಾದ ಗಿಡಗಳಿದ್ದವು. ಯೋಚನೆ ಮಾಡಿಕಂಡ. ಆಗ್ಲೇ ಏಳು ಗಂಟೆ ಟೈಮಾಯಿತು. ಇನ್ನು ಮುಂದಕ್ಕೆ ಹೋಗುವುದಕ್ಕಾಗೂದಿಲ್ಲ. ಇಲ್ಲಿ ಒಳ್ಳೆ ಸತ್ಯವಂತ ಸ್ಥಳ. ಈಶ್ವರನ ದೇವಸ್ಥಾನವಿದೆ. ತಾಮ್ರದ ಕಲ್ಯಾಣಿಯಿದೆ. ಹಲಸು, ತೆಂಗು ಮುಂತಾದ ವೃಕ್ಷಗಳಿವೆ. ಆ ಈಶ್ವರನ ದೇವಸ್ಥಾನದಲ್ಲಿ ಸಾಯಂಕಾಲ ವಾಸಮಾಡಿ ರಾತ್ರಿ ಇಲ್ಲೊಂದು ಗಳಿಗೆ ಇದ್ದು, ಬೆಳಿಗ್ಗೆ ಹೋಗಿ ನಾನೆಲ್ಲಿಯಾದ್ರೂ ಪ್ರಾಣಹತ್ಯೆ ಮಾಡಿಕೋಬೇಕು ಅಂತ ಚದುರಂಗ ಮಹಾರಾಜರು ಈಶ್ವರನ ದೇವಸ್ಥಾನದಲ್ಲಿ ನೆಲೆಗಂಡಿದ್ದಾರೆ.

ಹಾಗೆ ನೆಲೆಗಂಡ ಮಾತ್ರದಲ್ಲಿ ಮಧ್ಯರಾತ್ರೆಯಲ್ಲಿ, ಮನೆದೇವರಾಗಿರತಕ್ಕಂಥ ಮರುಳು ಸಿದ್ಧೇಶ್ವರ ಸ್ವಪ್ನದಲ್ಲಿ ಬಂದು ಏನಂತ ಹೇಳ್ತಾರೆ? 'ಅಯ್ಯೋ ರಾಜನೆ ನೀ ಇನ್ನ ಇಪ್ಪತ್ನಾಲ್ಕು ಜನರನ್ನು ಲಗ್ನವಾದರೂ ಸಂತಾನ ದೊರೆಯುವುದಿಲ್ಲ. ಮುಂದಕ್ಕೆ ಒಂದು ಯೋಜನ ಹೋದ್ರೆ ಕಾಂಡೋಜರಾಜ ಕಾಲವಾಗಿ ಇಲ್ಲಿಗ ಹನ್ನೆರಡು ವರ್ಷವಾಯ್ತು. ಕಾಂಡೋಜ ರಾಜನ ಮಗಳು ಆ ಗುಡೀ ಮ್ಯಾಲೆ ತಪಸ್ಸು ಮಾಡ್ತಾ ಇದ್ದಾಳೆ. ಹೊಂಗೇ ಸೊಪ್ಪಿನಿಂದ ತನ್ನ ಮಾನವನ್ನು ಮುಚ್ಚಿಕೊಂಡು ಹರನನ್ನು ಕುರಿತು ತನ್ನ ನೇತ್ರವನ್ನು ಮುಚ್ಚಿಕಂಡು ತಪಸ್ಸು ಮಾಡಿ ತಂದೇ ದೇವರೂ ನೀನೇ ಎಂಬುದಾಗಿ ತನ್ನ ತಂದೆಯ ಸಮಾಧಿ ಮೇಲೆ ತಪಸ್ಸು ಮಾಡ್ತಿದ್ದಾಳೆ. ನೀನು ಹೋಗಿ ಆ ಧರ್ಮಪತ್ನಿಯನ್ನು ವಸಾಮಾಡಿಕಂಡು ಕರದುಕೊಡು ಬಂದು ಲಗ್ನವಾದರೆ_

ನಿನಗೇ ಸಂತಾನ ನಾವು ಈಗ ಕೊಟ್ಟೇವು ಮಹರಾಜಾ

ಕೊಟ್ರೇವ್ ಮಹರಾಜ

ಏನು ನನಗೆ ಹೀಗೆ ಸ್ವಪ್ನಕ್ಕೆ ಬಂದು ಹೇಳಿದರಲ್ಲ? ದೇವೀದೇವಮಾನ್ಯವರೋ ಅಥವಾ ನನ್ನ ಮನೆದೇವರಾಗಿರತಕ್ಕಂಥ ಸಿದ್ಧೇಶ್ವರನೋ, ಮಲ್ಲಿಕಾರ್ಜುನ ಸ್ವಾಮಿಯೋ, ಕಣಿವೇ ಬಸವಣ್ಣನೋ? ಇಲ್ಲಾ ಇಲ್ಲಿರತಕ್ಕಂಥ ಈಶ್ವರ ಸ್ವಾಮಿಯೋ? ಯಾರು ಬಂದು ಹೇಳಿದ್ದೂ?

ಮ್ಯಾಲಕ್ಕೆದ್ದು ಕೂತುಕಂಡ. ಅಲ್ಲಿಗೆ ಇವ್ನಿಗೆ ಬಾಳ ದಣಿವಾಗಿ ಬಾಯಾರ್ಕೆ ಸುರುವಾಯ್ತು. ಅಲ್ಲಿರತಕ್ಕಂಥ ತಾಮ್ರದ ಬಾವಿಗೆ ನೀರು ಕುಡಿಯಾಕ ಹೋದನಲ್ಲ ಸ್ವಾಮಿ. ಆ ನೀರು ಮುಟ್ಟಿದ ಕೂಡಲೇ

ಸ್ವಾಮೀ ತಾಮ್ರದ ಕಲ್ಯಾಣೆಲ್ಲ ಜಲಬತ್ತಿ ಹೋಯಿತೇ
ಜಲಬತ್ತಿ ಹೋಯಿತೇ?

ಸ್ವಾಮಿ ಇದೇನು ಕರ್ಮ? ಇದೇನು ಪುಣ್ಯ? ನಾನು ನೀರು ಕುಡಿಯೋಕ್ಕೆ ಬಂದು ಮುಟ್ಟಿದರೆ ತಾಮ್ರದ ಕಲ್ಯಾಣಿವಳಗೆ ಒಂದು ತೊಟ್ಟು ನೀರಿಲ್ದಂಗೆ ಬತ್ತಿ ಹೋಯಿತಲ್ಲ? ಅಯ್ಯೋ ಶಿವ ಶಿವ, ನಾನೇನು ಅಪರಾಧವನ್ನು ಮಾಡಿದ್ದೆ, ಅಂತ ಹೇಳಿ ತಿರಿಕ್ಕಂಡು ಈಶ್ವರನ ದೇವಸ್ಥಾನಕ್ಕೆ ಕೈಮುಗಿದ–

ಸ್ವಾಮಿ ಈಸ್ಪುರನಾ ದೇವಸ್ಥಾನ ನೆಲಸಮವಾಯಿತೋ, ನೆಲಸಮವಾಯಿತೋ. ಇವನು ಮಲಗಿರತಕ್ಕಂಥ ಜಾಗದಲ್ಲಿ ವೃಕ್ಷವೆಲ್ಲ ಬಾಡಿ ಬತ್ತೋಗ್ಯವಲ್ಲ? ಸುತ್ತ ಒಂದು ಪರ್ಲಾಂಗು ದೂರದಲ್ಲಿ ಗರಿಕೆಪತ್ರೆ ಸಹ ಬಾಡ್ಹೋಗ್ಯವಲ್ಲ? ನಾನಿನ್ನೆಂತ ಪಾಪಿಯಪ್ಪ? ನಾನಿನ್ನೆಂಥ ದ್ರೋಹಿಯಪ್ಪ? ಹಿಂದೆ ಮಾಡಿರತಕ್ಕಂಥ ಫಲ, ನಾನು ಮಾಡಿರತಕ್ಕಂಥ ಧರ್ಮ–ನನ್ನ ಕಾಯದೆ ಹೋಯ್ತಲ್ಲ? ಇಂಥ ಮಧ್ಯಕಾಲದಲ್ಲಿ ಇಂಥಾ ಕಷ್ಟ ಕೊಟ್ಟಿದ್ದೆಯಲ್ಲ? ಇದೇನು ಕರ್ಮ? ನನ್ನ ಹಣೇಲಿ ಬರ್ದಿರತಕ್ಕಂಥ ಬ್ರಹ್ಮ ಲಿಖಿತವು ಯಾವ್ಯಾವ ಕಾಲದಲ್ಲಿ, ಯಾವ್ಯಾವ ಟೈಮಿಗೇ ಏನಾಗಬೇಕೂಂತ್ಹೇಳಿ ಆ ವಿಧಿಯಮ್ಮ ಎಂಥ ಕಷ್ಟ ನೇಮಿಸಿದ್ದಾಳೆ ನನಿಗೆ? ಎಂಥಾ ಶಿಕ್ಷೆ ನೇಮಿಸಿದ್ದಾಳೆ. ಆದರೂ ಸತ್ಯವಾದರೂ ಪರಮಾಜಿಸಿ ನೋಡಬೇಕು. ಸತ್ಯವಾದರೂ ಕಂಡ್ಹಿಡಿಯಬೇಕು. ಆದರೆ ನನ್ನ ಸ್ವಪ್ನದಲ್ಲಿ ಹೇಳಿರತಕ್ಕಂಥ ಮಾತು? ನಾನು ಮುಂದಕ್ಹೋಗಿ, ಪರೀಕ್ಷೆಮಾಡಿ, ಫಲವನ್ನು ನೋಡಿ, ನಂತರಾ ಪ್ರಾಣಹತ್ಯ ಮಾಡ್ಕಬೇಕು ಅಂದ್ಕಂಡ.

ಸ್ವಾಮಿ ಮುಂದಕ್ಕೊಂದ್ಯೋಜನ ಸ್ವಾಮಿ ಹೊರಟರು ಮಹರಾಯಾ
ಚದುರಂಗ ಮಹರಾಯಾ.

ಇನ್ನೊಂದ್ ಯೋಜನಾ ಹೋದ
ಇನ್ನೊಂದ್ ಯೋಜನಾ ಹೋದ
ಮತ್ತೊಂದ್ ಯೋಜನಾ ಹೋದ
ಮತ್ತೊಂದ್ ಯೋಜನಾ ಹೋದ.
ಅಲ್ಲೀ ಕಣ್ಣಿಗೆ ಕಂಡಿತ್ತು ಸ್ವಾಮಿ

ಹೂವಿನ ಏನಾಂತ್ರ, ಕಾಂಡೋಜೀ ರಾಯನಾ.

ಅಲ್ಲಿ ಕಾಂಡೋಜಿ ರಾಯನ ಸಮಾಧಿ. ಅಲ್ಲೊಂದು ಹೂವಿನ ಏನಾಂತರ ಕಣ್ಣಿಗೆ ಕಂಡಿತು.

ಪರಮಾತ್ಮ ಇಲ್ಲಿಗೆ ನನ್ನ ಕಷ್ಟವನ್ನು ಪಾರುಮಾಡಿದಂಗ ಕಾಣ್ತದೆ, ಎಂಬುದಾಗಿ ಹೊಳೇಬಾಕಲಲ್ಲಿ ತಡಿಕೇ ತಗದುಕಂಡು ಒಳೀಕ ಹೋದ.

ಈಯಮ್ಮ ಸಮಾಧಿಮೇಲೆ ಎರಡು ನೇತ್ರವನ್ನು ಮುಚ್ಚಿಕಂಡು ಹರನನ್ನು ಕುರಿತು ತಪಸ್ಸು ಮಾಡುತ್ತಾ ಕೂತಿದ್ದಾಳೆ. ಸಬನೂರು ಕೋಟಿಗೊಬ್ಬಳೇ ಪತಿವ್ರತೆ. ಇಪರೀತವಾದಂಥಾವ್ರು ವಿದ್ಯುಜ್ಜನರು. ಈಯಮ್ಮನಾಗಿರತಕ್ಕಂಥಾವ್ರು, ಧರ್ಮಪತ್ನಿ, ಪತಿವ್ರತೆ. ರಾಜ ಓಗಿ ನಿಂತುಕೊಂಡು ನೋಡಿದ. ಓಹೋ, ಇದು ನಾನು ಅನ್ನದಾನ, ಗೋವುದಾನ, ಕನ್ಯಾದಾನ, ಬಡವರಿಗೆಲ್ಲ ಕಾಪಾಡಿರತಕ್ಕಂಥ ಸತ್ಯ ಇವತ್ತು ನನಗೆ ಕಂಡುಬಂದಂಗಾಯ್ತು. ಆಹಾಃ ಇಂಥ ಧರ್ಮಪತ್ನಿ ನನಗೆ ಸಿಗಬೇಕಂದ್ರೆ ಯಾವ ಪುಣ್ಯ? ಈಕೆಯನ್ನು ನಾನು ನೇರವಾಗಿ ಮಾತಾಡಿಸಿಬಿಟ್ಟರೆ ಇವಳು ಶಾಪವನ್ನು ನೀಡಿದರೆ, ನಾನು ಸುಟ್ಟು ಭಸ್ಮವಾದರೂ ಅದೇನು. ಹ್ಯಾಗೆ ಮಾತ್ನಾಡಿಸೋದು ಅಂತ ಯೋಚನೆಮಾಡಿಕೊಂಡು, ನಾನು ಪ್ರಾಣಹತ್ಯ ಮಾಡ್ಕಬೇಕು ಅಂತ ಪಟ್ಟವನ್ನು ಬಿಟ್ಟು ಈಚೆಗೆ ನಾನ್ ಬಂದೆ. ಈಕೆಯಿಂದ ನನ್ನ ಪ್ರಾಣಹತ್ಯವಾದರೂ ಚಿಂತೆ ಇಲ್ಲ. ಈಕೆಯನ್ನು ಮಾತನಾಡಿಸಬೇಕು ಎಂಬುದಾಗಿ ನಿರ್ಧಾರವನ್ನು ಮಾಡಿಕಂಡು, ಆಯಮ್ಮನ ಹಿಂದೆ ನಿಂತಕಂಡು_

ಮಾತನ್ನಾಡದೆ ಮಲಗಿರೋದ್ಯಾಕೆ
ನನ್ನೊಡನೆ ಪೇಳೆ ಸಂದರಿ?

ಆ ಪ್ರಕಾರವಾಗಿ ಮಹಾರಾಜ ನಿಂತಕಂಡು ಮಾತನಾಡೋವಾಗ್ಗೆ, ಈಯಮ್ಮ– ನಾನು ಇಲ್ಲಿಗೆ ಹನ್ನೆರಡು ವರ್ಷದಿಂದ ನಮ್ಮ ತಂದೆಯ ಸಮಾಧಿ ಮೇಲೆ ತಪಸ್ಸು ಮಾಡಿದ್ದೆ. ಯಾವ ಶಬ್ದವು ಇರಲಿಲ್ಲ. ಇವತ್ತಿನ ದಿವಸ ಈ ಪ್ರಕಾರ ಶಬ್ದವಾಗಲಿಕ್ಕೆ ಏನು ಕಾರಣ ಇರಬಹುದು? ಎಂಬುದಾಗಿ ಎರಡು ನೇತ್ರವನ್ನು ಬಿಟ್ಟು ರಾಜನ ಮುಖಾನೋಡಿದಳು.

ಸಿವಾಸಿವಾ ಸಂಕರಾ ಜನಾರ್ಧನ ಗಿರಿವರ್ಧನಾ
ಪರಮಾತ್ಮ ಗವಿಯ ಗಂಗಾಧರಾ.

ಇಲ್ಲಿಗೆ ನನ್ನ ತಪಸ್ಸು ಭಂಗವಾಯಿತಲ್ಲ ಗುರುದೇವಾ. ನಾನು ಹನ್ನೆರಡು ವರುಸದಿಂದ ಯಾವ ವಿಚಾರವೂ ಇಲ್ಲದಂತೆ ಹರನನ್ನು ಕುರುತು ತಪಸ್ಸುಮಾಡುತ್ತಾ ಇದ್ದೆನಲ್ಲ. ಇವತ್ತು ಈ ರಾಜನ ಮುಖಾನೋಡಿದಾ ಮಾತ್ರದಲ್ಲಿ, ನಾನು ಇಲ್ಲಿ ತನಕ ಮಾಡಿದ ತಪ್ಸಾ, ನೀರತಪ್ಪವಾಯಿತಲ್ಲ ಗುರುದೇವಾ. ಇದು, ನನ್ನ ಹಣೆಯಲ್ಲಿ ಬರೆದಿರತಕ್ಕಂಥ ಬ್ರಹ್ಮಲಿಖಿತ

ಇದು. ಗಂಡನೇ ದೇವರು, ಗಂಡನೇ ಮಾತಾಪಿತ. ಗಂಡನೇ ಸರ್ವಿಷ್ಟ ಬಳಗ. ಗಂಡನಾಜ್ಞೆಯನ್ನು ಮೀರಿ ಮಾತನಾಡುವರಿಗೆ ಲಂಡನರಕವೇ ಗತಿಯಾಗುವುದು. ನನ್ನ ಹಣೇವಳಗೆ ಬರೆದಿರತಕ್ಕಂಥಾ ಬ್ರಹ್ಮಲಿಖಿತದಂತೆ ಈತನೇ ಗಂಡ, ಈತನೇ ದೇವರು, ಈತನೇ ಮಾತಾಪಿತ, ಇನ್ಯಾರು ನನಗಿಲ್ಲ. ತಂದೆಯೂ ಕಾಲವಾದರು. ತಾಯಿಯೂ ಕಾಲವಾದರು. ಈತನೇ ನನಗೆ ದೇವರ ಸಮಾನ ಎಂಬುದಾಗಿ, ಘನ ಮಹಾಪತಿವ್ರತೆಯಾಗಿರತಕ್ಕಂಥವ್ಳು ಎದ್ದು ತಂದೆ ಸಮಾಧಿಗೆ ಮೂರು ಸುತ್ತು ಪ್ರದಕ್ಷಿಣೆ ಬಂದ್ಳು. ಕಾಲದೆಸೆ ನಿಂತ್‌ಕಂಡ್ಳು.

ಹೋಗಿ ಬರಲೇನೋ ತಂದೇ ಆ ರಾಜನಾ ಹಿಂದೇ?
ಇಲ್ಲಿಗೇ ನಿನ್ನಯಾ ತಪಸ್ಸು, ಭಗನವಾಯಿತೇನೋ ತಂದೇ ತಂದೇ ತಂದೇ.

'ಪರಮಾತ್ತುಮಾ, ಬಾಲ್ಯದಿಂದ ಇಲ್ಲಿವರಗೇ ನೀನೇ ತಂದೆ ಎಂದು ತಪಸ್ಸು ಮಾಡುತ್ತಿದ್ದೆ. ಇವತ್ತಿನ ದಿವಸ ರಾಜಾಧಿರಾಜರು ಬಂದಿದ್ದಾರೆ. ನನಗೆ ವಿವಾಹದ ಕಾಲ. ಈತನೇ ಗಂಡಾ, ಈತನೇ ದೇವರು. ಈತನ ಹಿಂದೆ ನಾನು ಹೋಗಲೇನಪ್ಪ ತಂದೆ' ಎಂಬುದಾಗಿ ತಂದೆಯನ್ನು ಕ್ಷಮಪ್ಪಣೆ ಕೇಳಿಕೊಂಡ್ಳು.

ಆಗ ಆ ಸತ್ಯವಂತ ಕಾಲದಲ್ಲಿ ತಂದೆಯಾಗಿರತಕ್ಕಂಥ ಕಾಂಡೋಜಿ ಮಹರಾಯನು ಗುಂಡಿಯಲ್ಲಿ ಪಟ್ಚಕರಿಸಿ ಮಾತಾಡಿದ_

'ಬಂದಿತಾ ತುದಿಕಾಲ ನಿನಗೆ?
ಏನು ಬರುದಾನೆ ಪಣಿಯೊಳು ಬ್ರಹ್ಮ?
ಬಂದಿತಾ ಮಗುಳೆ ದುರುಬುದ್ಧಿ ನಿನಗೆ?
ಬ್ಯಾಡಬ್ಯಾಡ ನನ ಮಾತನ್ನು ಕೇಳು
ಖಡ್ಗಕಾಹಾರವಾದೀಯ ಮಗುಳೆ'.

ಎಂದು ಗುಂಡಿಯಲ್ಲಿ ಶಬ್ದಮಾಡಿದ್ಹಂಗಾಯ್ತು. 'ಸ್ವಾಮಿ ನಾನು ಇಲ್ಲಿಯತನಕ ನಿಮ್ಮ ತಪಸ್ಸನ್ನು ಮಾಡಿದೆ. ಎರಡು ನೇತ್ರವನ್ನು ಬಿಟ್ಟ ಮೇಲೆ ಮನಸು ಆತನ ಮೇಲೆ ಬಿದ್ಹಂಗಾತು. ಪತಿವ್ರತವು ಭಂಗವಾಯ್ತು. ಈಗಲೂ ಅಷ್ಟೆ. ಒಬ್ಬ ಗಂಡಸು ಮೈಮೇಲೆ ಜರಿತಾರಿ ಕೋಟ್ಹಾಕಂಡು, ಒಂದು ಸಾಲಾಕ್ಹಂಡು, ಜೇಪಿನ ಕೆರ ಹಾಕ್ಕಂಡು, ದಾರೀಲಿ ಬರ್ತಾ ಇದ್ರೆ, ಒಬ್ಬ ಹೆಂಗ್ಸೂ ಅವನನ್ನ ನೋಡಿ–ಅವಯ್ಯ ಎಷ್ಟ ಚೆನ್ನಾಗಿ ಓತನೆ ನೋಡು ಅಂದ್ರೆ, ಅವರ ಪತಿವ್ರತಾ ಭಾವ ಭಂಗವಾಯ್ತು. ಮನವು ಅಲ್ಲಿ ಸೇರಿದಂಗಾಯ್ತು. ನನ್ನ ತಪಸು ಭಂಗವಾಯ್ತು; ನಾನು ನಿನ್ನ ಸಮಾಧಿ ಸುತ್ತು ಇರುವುದಿಲ್ಲ ಎಂಬುದಾಗಿ ಯೋಚನೆಮಾಡಿಕೊಂಡು ಈ ಕಡೆ ತಿರಿಕ್ಕಂಡ್ಳು, ಚದುರಂಗ ಮಹರಾಜನ ಕಡೆ–

ಸ್ವಾಮಿ ನೀವು ಮುಳ್ಳಿನ ಮರವಾಗಿದ್ದೀರಾ?
ಎಂಗ್ಸಾಮಿ ತ್ಯಬ್ಬಲೀ? ಎಂಗ್ಹೇಳಿ ತಬ್ಬಲೀ?

"ಮಾಲಕ್ಷ್ಮಿ, ಮುಳ್ಳಿನ ಮರವೆಂದರೆ ನನಗರ್ಥವಾಗಲಿಲ್ಲ". "ಸ್ವಾಮಿ, ನಿಮಗೆ ಏಳು ಜನ ಹೆಂಡ್ತಿಯುವರುಂಟು. ಒಂಭತ್ತು ಜನ ಗವಡಿಯರುಂಟು. ನಿಮಗೆ ನಾಲಕಜನ ಅಣ್ಣತಮ್ಮಂದಿರುಂಟು. ಆದರೆ ನನ್ನನ್ನು ಇಲ್ಲಿ ಮಂಕುಮಾಡಿ ಪಟ್ಟಣಕ್ಕೆ ಕರೆದುಕೊಂಡು ಹೋಗಿ, ಕೆಲವಾರು ದಿನ ನನ್ನಂತೇ ಇದ್ದರೂ ಆಯಿತು. ಕೆಲವಾರು ದಿವಸ ಅವರಂತೆ ಇದ್ದರೂ ಆಯಿತು.

ತಂದೆ ನನಗಿಲ್ಲ ತಾಯಿಯು ಇಲ್ಲಾ
ಬಂಧು ಇಲ್ಲ ಬಳಗಾವ್ರು ಇಲ್ಲಾ
ದಿಕ್ಕಿಲ್ಲದಂಥಾ ಪರದೇಸಿ ನಾನು
ತಂದೆ ನೀವೇ ತಾಯಿಯು ನೀವೆ
ಅಣ್ಣಾನೂ ನೀವೇ ತಮ್ಮನು ನೀವೇ
ಬಂಧು ನೀವೇ ಬಳಗಾವ್ರು ನೀವೇ
ಯಾರಂದಾರೆ ಯಾರೂ ಇಲ್ಲಾ
ದಿಕ್ಕಿಲ್ಲದಂಥಾ ಪರದೇಸಿ ನಾನು
ನಿಮ್ಮನ್ನು ನಂಬಿ ನಾನು ಬರುತೀನಿ.

ಸರ್ವಿಷ್ಟ ಬಳಗವ್ರೂ ನೀವೇ, ಏಳು ಜನ ಹೆಂಡ್ತೀಯರ ಬಳಿಗೇ ನನ್ನ ಕೊಡದಂತೆ ನನ್ನ ಕಾಪಾಡಿಕಂಡ್ರೆ, ಅಷ್ಟೇ ನನಿಗೆ ಫಲ ಸಾಕು.

'ಆಗಲಿ ನಿಮ್ಮನ್ನು ಕೆಡಸುವುದಿಲ್ಲ. ಏಳು ಜನ ಹೆಂಡತಿಯವರ ಕೈಗೆ ಕೊಡುವುದಿಲ್ಲ'– ಎಂಬುದಾಗಿ ರಾಜ ಹೇಳಿದ.

ಸ್ವಾಮಿ ಇಂಗ್ ನಾನ್ ಒಪ್ಪಾದಿಲ್ಲ. ನನ್ನ ತಂದೆ ಸಮಾಧಿ ಮೇಲೆ
ಹಾಲಿನಿಂದಾ ಪಾತ್ರೆ ಮಾಡೀ, ನೀರಿನಿಂದ ಪಾತ್ರೆ ಮಾಡೀ
ನಾಗವಾಳಿ ಪಾತ್ರೆ ಮಾಡೀ ನಿಮಿಗಾಗುತಿದ್ರೇ ನನಗೇ ರಾಮಾ ರಾಮಾ.

ಹಾಲು ಪಾತ್ರೆ, ನೀರು ಪಾತ್ರೆ, ನಾಗುವಳಿ ಪಾತ್ರೆ ಪ್ರಮಾಣವನ್ನು ಮಾಡಿಕೊಟ್ಟರೆ, ನಿಮ್ಮನ್ನು ನಂಬಿ ನಾನು ಬರುತ್ತೇನೆ' ಎಂದಳು. ರಾಜ ಹಾಗೇ ಮಾಡಿದ.

ಆಗ ಈಯಮ್ಮ ನ್ಯಂಬಿ, ತಿರುಗಾ ತಂದೆ ಸಮಾಧಿಸುತ್ತ ಬಂದು ಪ್ರಧಾನಿ, ನಾನು ಬಂದ ಮೋಕ್ಷದಿಂದಾ ನಿಮ್ಮ ರಾಜನಾಗಿರತಕ್ಕಂಥಾವನಿಗೆ ಒಂದು ವರ್ತಮಾನವನ್ನು ಹೇಳು. ನೀನು ಕರೆದುಕೊಂಡು ಬಂದಿರತಕ್ಕಂಥ ಸಿದ್ಧ ಮಹಾಲಕ್ಷ್ಮಿಯು ಹಡೆದುಕಣೀ ಕಾಲವಾಯಿತಂತೆ. ಕುದುರೆ ಲಾಯದಲ್ಲಿ ಸ್ವಲ್ಪ ಜಾಗವನ್ನು ಕೊಟ್ಟು ಒಬ್ಬ ದಾದಿಯನ್ನು ಸಾಯಕ್ಕೆ ಕೊಡಬೇಕು ಎಂಬುದಾಗಿ ರಾಜನಿಗೆ ಹೇಳು" ಎಂದು ದೊರೆಸಾನಿ ಪ್ರಧಾನಿಗೆ ತಿಳಿಸಿದ್ದಾಳೆ.

ಪ್ರಧಾನಿ ಓಗಿ ರಾಜನಿಗೆ ಏನಂಬುದಾಗಿ ಹೇಳ್ತಾನೆಂದರೆ 'ಸ್ವಾಮಿ ನೀವು ಕರದುಕಂಡು ಬಂದಿರತಕ್ಕ ಸಿದ್ಧ ಮಹಾಲಕ್ಷ್ಮಿ ಹಡದುಕಣೀ ವ್ಯಾಳೆಯಾಯಿತಂತೆ. ಕುದುರೆ ಲಾಯದಲ್ಲಿ ಸ್ವಲ್ಪ ಜಾಗವನ್ನು ಕೊಟ್ಟು, ಒಬ್ಬ ದಾಯಿಯನ್ನು ಕೊಡಬೇಕಂತೆ. ನಿನುಗೆ ವರ್ತಮಾನವನ್ನು

ತಿಳಿಸು ಎಂಬುದಾಗಿ ಕ್ಷಮಪ್ಪಣೆಯನ್ನು ಹೇಳಿದ್ದಾರೆ.

ಪ್ರಧಾನಿ ನನ್ನ ಸರ್ಕಸ್ ದರ್ಬಾರ್‌ನಲ್ಲಿ ಹೋಗೋರ್ ಹೋತಾ ಇದಾರೆ, ಬರೋರ್ ಬರ್‍ತಾ ಇದಾರೆ.

ನನ್ನಾ ಏಳು ಜನ ಹೆಣತೀರ ಬಳಿಗೇ ಬಿಟ್ಟು ನೀ ಹೋಗಯ್ಯ
ಬಿಟ್ಟಾ ನೀ ಹೋಗಯ್ಯ.
ನನ್ನಾ ರಾಜಪ್ಪಣೆಯಾ ಮ್ಯಾಲೆ ಹೊರುಡೆ ದೊರೆಸಾನಿ
ಬುದ್ಧಿವಂತ ದೊರೆಸಾನಿ.

ಪ್ರಧಾನಿ ಎಲ್ಲಿಗೆ? ಏಳು ಜನ ಹೆಣತಿಯರು, ನಿಮ್ಮ ಅಕ್ಕ ತಂಗಿಯರ ಬಳಿಗೆ? ಸಿವಾ, ಸಿವಾ, ಸಂಕರಾ, ತದಥನ ಗಿರಿವರ್ಧನಾ, ಗವಿಯ ಗಂಗಾಧರಾ ಇದು ಏನಪ್ಪ ಅನ್ಯಾಯ? ನಾನು ಅವತ್ತಿನ ದಿವಸ ಕೇಳಿಕಂಡಿದ್ದಿನಲ್ಲಾ ಗುರುದೇವಾ? ನಿಮ್ಮ ಏಳು ಜನ ಹೆಣ್ತೀಯವರ ಬಳಿಗೆ ಮಾತ್ರ ನನ್ನನ್ನು ಕೊಡಬಾರದು. ನನಿಗೆ ತಂದಿಲ್ಲ ತಾಯಿಲ್ಲ, ನನಿಗೆ ಬಂದಿಲ್ಲ ಬಳಗವಿಲ್ಲ. ನನಿಗೆ ಅಣ್ಣನಿಲ್ಲಾ ತಮ್ಮನಿಲ್ಲಾ. ನಾನು ದಿಕ್ಕಿಲ್ಲದಿರತಕ್ಕ ಪರದೇಶಿ. ಏಳು ಜನ ಹೆಣತಿಯರ ಬಳಿ ಮಾತ್ರ ನನ್ನ ಸಿಕ್ಕಿಸಬೇಡಿ, ನನ್ನ ಕಷ್ಟಕ್ಕೆ ಗುರಿಮಾಡಬ್ಯಾಡಿ ಅಂತ ಏಳಿದ್ದೆ. ನಮ್ಮ ತಂದೆ ಕಾಂಡೋಜಿರಾಯನು ಗುಂಡಿಯಲ್ಲಿ ಪಚ್ಚಕರಿಸಿ ಮಾತನಾಡಿದ್ದು ಈಗ ನನಗೆ ಗೊತ್ತಾಯ್ತು. ಇದು ಏನು ಕರ್ಮ? ಶಿವಾಶಿವಾ ಪರಮಾತ್ಮನೇ ಪ್ರಧಾನಿ ನಾನು ಈಗ ಹೋಗಿ ರಾಜನಲ್ಲಿ ಕ್ಷಮಾಪ್ಪಣೆಯನ್ನು ಕೇಳ್ತೀನಿ. ಏನ್ಹೇಳ್ತನೋ ನೋಡೋಣ, ಎಂಬುದಾಗಿ ಅವಳು ಬಾಗುತಾ ಬಳುಕುತಾ ಕಣ್ಣೀರು ಸುರಿಸಿಕೊಂಡು ಓಗಿ ರಾಜನ ಎದುರಿಗೆ ನಿಂತಕಂಡು, ಸ್ವಾಮಿ ನಾನು ಮೊಟ್ಟಮೊದಲೇ ನಿಮ್ಮನ್ನು ಹಾರೈಸಿ ಬೇಡಿಕೊಂಡೆ. ನನಗೆ ತಂದಿಲ್ಲ ತಾಯಿಲ್ಲ, ಬಂಧಿಲ್ಲ, ಬಳಗವಿಲ್ಲ. ನಾಗವಳಿ ಪ್ರಮಾಣವನ್ನು ಮಾಡಿದವರು ನೀವೇ. ಏಳು ಜನ ಹೆಣತಿಯರ ಬಳಿಗೆ ಕೊಡುವುದಿಲ್ಲ ಎಂಬುದಾಗಿ ಶಪಥವನ್ನು ಮಾಡಿದ್ದೀರಿ. ಈಗ ಏಳು ಜನ ಹೆಣತೀಯರ ಬಳಿಗೆ ಬಿಟ್ಟು ಬಾ ಅಂತ ಹೇಳ್ತ ಇದ್ದೀರಂತೆ. ಇದು ಯಾವ ನ್ಯಾಯ ಸ್ವಾಮಿ?

ತಂದೆ ನನಗಿಲ್ಲ ತಾಯಿ ನನಗಿಲ್ಲ
ಬಂಧು ನನಗಿಲ್ಲ, ಬಳಗ ನನಗಿಲ್ಲ
ದಿಕ್ಕಿಲ್ಲಾದಂಥ ಪರದೇಶಿ ನಾನು
ಹಿಂದೆ ನಮ ತಂದೆ ಹೇಳಿದ ಮಾತು
ಇಲ್ಲಿಗೇ ನನಗೆ ಗೊತ್ತಾಗುತ್ತೈತೆ
ತಂದೆ ಮಾತು ಮೀರಿಸಿಬಂದು
ಕಷ್ಟಕಾಕಾರಳಾದೀನಿ ನಾನು
ಬ್ಯಾಡ್ರೀ ಬ್ಯಾಡ್ರೀ ನಮ ತಂದೆ ಕೇಳ್ರಿ.

ಸ್ವಾಮಿ ಗಂಡನೇ ದೇವ್ರು, ಗಂಡನೇ ಸರ್ವಿಷ್ಟ ಬಳಗವಾಗಿರತಕ್ಕಂಥಾವ್ರು. ನನ್ನನ್ನು ಬಾಕಿವುರ ಬಳಿಗೆ ಈಡುಮಾಡಿದರೆ, ನನ್ನ ಪ್ರಾಣ ಉಳಿಯೋ ಸ್ಥಿತಿ ಕಾಣುವುದಿಲ್ಲ. ನನಗೆ ಯಾರುಂಟು? ಅವರು ಏಳು ಜನ ಹೆಣ್ತೀಯರು ಒಂಬತ್ತು ಜನ ಗವಡೇಯರು ಸೇರಿ ನನಗೆ ಪ್ರಾಣಹತ್ಯೆ ಮಾಡುವ ಸಂಭವ ಉಂಟು. ನನ್ನ ಅನ್ಯಾಯ ಮಾಡಿದಿರಲ್ಲ ಸ್ವಾಮಿ? ನನ್ನ ಪ್ರಾಣಹತ್ಯಕ್ಕೆ ಈಡುಮಾಡಬ್ಯಾಡಿ ಸ್ವಾಮಿ, ಬ್ಯಾಡಿ ಸ್ವಾಮಿ ಎಂದು ಕೈಮುಗಿದು ಬೇಡಿಕೊಳ್ತಾ ಇದಾಳೆ.

ಪ್ರಧಾನಿ ಈಕೆ ಚಂಡಿ. ನನ್ನ ಮಾತುಮಾತಿಗೂ ಪ್ರತ್ಯುತ್ತರನ್ನು ಹೇಳ್ತಾ ಇದ್ದಾಳೆ. ಈಕೆಯ ಏಳು ಮಾರುದ್ದ ಮಂಡೇದಲಿಡಿಕಂಡು–

ನನ್ನ ಏಳು ಜನ ಹೆಣತೀರ ಬಳಿಗೆ ಬಿಟ್ಟು ನೀ ಬಾರಯ್ಯಾ.
ನನ್ನ ರಾಜಾನಪ್ಪಣೆಯ ಮ್ಯಾಲೆ ಹೊರಡೇ ದೊರೆಸಾನೀ
ಬುದ್ಧಿವಂತ ದೊರೆಸಾನಿ.

ರಾಜಪ್ಪಣೆಯಾಯಿತಮ್ಮ.. ಇನ್ನು ಏನು ನೀನು ಹೇಳಿರತಕ್ಕಂಥ ಮಾತು ಕೇಳಲಿಲ್ಲ. ಹೊರಡಮ್ಮ ಎಂಬುದಾಗಿ ಹೇಳಿ ದೊರೆಸಾನಿಯನ್ನು ಕರೆದುಕೊಂಡು ರಥದ ಮ್ಯಾಲೆ ಕುಂಡ್ರಸಿಕಂಡು–

ಅವರಾ ಏಳು ಜನ ಹೆಣತಿರ ಬಳಿಗೇ ರಥ ಹೋತಾದಲ್ಲಾ. ರಥಾ ಬರೋ ಶಬ್ದ ಇವರು ಏಳು ಜನಾ ಹೆಣತೀರು, ಒಂಬತ್ತು ಜನ ಗೌಡೇರು ಕೇಳಿಸಿಕಂಡು, ವಜ್ರದಲ್ಲಿ, ಮುತ್ತಿನಲ್ಲಿ ಆರತಿಯನ್ನು ಮಾಡಿಕೊಂಡು ಈಯಮ್ಮನ್ನ ಎದುರುಗೊಂಡರು. ಪ್ರಧಾನಿ, ಯಾವ ತಾಯಿ ಗರ್ಭದಲ್ಲಿ ಹುಟ್ಟಿರತಕ್ಕಂಥ ಮಾಲಕ್ಷ್ಮಿ ಈಕೆ? ಯಾವ ತಂದೆ ತೋಳಿನಲ್ಲಿ ಬೆಳದಿರತಕ್ಕಂಥ ಮಾಲಕ್ಷ್ಮಿ? ನಮ್ಮ ಏಳು ಜನಕ್ಕೂ ಭಗವಂತ ಪುತ್ರ ಸಂತಾನ ಕೊಟ್ಟಿದ್ದಿಲ್ಲ. ಈ ಭಾಗ್ಯಲಕ್ಷ್ಮಿ ನಮ್ಮ ಪಟ್ಣಕ್ಕೆ ಕಾಲಿಕ್ಕಿದ ಮೇಲೆ ಈಯಮ್ಮನ ಗರ್ಭದಲ್ಲಿ ಒಂದು ಗಂಡು ಮಗುವೇ ಆಗಲಿ, ಒಂದು ಹೆಣ್ಣು ಮಗುವೇ ಆಗಲಿ, ನಮ್ಮ ವಂಶ ಪವಿತ್ರವಾಯ್ತು. ನಾವೆಲ್ಲ ಆ ಮಗುವನ್ನು ನೋಡಿಕೊಂಡು ಆಸೆಯನ್ನು ಕಳೆದುಕೊಂಡು ಬದುಕೋಣ ಎಂದುಕೊಂಡರು.

ರಾಜನಿಗ್ಹೋಗಿ, ಭಾಳ ಚೆನ್ನಾಗಿ, ನೀವು ತಂದಿರತಕ್ಕಂಥಾ ಸಿದ್ಧ ಮಹಾಲಕ್ಷ್ಮಿಯನ್ನು ಭಾಳ ಚೆನ್ನಾಗಿ ಕಾಪಾಡ್ತಾರೆ, ಎಂಬುದಾಗಿ ಒಂದು ವರ್ತಮಾನವನ್ನು ತಿಳಿಸಪ್ಪಾ? ಎಂಬುವುದಾಗಿ ಹೇಳ್ತಾರೆ.

ಈಯಮ್ಮನನ್ನು ಕರೆದುಕೊಂಡು ಒಳಿಕ್ಹೋದ್ರು. ಪ್ರಧಾನಿ ರಥಾ ಇಟ್ಟುಕಂಡು ಮುಂದಕ್ಹೋದ. ಚಂದ್ರಕಾಂತಿ ಬಂದು 'ಪಾಪಿ ಎಲ್ಲಿ ಬಿದ್ದಿದ್ದವಳು ನೀನು? ಯಾ ತಾವ ಬಿದ್ದಿದ್ದವಳು ನೀನು? ನಮ್ಮ ಏಳು ಜನರ ಬಾಳಿಗೆ ಊನವಾಗಿ ಬಂದು ನೀನು ನಮ್ಮ ಬಾಳಿಗೆ ಹುಟ್ಟಿಕಂಡ್ಯ ಎಂದರು.

ಅವಳ ಏಳು ಮಾರುದ್ದದ ಮಂಡೇ ಕೂದಲ್ಹಿಡಕಂಡು ರಾಗಿ ಯಾವ ಪ್ರಕಾರವಾಗಿ

ಬೀಸುತ್ತೀವ್ರೋ ಆ ಪ್ರಕಾರವಾಗಿ ತಿರುಗಿಸಿ ಮೂಲೆವಳಗೆ ಕುಂದರಿಸಿದ್ರು. ಚಂದ್ರಕಾಂತಿ ಬಂದ್ಲು, ಹೇಳಿದ್ಲು : ಅಮ್ಮ, ಇಂಗಲ್ಲ, ಉಪಾಯ್ವಾಗಿ ಅಪಾಯದ ಕೆಲಸ ಮಾಡ್ಬೇಕು. ಸ್ವಲ್ಪ ನಿಧಾನ ಮಾಡು, ನಾನು ಬರೋತನ್ಕ ಏನೂ ಮಾಡ್ಬಾರ್ದು, ಸುಮ್ಮನಿರಿ ಅಂದ್ಲು.

ಅಲ್ಲಿಗೆ ಹತ್ತುಗಂಟೆ ರಾತ್ರಿ ಟೈಮಾಗಿದೆಯಲ್ಲ; ರಾಣಿ ಸೂಲಗಿತ್ತಿ ಸುಗ್ಗಮ್ಮನ ಮನೆಗೆ ಹೋದ್ಲು. ಅಮ್ಮ ಸೂಲಗಿತ್ತಿ ಸುಗ್ಗಮ್ಮ ನಮ್ಮ ರಾಜ ನಾವು ಏಳು ಜನ ಅಕ್ಕ ತಂಗಿಯರನ್ನು ಮದುವೆಯಾದರೂ ಏಳು ಜನಕ್ಕೂ ಪುತ್ರ ಸಂತಾನವಿಲ್ಲ. ಆದರೆ ಸಿದ್ಧಾ ಮಹಾಲಕ್ಷ್ಮೀ ಎಂಬತಕ್ಕಂಥಾವ್ಳೊಬ್ಬಳನ್ನು ತಂದಿದ್ದಾನೆ. ಅವಳು ತುಂಬು ಗರ್ಭಿಣಿ. ಆಗಲೋ ಈಗಲೋ ಹಡೆದುಕಳ್ಳೋ ಕಾಲವಾಗಿದೆ. ಅವಳ ಗರ್ಭದಲ್ಲಿ ಒಂದು ಹೆಣ್ಣು ಸಂತಾನವೇ ಆಗಲಿ, ಒಂದು ಗಂಡು ಸಂತಾನವೇ ಆಗಲಿ, ಕತ್ತು ಮುರುದು ಗೊಬ್ಬರದ ಗುಂಡೀವಳಗೆ ಮುಚ್ಚಿಬಿಟ್ರೆ ನಿನಿಗೊಂದು ಬಂಗಾರದ ತಗಡಿನ ಸೀರೆ ಉಡುಸ್ತೀವಿ ಅಂತ ಅವಳಿಗೆ ಬೋಧನೆ ತುಂಬಿದ್ಲು.

ಹನ್ನೊಂದು ಹೆತ್ತವಳಿಗೆ ಇನ್ನೊಂದು ಹೆರೋದು ಸುದ್ದಿಯಾ? ಅಂತ ಹೇಳಿಬಿಟ್ಟು ಸೂಲಗಿತ್ತಿ ಸುಗ್ಗಮ್ಮ ಬಂದಳು. ತಾಯಿ ನಿಮ್ಮ ತಂದೆ ಎಸರೇನಮ್ಮ? ಕಾಂಡೋಜಿರಾಯರು. ನಿಮ್ಮ ತಾಯಿ ಎಸರು? ಸಿದ್ಧಮ್ಮನವರು. ನನ್ನ ಹೆಸರು ಸಿದ್ಧ ಮಹಾಲಕ್ಷ್ಮಿ ಅಂತ. ತಂದೆ ತಾಯಿ ಸತ್ತು ಅಲ್ಲಿಗೆ ಬಾಲಪ್ರಾಯದಿಂದ ಹೋಗಿ ನನ್ನ ತಂದೆ ಸಮಾಧಿ ಬಳಿ ತಪಸ್ಸು ಮಾಡಿಕಂಡಿರ್ತಕ್ಕಂಥಾವ್ಳು, ಆದರೆ ಈ ರಾಜಾಧಿರಾಜರಾಗಿರತಕ್ಕಂಥಾವರು ನನ್ನನ್ನು ಕರೆದುಕೊಂಡು ಬಂದರು.

ತಾಯಿ ಯಾವ ಸೀಮೆ ಎರಿಗೆ ಮಾಡಬೇಕಮ್ಮ?

ಅಮ್ಮ ಎರಿಗೇ ಅಂದ್ರೆ ನನಗೇನು ಗೊತ್ತು? ನಾನು ಊರು ಮನೆ ವಳಗೆ ಉಟ್ಟಿದವಳಲ್ಲ. ನಾನು ಕಾಡಿನಲ್ಲಿ ಬಾಲಪ್ರಾಯದಿಂದ ಎರಡು ನೇತ್ರವನ್ನು ಮುಚ್ಚಿಕೊಂಡು ಅವರನ್ನು ಕುರಿತು ತಪಸ್ಸು ಮಾಡಿ ನಮ್ಮ ತಂದೆಯೇ ದೇವರು ಎಂಬುದಾಗಿದ್ದ ಘನ ಮಹಾಪತುವ್ರತೆ. ಜನರ ಮುಖ, ಊರು ಮುಖಾ ನಾನು ನೋಡಿದವಳಲ್ಲ. ಎರಿಗೆ ಅಂದರೆ ನನಗೇನೂ ಗೊತ್ತಿಲ್ಲ ತಾಯಿ ಸೂಲಗಿತ್ತಿ ಸುಗ್ಗಮ್ಮ, ಯಾವ ಗುಡಿಯಾದರೇನಮ್ಮ ನಿದ್ರೆ ಬಂದೀತ್ತಲ್ಲ? ಒಂದು ಯಾವ ಸೀಮೆ ಎರಿಗೆ ಮಾಡಬೇಕೋ ನೀವೇ ಮಾಡಬೇಕೇ ಹೊರತು ನನಗೇನೂ ಗೊತ್ತಿಲ್ಲಮ್ಮ.

ಆಗ ಈಕೆಯಮ್ಮ, ಯಾವ ತಾಯಿ ಹೆತ್ತ ಮಗಳೋ ಭಾಳ ನಿಧಾನದಿಂದ ಕೇಳ್ತಾ ಇದ್ದಾಳೆ. ಇವಳು ಏಳು ಜನ ಹೆಣ್ತೀಯವರು, ಒಂಭತ್ತು ಜನ ಗವಡೇರು, ಸೂಲಗಿತ್ತಿ ಸುಗ್ಗಮ್ಮ, ಇವರೆಲ್ಲ ಒಂದೇ ಜೊತೆಯಾದರು. ಏಳು ಪಾವುಡದ ಬಟ್ಟೆಯನ್ನು ಇಮ್ಮಡಿಸಿ ಕಟ್ಟಿ ಈಯಮ್ಮನ ಕಣ್ಣಿಗೆ ಬಿಗುದರಲ್ಲ ಗುರುದೇವಾ;

ಹನ್ನೆರಡಾಳುದ್ದ ಮಾಳಿಗ್ಗೊಂದ್ ಏಣಿ ಹಾಕಿದ್ರು. ಕಣ್ಣು ಕಟ್ಟಿಬಿಟ್ರು.

ಹತ್ಸುತಾರೆ ಇಳಸುತಾರೆ
ಭಾಳ ಕಷ್ಟವ ಕೊಡುಸುತಾರೆ
ಭಾಳ ಹಿಂಸೆಯ ಕೊಡುಸುತಾರೆ
ತಾಳಲಾರೇನಮ್ಮಾ ನಾನು
ನಡೆಯಲಾರೆನಮ್ಮ ನಾನು
ಏನ ನಾ ನಿಮ್ಮ ನಂಬೇನಮ್ಮಾ?

'ಯಾಕ್ರಮ್ಮಾ ಯಾಕ್ರಮ್ಮಾ, ನನ್ನ ತಾಯಿ ತಂದೆ ಇಲ್ಲ. ಸೇವೆ ಮಾಡಿಸಿಕೊಳ್ಳತಕ್ಕಂಥಾ ತಾಯಿ ತಂದೆಯಲ್ಲವೇನ್ರಮ್ಮ ನೀವು? ನಮ್ಮ ಅಕ್ಕ ತಂಗಿಯರು ನೀವಲ್ಲವೇನ್ರಮ್ಮ? ನಾನ್ ಏನು ಅನ್ಯಾಯ ಮಾಡಿ ನಿಮ್ಮ ಬಳಿಗೆ ಬಂದಿದ್ದಿನಮ್ಮ? ನಿಮಗೇನಂದಿನಮ್ಮಾ? ನಾನು ಏನು ಆಡಿದೆನವ್ಮ? ಬೇಡರವ್ಮ. ನನ್ನ ಪ್ರಾಣ ಕೊಂದ್ಹಾಕಬೇಡ್ರವ್ವಾ' ಅಂತ್ಹೇಳಿ ಈಯಮ್ಮನಾಗಿರತಕ್ಕಂಥಾವ್ಳು ಗುಳಗುಳಗುಳ ಸ್ವಾಕಾಮಾಡಿಕೊಂಡು ಕಣ್ಣಾಗೆ ನೀರುಬಿಟ್ಟುಕಂಡು ಸೂಲಗಿತ್ತಿ ಸುಗ್ಗಮ್ಮನ ಪಾದವ್ಹಿಡಕಂಡು.

ಅಯ್ಯೊ ಏನು ಬರುದಾನೇ ಪಣೆಯಾ ಬರಾವಾ?
ಅಯ್ಯೊ ಏನು ಬರುದಾನೆ ಬ್ರಹ್ಮ ನನ್ನು ಪಣೆಯಲಿ ಬರಾವಾ .

ನನ್ನ ಹಣೆಯಲ್ಲಿ ಏನು ಬರುದ್ಯಪ್ಪ ಗವಿಯ ಗಂಗಾಧರಾ, ರಾಚೂಟಿ ವೀರಬದ್ಧರಾ, ಗುರುದೇವ. ನನ್ಹಣೆಯಲ್ಲಿ ವಿಧಿಯಮ್ಮ ಏನು ಬರುದ್ಯಮ್ಮ? ನನಗಿಂತ ಕಷ್ಟಾ ಇಂಥ ಶೀಕ್ಷೆ ಕೊಡಬೇಕಂಬುದಾಗಿ ಏನು ಇತ್ತಮ್ಮ? ಬ್ಯಾಡಮ್ಮ ನಮ್ಮಕ್ಕ ತಂಗಿದಿರಾ. ಅಮ್ಮ ನನ್ನ ಕೊಂದಾಕುದ್ರೂ ಚಿಂತೆ ಇಲ್ಲ. ನನ್ನ ಪ್ರಾಣಹೋದರೂ ಚಿಂತೆ ಇಲ್ಲ. ನೀವು ಮಕ್ಕಳಿಲ್ಲದವರು.

ನನ್ನ ಸಿಸುವು ಹೊಟ್ಯಾಗಿದ್ಹಾಂಗೇ ನನ್ನ ಪ್ರಾಣ ಕೊಲ್‌ಬ್ಯಾಡಿ. ನನ್ನ ಹೊಟ್ಟೆಯಲ್ಲಿ ಒಂದು ಎಣ್ಣು ಸಿಸುವೇ ಹುಟ್ಟಲಿ ಅಥವಾ ಒಂದು ಗಂಡು ಸಿಸುವೇ ಹುಟ್ಟಲಿ, ಅದನ್ನು ನೀವು ಎತ್ತಿಕೊಂಡು ಆಡಿಸಿ, ನಿಮ್ಮ ವಂಸಾ ಪವಿತ್ರಮಾಡಿಕೊಂಡು, ಅನಂತ್ರ ಬೇಕಾದ್ರೆ ನನ್ನ ಪ್ರಾಣ ಕೊಂದ್ಹಾಕಿ. ಬಲೇ ಕರ್ಮವಮ್ಮಾ ಸಿಸುಹತ್ಯಾ, ಗೋಹತ್ಯಾ ಅನ್ನತಕ್ಕಂಥಾದ್ದು ಅಂತ ಏಳಿಬಿಟ್ಟು ನಮ್ಮಮ್ಮನಾಗಿರುತಕ್ಕಂಥಾವ್ಳು ಗುಳು ಗುಳು ಗುಳು ಸ್ವಾಕಮಾಡ್ತಾ ಇದ್ದಳಲ್ಲಾ.

ಅವಳು ಮ್ಯಾಲಕ್ಹುತ್ತೊತನ್ಕ ಸುಮ್ಮನಿದ್ದು, ಚಿಕ್ಕವಳಾದ ಮಲ್ಲಿಕಾ ಎಂಬತಕ್ಕಂಥಾವ್ಳು ಏಣಿ ಮ್ಯಾಲಕ್ಹುತ್ತಿದಳಲ್ಲ ಗುರುದೇವಾ ಮ್ಯಾಲಕ್ಹುತ್ತಿ ಆಯಮ್ಮನ ಏಳು ಮಾರುದ್ದ ಮಂಡೆ ಕೂದಲ್ಹಿಡಕಂಡು ಮ್ಯಾಗಳಿಂದ ನೆಲಕ್ಕೆಳೆದು ಅಡೀಗೆಬಿಟ್ಟಳು. ಇವರಿಬ್ಬರು ಸೇರಿ ತಗಲಿಕಂಡು, ಎದೇ ಮ್ಯಾಲೆ ಆ ಕಡೇ ಒಬ್ಬಳೂ ಈ ಕಡೇ ಒಬ್ಬಳೂ ನಿಂತಕಂಡು, ಸೇರಿನ್ವೊನಕೆ ತಗದುಕೊಂಡು ವಿನೋದವಾದ ಪದ್ಯವಾಡಿಕಂಡು–

ಸುವ್ವಿ ಸುವ್ವಮ್ಮಲಾಲೀ ಸುವ್ವಲಾಲೀ
ಸುವ್ವಮ್ಮ ಓ ಲಾಲಿ ಸುವ್ವಲಾಲೀ

ಸುವ್ವಾ ಸುವ್ವಮ್ಮ ಲಾಲಿ ಸುವ್ವಲಾಲೀ
ಅವರು ಕಿಬ್ಬೊಟ್ಟೆಮ್ಯಾಲೆ ಗುದ್ದುತಾರೆ–ಸುವ್ವಲಾಲಿ

ಹೀಗೆ ಅವರು ಮಾತು ಮಾತಾಡುತ್ತಿದ್ದಂಗೇ ಒಂದು ಗಂಡು ಮಗು ಜನನವಾಯ್ತಲ್ಲ ಸ್ವಾಮಿ. ರಪ್ಪಂತ ನೆಲಕ್ಹೊಡದು,. ಮಡಿಲಾಗೆ ಕಟ್ಕಂಡ್ಳು ಸೂಲಗಿತ್ತಿ ಸುಗ್ಗಮ್ಮ. ಅತ್ತ ಅರ್ಧಗಂಟೆ ಟೈಂ ಕಳೀತು. ಹಂಗೇ ಮಾತು ಮಾತಾಡ್ತಿದ್ದಂಗೇ ಒಂದು ಹೆಣ್ಣು ಮಗ ಜನನವಾಯ್ತು. ಆ ಮಗೂನೂ ಸೂಲಗಿತ್ತಿ ಸುಗ್ಗಮ್ಮನಾಗಿರತಕ್ಕಂಥಾವ್ಳು ರಪ್ಪನೆ ನೆಲಕ್ಕೆ ಹೊಡ್ದು ಮಡ್ಲಾಗೆ ಕಟ್ಟಿಕಂಡ್ಳು.

ಅಲ್ಲಿಗೆ ಎರಡು ಫರ್ಲಾಂಗು ದೂರದಲ್ಲಿ ಒಂದು ಹೂವಾಡಿಗರ ದೊಡ್ಡಣ್ಣನ ತ್ವಾಟ. ಆ ತ್ವಾಟದಲ್ಲಿ ತಗದುಕಂಡ್ಹೋಗಿ, ನಿಂಬೇ ಗಿಡದೆಡೆ ಗಂಡುಮಗಾ ಹಾಕಿದ್ಲು. ಮಲ್ಗೇ ಗಿಡದೆಡೆ ಹೆಣ್ಣು ಮಗಾ ಹಾಕಿದ್ಲು. ಅಲ್ಲಿ ಬಿದ್ದಿರತಕ್ಕಂಥಾ ತರಗೆಲೇನ ಮುಚ್ಚಿಬಿಟ್ಟು ಸತ್ಹೋಗಿದೆ ಎಂದು ತಿಳಿದುಕಂಡು ಇವಳು ಮನಿಗೆ ಬಂದ್ಲು.

ಮನಿಗೆ ಬಂದು, ಈಯಮ್ಮನಿಗೆ ಏನು ಮಾಡೋಣ ಈಗ ಅಂತ ಹೇಳಿ, ಒಂದು ಬೀಳು ಪರಕೆ, ಒಂದು ಗುಂಡುಕಲ್ಲನ್ನು ಮಡಗಿ, ಕಣ್ಣುಗಳ ಬಟ್ಟೆಯನ್ನು ಬಿಚ್ಚಿ–

ನೋಡಿಕೊಳ್ಳಮ್ಮ ನಿನ್ನ ಮಕ್ಕಳ
ಎಲ್ಲಿ ಬಿದ್ದಿದ್ಯೆ ನಮ್ಮ ವಂಶಕ್ಕೆ ನೀನು?

ಎಲ್ಲಿ ಬಿದ್ದಿದ್ಯೇ ನೀನು? ನಮಗೆ ಸಂತಾನ ಇಲ್ದಿದ್ರೆ ಹೋಗಲಿ, ಒಂದು ಸಂತೋಷವಾದರೂ ಇರ್ತಿತ್ತು. ಸಿದ್ಧ ಮಹಾಲಕ್ಷ್ಮಿಯು ಕಸದ ಪೊರಕೆ, ಕಲ್ಲುಗುಂಡನ್ನು ಹೆತ್ಲು ಅಂದರೇ ಅದು ರಾಜಾಧಿರಾಜನಿಗೆ ಎಷ್ಟು ಅಪಮಾನ.? ನಮ್ಮ ರಾಜ ಪ್ರಾಣಮಡಿಕ್ಕಂಡು ಈ ಪ್ರಪಂಚದ ಮ್ಯಾಲಿರ್ತಾನಾ? ಪ್ರಾಣಹತ್ಯೆ ಮಾಡ್ಕಂತಾನೆ.. ನಮ್ಮನ್ನೆಲ್ಲ ಮುಂಡೆ ಮಾಡಿದ್ಯಲ್ಲೇ ಎಂದು, ರಾಜನಿಗೆ ಒಂದು ಕಾಗ್ದವನ್ನು ಬರ್ದಿದ್ದಾರಲ್ಲ ಸ್ವಾಮಿ. ನೀವು ಮೆಚ್ಚಿ ತಂದಿರ್ತಕ್ಕಂಥಾ ಸಿದ್ಧ ಮಹಾಲಕ್ಷ್ಮಿಯು ಒಂದು ಬೀಳುಪರಕೆ, ಗುಂಡುಕಲ್ಲನ್ನು ಹೆತ್ತಿದ್ದಾಳೆಂದು ಒಂದು ಕಾಗದವನ್ನು ಬರೆದರು.

ರಾಜ ಕಾಗ್ದ ನೋಡಿಕಂಡ. 'ಪರಮಾತ್ಮ, ಇದೇನು ಕರ್ಮ? ಪ್ರಧಾನಿ ಈಕೆಯನ್ನು, ಸೀಳುಗಾಳಿ ಸಿಗ್ಗಾಳಿ ಹೆಗ್ಗಾಳಿ ಭೋರಾಡತಕ್ಕಂಥ ಧಾರಾಕಡೆ ಮತಂಗಪರ್ವತದ ಕಡೆ ತಗದುಕಂಡ್ಹೋಗಿ ಈಕೆಯನ್ನು ಸಿರಸೋದನೆ ಮಾಡು ಅಂತ ಅಪ್ಪಣೆ ಮಾಡಿದ.

ಸ್ವಾಮಿ ಏನು ವನವಾಸವ ತಂದೊ ಗವಿಯ ಗಂಗಾಧರಾ ಗವಿಯ ಗಂಗಾಧರಾ.

ರಾಜನ ಅಪ್ಪಣೆ ಪ್ರಕಾರವಾಗಿ ಆಗಲೇ ರಥಾ ಸಿದ್ಧವಾಗಿ ನಿಂತದಲ್ಲ? 'ಅಮ್ಮಾ ರಾಜನಪ್ಪಣೆಯಾಗಿದೆ'

'ಎಮ್ಮಾ ರಾಜನಪ್ಪಣೆಯ ಮ್ಯಾಲೆ ಹೊರಡೇ ದೊರೆಸಾನೀ ಬುದ್ಧಿವಂತ ದೊರೆಸಾನಿ'.

'ಪ್ರಧಾನಿ ಏನಿದು ಕರ್ಮ? ಎಲ್ಲಿಗಪ್ಪ?'

'ಅಮ್ಮ ಸೀಳುಗಾಳಿ ಸಿಗ್ಗಾಳಿ ಹೆಗ್ಗಾಳಿ ಪಗ್ಗಾಳಿ ಭೋರಾಡತಕ್ಕಂಥಾ ಮತಂಗಪರ್ವತದ ಕಡೆ ತಗದುಕಂಡ್ಹೋಗಿ ನಿಮ್ಮನ್ನು ಸಿರಸೋದನೆ ಮಾಡಂತ ಅಪ್ಪಣೆಯಾಗಿದೆ.'

ಪರಮಾತ್ಮ, ನನ್ನ ತಂದೆ ಹೇಳಿದ ಮಾತನ್ನು ನಾನು ಕೇಳಲಿಲ್ಲ. ತಂದೆ ತಾಯಿ ಮಾತು ಮೀರಿದವರಿಗೆ ಇದೇ ಪಾಡು. ತಂದೇ ತಾಯಿ ಮಾತನ್ನು ಯಾವತ್ತಿಗೂ ಮೀರಬಾರದು. ನಾನು ಮೀರಿ ಬಂದದ್ದಕ್ಕೆ ಈ ಶಿಕ್ಷೆ ನನಗೆ ಗುರಿಯಾಯಿತು. ನೀರು ಕೊಟ್ಟವರು ಇಲ್ಲ. ನನಗೆ ಸ್ವಲ್ಪ ಗಂಜಿ ಕೊಟ್ಟವರೂ ಇಲ್ಲ. ಅಯ್ಯೋ ಪರಮಾತ್ಮಾ, ಇದು ಯಾವ ದರ್ಮ? ಇದು ಏನ್ ಅನ್ಯಾಯ?

ಅನ್ನಾವನ್ನ ಕೊಟ್ಟೋ ನೀನು
ಪ್ರಾಣವಾದ ಪ್ರಿಯ ನೀನು
ತಿರುವಾನ್ನ ಕೊಟ್ಟು ನನಗೇ
ಕಾಣದಾಗೋ ನನ್ನಾಲಿಗೇ, ರಾಮಾ ರಾಮಾ.

'ಪ್ರಧಾನಿ ನೀನಾದರೂ, ನಿನ್ನ ಹೊಟ್ಟೆವಳಗೆ ಗಂಡು ಸಂತಾನ, ಹೆಣ್ಣು ಸಂತಾನ ಹುಟ್ಟಿದ್ದರೆ ಪರಮಾತ್ಮಾ ಸ್ವಲ್ಪ ಅನ್ನವಾದರು ಕೊಟ್ಟು ನನ್ನ ಪ್ರಾಣಹತ್ಯೆ ಮಾಡು. ಅಥವಾ ಸ್ವಲ್ಪ ನೀರಾದರೂ ಕುಡಿಸಿ ನನ್ನ ಜೀವಕ್ಷಮಾಧಾನವನ್ನು ಮಾಡಿ ಅನಂತರ ತಗದುಕೊಂಡ್ಹೋಗಿ ನನ್ನ ಪ್ರಾಣಹತ್ಯ ಮಾಡು ಪ್ರಧಾನಿ'.

'ಅಮ್ಮ ಇವರ ಮುಂದೆ ನಿನಿಗೆ ಸ್ವಲ್ಪ ಗಂಜಿಯಾಗಲೀ ಸ್ವಲ್ಪ ನೀರಾಗಲೀ ಕುಡಿಸಿದರೆ ಇವರು ಏಳು ಜನ ಹೆಣತೀಯರು, ಒಂಬತ್ತು ಜನ ಗವಡೀಯವರು, ಇವರು ತಗದು ಕಂಡ್ಹೋಗಿ ರಾಜನಿಗೆ ತಿಳಿಸ್ತಾರೆ. ರಾಜ ನನಗೆ ಶಿಕ್ಷೆಯನ್ನು ಕೊಡುವನು. ಅದಾಗದು.'

ಎನ್ನಾ ರಾಜನಪ್ಪಣೆಯ ಮ್ಯಾಲೆ ಹೊರುಡೇ ದೊರೆಸಾನಿ ಬುದ್ಧಿವಂತ ದೊರೆಸಾನಿ.

'ಇದು ಎಲ್ಲ ನಿನ್ನದಪ್ಪಾ ಪರಮಾತ್ಮನೇ, ಗವಿಯ ಗಂಗಾಧರಾ, ನಿನ್ನ ಪಾದಕ್ಕೆ ಅರ್ಪಿತವಾಗಲಪ್ಪಾ ನನ್ನ ಕಷ್ಟಾ.

ಈಯಮ್ಮನನ್ನು ಎಳದಕಂಡು, ರಥದ ಮ್ಯಾಲೆ ಹಾಕ್ಕಂಡನಲ್ಲಾ
ಸ್ವಾಮೀ ಅರಣ್ಯ ಮಾರ್ಗವಾಗಿ ರಥವು ಹೋತಾದಲ್ಲಾ ರಥವು ಹೋತಾದೇ.

ರಥದಲ್ಲಿ ಹೋಗಿ ಮತಂಗ ಪರ್ವತವನ್ನು ಸೇರಿದರು. ಆ ಮತಂಗ ಪರ್ವತದಲ್ಲಿ ಈಯಮ್ಮನ ಏಳು ಮಾರುದ್ದನ ಮಂಡೇ ಕೂದ್ಲಿಡ್ಹುಂಡು ಈಚಿಗೆಳಕಂಡ್ರು. ರಾಜ ಏನ್ಹೇಳಿಕಳ್ಸಿದ್ದಾನೆ? ತೆಗೆದುಕೋ ನನ್ನ ಪಟ್ಟದಕತ್ತಿ; ಆಕೆಯ ಸಿರ್ಸವನ್ನು ಕಡಿದು ಆಕೆಯ

ರಯ್ತುವನ್ನೇ ಈ ಪಟ್ಟದ ಕತ್ತಿಯಲ್ಲಿ ತರಬೇಕು ಎಂಬುದಾಗಿ ಆಜ್ಞೆ ಮಾಡಿದ್ದಾರೆ. ಈಯಮ್ಮನನ್ನು ಈಚಿಗೆಳೆದುಕಂಡು ಪ್ರಧಾನಿ–

ಸ್ವಾಮಿ ಎತ್ತಿ ಹೊಡದಾನು ಗುರುವೇ ಅಮ್ಮನ ಶಿರಕಾಗಿ ತಾಯೀ ಶಿರಕಾಗಿ

ಕತ್ತಿ ಮುರುದು ಮೂರೆ ತುಂಡಾಗಿ ಸರಪಳಿ ಎದ್ದೋಯ್ತು. 'ಶಿವ ಶಿವ ಪರಮಾತ್ಮ ಈಕೆ ಎಂಥಾ ಧರ್ಮಪತ್ನಿ ಇರಬಹುದು? ರಾಜನು ತಿಳುವಳಿಕೆ ಇಲ್ಲದವನಂತೆ ಏಳು ಜನ ಹೆಣ್ತೇಯವ್ರು ಮಾತು ಕೇಳಿ, ಒಂಬತ್ತು ಜನಾ ಗವಡಿಯವ್ರ ಮಾತು ಕೇಳಿ, ಇಂಥಾ ಧರ್ಮಪತ್ನಿಯನ್ನು ಕರದುಕೊಂಡು ಬಂದು ಅಡವಿಪಾಲು ಮಾಡಿದ್ದಾನೆ. ಏನುಮಾಡಲಿ? ಎಂದು ಪ್ರಧಾನಿಯಾಗಿರ್ತಕ್ಕಂಥಾವ್ನು ಯೋಚನೆ ಮಾಡ್ತಾನೆ.

ಎಂಗೆ ಬಿಟ್ಟು ಹೋಗಲಯ್ಯಾ ಘನ ಮಹಾಪತಿವ್ರತೆಯಾ ರಾಮಾ ರಾಮಾ
ಅವನು ಗುಳಗುಳನೆ ಸ್ವಾಕವ ಇನ್ನೂ ಮಾಡ್ಯಾನೆ ದೊರೆಸಾನೀ
ಬುದ್ಧಿವಂತ ದೊರೆಸಾನೀ.

ಇದು ಏನು ಅನ್ಯಾಯ? ಇದು ಏನು ಧರ್ಮ? ನನ್ನ ಮಕ್ಕಳಿಗಿಂತ ಪಾಡು ಬಂದದಲ್ಲಾ? ಈಯಮ್ಮನಿಗಿಂತ ಶಿಕ್ಷೆ ಕೊಡುವಂಥ ಕಷ್ಟ ಬಂದಿತಲ್ಲ ಗುರುದೇವಾ?

ಕಣ್ಣಾಗೆ ನೀರ್ಹಾಕ್ಕಂಡು–'ಏನಮ್ಮಾ, ಘನ ಮಹಾಪತುವ್ರತೆ ಏನು ಕ್ಷಮಪ್ಪಣೆ ಹೇಳ್ತಿಯಮ್ಮಾ? ಎಂದು ಆಯಮ್ಮನ್ನೇ ವರಾ ಬೇಡ್ತನಲ್ಲ.?

'ಅಪ್ಪಾ, ನೀವ್ರೂ, ನಿಮ್ಮ ರಾಜರೂ, ಅವರ ಏಳ ಜನ ಹೆಂಡ್ತೀಯರೂ ಒಂಭತ್ತು ಜನ ಗವಡೀಯರೂ ನಿಮ್ಮ ಮಹಲ್‌ದಾರ್ರು–ಆ ನೀವೆಲ್ಲಾ ಶುಭಿಕ್ಷದಿಂದಾ ಪಟ್ಣಾ ಪಾಳ್ಯ ಮೆಚ್ಚಿಕಂಡು ಇರ್ರಿ; ನಾನು ಯಾವತ್ತಿಗು ದಿಕ್ಕಿಲ್ಲದಂಥ ಪರದೇಶಿ. ನನಗೆ ತಂದಿಲ್ಲಾ, ತಾಯಿಲ್ಲಾ. ನನಗೆ ಬಂಧುವಿರ್ಲ್ಲಿಲ್ಲಾ ಬಳಗವಿರ್ಲ್ಲಿಲ್ಲಾ ಅಣ್ಣನಿರಲಿಲ್ಲಾ ತಮ್ಮನಿರಲಿಲ್ಲಾ. ನನ್ನ ತಂದೇ ಮಾತು ಕೇಳಿ ಅಲ್ಲೇ ಇದ್ದಿದ್ದರೇ ನನಗೆ ಒಂದು ಘನ ಮಹಾಪತಿವ್ರತೆ(ತ್ವ) ಪ್ರಾಪ್ತವಾಗಿತ್ತಲ್ಲಾ? ಹೆಂಗ್ಸಿನ ಬುದ್ದಿಯನ್ನು ಉಪಯೋಗಿಸಿ ನಾನು ಬಂದಿದ್ದಕ್ಕೆ ಪರಮಾತ್ಮ ನನಗೆ ಇಷ್ಟು ಕಷ್ಟವನ್ನು ಕೊಡ್ತಾ ಇದ್ದಾನೆ. ಆದರೂ ಚಿಂತೆ ಇಲ್ಲ.'

ಈಯಮ್ಮ ಮಹಾಮಂತ್ರವನ್ನು ಜಪಿಸಿದಳು. ಮುರುದ್ಹೋಗಿರತಕ್ಕಂಥಾ ಪಟ್ಟದ ಕತ್ತಿ ನೆಟ್ಟಗಾಯಿತು. 'ಪ್ರಧಾನಿ ಬಾ ಇಲ್ಲಿ. ನನ್ನಿಂದ ನೀನು ಪ್ರಾಣಹತ್ಯೆ ಮಾಡಿಕಣಾದು ಬ್ಯಾಡ' ಎಂಬುದಾಗಿ ಹೇಳಿ ಆ ಪಟ್ಟದ ಕತ್ತಿಯನ್ನು ತೆಗೆದು, ಆಯಮ್ಮ ಎಡಗಾಲಿನ ಎಯ್ಟೇ ಬೆಟ್ಟನ್ನು ಕತ್ತರಿಸಿ ಆ ರಯ್ತುವನ್ನು ಆ ಪಟ್ಟದ ಕತ್ತಿ ತುಂಬ ಸವರಿಬಿಟ್ಟಳು. 'ಪ್ರಧಾನಿ ನನಿಗೊಂದು ಉಪಕಾರವನ್ನು ಮಾಡಿಕೊಡಬೇಕು.'

ಏನು ತಾಯಿ ಉಪಕಾರ?

ನನ್ನನ್ನು ಹೀಗೆ ಬಿಟ್ಹೋಗಬೇಡ. ನಿನ್ನ ಕಣ್ಣಲ್ಲಿ ಎದ್ರಿಗೆ ಕಾಣ್ತದೆ ನೋಡು ಗವಿ, ನನ್ನ ನಿಮ್ಮ ಮನೆಯಲ್ಲಿ ಹುರಳಿ, ಹುಚ್ಚೆಳ್ಳು, ಪರಂಗು, ಪತ್ರ, ನವಣೆ ಸಜ್ಜೆ ಯಾವ ಪ್ರಕಾರವಾಗಿ ಮೂಟೆ ಕಟ್ತೀರೋ ನನ್ನ ಸರೀರವನ್ನು ಹದಿನಾರು ಮಳದ ಪಟ್ಟೆಯಲ್ಲಿ ಎಂಟು ಮಳದ ಪಟ್ಟೆಯನ್ನು ಹಿಂಚಿ ಹರಿದುಕೋ. ಅದೇ ಪ್ರಕಾರವಾಗಿ ನನ್ನ ಸರೀರವನ್ನು ಒಂದು ಮೂಟೆ ಸಮಾನವಾಗಿ ಕಟ್ಟು. ಆ ಗವಿಗ್ಹಾಕು. ಆ ಗವಿ ಬಾಗಲಿಗೊಂದು ದೊಡ್ಡದೊಂದು ತುಂಡು ಎಳೆದುಹಾಕು. ಅದರ ಸಂದಿಗೆ ಕಾರೆಮುಳ್ಳು, ಮಿರಡಿಮುಳ್ಳು–ಇಂಥ ಮುಳ್ಳನ್ನು ಯಾವ ಸಂಚಾರವೂ ನನ್ನ ಕಣ್ಣಿಗೆ ಕಾಣದಂತೆ ಮರೆಮಾಡಿಬಿಟ್ಟು ನೀವೆಲ್ಲ ಸುಭಿಕ್ಷವಾಗಿ ಬದುಕ್ಹೋಗ್ರಪ್ಪ.

ಆಹಾ ಘನಮಹಾಪತಿವ್ರತೆ ಸಿದ್ಧಮಹಾಲಕ್ಷ್ಮಿಯೇ ಆದರೆ ನಿನ್ನಂಥ ಪತಿವ್ರತೆ ಸಿಕ್ಕುವುದೂ ಬಹಳ ಕಷ್ಟ ನಮ್ಮ ರಾಜನಿಗೆ. ಆದರೆ ನಮ್ಮ ರಾಜನು ಹೆಂಗ್ಸುರ ಮಾತು ಕೇಳಿ, ಬುದ್ಧಿ ಇಲ್ಲದಂತೆ ನಿಮ್ಮನ್ನು ತಂದು ಪ್ರಾಣಹತ್ಯೆ ಮಾಡು ಎಂಬುದಾಗಿ ಕಾಂತಾರಕ್ಕೆ ತಂದುಬಿಟ್ಟಿದ್ದಾನೆ. ಪರಮಾತ್ಮ ಇದೆಲ್ಲ ನಿನ್ನ ಅಧೀನವಾಗಿರಾದು ಎಂಬುದಾಗಿ ಆಯಮ್ಮನ ಮಾತಿನಂತೆ ಎಂಟು ಮಳದ ಬಟ್ಟೆಯನ್ನು ಹಿಂಚಿ ಹರದುಕೊಂಡು, ಆಯಮ್ಮನ ಸರೀರವನ್ನು ಒಂದು ಮೂಟೆ ಸಮಾನವಾಗಿ ಬಿಗಿದು, ಗವಿಗೆ ಹಾಕಿದ. ಗವೀ ಬಾಕಲಿಗೆ ದೊಡ್ಡದೊಂದು ಗುಂಡು ಹೊಡೆಸಿದ. ಪಕ್ಕಕ್ಕೆ ಕಿಂಡಿಗೆ ಕಾರೆಮುಳ್ಳು, ಮಿರಡಿಮುಳ್ಳು ಇಂಥ ಮುಳ್ಳನ್ನು ತಂದು ಯಾವ ಪ್ರಕಾರದ ಸಂಚಾರವೂ ಇಲ್ಲದಂತೆ ಮಾಡಿದ. ಆಗ ನಿಂತಕಂಡು ಹೇಳಿದ :

ಹೋಗಿ ಬರಲೇನೆ ತಾಯಿ ಸಿದ್ಧ ಮಾಲಕ್ಷ್ಮಿಯೇ ನಾನು?
ನಿನ್ನ ದಯ ನನಗೇ ಇರಲಿ, ಹೋಗಿ ಬರಲೇನೆ ಯಮ್ಮ ಯಮ್ಮಾ?

ಅಮ್ಮ ಈ ಕರ್ಮಕ್ಕೆ ನಾನೂ ಸಿಕ್ಕಿದಂತಾಯಿತು. ನಿನ್ನ ದಯವು ನನ್ನ ಮೇಲೆ ಇರಲಮ್ಮ. ಅಮ್ಮ ಹೋಗಿ ಬರುತ್ತೇನೆ ಎಂಬುದಾಗಿ, ಆಯಮ್ಮನಿಗೆ ನಮಸ್ಕಾರವನ್ನು ಮಾಡಿ,

ಸ್ವಾಮಿ ಪಟ್ಟದ ಮಾರ್ಗವಾಗಿನ್ನು ರಥವು ಬರುತಾದಲ್ಲೋ ರಥವು ಬರ್ತಾದೇ.

ಅವರ ಏಳು ಜನ ಹೆಂಡತಿಯರು ಒಂಭತ್ತು ಜನ ಗವಡಿಯರು ಹಾಲೂ ನೀರ್ಹಿಡಕಂಡು ಪ್ರಧಾನಿ ಕಾದುಕ್ಕಂಡು ಎದುರು ನಿಂತಿದ್ದಾರೆ.

ಪ್ರಧಾನಿ ಆಕೆಯನ್ನು ಕರದುಕಂಡು ಮತಂಗ ಪರ್ವತದಲ್ಲಿ ತೆಗೆದುಕೊಂಡು ಹೋಗಿದ್ಯಲ್ಲ ಏನು ಮಾಡಿದೆ?

ತಾಯಿ, ರಾಜ ಹೇಳಿದ್ದಂತೆ ಆಕೆಯ ಸಿರ್ಸವನ್ನು ಕಡಿದು, ಸಿರಿಗಂಧ ಸೌದೆಯನ್ನು ತಂದು ಸುಟ್ಟುಹೋಮಮಾಡಿ, ಗಂಗೇ ಪ್ರವೇಶಮಾಡಿ ಗಂಗೆಯಲ್ಲಿ ಬಿಟ್ಟುಬಂದೆ.

ಹಾಲು ಕುಡಿಯಪ್ಪ ಪರಧಾನಿ ನೀನು
ನೀರು ಕುಡಿಯಪ್ಪ ಪರಧಾನಿ ನೀನು
ಹಾಲೂ ಅನ್ನಾವ ಊಟಾವ ಮಾಡು
ಸ್ನಾನ ಮಾಡು ಸಂಜಾಲನ್ನ ಮಾಡು

ಪ್ರಧಾನಿ ನಿನ್ನಂಥಾ ಪ್ರಧಾನಿಯು ನಮ್ಮ ರಾಜ್ಯಕ್ಕೆ ಇರುವಾಗ ನಮಗೇನೂ ಭಯವಿಲ್ಲ. ಉಪಾಯದಿಂದ ಕರದುಕಂಡ್ಹೋಗಿ ಆಕೆಯನ್ನು ಸಿರಸೋದನೆ ಮಾಡಿಬಿಟ್ಟು, ಸುಟ್ಟು ಹೋಮಾಮಾಡಿ ಗಂಗೆ ಪ್ರವೇಶಮಾಡಿದಾ? ನಮ್ಮ ಮನಸ್ಸು ಭಾಳ ಪೂರ್ಣವಾಯ್ತು. ನಮ್ಮ ಮನಸ್ಸಿಗೆ ಭಾಳ ಸಂತೋಷವಾಯಿತು. ಯಾವ ಬಿಕ್ಕಟ್ಟು ಇಲ್ಲದಂತೆ, ಯಾವ ಕಷ್ಟವ್ರೂ ಕಾಣದಂತೆ–

'ಹರಿಯೇ ಶಂಭೂ ಮಾದೇವನ ಕರುಣಾ ಹೊಂದಿರಲೂ ಶಂಕರಾ
ಹೊಂದಿರಲು ಗುರವೇ.

ಆಗ ಪ್ರಧಾನಿ ಸಮಾಧಾನವನ್ನು ಮಾಡಿ, ಪ್ರಧಾನಿಯೂ ರಾಜನು ಇವರೇಳು ಜನಾ. ರಾಣಿಯರೂ ಪಟ್ಟಣದಲ್ಲಿ ಸುಭಿಕ್ಷದಿಂದಿದ್ದಾರೆ.

ಕೊಕ್ಕನೆ ಕೂಳಿ ಕೂಗಿ ಬೆಳಗವನ್ಹುಟ್ಟೋ ಕಾಲಕ್ಕೆ ಸ್ವಾಮಿ, ಶಿವನೂ ಪಾರ್ವತಿಯಾಗಿರತಕ್ಕಂಥಾವ್ರು ರಥವನೇರಿಕೊಂಡು ಸಂಚಾರ ಹೊರಟಿದ್ದರಲ್ಲಾ? ಆ ಹೂವಾಡಿಗರ ದ್ವಡ್ಡಣ್ಣನ ತ್ವಾಟದ ಮೇಲೆ ರಥ ಬಂತು. ಈ ಮಕ್ಕಳಿಗೆ ಸರಿಯಾಗಿ ಹದವಾಗಿ ಕತ್ತನ್ನು ಮುರ್ದಿರ್ಲಿಲ್ಲ, ಸೂಲಗಿತ್ತಿ ಸುಗ್ಗಮ್ಮ. ಈ ಹಿಮಾ ಬಿದ್ಬಿಡ್ತು. ಮಕ್ಕಳು ಎರಡು ಹುಯ್ಕಂಬಿಟ್ವೋ. ಮಕ್ಕಳ ಗೋಳು ಕಾರ್ ಕಾರ್ ಅಂತ ಚೀರಾಡ್ಕಂಡ್ ಗೋಳಾಡ್ತವೆ. ಈ ಮಕ್ಕಳ ಶಬ್ದಾ ಪಾರ್ವತಿ ಕಪ್ಪಾಳಕೆ ಹೊಡದ್ಹಂಗಾತು.

ನಿಲ್ಲೀಸಿ ಸ್ವಾಮಿ ನಿಲ್ಲಿಸಿ ರಥವಾ
ನಿಲ್ಲಿಸಿ ಮಾ ಗುರುವೇ ರಥವಾ.

'ಪರಮಾತ್ಮಾ ಸ್ವಲ್ಪ ರಥಾ ನಿಲ್ಸಿ. ಇಲ್ಲೇನೋ ನರಮನ್ಸರ್ ಗೋಳಾಡ್ಹಂಗ ಕೇಳ್ತದೆ'. ಪಾರ್ವತಿ, ಆದರೆ, ಈರಂಬತ್ತೇಳ್ ಕೋಟಿ ಜೀವರಾಶಿಗೆಲ್ಲಾ ಆಹಾರದಾನ ಮಾಡ್ತಕ್ಕಂಥಾ ಕಾರಣಕರ್ತ ನಾನು. ಕೂಗಿನ ಶಬ್ದ ಕೇಳಿದ ಮೇಲೆ ಈರೆಂಬತ್ತೇಳ್ ಕೋಟಿ ಜೀವರಾಶಿಗೂ ಅನ್ನದಾನ ಮಾಡಿ ಬರ್ತೀನಿ. ಆಮ್ಯಾಲೆ ಈ ವಿಚಾರ ನೋಡೋಣ ಎಂಬುದಾಗಿ ಪರಮೇಶ್ವರ ಮುಂದಕ್ಕೋಗಿ ಮರಳಗುಡ್ಡೆಯನ್ನು ಮಾಡಿ ಎಲ್ಲ ಜೀವರಾಶಿಗೂ ಅನ್ನದಾನ ಮಾಡಿದ.

ಅಷ್ಟರೊಳಗಾಗಿ ಪಾರ್ವತಿ ಯೋಚನೆ ಮಾಡಿಕಂಡ್ಲು : ಏನು, ನನ್ನ ಸ್ವಾಮಿಯಾಗಿರತಕ್ಕಂಥಾವ್ರು ಈರೆಂಬತ್ತೇಳು ಕೋಟಿ ಜೀವರಾಶಿಗೂ ಅನ್ನದಾನ ಮಾಡ್ತೀವಿ ಅಂತ ಹೇಳ್ತಾರಲ್ಲಾ? ಒಂದು ಇರುವೇ ಬಿಡದಂತೆ ಸರ್ವರಿಗೂ ಅನ್ನದಾನ ಮಾಡ್ತಿನೀಂತ ಹೇಳ್ತಾರಲ್ಲ ಇವರು? ಸತ್ಯವನ್ನು ಪರೀಕ್ಷೆ ಮಾಡ್ಬೇಕು ಅಂತ ಹೇಳ್ಬಿಟ್ಟು, ಈ ಪರಮೇಶ್ವರನು ಆಚೆಗ್ಹೋಗುವಾಗ್ಗೆ, ಒಂದ್ ಇರುಬೇ ಹಿಡಕಂಡು ಕಣ್ಣುಕಪ್ಪಿನ ಭರಣೀಲ್ಹಾಕ್ಕಂಡು ಕುತ್ತಿಗೇಗ್ ತಗಲ್ಹಾಕ್ಕಂಡ್ಲು. ಇವರು ಈರೆಂಬತ್ತೇಳು ಕೋಟಿ ಜೀವರಾಶಿಗೆ ಅನ್ನಧಾರಣೆಯನ್ನು ಮಾಡಿಬಂದರು.

'ಸ್ವಾಮಿ, ಈರೆಂಬತ್ತೇಳು ಕೋಟಿ ಜೀವರಾಶಿಗೆ ಅಂದ್ರೆ ಒಂದ್ ಪ್ರಾಣೀಗೂ ಬಿಡದಂಗೆ ಅನ್ನದಾನ ಮಾಡಿ ಬಂದ್ರಾ ಸ್ವಾಮಿ?' 'ಮಾಡಿದ್ದೇನೆ ಪಾರ್ವತಿ'. ಅಂಗಿದ್ದಮ್ಯಾಲೆ-

ಕೊಳ್ಳಿ ಸ್ವಾಮಿ ಕೊಳ್ಳೀ ಗುರುವೆ
ನಿಮ್ಮ ಸತ್ಯ ನಾ ನೋಡಾಲುಬೇಕು.

ಅಂತ್ಹೇಳಿ ಕುತ್ತಿಗೇ ತಗಲ್ಹಾಕ್ಕಂಡಿರತಕ್ಕಂಥಾ ಕಣ್‌ಕಪ್ಪಿನ ಭರಣಿಯನ್ನು ಕೊಟ್ಟಳು. ಆ ಭರಣಿಯನ್ನು ಸ್ವಾಮಿ ಬಿಚ್ಚಿದ. ಅದೂ ಒಂದ್ ಸಕ್ಕರೇ ಕಚ್ಚಂಡಿತ್ತು!

ಮೆಚ್ಚಿದೆ ಪರಮಾತ್ಮನೇ ನಿನ್ನಾ
ನಿನ್ನ ಸತ್ಯಾ ಮೆಚ್ಚಿದೆ ನಾನು.

ಪರಮಾತ್ಮಾ, ನಿಮಗೆ ಪತ್ಯುತ್ರ ಹೇಳಿದ್ದು ನಂದು ತೃಪ್ತಾಯಿತು. ನಿಮ್ಮ ಸತ್ಯವನ್ನು ನಾನು ಮೆಚ್ಚಿದ್ದೇನೆ ಸ್ವಾಮಿ. ಈ ತ್ವಾಟದಲ್ಲಿ ಏನೋ ಮಕ್ಕಳ ಶಬ್ದವಾಗ್ತಾ ಇದೆ. ನೋಡ್ಬೇಕು ಸ್ವಾಮಿ.

ನೋಡ್ತಾ ಇದಾರೆ ಓಗಿ. ಮಲ್ಲಿಗೇ ಗಿಡದೆಡೆ ಹೆಣ್ ಮಗಾ, ನಿಂಬೇ ಗಿಡದೆಡೆ ಗಂಡ್ ಮಗಾ ಬಿಸಾಡಿಬಿಟ್ಟು ಹೊರಟ್ಹೋಗಿದಾರೆ.

'ಸ್ವಾಮಿ ಯಾರೋ ದಿಕ್ಕಿಲ್ಲಂಥಾ ಮಕ್ಕಳು. ಯಾರೋ ಹೆತ್ತು ಬಿಸಾಕಿಬಿಟ್ಟು ಹೋಗಿದ್ದಾರೆ. ನೀವು ಮಹಾಮಂತ್ರವನ್ನು ಜಪಿಸಿ, ಒಂದು ಜೋಲನ್ನು ಮಾಡಿ ಈ ನಿಂಬೇ ಗಿಡಕ್ಕೆ ಕಟ್ಟಿ. ನಾನು ಮಹಾಮಂತ್ರವನ್ನು ಜಪಿಸಿ ಜೋಲನ್ನು ಮಾಡಿ ಈ ಮಲ್ಲಿಗೇ ಗಿಡಕ್ಕೆ ಕಟ್ತೇನಿ. ನಿಮ್ಮಲ್ಲಿ ತ್ರಿಶೂಲವುಂಟು. ಮಹಾಮಂತ್ರವನ್ನು ಜಪಿಸಿ ವಂದರೊಂದು ತೊಟ್ಟು ತುಪ್ಪಾ ಮಕ್ಕಳ ಬಾಯಿಗೆ ಬೀಳಲಿ, ಹೂವಂದರೊಂದು ತೊಟ್ಟು ತುಪ್ಪಾ ಮಕ್ಕಳ ಬಾಯಿಗೆ ಬೀಳಲಿ, ಎಂಬುದಾಗಿ ಶಾಪವನ್ನು ನೇಮಿಸಿ, ಈ ಎರಡು ಮಕ್ಕಳಿಗೂ ಎಸರು ಕುಲ ನಾವು ಅಂದರೆ ಯಾರಾದ್ರೂ ಎತ್ತಿ ಸಾಕ್ಕಂಡ್ರೆ ಈ ಫಲ ನಮಿಗುಂಟು' ಎಂಬುದಾಗಿ ಪಾರ್ವತಿ ಜಗದೇಶ್ವರನಿಗೆ ಹೇಳಿದಾಳೆ.

ಹೌದು ಪಾರ್ವತಿ ಇದು ಧರ್ಮಕಾರ್ಯ. ಮಹಾಮಂತ್ರವನ್ಹೇಳಬಿಟ್ಟು ಒಂದು ಜೋಲನ್ನು ಮಾಡಿ ನಿಂಬೇಗಿಡಕ್ಕೆ ಕಟ್ಟಿದ ಆ ಪರಮೇಶ್ವರ. ಪಾರ್ವತಿಯೂ ಹಾಗೇ ಒಂದು ಜೋಲನ್ನು ಮಾಡಿ ಮಲ್ಲಿಗೆ ಗಿಡಕ್ಕೆ ಕಟ್ಟಿದ್ಲು. ತಿರಿಸೂಲದಲ್ಲಿ ಹುಳವನ್ನು ವಾನ ಮಾಡಿ ಆಂ ಅಂದರೊಂದು ತೊಟ್ಟು ತುಪ್ಪ ಮಕ್ಕಳ ಬಾಯಿಗ ಬೀಳಲಿ, 'ಹೂಂ' ಅಂದರೊಂದು ತೊಟ್ಟು ತುಪ್ಪ ಮಕ್ಕಳಿಗೆ ಬಾಯಿಗೆ ಬೀಳಲಿ; ಈ ತುಪ್ಪವನ್ನು ಕುಡಿದು ಕೊಕ್ಕನೆ ಕೋಳಿಕೂಗಿ ಬೆಳಗವನ್ಹುಟ್ಟೋ ಕಾಲದಲ್ಲಿ ಈ ಹೂವಾಡಿಗರ ದೊಡ್ಡಣ್ಣನಿಗಿವು ಸಿಕ್ಕಲಿ. ಈ ಎರಡೂ ಮಕ್ಕಳನ್ನೆತ್ತಿಕಂಡು ಆರೈದು ಕಾಪಾಡಲಿ. ನಿಂಬೇ ಗಿಡದಲ್ಲಿ ಹುಟ್ತಕ್ಕಂಥಾ ಮಗುವಿಗೆ 'ನಿಂಬೆಣ್ಣ'ಂತ ಹೆಸರು ಕರೀಲಿ. ಮಲ್ಲಿಗೇ ಗಿಡದಲ್ಲಿ ಸಿಕ್ತಕ್ಕಂಥಾ ಮಗುವಿಗೆ ಮಲ್ಲಿಗೆಮ್ಮಾ ಅಂತ ಹೆಸರು ಕರೀಲಿ. ಆದರೆ ಮಲ್ಲಿಗೆಮ್ಮಾ. ನಿನಗೆ ಕಾಲಜ್ಞಾನದ ಪೂರ್ತಿ ವಿಷಯವೆಲ್ಲಾ ಗೊತ್ತಾಗಲಿ. ನಿಮಿಗೆ

ಅನ್ನೆರಡು ವರ್ಷದ ಬಾಲಪ್ರಾಯ ತುಂಬೋದ್ರೊಳಗಾಗಿ, ಪ್ರಾಯ ಬರೋದ್ರೊಳಗಾಗಿ, ನಿಮ್ಮ ತಾಯಿ ನಿನ್ನ ಕೈಗೆ ಸಿಕ್ಕಲಿ. ಆದ್ರೆ ನಿಮ್ಮ ತಂದೆ ಪಟ್ಟ ನಿಮಗೆ ಹುಳುವಳಿಕೆಯಾಗಲಿ ಎಂಬುದಾಗಿ ಅವರಿಗೆ ಅಭಯಹಸ್ತವನ್ನು ನೀಡಿ ಮಾಯವಾಗಿ ಹೊರಟೋದ್ಲು.

ಕೊಕ್ಕನೆ ಕೋಳಿಕೂಗಿ ಬೆಳಗೋವನ್ನುಟ್ಟೋ ಟೈಮಿನಲ್ಲೇ ಹೂವಾಡಿಗರ ದೊಡ್ಡಣ್ಣಾ ಬಂದ. ಇವನಿಗೂ ಪುತ್ರ ಸಂತಾನವಿಲ್ಲ. ಬೇಕಾಗಿರತಕ್ಕಂಥಾ ದೇವರಿಗೆಲ್ಲ ಪೂಜೆಮಾಡಿರೋವನು. ಕಲ್ಲಾಗಿದ್ದ ದೇವರು. ಆದರೆ ಗುಡಿಗೋಳಿಗೆಲ್ಲ ಪೂಜೆಮಾಡಿದ್ದಾನೆ ಮಕ್ಕಳಿಗೋಸ್ಕರವಾಗಿ. ಕಾಸಿಗ್ಹೋಗಿ ಕರ್ಮಕಳೆದು ಬಂದಿದ್ದಾನೆ ಮಕ್ಕಳಿಗೋಸ್ಕರವಾಗಿ. ಆದರೆ ಪುತ್ರ ಸಂತಾನವಿಲ್ಲ. ಅಂತಾಹವ್ನನು ಬಂದ. ಈ ಎರಡೂ ಮಕ್ಳೂ ಏನ್ ಕಾರ್ ಕಾರ್ ಕಾರ್ ಅಂತ ಬಡಕಂತಾ ಇದಾವೆ. ಯೋಚಿಸಿದ ಪರಮಾತ್ಮನೇ, ಗುರುದೇವ, ನನ್ನ ಸತ್ಯವನ್ನು ನೋಡಿ ಪರಮೇಶ್ವರನಾಗಿರತಕ್ಕಂಥಾವ್ನು ನನ್ನ ಮನೆ ಬಾಕ್ಲಿಗೆ ಮಕ್ಕಳನು ಕೊಟ್ಟು ಹೋಗಿದ್ದಾನೆ ಅಂತ ಹೇಳಿ, ಆ ಎರಡೂ ಮಕ್ಕಳನ್ನು ಕಚ್ಚಿ ಮುದ್ದಾಡಿ ಮನಿಗೆ ತಗದುಕಂಡ್ಹೋಗಿ ಎರಡು ಮಕ್ಕಳಿಗೂ ತೊಟ್ಟಲು ಬಂಗಾರದಲ್ಲಿ ಮಾಡಿಸಿದ. ಹಗ್ಗವನ್ನು ಬೆಳ್ಳಿಯಲ್ಲಿ ಮಾಡಿಸಿದ. ಆ ತೊಟ್ಟಿಲಿನಲ್ಲಿ–

ನೀವು ತೂಗಿರಿ ರಂಗಾನ, ತೂಗಿರಿ ಬಾಲ್ಯನ, ತೂಗೀರಿ ಆನಂದ ಅಚ್ಯುತನ
ನಮ್ಮ ಮಾಗಡಿ ರಂಗನಾ ತೂಗಿರಿ, ನಮ್ಮ ಬಾಲ ಸಂಜೀವನಾ ತೂಗಿರಿ
ತೂಗೀರಿ ರಂಗಾನ, ತೂಗಿರಿ ಬಾಲನ, ತೂಗೀರಿ ಆನಂದ ಅಚ್ಯತನ.

ಅವರು ಪುತ್ರಸಂತಾನವಿಲ್ದೆ ಇದ್ದವ್ರು, ಭ್ರಮೆಯಿಂದ, ಭಾಳ ಆನಂದ್ಯೆಶ್ವರ್ಯದಿಂದ ಮಕ್ಕಳನ್ನು ಸಾಕುತಾ ಇದ್ದಾರೆ.

ಮಕ್ಕಳು ಇವತ್ತು ಬೆಳೀ ಅಂದರೆ ನಾಳಿಕ ಬೆಳೀತಾವೆ. ನಾಳಿಕೆ ಬೆಳಿ ಅಂದರೆ ಇವತ್ತೆ ಬೆಳಿತವೆ. ಆದರೆ ಪಾರ್ವತೀ ಪರಮೇಶ್ವರರು ಕೊಟ್ಟ ಅಭಯ ಹಸ್ತದಿಂದ ತಾನೂ ತನ್ನಾಟವಾಗಿ ಯಾವ ರ‍್ವಾಗವೂ ಇಲ್ದೆ ಬೆಳದೋಗಿಬಿಟ್ಟುವು.

ಮಕ್ಕಳು ಬೆಳದೂ ಏಳು ವರುಸಾ, ಎಂಟು ವರುಸಾ, ಒಂಭತ್ತು ವರುಸಾ ತುಂಬಿತಲ್ಲ ಗುರುದೇವಾ. ತಂದೆ ಮಾಡಿರ್‍ತಕ್ಕಂಥಾ ಕಸುಬು ಮಕ್ಕಳಿಗೂ ಉಂಟು. ಇದೇ ಕಸುಬು ಮಾಡಬೇಕೆಂಬುದಾಗಿ ಹೂವಾಡಿಗರ ದೊಡ್ಡಣ್ಣ ಯೋಚನೆಮಾಡಿಕಂಡು, ಈ ಎರಡೂ ಮಕ್ಕಳ್ನೂ ತೆಗೆದುಕೊಂಡು ಅದೇ ಅವನ ಹೂವಿನ ತ್ವಾಟ್ದಲ್ಲಿ ಈ ಮಕ್ಕಳ್ನ ಕಾವಲಿಟ್ಟುಬಿಟ್ಟ.

ಒಂದಲ್ಲ ಒಂದಿವ್ಸಾ ಪರಮೇಶ್ವರನು ಪಾರ್ವತೀ ಹೋಗ್ತಾ, ಪರಮಾತ್ಮ ನಾವು ಜೋಲ್ನಲಿ ಉಪದೇಶವನ್ನು ಮಾಡಿ, ಜೇನುತುಪ್ಪದಿಂದ ಬೆಳೆಸಿರತಕ್ಕಂಥಾ ಮಕ್ಕಳು ಎಷ್ಟು ಚೆನ್ನಾಗೆ ಕಾಣ್ತಾ ಇದ್ದಾರೆ ಅಂತ ಯೋಚನೆಮಾಡಿಕಂಡು.

ಸ್ವಾಮಿ ಸಿವನು ತಂದ್ಹಾಕವನಲ್ಲೋ ಸಿವ ಮಲ್ಲಿಗೆ ತ್ವಾಟವಾ?
ಸಿವ ಮಲ್ಲಿಗೆ ತ್ವಾಟವಾ
ಸ್ವಾಮಿ ತ್ವಾಟಕ್ಕೆ ಈ ಹೆಣ್ಣ ಕ್ವಾಟೆ ಕಟ್ಟಿದನೊ, ಕ್ವಾಟೆ ಕಟ್ಟಿದನೊ
ಸ್ವಾಮಿ ಕಿರುಜಾಜಿ ಹೂಗಳೆಲ್ಲ ಬೀಸಾಗಿ ಬೆಳುದವ್ರೋ
ಬೀಸಾಗಿ ಬೆಳುದವ್ರೋ
ತಮ್ಮ ಕಿರುಜಾಜಿ ಹೂವ ಕಿತ್ತು ಮೊಗಳ ಮಲ್ಲಿಗ್ಹೂವ ತಾಗಿ
ಪೂಜೆಯ ಮಾಡಿದಾರೆ
ಹರಿಯೇ ಶಂಭು ಮಾದೇವನ ಕರುಣಹೊಂದಿರಲು ಶಂಕರಾ, ಹೊಂದಿರಲು ಶಂಕರಾ
ಸ್ವಾಮಿ ಮಲ್ಲಿಕಾರ್ಜುನನ ಪೂಜೆ ಮಾಡ್ಯಾಳು ಮಲ್ಲಿಗೆವ್ವ
ಮಾಡ್ಯಾಳು ಮಲಿಗೆವ್ವ.

ಕಿರುಜಾಜಿ ಹೂವ ಕಿತ್ತುಕಂಡು ಮಲ್ಲಿಕಾರ್ಜುನನ ಪೂಜೆ, ಕಣಿವೆ ಬಸವಣ್ಣನ ಪೂಜೆ, ನಮ್ಮಮ್ಮ ಮಾಡ್ತಾಳೆ. ಮಲಿಗೆವ್ವ ಹೀಗೆ ಪೂಜೆ ಮಾಡ್ಕಂಡು ಅಲ್ಲೇ ಸುಭಿಕ್ಷವಾಗಿರ್ತಾರೆ.

ಸ್ವಾಮಿ ಏನು ಕಷ್ಟಾವ ತಂದೋ ಗವಿಯ ಗಂಗಾಧರಾ?
ಗವಿಯ ಗಂಗಾಧಾರಾ

ಹೂವಾಡಿಗರ ದ್ವಡ್ಡಣ್ಣಾನ ತ್ವಾಟದಲ್ಲಿ ಎರಡು ಮಕ್ಕಳೂ ವಾಸ ಮಾಡ್ತಕ್ಕಂಥಾ ಸಮಯದಲ್ಲಿ ಸ್ವಾಮಿ ಚದುರಂಗ ಮಹರಾಜನ ಏಳು ಜನ ಹೆಣತಿಯವ್ರು, ಒಂಭತ್ತು ಜನ ಗೌಡಿಯವರು, ಸೂಲಗಿತ್ತಿ ಸುಗ್ಗಮ್ಮನೂ ಊಟ ಮಾಡಿಬಿಟ್ಟು, ಹನ್ನೆರಡು ಗಂಟೆ ಟೈಂನಲ್ಲಿ ಅದೇ ತ್ವಾಟಕ್ಕೆ ಬಟ್ಟೆ ಒಗೆಯುವುದಕ್ಕೆ ಬಂದರು. ಬಂದು ಆ ಬಟ್ಟೆ ಮಂಕರಿಯನ್ನು ಆ ಕಡೆ ಇಟ್ಟೆದ್ರು. ಇವ್ರು ಏನೇನೊ ವಿಚಾವಾಗಿರತಕ್ಕಂಥ ಮಾತು. ಹೆಂಗ್ಸರ ಮಾತು ಕಂಡದ್ದೀರಲ್ಲ? ಆದ್ರೆ ಅವರೇನಾದ್ರು ಬ್ಯಾರೆ ಸೇರ್ಕಂಡ್ರೆ, ಅವ್ರು ಯಾವ್ಯಾವ್ದೋ ವಿಚಾರ ಮಾತಾಡಿಕಂಡು ಕಲ್ಯಾಣಿ ಚಪ್ಪಡಿ ಮ್ಯಾಲೆ ಕೂತಿದ್ದಾರೆ.

ಈ ಹೆಣ್ಣು ಮಗುವಿಗೆ 'ಕಾಲಜ್ಞಾನವಾಗಲಿ' ಎಂಬುದಾಗಿ ಅಭಯ ಹಸ್ತವನ್ನು ನೀಡಿದ್ದರಲ್ಲ? ಈಯಮ್ಮಸಿಗೆ ವಿಚಾರವು ಗೊತ್ತಾಯಿತು. ನಮ್ಮ ತಾಯಿಗೆ ಚಿಕ್ಕವ್ವನಾಗಿರತಕ್ಕಂಥ, ದೊಡ್ಡವರಾಗಿರತಕ್ಕಂಥಾವರೆಲ್ಲ ಬಂದಿದ್ದಾರೆ ಎಂಬುದಾಗಿ. ಈ ಮಗಾ ಪೂರ್ವವಾಗಿ ನೀರು ಕಟ್ತಾ ಇದ್ದಿದ್ದು, ಅಲ್ಲಿ ಒಂದಿಷ್ಟು ಜೇಡಿಮಣ್ಣನ್ನು ಕಿತ್ತುಕಂಡು ಮಾಯದ ಬಸವನನ್ನು ಮಾಡಿಕಂಡು ಅದನ್ನು ಕೈಯಲ್ಲಿಡಕಂತು. ಸರಾರ್ನೆ ಬಂತು. ಬಾವೀ ಒಳಕೆ ಇಳೀತು . ಮೆಟ್ಲ ಮೇಲೆ ನಿಂತಕಂತು. ಏನ್ ಏಳ್ತದೀ ಮಗಾ ಅಂದ್ರೆ–

ಮಣ್ಣಿನಾ ಬಸುವಣ್ಣ ತಣ್ಣೀರ್ ಕುಡಿಯಣ್ಣ
ನಮ್ಮ ಅಣ್ಣಯ್ಯಾ ಫಲವ ನೀನು ಗೆಲಿಸೋ ಬಸವಣ್ಣನೇ
ಗೆಲಿಸೂ ಬಸವಣ್ಣನೆ.

ಆಹಾ! ಏನಮ್ಮ ಹೂವಾಡಿಗರ ದ್ವಡ್ಡಣ್ಣನ ಮಗಳೆ ಏನು ಚೋಜಿಗ, ಏನು ಚಟುವಟಿಕೆ, ಏನು ವೈಯ್ಯಾರದ ಮಾತಾಡ್ತಾ ಇದೀಯಮ್ಮ ನೀನು? ಮಣ್ಣಿನ ಬಸವಣ್ಣ ತಣ್ಣೀರು ಕುಡಿಯಣ್ಣ, ನಮ್ಮಣ್ಣಯ್ಯನ ಫಲಾ ಗೆಲಿಸಣ್ಣ ಅಂತ ನೀರು ಇಕ್ತಿಯಾ. ಈಚೆಗ್ ತಗೀತಯಾ. ಮಣ್ಣಿನ ಬಸವಣ್ಣ ತಣ್ಣೀರು ಕುಡಿದಿದ್ದು ಎಂದಾದ್ರೂ ನೋಡಿದ್ದಿಯಾ ಮಗಳೆ? ಇದೇನಮ್ಮ ಆಶ್ಚರ್ಯ.

ಅಮ್ಮ ನೀವು ದೊಡ್ಡವರು. ನಾನು ಚಿಕ್ಕವ್ಳು. ಉಡುಗಾಟ. ಉಡುಗಾಟದಿಂದ ಮನಸ್ಗೇನೇನ್ ಬತ್ತದೋ—ಆ ಪ್ರಕಾರವಾಗಿ—ಮಾತ್ನಾಡ್ಕತ್ತಿನಿ. ನನ್ ಸುದ್ದಿ ನಿಮಗಾಕರಮ್ಮ? ಮಕ್ಕಳ ಸುದ್ದಿ? ನೀವು ಬಂದಿರತಕ್ಕಂಥ ಕಾರ್ಯವನ್ನು ನೋಡಿಕಂಡು, ಬಟ್ಟೆಯನ್ನು ಒಗದುಕಂಡು, ಮನೀಗ್ಹೋಗದನ್ನ ನೋಡ್ಕಳಿ. ನನ್ನ ವಿಚಾರ ನಿಮಗೆ ಬೇಡಿ.

ಅಲ್ಲಮ್ಮ ಮಣ್ಣಿನ ಬಸವಣ್ಣ ತಣ್ಣಿರು ಕುಡಿದದ್ದು ಕೇಳೀದೀಯೇನಮ್ಮ? ಇಹಲೋಕ, ಪರಲೋಕ, ವೈಕುಂಠ, ಪರಪತಿಯಲ್ಲೂ ಯಾರೂ ಕಾಣ್ಲೀಲ್ಲ. ಈ ಪ್ರಪಂಚದಲ್ಲಿ ಮಣ್ಣಿನಬಸವಣ್ಣ ತಣ್ಣೀರು ಕುಡಿದಿದ್ದು ಇಲ್ಲ.

> ಯಮ್ಮ, ಹೆಂಗಸು ಬೀಳುಪರಕೆ, ಗುಂಡುಕಲ್ಲವಾ ಹೆತ್ತಿದ್ದು ಕಂಡೀರಾ?
> ಎತ್ತುದು ಕಂಡೀರಾ?

ಏನಮ್ಮ ಪ್ರಪಂಚದಲ್ಲಿ ಮಣ್ಣಿನ ಬಸಣ್ಣನ ತಣ್ಣೀರು ಕುಡಿದಿದ್ದನ್ನೇನೋ ಕಾಣ್ರಿ. ಆದರೆ ಪ್ರಪಂಚದಮ್ಯಾಲೆ ಎಂಗಸು ಗುಂಡುಕಲ್ಲು ಬೀಳುಪರಕೆ ಹೆತ್ತಿದ್ದನ್ನು ನೋಡೀದಿರೇನು ನೀವು?

ಸೂಲಗಿತ್ತಿ ಸುಗ್ಗಮ್ಮ, ಇವೇ ಕಣಮ್ಮಾ ನಮ್ಮ ರಾಜಾದಿರಾಜನ ಮಕ್ಕಳು. ಬಂತಲ್ಲ ಊನ? ಇನ್ನೆಂಗೆ ಮುರುದಿತ್ತಮ್ಮ ಕತ್ತ? ಇವೇ ಚದುರಂಗ ಮಹರಾಜನ ಮಕ್ಕಳು. ಕತ್ತು ಎಂಗೆ ಮುರುದಿದ್ದೆ? ಇನ್ನೊಂದು ರವ್ವೊಂಟು ಜಾಸ್ತಿ ಮುರಿದಿದ್ರೆ ನಿನ್ನಪ್ಪನ ಮನೆ ಗಂಟೇನು ಹೋಗ್ತಿತ್ತು? ನಿನಗೂ ಬಂತು ನನಿಗೂ ಬಂತು ಊನ ಅಂತ ಏಚನೆಮಾಡಿಕ್ಕಂಡು ಇವರೆಲ್ಲ 'ರಾಜ ನಮನ್ನ ಬಿಡ್ತಾನಾ' ಅಂತ ಏಳಿಬಿಟ್ಟು, ಬಟ್ಟೆಯೂ ಒಗೀಲಿಲ್ಲ. ಇವರಿಗೆ ತತ್ತರ ಬಂದ್ಬಿಡ್ತು. ಕೈಕಾಲೆಲ್ಲ ನಡುಕ ಬಂದ್ಬಿಡ್ತು. ಕೈಕಾಲೆಲ್ಲ ನಡುಗು ಬಂದ್ಬಿಡ್ತು. ನಡುಗ ಬಂದು ಎಲ್ಲ ಮನೀಗೆ ಹೊರಟ್ಹೋದ್ರು. ಓಗಿ, ಎಲ್ಲಕೂ ದೊಡ್ಡವಳಾಗಿರತಕ್ಕಂಥ ಚಂದ್ರಕಾಂತಿ, ನಾಳೆ ಹನ್ನೆರಡು ಗಂಟೆ ವಳಗಾಗಿ ಆ ಹುಡುಗಿ, ಆ ಹುಡುಗನ ಪ್ರಾಣ, ನಾನು ಪ್ರಾಣ ನಾನು ತೆಗೆಸುದ ಮೇಲೆ ನನ್ನೆಸ್ರು ಚಂದ್ರಕಾಂತಿ ಅನ್ನೋ ಎಸ್ರು ನನ್ನ ಕರಿಯಬೇಡಿ, ಎಂಬುದಾಗಿ ಏಚನೆ ಮಾಡಿಕೊಂಡು ಈಯಮ್ಮ–

> ಪ್ಯಾಟೆ ಬಜ್ಜಾರಿ ಓಗಿ ನೂಲುಪಿಂಜಿಯಾ ತಂದು
> ಇಲಿಯಾ ಪಾಸಾಣಾವ ತಂದು
> ನಾಗರಹಾವಿನಾ ಇಸವಾ ತಂದು
> ಬಿಸುದು ಕಜ್ಜಾಯವ ಸ್ವಾಮೀ ಕಂದಗೆ ಸುಡುತಾಳಲ್ಲಾ?

ಕಂದಗೆ ಸುಡುತಾಳಲ್ಲಾ
ಸ್ವಾಮಿ ಶಂಭು ಮಾದೇವನ ಕರುಣಾಹೊಂದಿರಲು ಶಂಕರಾ,
ಹೊಂದಿರಲು ಶಂಕರಾ
ಸ್ವಾಮಿ ವಿಸುದಾ ಕಜ್ಜಾಯವ ಗುರುವೇ ಕಂದಗೆ ಕೊಡುತಾಳಲ್ಲಾ
ಕಂದಗೆ ಕೊಡುತಾಳಲ್ಲಾ

ವಿಸದ ಕಜ್ಜಾಯವನ್ನು ಸುಟ್ಟುಕಂಡು ಸ್ವಾಮಿ ಕೈಮಂಕ್ರಿ ತುಂಬಾ ತುಂಬಿಕೊಂಡು, ಹೊಳೆ ಬಾಕ್ಲಲ್ಲಿ ಓಗಿ ನಿಂತಕಂಡು ಈ ಮಗುವನ್ನು ಸನ್ನೆಮಾಡಿ ಕೂಗಿದ್ಲು. ಆವತ್ತು ಈ ಹೂವಾಡಿಗ್ರ ದೊಡ್ಡಯ್ಯನಿಗೆ ಏನೊ ಕೆಲಸವಿತ್ತು, ತಿಂಡೀ ತರೋದು ಸ್ವಲ್ಪ ಒತ್ತಾಯಿತು. ಹನ್ನೆರಡು ಗಂಟೆ ಟೈಂ ಮೀರ್ಹೋಯ್ತು. ಉಡುಗನಿಗೆ ಹೊಟ್ಟೆ ಬಾಳ ಅಸುವಾಯ್ತು. ಈ ಯಮ್ಮ ಸನ್ನೆಮಾಡಿ ಕರದಳಲ್ಲ? ಹೆಣ್ಣು ಮಗು ದೂರ್ದಲ್ಲಿ ನೀರ್ ಕಟ್ತಾ ಇತ್ತು. ಈ ಮಗುವಿಗೆ ಗೊತ್ತಾಗಲಿಲ್ಲ. ಈಯಮ್ಮ ಸನ್ನೆ ಮಾಡಿ ಕರದಳಲ್ಲ? ಈ ಉಡುಗ ಓಡ್ಹೋಗಿಬಿಡ್ತು. ಹೊಟ್ಟೆಸ್ಸಿತ್ತಲ್ಲ? ಒಂದೊಂದಾಗಿ ಇವ್ಳು ಕೊಡ್ತಾ ಇದ್ದಾಳೆ. ಒಂದೊಂದಾಗಿ ಇವ್ನು ಊಟ ಮಾಡ್ತಾ ಇದ್ದಾನೆ, ಆ ವಿಸದ ಕಜ್ಜಾಯವನ್ನು.

ನೀರು ಬರೋದು ಸೊನ್ನೆಯಾಯ್ತು. ತಲೆ ಎತ್ತಿ ನೋಡಿದ್ಲು. ಅಣ್ಣನಾಗಿದ್ದವನು ಯಾತದ ಮೇಲಿರಲಿಲ್ಲ, ಈಯಮ್ಮನಿಗೆ ಬಾಳ ಸತ್ರ ಬಂದಾಂಗಾಯ್ತು.

ಎಲ್ಲಿ ಓದೆಯಣ್ಣಾ ನೀನು?
ಎಲ್ಲಿ ಓದೆ ಇನ್ನಾ ನೀನು? ರಾಮಾ ರಾಮಾ.

ಅಣ್ಣ ಮಲಿಯಾಲು ಹುಟ್ಟಿದ್ದಂಗೆ ನಾವಿಬ್ಬರೂ ಒಂದು ತಾಯಿ ಹೊಟ್ಟೇವಳಗೆ ಹುಟ್ಟಿದೆವು. ತಾಯೊಂದು ಕಡೆ. ತಂದೊಂದು ಕಡೆ. ನಾನೊಂದು ಕಡೆ, ನೀನೊಂದು ಕಡೆ. ಇಟ್ಟಾಡಿ ಈಡಾಡಿ ಯೋಯಿತು. ಈ ನಮ್ಮಮ್ಮಾ ಎತ್ತೆತ್ತ ನೋಡಿದರೂ ನಮ್ಮಣ್ಣ ಕಾಣಲಿಲ್ಲವಲ್ಲಾ ಗುರುದೇವಾ ಪರಮಾತ್ಮನೇ? ಇವತ್ತಿಗೆ ನಮ್ಮಣ್ಣನ ದಾರಿಮಾಡಿ ನನ್ನೊಬ್ಬಳನೇ ಮಾಡಿ ಓದ ಆ ಪರಮೇಶ್ವರ. ಏನು ಕಷ್ಟ ತಂದೆ ಎಂಬುದಾಗಿ ಈಯಮ್ಮ ಗೋಳಾಡಿಕಂಡು ಬಾವೀತಾಕೆ ಬಂದು ಹೊಳೆಬದೀಗೆ ನೋಡ್ತಾ ಇದ್ದಾಳೆ. ಅಣ್ಣನಾಗಿರ್ತಕ್ಕಂಥಾವ್ನು ಒಂದೊಂದಾಗಿ ತಿನ್ತಾ ಇದ್ದಾನೆ. ಈಯಮ್ಮ ಒಂದೊಂದಾಗಿ ಕೊಡ್ತಾ ಇದ್ದಾಳೆ.

ತಿನ್ನಾಬ್ಯಾಡವಣ್ಣಾ ನೀನು ತನ್ನಬ್ಯಾಡವಣ್ಣಾ ನೀನು
ವಿಸದಾ ಕಜ್ಜಾಯಾವನ್ನು, ಅವಳೇ ಕಾಣೇ ನಮ್ಮ ದೊಡ್ಡವ್ವಾ
ತಿನ್ನಬ್ಯಾಡವಣ್ಣಾ ನೀನು ಅಣ್ಣಾ ಅಣ್ಣಾ.

'ನಮ್ಮ ತಂದೆಯ ಹಿರೀ ಹೆಂಡ್ತಿಯಾಗಿರ್ತಕ್ಕಂಥಾವ್ಳು, ಅವಳೇ ನಮ್ಮ ದೊಡ್ಡವ್ವ. ನಿನ್ನ ಪ್ರಾಣತೆಗೆಯುವುದಕ್ಕೆ ವಿಸದ ಕಜ್ಜಾಯವನ್ನು ತಕಂದು ಬಂದಿದ್ದಾಳೆ, ತಿನ್ನಬ್ಯಾಡ ನೀನು–

ಸತ್ಯವೇ ನಿತ್ಯವೇ ತಂಗಿ ಧರ್ಮವೇ ಲಯವೇ ತಂಗೀ, ತಂಗೀ ರಾಮ.

ಅಮ್ಮ ಸತ್ಯವೇ ನಿತ್ಯ, ಧರ್ಮವೇ ಅಪರಂಜಿ. ಸತ್ಯವನ್ನು ಯಾವತ್ತಿಗೂ ಕೆಡಿಸುವುದಿಲ್ಲ. ಕರ್ಮವನ್ನು ಯಾವತ್ತಿಗೂ ಬದುಕ್ಸುವುದಿಲ್ಲ. ಆದರೆ ಯಾಕೆ ಚಿಂತೆಮಾಡ್ತೀಯಮ್ಮ? ನೀನು ಸಡಗರದಿಂದ ಗೋಳಾಡಿಕೊಂಡು ಬಂದೀಯಲ್ಲ.

ಯಾರೇಂದಾರೋ ತಂಗೀ
ನಾನೇನಂದೀನೇ ನಿನ್ನಾ?
ಅಮ್ಮಾ ಅಮ್ಮಾ.

ಅಮ್ಮಾ ನಾನಿಲ್ಲದಾಗ ಯಾರಾದರೂ ಬಂದು ನಿನ್ನ ಮಾತಾಡಿದ್ರಾ? ಅಥವಾ ಯಾರಾದ್ರೂ ಬಂದು ನಿನ್ನ ಯದ್ವತದ್ವ ಅಂದರಾ? 'ಇಲ್ಲಣ್ಣ, ಆದರೆ ನಿನ್ನ ಯೋಚನೆ ಮೇಲೆ ಇತ್ತಕಡೆಗೆ ತಿರಗಿ ನೋಡಿದೆ. ನೀನು ವಿಸದ ಕಜ್ಜಯವನ್ನು ತಿನ್ನುವುದನ್ನು ನೋಡಿ ನನಗೆ ಭಾಳ ಸಂಕಟವಾಯ್ತು. ಆದ್ದರಿಂದ ಅತ್ತುಕಂಡು ಬಂದು ನಿನ್ನ ಕೂಗಿದೆನಣ್ಣ.

'ಓಹೋ, ಅಮ್ಮ ಸತ್ಯವಿದ್ದರೆ ಪರಮಾತ್ಮ ಕಾಪಾಡಲಿ. ಸತ್ಯವಿಲ್ಲದಿದ್ದರೆ ನನ್ನ ಪ್ರಾಣ ಹೋದರೆ ಹೋಗಲಮ್ಮ. ತಂಗಿ ಏಚನೆ ಮಾಡ್ಬಾರದು' ಎಂದು ತಂಗಿಗೆ ಬುದ್ಧಿ ಮಾತುಗಳನ್ನು ಹೇಳಿಕಂಡು ಬಂದ. ಅಮ್ಮ ನೀನು ನೀರುಕಟ್ಟು ಹೋಗು ಎಂದ.

ಯಾತದ ಮ್ಯಾಲೆ ನಿಂತುಕಂಡ. ಆ ಇಸದ ಕಜ್ಜಾಯವನ್ನು ತಿಂದದ್ದು ಅಮೃತವಾಯ್ತು. ಈತನಿಗೆ ಇನ್ನಾ ಸಕ್ತೀ ಹೆಚ್ಚಿತು. ಕೋಪದಿಂದ ನೀರೆತ್ತುತಾ ಇದಾನೆ. ಈಯಮ್ಮ ನೀರು ಕಟ್ಟುತಾ ಇದಾಳೆ.

ಎರಡು ಕಪಲೆ ಹುಯ್ದಂಗೆ ಸ್ವಾಮೀ ನೀರು ಎತ್ತನಲ್ಲಾ,
ನೀರು ಎತ್ತಾನಲ್ಲಾ.

ಆ ನೀರು ಬರೋ ಸಡಗರಾ ನೋಡಿಕೊಂಡು ನಮ್ಮಣ್ಣನಿಗೆ ಜ್ಞಾನಕೆಟ್ಹೋಯಿತು. ಆಗಲೋ ಈಗಲೋ ನಮ್ಮಣ್ಣನಾ ಪ್ರಾಣ ಒಲ್ಹೋತದಲ್ಲ? ನಾನಿನ್ನೇನು ಮಾಡಲಿ ಅಂತ ಏಳಿ ಮಲ್ಲಿಗೆಮ್ಮ ನೀರು ಕಟ್ಹೋದು ಬಿಟ್ಟುಬಿಟ್ಟು, ಅಣ್ಣನ ಮುಖಾ ನೋಡಿಕಂಡು 'ಏನಣ್ಣಾ? ನನಗೆ ದಿಕ್ಕ್ಯಾರಣ್ಣಾ? ನನಗೆ ಕಾಪಾಡ್ತಕ್ಕಂಥಾವ್ರು ಯಾರಣ್ಣ' ಅಂತ ಹೇಳೀ–

ಇವಳು ಗುಳಗುಳನೆ ಸ್ವಾಕವ ಇನ್ನಾ ಮಾಡ್ಯಳೆ ಮಲಿಗೆಮ್ಮನೂ
ಮಾಡ್ಯಳು ಮಲಿಗೆಮ್ಮಾನು.

ಹಾಗೆ ನಿಂತಿರಲು, ಅವರ ದೊಡ್ಡಮ್ಮ ಚಂದ್ರಕಾಂತಿ ಅಮ್ಮನವರು ಸಾಯಂಕಾಲ ಐದು ಗಂಟೆವರೆಗೂ ನಿರೀಕ್ಷೆ ಮಾಡಿದರು. ಹುಡುಗ ಸಾಯ್ತನ, ಇಲ್ಲವಾ, ನೋಡಬೇಕು ಅಂತ. ಹುಡುಗ ಸಾಯ್ಲಿಲ್ಲ. ಆರ್ಗಂಟೆವರೆಗೂ ನೋಡಿದರು, ಹುಡುಗ ಸಾಯ್ಲಿಲ್ಲ. ಈಯಮ್ಮ ಮನೆಗೆ ಬಂದು ಪಟ್ಟೆಯ ಸೀರೆಯನ್ನು ಬಿಚ್ಚಿಹಾಕಿ, ಒಂದು ಹಳೇ ಸೀರೆಯನ್ನುಟ್ಟಕ್ಕಂಡು ಮೆಣಸು ಬೆಳ್ಳುಳ್ಳಿಯನ್ನು ಅರದು ಹಣೆತುಂಬ ಪಟ್ಹಾಕ್ಕಂಡು ಮಂಚದ ಮೇಲೆ ಮಲಗಿದ್ದಾಳೆ.

ಚದುರಂಗ ಮಹಾರಾಜನು ಸಾಯಂಕಾಲ ಏಳುಗಂಟೆಗೆ ತನ್ನ ಸರ್ಕಸ್ ದರ್ಬಾರನ್ನು ಮುಗಿಸಿಕೊಂಡು ಬಂದ. ಬಾಕಲಲ್ಲಿ ನನ್ನ ಕಂಡು ಎಷ್ಟೇ ಏಚ್ಚೆಮಾಡಿ ನೋಡಿದ್ರು ಚಂದ್ರಕಾಂತಿ ಉತಾರಿ ಚಂಬಿನಲ್ಲಿ ನೀರ್ ತಗದಕಂಡ ಬಂದು, ಎನ್ನ ಪಾದವನ್ನು ತೊಳದು ಸಂತೋಸದಿಂದ ಮಾತನಾಡತಕ್ಕಂಥಾವ್ಳು ಇನ್ನು ಬರಲಿಲ್ಲವಲ್ಲ? ಕಾರಣ ಏನು? ಎಂಬುದಾಗಿ ಯೋಚನೆ ಮಾಡಿಕಂಡು ಇವನೇ ಮಂಚದ ತಾವ್ ಓಗಿ ಕುಳಿತುಕೊಂಡನು.

ಮಾತನ್ನಾಡದೇ ಮಲಗಿರೋದ್ಯಾಕೆ ಎನ್ನ
ಒಡನೇ ಪೇಳೇ ನೀ ಸುಂದರಿ
ಮಾತನ್ನಾಡದೆ ಮಲಗಿರೋದ್ಯಾಕೆ?

" ಸ್ವಾಮಿ, ನಾನು ಏನು ಹೇಳಲಿ? ನೆನ್ನೆ ಮಧ್ಯಾಹ್ನದಲ್ಲಿ ಹೂವಾಡಿಗರ ದ್ವಡ್ಡಣ್ಣನ ತ್ವಾಟಕ್ಕೆ ಬಟ್ಟೆ ಒಗೆಯುವುದಕ್ಕೆ ನಾವ್ ಏಳು ಜನ ಅಕ್ಕ ತಂಗ್ಯವರು, ಸೂಲಗಿತ್ತಿ ಸುಗ್ಗಮ್ಮ, ಒಂಬತ್ತು ಜನ ಗವಡಿಯವರು, ಎಲ್ಲಾ ಓಗಿ ಬಟ್ಟೆ ಒಗದುಕಂಡು ಬರ್ತಾ ಇದ್ದೋ. ಸ್ವಲ್ಪ ನಾನ್ ಹಿಂದಾದೆ. ಆ ದ್ವಡ್ಡಣ್ಣನ ಮಗಾ ಇದ್ದಾನೆ ನೋಡಿ, ಅವನು ಹಿಂದಲಿಂದ ಬಂದು ನನ್ನ ಬಾಚಿ ತಬ್ಬಿಹಿಡಿದುಕಂಡ. ಆದರೆ ನಾನು ಎಷ್ಟೋ ವಿಧವಾಗಿ ಹೇಳಿದೆ. ನಾನೊಬ್ಬಳೇ ಅಲ್ಲ, ನಿಮಗೆ ಸುಳ್ಳೇಳುವುದಕ್ಕೆ–

ನನ್ನ ಮಾತು ಸುಳ್ಳಾದರೆ ಕೇಳಿ
ನೀಲಕಾಂತ್ಯಮ್ಮನವಳನ್ನ ಕೇಳಿ
ಮಲ್ಲಿಕಾಂತ್ಯಮ್ಮನವಳನ್ನ ಕೇಳೀ
ಸೂಲಗಿತ್ತೀಯ ಅವಳನ್ನ ಕೇಳೀ
ನನ್ನ ಮಾತು ಸುಳ್ಳಾದರೆ ಕೇಳಿ
ಅಂಥ ಹುಡುಗನ ತಲಿಯನೆ ತಂದು
ನನ್ನ ಮುಂದೆ ಮಡಗುವತನಕಾ
ಸ್ನಾನ ಬ್ಯಾಡ ಸಂಧ್ಯಾವನ ಬ್ಯಾಡ
ಆಲು ಅನ್ನಾವು ಊಟಾನು ಬ್ಯಾಡ
ಪಟ್ಟೇ ಮಂಚಾವೆ ಮೊದಲೀ ಬ್ಯಾಡ
ನಿಮಿಗು ನಮಿಗೂ ಮಾತೇ ಬ್ಯಾಡ
ಅಂಥ ಹುಡುಗಾನ ತಲಿಯಾನ ತಂದು
ನನ್ನ ಮುಂದೇ ಮಡಗೂವತನಕಾ.

ಸ್ವಾಮಿ, ಅಂಥ ಹುಡುಗನ ತಲೆ ತಂದು ನನ್ನ ಮುಂದೆ ಇಡಬೇಕು. ಆಗ ನೀವು ರಾಜರು, ನಾವು ರಾಣಿ ಎಂದು ನಮ್ಮಬ್ಬರಿಗೂ ಮಾತು ನಡೀಬೇಕು. ಅಲ್ಲಿತನಕಾ ನಿಮ್ಮೊಂದಿಗೆ ನಾನು ಮಾತನಾಡುವಳಲ್ಲ. ಅವನು ಬಂದು ನನ್ನ ಬಾಚಿ ತ್ಯಬ್ಬಿಕಂಡ–

ನಾನು ಅಡಗಿಸಿದೆನುಮಯ್ಯ ಮುಂದೆ
ಅಭಿಮಾನವ ಬಿಡದೇ.

ಆಗ ಹೇಳ್ದೇ ನಾನು ರಾಜಾಧಿರಾಜನ ಮಡದೀ. ಚದುರಂಗ ಮಹಾರಾಜನ ಮಡದೀ ಅಂತ ನಾನು ಆ ಹುಡುಗನಿಗೆ ಹೇಳಿದ್ರೇ, ಆತನು ಹೇಳ್ತನೇ 'ಅಂಥಾ ರಾಜಾಧಿರಾಜ ಬಂದು ನನ್ನ ಮೇಲೆ ಯುದ್ಧಮಾಡಿ ಗೆದ್ದೋದ್ರೆ ಸಮಾ. ಇಲ್ದಿದ್ರೆ ನನ್ ಕಾಲ್‌ದೆಸೇಲಿ ನುಸ್ದಂಗೆ' ಅಂತ ನನಗೆ ಅಪಮಾನ ಮಾಡಿದ.

'ಪ್ರಧಾನಿ, ಹೂವಾಡಿಗರ ದ್ವಡ್ಡಣ್ಣನ ಮಗ ನನ್ನ ಎಂಡತಿಗೆ ಹೀಗೆ ಅಪಮಾನ-ಮಾಡಿದ್ದಾನೆ–

ಕಟ್ಟು ದಂಡನ್ನ ನೀನು ಹುಟ್ಟವನೆ ವೈರಿ ನನಗೆ
ದಂಡುಕಟ್ಟಯ್ಯ ನನಗೆ ವೈರಿ ಹುಟ್ಟವನೆ ನನಗೆ,
ಅವನಾ ಕದನಾ ಕಾಳ್ಯಕೆ ನಾವು ಹೊರಡುಬೇಕೀಗಾ, ಹೊರಡು ಬೇಕೀಗಾ.

ಪ್ರಧಾನಿ, ದಂಡು ದಳ ಕಟ್‌ಕಂಡು, ಆ ಹುಡುಗನ ತಲೆ ತಂದು, ತನ್ನ ಮುಂಧೆ ಮಡುಗೋತನಕಾ ನನ್ನೊಂದಿಗೆ ಮಾತೇ ಬೇಡ ಅಂತ ನನ್ನ ರಾಣಿ ಹೇಳಿದ್ದಾಳೆ. ದಂಡು ಕಟ್ಟು.

ಏಳಕ್ಷೇಣಿ ದಂಡನ್ನ ಕಟ್ಟಿಕಂಡು ಚದುರಂಗ ಮಹರಾಜನು ಪ್ರಧಾನಿ ಕರದುಕೊಂಡೂ ಉಡುಗನ ಮ್ಯಾಲೆ ಯುದ್ಧಕ್ ಹೋಗುತಾನಲ್ಲ ಗುರುದೇವಾ. ಮನೆ ಬಾಕಲಲ್ಲಿ ನಿಂತಕಂಡು ದಂಡೆಲ್ಲ ಮಥನ ಮಾಡಿದ್ದಾರೆ. ಈ ಹುಡುಗ ನೀರು ಎತ್ತತಾ ಇದ್ದಾನೆ. ಈಯಮ್ಮನಾಗಿರತಕ್ಕಂಥಾವ್ಳು ನೀರು ಕಟ್ತಾ ಇದ್ದಾಳೆ. ಈ ಹುಡುಗನ ಮುಖಾ ದೃಷ್ಟಿಯಿಟ್ಟು ನೋಡಿದ.

"ಪ್ರಧಾನಿ, ಅವನ ಮುಖಛಾಯವನ್ನು ನೋಡಿದ್ರೆ ನನ್ನ ಎಂಡತಿಗೆ ಅಪಮಾನ ಮಾಡಿದವನೇ ಹೊರತುಬಿಟ್ಟವನಲ್ಲ. ಆದರೆ ಈ ಹುಡಗನ್ನ ಮೊಟ್ಟಮೊದ್ಲು ನಾನು ಪ್ರಾಣಹತ್ಯವನ್ನು ಮಾಡಿದರೆ, ಈ ಹೆಣ್ಣು ಮಗೀನ ಗೋಳು ಭಾಳ ಘನವಾಗ್ತದೆ. ಆದರೆ ಮಟ್ಟಮೊದಲು ಆ ಹುಡುಗಿಯ ಪ್ರಾಣವನ್ನು ನೀನು ಕೊಂದ್ಹಾಕು. ಅನಂತರದಲ್ಲಿ ಈ ದುಷ್ಟನ ಪ್ರಾಣವನ್ನು ನಾನು ತೆಗೀತೇನೆ ಎಂಬುದಾಗಿ ರಾಜ ಪರ್ಧಾನಿಗ್ಹೇಳ್ತಾ ಇದಾನೆ.

ಪ್ರಧಾನಿ ಏಚನೆ ಮಾಡಿದ
ಸ್ವಾಮಿ ನನಗಿನಾದರೆ ಸ್ವಾಮೀ
ಏಳು ಜನಾ ಗಂಡೂ ಹೆಣ್ಣೂ
ಕೊಲ್ಲಲಾರೆನಯ್ಯಾ ನಾನು
ಕರಬಾರದಯ್ಯಾ ಸ್ವಾಮೀ ದೊರಿಯೇ.

ಸ್ವಾಮಿ, ನಿಮಿಗಂತೂ ಪುತ್ರಸಂತಾನವಿಲ್ಲ. ನನಿಗೆ ಗಂಡು ಮಕ್ಕಳು ಏಳು ಜನ, ಎಣ್ಣು ಮಕ್ಕಳೂ ಕೂಡಾ ಏಳು ಜನ ಇದಾರೆ. ಆದರೆ ಆ ಎಣ್ಣು ಮಗಿನ ಮೇಲೆ ಬಾಣಪ್ರಯೋಗ ಮಾಡು ಎಂಬುದಾಗಿ ನೀವು ಹೇಳ್ತ ಇದೀರಿ. ನಾನು ಹ್ಯಾಗೆ ಮಾಡಲಿ ಸ್ವಾಮಿ ಎಂಬುದಾಗಿ ಪ್ರಧಾನಿ ಹೇಳಿದ.

"ಪ್ರಧಾನಿ ಆಹಾ, ನನ್ನಲ್ಲಿ ಊಟ ಮಾಡಿ, ನನ್ನ ಬಟ್ಟೆ ಹೊದ್ದು, ನನುಗಾದ ಅಪಮಾನವು ನಿನ್ನದಲ್ಲವೆ? ಆದರೆ ಆ ಮಗಿನ ಮೇಲೆ ದೃಷ್ಟಿಯನ್ನು ಇಟ್ಟು ನನಿಗೆ ಅಪಮಾನವಾದರೂ ಆಗಲಿ, ಎನ್ನುತ್ತೀಯಾ?"

ಸಿವಾ ಸಿವಾ ಇಂತಾ ಮಾತು ಸರಸಿ ಜರಿಯನೆ ಬ್ಯಾಡಿ ರಾಮಾ ರಾಮಾ.

ಸ್ವಾಮಿ ನಾನಾಡಿದ ಅಪರಾಧವನ್ನು ಕ್ಷಮಿಸಬೇಕು–
ಅಂಬು ತಗದವನೆ ಮಂತ್ರಿ ತುಂಬಿಲ್ಲ ಮನೆಯನು ಮಾಡಿ
ಬಾಣವ ಬಿಟ್ಟನು ಪ್ರಧಾನಿ
ಬುದ್ಧಿವಂತ ಪರುದಾನೀ
ಸ್ವಾಮಿ ಮಲ್ಲೀಗೆ ಹಾರುವಾಗಿ ಕೊರಳಗೆ ಬಿದ್ದೋಯ್ತು
ಕೊರಳಿಗೇ ಬಂತೂ.

ಆಹಾ ಏನಾಶ್ಚರ್ಯಾ? ಅಂಬುಗಳನ್ನು ತಗದು ತುಂಬಿಲ್ಲಿಮನೆ ಮಾಡಿ ಬಿಟ್ಟಬಾಣ ಪ್ರಯೋಗವು ಮಲ್ಲಿಗೆ ಹಾರವಾಗಿ ಮಗೀನ ಕೊರಳಿಗೆ ಬಿತ್ತಲ್ಲ? ಆಶ್ಚರ್ಯವೇನು?

ರಾಜಾಧಿರಾಜನಾಗಿರತಕ್ಕಂಥಾವ್ನು ಜಲಜಲಜಲ್ಲ ಬೆವತು ನೀರಾಗಿಹೋದ.

ಪ್ರಧಾನಿ ಸ್ವಲ್ಪ ನಿಧಾನಮಾಡು. ಈ ಹುಡುಗನ ಪ್ರಾಣಹತ್ಯವನ್ನು ಮಾಡಿದ ಮೇಲೆ ಅನಂತರ ಆ ಹೆಣ್ಣು ಮಗೀನ ಪ್ರಾಣಹತ್ಯವನ್ನು ನಾನೇ ಮಾಡ್ತೀನಿ.

ಅಂಬು ತಗದವನೆ ರಾಜ ತುಂಬಿಲ್ಲಿಮನೆಯನು ಮಾಡಿ
ಜಂಗಿಸಿ ಬಾಣವ ಬಿಟ್ಟಾ ಬುದ್ಧಿವಂತ ಮಹರಾಜಾ
ಬುದ್ಧವಂತ ಮಹರಾಜಾ.
ಸ್ವಾಮೀ ನಿಂಬೇಯ ಹಾರವಾಗಿ ಕೊರಳೀಗೆ ಹೋಯ್ತು
ಕೊರಳೀಗೆ ಹೋಯ್ತು.

'ಪ್ರಧಾನಿ ಇದೇನು ಆಶ್ಚರ್ಯ? ಇವು ಯಾರ ಮಕ್ಕಳಾಗಿರಬಹುದು? ಇವರು ಮಾತನಾಡಿ ಕಣೋವಾಗ್ಗೇ ಈ ಹುಡುಗನಿಗೆ ಭಾಳಾ ಕ್ವಾಪಾ ಬಂದಿತಲ್ಲ ಸ್ವಾಮೀ.

"ನೋಡಿದೇನಣ್ಣಾ ನೋಡಿದೇನಣ್ಣಾ ಈತನು ಮಾಡಿರತಕ್ಕಂಥಾ ಪಾಪಕೃತ್ಯ? ಇವ ಬಿಟ್ಟ ಬಾಣವೇನಾದರೂ ನಮಗೆ ತಗಲಿದ್ದರೇ ನಮ್ಮ ಇಬ್ರ ಪ್ರಾಣವೂ ನಾಶವಾಗಿ ನಾವು ನಾಶವಾಗಿ ಓಗುತ್ತಿದ್ದೆವಲ್ಲ ಅಂತ ಹೇಳಿ, ಈ ಎಣ್ಣು ಮಗುವಿಗೆ ಬಾಳ ಕ್ವಾಪಬಂತು.

ತನ್ನ ಕೊರಳಳಲ್ಲಿರತಕ್ಕಂಥಾ ನಿಂಬೆಹಾರವನ್ನು ತಗದು ಏಳು ನಿಂಬೆಕಾಯನ್ನು ಮಹಾಮಂತ್ರವನ್ನು ಜಪಿಸಿ ಅಣ್ಣನ ಕೈಗೆ ಕೊಟ್ಟಳಲ್ಲ ಗುರುದೇವ. 'ಅಣ್ಣ ಒಂದು ನಿಂಬೇಕಾಯನ್ನು ತಗದು ಆಚೆಗೆಸಿ' ಅಂದರೆ ಒಂದು ಕಾಯನ್ನು ತಗದು ಆಚೆಗೆಸೆದ್ರೆ ಒಂದು ಆಕ್ಷೋಣಿ ತಂಡ ಮಥನವಾಗಿಹೋಗ್ತದೆ. ಏಳ್ ನಿಂಬೆಕಾಯಲ್ಲಿ ಏಳ್ ಆಕ್ಷೋಣಿ ತಂಡ ಮಥನವಾಗೋಯ್ತದೆ. ರಾಜನೂ ಪ್ರಧಾನಿಯೂ ಇಬ್ರೇ ಉಳ್ಕಂಡಿದಾರೆ.

ಅಣ್ಣನಿಗೆ ಬಹಳ ಕ್ವಾಪ ಬಂದ್ಬಿಡ್ತು. ರಾಜನ್ನ ಇಡಕಂಡನಲ್ಲಾ? ತಂದೆ ಎಂಬೋ ಗುರುತು ಇವನಿಗಿಲ್ಲ. ರಾಜಾಧಿರಾಜನ್ನ ಇಡದುಕಂಡು ಬಾಚಿ ತಬ್ಬಿಕಂಡನಲ್ಲ? ಗುರದೇವಾ ತಂದೆಯಾಗಿರತಕ್ಕ ಚದುರಂಗ ಮಹಾರಾಜನ್ನ ಉರುಡಿಸಿಕೊಂಡು, ಒಂದು ಕಾಲ್ಹಿಡಕಂಡು ಒಂದು ಕಾಲು ಮೆಟ್ಟಕಂಡು ಸಿಗಿಯುವುದಕ್ಹೋದನಲ್ಲ? ತಂಗಿಗೆ ಭಾಳಾ ದುಕ್ಕ ಬಂತು.

ಕೊಲ್ಲಬಾರದಣ್ಣಾ ನೀನು ಕೊಲ್ಲಬಾರದಣ್ಣಾ ನೀನು
ಇವ್ನೆ ಕಾಣೋ ನನ್ನಾ ತಂದೇ ಕೊಲ್ಲಬಾರದಣ್ಣಾ ನೀನು
ಕೊಲ್ಲಬಾರದಣ್ಣಾ ನೀನು; ಕೊಲ್ಲಬಾರದಣ್ಣಾ ನೀನು
ತಂದೆ ಕೊಂದು ಮಗಾನೀಗಾ; ರಾಜ್ಯೇವಾಳಿದಾನೆಂದೂ
ಆಡುಕೊಳ್ಳುವರು ಜನರು : ಕೊಲಬಾರದಣ್ಣಾ ನೀನು, ಅಣ್ಣಾ ಅಣ್ಣಾ.

ಅಣ್ಣಾ, ಪ್ರಪಂಚದಲ್ಲಿ ಕಷ್ಟ ನೋಡಲಿಲ್ಲ. ಸುಖ ನೋಡಲಿಲ್ಲ. ಜನರ ಬಾಯಿಗೆ ಕಟ್ಟಿಲ್ಲ. ನಮ್ಮ ಕಷ್ಟಾದಿ ಸುಖಾದಿಗಳನ್ನು ಯಾರೂ ನೋಡಿದವರಿಲ್ಲ. ತಂದೆಯನ್ನು ಕೊಂದು ಮಗನು ರಾಜ್ಯವಾಳಿದನೆಂದು ಲೋಕದಲ್ಲಿ ನಮ್ಮ ಕೀರ್ತಿ ಇಟ್ಟಾಡುವುದು. ಕೊಲ್ಲಬಾರ್ದು. ಇವನೇ ನಮ್ಮ ತಂದೆ ಎಂದು ಹೇಳಿ ರಾಜನ ಕಡೆ ತಿರುಗಿ–

"ಸ್ವಾಮಿ, ನಮ್ಮಣ್ಣನಾಗಿರತಕ್ಕಂಥಾವ್ನು ಭಾಳ ಕ್ವಾಪಾರೂಢನಾಗಿದ್ದಾನೆ. ಸ್ವಲ್ಪ ನೀವು ದಯವಿಟ್ಟು, ನನ್ನ ಹೆಣ್ಣು ಮಗಳ ಮಾತನ್ನು ಕೇಳಿ. ನಮ್ಮ ತ್ವಾಟವನ್ನು ಬಿಟ್ಟು ಹೊರಗಡೆ ನಿಮ್ಮ ಮನೀಗ್ಹೊರಟೋದ್ರೆ ಅಷ್ಟೇ ಸಾಕು. ಇಲ್ದಾ ಇದ್ರೆ ನಮ್ಮಣ್ಣ ನಿಮ್ಮನ್ನು ಬಿಡೋವಷ್ಟು ಕಾಣುದಿಲ್ಲ. ಆದರೆ ನಮ್ಮಣ್ಣನಿಗೆ ಸಮಾಧಾನವನ್ನು ಹೇಳಿ, ನಮ್ಮಣ್ಣನ ಕಾಲುಕಟ್ಟಿಕೊಂಡು ನಿಮ್ಮನ್ನು ಬಿಡಿಸಿಕೊಡುತ್ತೇನೆ. ನೀವು ದಯವಿಟ್ಟು, ನನ್ನ ಮಾತನ್ನು ಕೇಳಿ. ನಮ್ಮಣ್ಣನ ಕ್ವಾಪಾ ತಡೆಯೋತನಕಾ ನೀವು ಆಚೆಗೆ ಹೋಗಿ. ಇನ್ನೊಂದು ವಿಚಾರ. ನಾಳೆ ಹನ್ನೆರಡು ಘಂಟೆಗೆ ನಿಮ್ಮ ಪಟ್ಣಕ್ಕೆ ನಾನು ನಮ್ಮಣ್ಣ ಇಬ್ರೂ ಬರ್ತೀವಿ. ನೀವು ರಾಜಾಧಿರಾಜರು, ನಿಮ್ಮ ಐರಾವತಿ ರಾಜ, ನಿಮ್ಮ ವೈರಾವತಿ ರಾಜ, ನಿಮ್ಮ ನೀಲಕಂಠರಾಜ, ನಿಮ್ಮ ಬಸವೇಶ್ವರ ರಾಜರು, ನಿಮ್ಮ ಪಟ್ಟಣದಲ್ಲಿರತಕ್ಕಂಥ ಪುರಸಭೆಗಳೆಲ್ಲ ಸೇರಲಿ. ಇಲ್ಲಿ ನಾಳೆ ಸಾಯಂಕಾಲ ಒಂದು ಹೆಣ್ಣು ಭೇರುಂಡ, ಒಂದು ಗಂಡುಭೇರುಂಡ ಪಕ್ಷಿ ಕೂತುಕಂಡು ಒಂದು ಕತೆಯನ್ನು ಹೇಳ್ತಾ ಇದ್ದೋ. ಆ ಕತೆಯನ್ನು ನಾವು ಕೇಳಿಸಿಕಂಡೋ. ನಿಮ್ಮ ಪಟ್ಣದಲ್ಲಿ ಆ ಕತೆಯನ್ನು ನಾವು ನುಡೀಬೇಕಾಗಿದೆ. ನಾವು ಹೇಳಿದ ಕತೆ ಸರಿಯಾಗಿದ್ದರೆ ನೀವು ಒಪ್ಪಿಕಳ್ಳಿ. ನಾವು ಹೇಳಿದ ಕತೆಯಲ್ಲಿ ಏನಾದರೂ ತ್ಯಪ್ಪು ಬಂದರೆ ನಮಗೆ ಬುದ್ಧಿ ಕಲಿಸಿ, ಆಚೆಗೆ ಕಳಿಸಿ. ಈಗ ಮಾತ್ರ ನೀವು ಆಚೆಗ್ಹೊರಟೋಗಿ".

ಅದು ಯಾವ ರಾಜನ ಪಟ್ಣವ್ರೋ ಅದು ನಮಗೆ ಗೋಚರವಿಲ್ಲ. ಆ ಗಂಡುಭೇರುಂಡ ಏಳ್ತಕ್ಕಂಥಾ ನುಡಿ ನಾವಿಲ್ಲಿ ಏಳಬೇಕಾಗಿದೆ. ಆಗ ಮಕ್ಕಳಿಲ್ಲದ್ದಕ್ಕೋಸ್ಕರವಾಗಿ ಈ ಅಣ್ಣ ತಮ್ಮಂದಿರೆಲ್ಲ ಸೇರ್ಕಂಡು, 'ಇಂಗಾದರೆ ನಮಗೆ ಪುತ್ರಸಂತಾನವಾಗುವುದಿಲ್ಲ. ನಮ್ಮ ಮನೆ ದೇವರಾಗಿರತಕ್ಕಂಥ ಮರುಳು ಸಿದ್ಧೇಶ್ವರನ ದೇವಸ್ಥಾನದಲ್ಲಿ ಓಗಿ ನಾವು ಪೂಜೆ ಮಾಡಿದ್ರೆ ನಮ್ಮಣ್ಣನಿಗೆ ಪುತ್ರಸಂತಾನವಾಗಬಹುದು ಅಂತ್ಹೇಳ್ಬುಟ್ಟು ಅಣ್ಣನ್ನ ಕರಕಂಡು ಐರವತಿ ರಾಜ, ಮೈರವತಿರಾಜ, ನೀಲಕಂಠರಾಜ, ಬಸವೇಶ್ವರ ರಾಜರು ಚದುರಂಗ ಮಹಾರಾಜರು ಎಲ್ಲ ಸೇರಿಕಂಡು ದೇವಸ್ಥಾನಕ್ಕೆ ಪೂಜೆಗೋದ್ರಂತೆ.

ಪರಮಾತ್ಮನಾಗಿರತಕ್ಕಂಥಾ ಗವಿ ಗಂಗಾಧರ ಸನ್ಯಾಸಿ ವ್ಯಾಸವನ್ನು ತಾಳಿಕಂಡು "ನೀವು ಗಂಡಸರೇ ಬಂದಿಲ್ಲಿ ಪೂಜೆಮಾಡಿದರೆ ಪುತ್ರ ಸಂತಾನವು ನಿಮಗೆ ದೊರೆಯುವುದಿಲ್ಲ. ಚದುರಂಗ ಮಹಾರಾಜನ ಹೆಂಡ್ತಿಯಾಗಿರತಕ್ಕಂಥಾ ಚಂದ್ರಕಾಂತಿಯನ್ನು ಕರಕಂಡುಬಂದು ಇಲ್ಲಿ ಪೂಜೆ ಮಾಡ್ಸಿ, ಆಯಮ್ಮನಿಗೆ ಪ್ರಸಾದವನ್ನು ಕೊಟ್ಟರೆ ಪುತ್ರಸಂತಾನ ದೊರೆಯಬಹುದು" ಎಂಬುದಾಗಿ ಹೇಳಿದನಂತೆ. ಅದನ್ನು ಕೇಳಿ ತನ್ನ ಪ್ರಧಾನಿಯಾಗಿರ್ತಕ್ಕಂಥಾವ್ನನ್ನು ಕಳ್ಸಿದರಂತೆ. ಚಂದ್ರಕಾಂತಿಯನ್ನು ಕರೆದರಂತೆ. 'ನಾ ಬರೆಯೋರ ಮುಂದೆ ತಿರಿಯೋರು ಓಗ್ಬಾರ್ದಂತೆ. ಸರಿಯಾಗಿ ನಡೀತಕ್ಕಂಥವ್ರು ಮುಂದೆ ನನ್ನಂಥ ಪಾಪಿಗಳೋಗ್ಬಾರ್ದು' ಅಂತ ಹೇಳಿದರಂತೆ.

"ಅಮ್ಮ ಪೂಜ್ಯದ ವ್ಯಾಳ್ಯೆ ಆಯ್ತು. ದೊರೆ ಏಳಿದ ಮಾತಿಗೋಸ್ಕರವಾಗಿ ನಾವು ಹೊರಡಬೇಕು" ಎಂಬುದಾಗಿ ಪ್ರಧಾನಿ ಏಳಿದನಂತೆ.

ಅದಿನ್ಯಾವ ದೇಸವಿನ್ಯಾವ ಕುಲವ್ರೋ ನಾವು ಕಾಣೆವ್ರೋ
ಸ್ವಾಮಿ ನಾವು ಕಾಣೇವ್ರೋ.
ಅದಿನ್ಯಾವ ದೇಸ ಎನ್ನುವ ದೊರಿಯೋ ನಾವು ಕಾಣೇವು
ಗುರುವೇ ನಾವು ಕಾಣೇವು.

ನೆಮ್ಮದಿ ಬುದ್ಧಿಮಾತುಗಳನ್ನು ಹೇಳಿ ಕರ್ಕಂಡು ಬರ್ತಾ ಇದ್ದರಂತೆ. ದಾರಿಯಲ್ಲಿ ಒಬ್ಬ ದೊರೇಮಗ ಚಿನ್ನದ ಕಟಗೆ ಕೈಯಲ್ಲಿ ತಕಂಡು ಬಂಗಾರದ ಟೊಪಿಗೆ ತಲೀಮ್ಯಾಲಿಟಕಂಡ್ ಆಡತಾ ಇದ್ದನಂತೆ. ದೊರೆಸಾನಿಯಾಗಿರ್ತಕಂತಾವ್ಳು ನೋಡಿ "ನೋಡ್ದೇನಪ್ಪ ಪ್ರಧಾನಿ? ಇಂಥಾ ರಾಜಾಧಿರಾಜರಿಗೆಲ್ಲ ಸಂತಾನ ಕೊಟ್ಟಿದ್ದಾನೆ ಪರಮಾತ್ಮ. ನನ್ನ ಗರ್ಭದಲ್ಲಿ ಸಂತಾನವಿಲ್ಲ." ಅಂತ ಅಲ್ಲಿ ಅತ್ತುಕಂಡು ಸೋಕಮಾಡಿದಳಂತೆ. ಪ್ರಧಾನಿ ಅವಳಿಗೆ ಬುದ್ಧಿಮಾತುಗಳನ್ನು ಏಳಿ ಮುಂದಕ್ಕೆ ಕರದುಕಂಡು ಬಂದನಂತೆ. ಇಲ್ಲಿ ಒಂದು ಅತ್ತಿಯ ವೃಕ್ಷ. ಅಲ್ಲಿ ಒಂದು ಆಲದ ವೃಕ್ಷ. ಒಂದು ಕಪಿ ಹೊಟ್ಟೆಗೆ ಮಗಾ ತಬ್ಬಿಕಂಡು ಆ ಮರದಿಂದ ಈ ಮರಕ್ಕೆ, ಈ ಮರದಿಂದ ಆ ಮರಕ್ಕೆ ನೇತಾಡ್ತ ಇತ್ತಂತೆ. ಆ ಚಂದ್ರಕಾಂತಿಯಾಗಿರ್ತಕ್ಕಂಥಾವ್ಳು ಹೋಗಿ ಆ ಮಗುವನ್ನು ನೋಡಿ ಇವಳು ಭ್ರಮೆಪಟ್ಟಳಂತೆ. 'ಅಮ್ಮ ದೊರೆಸಾನಿ, ಆಗಲೇ ಹೇಳಿದೆ. ಕಂಡವರ ಮಕ್ಕಳನ್ನು ನೋಡಿ ಮಾತ್ರ ನೀನು ಕರುಬಬೇಡ. ನಿನ್ ಫಲಾ ನಿನ್ದು, ಅವರ ಫಲಾ ಅವರ್ದು' ಅಂತ ಬುದ್ಧಿ ಮಾತುಗಳನ್ನು ಹೇಳಿ ಮುಂದಕ್ಕೆ ಕರದುಕಂಡು ಹೋದನಂತೆ.

ಅಲ್ಲಿ ಒಂದು ಹೂವಿನ ವನಾಂತರ ಸಿಕ್ಕಿತಂತೆ. ಮನೆದೇವರಾಗಿರತಕ್ಕಂಥ ಮರುಳು ಸಿದ್ಧೇಶ್ವರನ ದೇವಸ್ಥಾನಕ್ಕೆ ದುಂಡುಮಲ್ಲಿಗೆ, ಕೆಂಡಸಂಪಿಗೆ, ವನರಾಜ ದೇವಮಲ್ಲಿಗೆ ಪುಸ್ಪಜಾತಿ ಹೂವಾನೆಲ್ಲ ತೆಗೆದುಕಂಡು, ಒಂದು ಹೂವಿನ ಕಟ್ಟೆ ತಗದುಕಂಡು ದೇವಸ್ಥಾನದ ಬಾಗಿಲಲ್ಲಿ ಹೋಗಿ "ನನ್ನ ಪತಿಯಾಗಿರತಕ್ಕಂಥಾವ್ರು ಕೂತಿದ್ದಾರೆ. ನನ್ನ ಮೈದಂದ್ರಿರಾಗಿರತಕ್ಕಂಥಾವ್ರು ಕೂತಿದ್ದಾರೆ. ನಾನು ಏಕಾಂಗಿಯಾಗಿ ಒಳಿಕ್ಕೋದ್ರೆ ನಾನು ನಾರಿಯಲ್ಲ ಮಾಮ್ಮಾರಿ ಸಮಾನ" ಎಂಬುದಾಗಿ ಬಾಕ್ಲಲ್ಲಿ ನಿಂತಕಂಡು, ತನ್ನ ಚಿಕ್ಕ ಮೈದಂದಿರಾಗಿರತಕ್ಕಂತಾವ್ನನ್ನ ಕೂಗಿ, ಹೂವಿನ ಕಟ್ಗೆ ಕೊಡುವುದಕ್ಕೆ ಹೋದರಂತೆ. ಆತನು ಹೇಳಿದನಂತೆ 'ನಿನ್ನ ಬಂಜೆ ಕೈಯಾಗಳ ಹೂವಾ ತಂದು ಮುಟ್ಟಿ ನಾವು ಪೂಜೆ ಮಾಡುವುದಿಲ್ಲ' ಎಂಬುದಾಗಿ ಆತನು ಪಿಸ್ಕಣ ಮಾಡಿದನಂತೆ. ಆಗ ಈಯಮ್ಮನು ನನ್ನ ಪತಿಗಿರತಕ್ಕಂತಹ ಹಕ್ಕೂ ನನಿಗೂ ನನ್ನ ಮೈದನಿಗೂ ಉಂಟೆಂದು ನಾನು ಹೇಳಿದ್ದು ತ್ಯಪ್ಪಾಯಿತು, ಎಂಬುದಾಗಿ ಹಿಂದಿನ ಹೆಜ್ಜೆಯನ್ನು ತೆಗೆದು ದೇವಸ್ಥಾನಕ್ಕೆ ಮುಂದಲ ಹೆಜ್ಜೆಯನ್ನು ಮಡಗಿದಳಂತೆ. ದೇವಸ್ಥಾನ.ದಲ್ಲಿ ಉರೀತಕ್ಕಂಥ ನೂರೊಂದು ಜ್ಯೋತಿಗಳೆಲ್ಲ ಪಕ್ಕನಾರೋದವಂತೆ.

"ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೇವು
ಸ್ವಾಮಿ ನಾವು ಕಾಣೇವು, ದೊರಿಯೇ ನಾವು ಕಾಣೇವು".

ನಮಗೇನೂ ಗೊತ್ತಿಲ್ಲ. ಆ ಗಂಡುಭೇರುಂಡ, ಹೆಣ್ಣು ಭೇರುಂಡ ಹೇಳಿದ್ದನ್ನು ನಾವಿಲ್ಲಿ ಹೇಳ್ತಾ ಇದ್ದೀವೇ ಹೊರ್ತು ನಾವು ಸಣ್ಣ ಬಾಲಕರಿಗೇನು ಗೊತ್ತು? ಅವೆಲ್ಲ ಜ್ಞಾಪನ್ದಲ್ಲಿ ಕೇಳಸ್ಕಂಡಿದ್ದೆ ಸ್ವಾಮಿ. ಆ ಮಾತೆಲ್ಲ ನಿಮ್ಮೊಂದಿಗೆ ನಾವಿಲ್ಲಿ ಹೇಳ್ತಾ ಇದೀವಿ.

ಆಗ ರಾಜನಿಗೆ ಅಪಮಾನವಾದಂತಾಗಿ ದೇವಸ್ಥಾನದಿಂದ ಹೊರಗೆ ಬಂದು 'ರಾಜ್ಯ ಬೇಡ, ದಂಡು ಬೇಡ' ಎಂದೆಲ್ಲ ಹೇಳಿ ಆಚೆಗ್ಹೊರಟರಂತೆ. ಸಾಯಂಕಾಲದವರೆಗೂ ನಡೆದರಂತೆ. ಅಲ್ಲಿ ಒಂದು ಹೂವಿನ ವನಾಂತ್ರ ಸಿಕ್ಕಿತಂತೆ. ಅಲ್ಲಿ ಈಶ್ವರ ದೇವಸ್ಥಾನ, ತಾಮ್ರದ ಕಲ್ಯಾಣಿ. ಈಶ್ವರ ದೇವಸ್ಥಾನದಲ್ಲಿ ರಾತ್ರಿ ಮಹಾರಾಜರು ನೆಲೆಗಂಡರಂತೆ. ರಾತ್ರಿ ಹೊತ್ತಿನಲ್ಲಿ ಮರುಳು ಸಿದ್ಧೇಶ್ವರ ಶಕುನದಲ್ಲಿ ಬಂದ್ಹೇಳಿದನಂತೆ "ಸಿದ್ಧ ಮಹಾಲಕ್ಷ್ಮಿಯನ್ನು ಮದುವೆಯಾದರೆ ಸಂತಾನ ಕೊಡುತೀನಿ" ಎಂದು .

"ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೇವು
ಸ್ವಾಮೀ ನಾವು ಕಾಣೇವು ಸ್ವಾಮಿ ನಾವು ಕಾಣೇವು".

ರಾಜರು ಎದ್ದು ಮುಂದಕ್ಕೊಂದ್ಯೋಜನ ಹೋದರಂತೆ. ಕಾಂಡೋಜರಾಜನ ಊವಿನ ಏನಾಂತ್ರ ಸಿಕ್ಕಿತಂತೆ. ಹಳೇ ಬಾಕ್ಲನ್ನ ತಗುದು ಒಳೀಕ ಹೋದರಂತೆ. ಅಲ್ಲಿ ಸಿದ್ಧ ಮಹಾಲಕ್ಷ್ಮಿಯನ್ನು ಕಂಡರಂತೆ. ಆಯಮ್ಮನ್ನ ಮಂಕುಮರುಳುಮಾಡಿ ಕರದುಕಂಡು ಬಂದು, ತಂದೆ ಸಮಾಧಿ ಮೇಲೆ ಹಾಲುಬಾಸೆ, ನೀರುಬಾಸೆ, ನಾಗವಳಿ ಪ್ರಮಾಣವನ್ನು ಮಾಡಿಸಿಕೊಂಡು ಕರದುಕಂಡು ಬಂದ್ರು. ಆಯಮ್ಮ ಹೇಳಿದಳಂತೆ : 'ನಿಮಗೆ ಏಳು ಜನ ಹೆಣತೀಯವರುಂಟು,

ಒಂಭತ್ತು ಜನ ಗವಡೀಯರುಂಟು. ಕೆಲವಾರು ದಿವಸ ನನ್ನಂತೆ ಇದ್ದರೂ ಆಯ್ತು. ಕೆಲವಾರು ದಿವಸ ಅವರಂತೆ ಇದ್ದರೂ ಆಯ್ತು' ಅಂತ ಹೇಳಿ ಹಾಲುಬಾಸೆ, ನೀರುಬಾಸೆ, ನಾಗವಳಿ ಪ್ರಮಾಣವಾಯಿತಂತೆ.

ಆಯಮ್ಮನನ್ನು ಕರದುಕಂಡು ಬಂದು, ಒಂದು ಮೈಲು ದೂರದಿಂದಲೇ ಊರಿಗೆ ವರ್ತಮಾನ ಕೊಟ್ಟರಂತೆ. ಊರಿನ ಎಲ್ಲರೂ ಹೆಣ್ತೆಯರೂ ಗೌವಡೇಯರೂ ಮುತ್ತು ರತ್ನ ವಜ್ರ ವೈಡೂರ್ಯದಲ್ಲಿ ಆರತಿಯನ್ನು ಮಾಡಿಕಂಡು ತಾಳಮೇಳ ತಂಬೂರಿ ವಾದ್ಯದಿಂದ ಹೋಗಿ ರಾಜನನ್ನು ಎದುರುಗಂಡರಂತೆ. ಆಯಮ್ಮ ಪಕ್ಕದಲ್ಲಿ ನಿಂತಿದ್ದಳಂತೆ. ಇವರ ಮಕ್‌ಗಳೆಲ್ಲ ದದ್ರವಾದುವಂತೆ. ತಗದುಕಂಡ್ಹೋಗಿರತಕ್ಕಂಥ ಆರ್ತಿ ಐಭೋಗಗಳನ್ನು ಬಿಸಾಡಿಬಿಟ್ಟು, ಮನಿಗೆ ಬಂದರಂತೆ. ಪ್ರಧಾನಿಯಾಗಿರ್ತಕ್ಕಂಥಾವ್ನ ನಿಂದನೆ ಮಾಡಿದನಂತೆ.

"ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೇವು
ಸ್ವಾಮೀ ನಾವು ಕಾಣೇವು ಗರುವೇ ನಾವು ಕಾಣೇವು".

ಅಣ್ಣನ್ನ ಸಮಾಧಾನ ಮಾಡಿಕೊಂಡು, ತಂದೆಗೆ ಬುದ್ಧಿಮಾತು ಏಳಿಬಿಟ್ಟು, ರಾಜನ್ನ, ಪ್ರಧಾನಿಯಾಗಿರತಕ್ಕಂಥಾವ್ರನ್ನ ಪಟ್ಣಕ್ ಕಳ್ಸಿದ್ರು.

ರಾಜ ಈ ಹೆಣ್ಣುಮಗೀನ ಮಾತನ್ನು ಸಮಕ್ಷವಾಗಿ ಕೇಳಿ, 'ಈ ಹೆಣ್ಣು ಮಗಿನ ಮಾತನ್ನು ಕೇಳಬೇಕು ನಾನು' ಎಂದು ಪ್ರಧಾನಿಯನ್ನು ಕರದುಕಂಡು ಪಟ್ಣಕ್ಕೆ ಬಂದ. ಬಂದು ಮರುದಿನ ರಾಜಾಧಿರಾಜರು ಸಭಿಕರನ್ನೆಲ್ಲ ಸೇರಿಸಿ, ಐರವತಿ ರಾಜ, ವೈರಾವತಿ ರಾಜ, ನೀಲಕಂಠ ರಾಜ, ಬಸವೇಶ್ವರ ರಾಜ, ಅವರ ಅಣ್ಣ ತಮ್ಮಂದಿರು, ರಾಜಾಧಿರಾಜರಾಗಿರತಕ್ಕಂಥ ಚದುರಂಗ ಮಹಾರಾಜರು ಎಲ್ಲಾ ಕೂತಕಂಡಿದ್ದಾರೆ.

ಈ ಎರಡು ಮಕ್ಕಳು ಬೆಳಿಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ ಹೋದ್ರೋ. ಹೋಗಿ ಹೇಳ್ತಾವೆ ಈ ಮಕ್ಕಳು "ಸ್ವಾಮಿ, ನಮ್ಮ ತೋಟದಲ್ಲಿ ಗಂಡುಭೇರುಂಡ, ಹೆಣ್ಣುಭೇರುಂಡ ಪಕ್ಷಿಗಳು ಒಂದು ಕತೆ ಹೇಳ್ತಾ ಇದ್ವೊ. ಅದನ್ನು ನಾವು ಕೇಳಿಸಿಕಂಡೋ. ಅದನ್ನು ಈ ಸಭೆಯಲ್ಲಿ ಹೇಳ್ತೀವಿ. ಅಧ್ಯಕ್ಷರಾಗಿರತಕ್ಕಂಥಾ ಚದುರಂಗ ಮಹಾರಾಜರು, ಅವರ ತಮ್ಮಂದಿರಾದ ಐರವತಿರಾಜ, ವೈರವತಿ ರಾಜ, ನೀಲಕಂಠರಾಜ, ಬಸವೇಶ್ವರ ರಾಜರು, ಈ ಪುರಸಭೆ ಮಹಾತ್ಮರು ಈ ಮಕ್ಕಳ ವಾಕ್ಯವನ್ನು ಕೇಳಿ, ಅಸತ್ಯವಿದ್ದರೆ ಇದನ್ನು ಆಲಸ್ಯ ಮಾಡಿ, ಸತ್ಯವೇನಾದರೂ ಇದ್ದರೆ ತೃಪ್ತಿ ಬಂದರೆ ನಮಗೆ ಬುದ್ಧಿಯನ್ನು ತಿಳಿಸಿ ಆಚೆಗೆ ಕಳಿಸಬೇಕು ಎಂಬುದಾಗಿ ನಿಮ್ಮಲ್ಲಿ ಒಂದು ಪ್ರಾರ್ಥ್ನೆ ಮಾಡ್ಕಂತೀನಿ ಅಂದರು.

ಆ ಪುಣ್ಯವಂತರಾಗಿರ್ತಕ್ಕಂಥಾವ್ರು ಹೇಳಿದ್ರು 'ಅದ್ಯೇನು ಹೇಳಮ್ಮ, ನಾವ್ರೂ ಕೇಳ್ಬೇಕಾಗಿದೆ. ಆ ಗಂಡುಭೇರುಂಡ ಹೆಣ್ಣುಭೇರುಂಡ ಅನ್ನೋ ಪಕ್ಷಿ ಯಾವ ಕಥೆ ನುಡದವ್ರೋ ಆ ಕತೆಯನ್ನು ನಾವು ಕೇಳಿ ಸಂತೋಷಪಡಬೇಕಾಗಿದೆ. ಅದ್ಯೇನು ಕತೆ ಹೇಳಮ್ಮ'-ಎಂದು ಎಲ್ಲ ಕೇಳಿಕಂಡರು.

ಈ ಮಗಾ ಹೇಳ್ತದೆ :

> ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೆವ್ರೋ
> ಸ್ವಾಮಿ ನಾವು ಕಾಣೇವ್ರೋ.
> ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೇವಿನ್ನಾ ದೊರಿಯೇ
> ನಾವು ಕಾಣೇವು.

'ಒಂದು ಪಟ್ಟಣದಲ್ಲಿ ಚಮರಂಗ ಮಹಾರಜರಂತೆ. ಆ ಚದುರಂಗ ಮಹಾರಾಜನ ಅಣ್ಣ ತಮ್ಮಂದಿರಾಗಿರತಕ್ಕಂಥಾ ಐರವತಿರಾಜ ವೈರವತಿ ರಾಜ, ನೀಲಕಂಠ ರಾಜ, ಬಸುವೇಶ್ವರ ರಾಜರಂತೆ. ಅವರ ತಮ್ಮಂದಿರಿಗೆಲ್ಲ ಸಂತಾನವ್ರುಂಟಂತೆ. ಆ ಚದುರಂಗ ಮಹಾರಾಜನಿಗೆ ಮಕ್ಕಳಿಲ್ಲವಂತೆ. ಮಕ್ಕಳಿಲ್ಲದ್ದಕೋಸ್ಕರವಾಗಿ ಒಬ್ಬ ತಾಯಿ ಮಕ್ಕಳ್ನೇ ಮೆಚ್ಚಿ ಏಳು ಜನರನ್ನ ಮೆಚ್ಚಿ ಲಗ್ನವಾದರಂತೆ. ಅವರ ಏಳು ಜನರ ಗರ್ಭಕ್ಕೂ ಪುತ್ರಸಂತಾನವಿಲ್ಲವಂತೆ.

> ಅದಿನ್ನ್ಯಾವ ದೇಸವಿನ್ನ್ಯಾವ ಕುಲವ್ರೋ ನಾವು ಕಾಣೆವ್ರೋ
> ಹರಿಯೇ ನಾವು ಕಾಣೇವು.

ಆಗ ಕರದುಕಂಡ್ಹೋಗಿ ಪರಮಸಾಲೆ ಮನೆಯಲ್ಲಿಟ್ಟುಕೊಂಡರಂತೆ.. ಆಯಮ್ಮವ್ರೋದ ದಯಾ ದೃಷ್ಟಿಯಿಂದ ವರುಸ ತುಂಬಿತಂತೆ. ವರುಸದ ಮ್ಯಾಲೆ ಗರ್ಭಿಣಿಯಾದಳಂತೆ. ಇನ್ನೇನು ಹಡದುಕಣೇ ಸಮಯವಾಯಿತಂತೆ. ಸಮಯವಾದ ಮೇಲೆ ಪ್ರಧಾನಿ ಕೈಲಿ– "ಸ್ವಾಮೀ ನಿಮ್ಮ ಪಟ್ಣಕ್ಕೆ ಬಂದ ಕೃತ್ಯದಿಂದ ಗರ್ಭಿಣಿಯಾದೆ. ನಿಮ್ಮ ರಾಜರಿಗೆ, ಸರ್ಕಸ್ ದರ್ಬಾರಿನಲ್ಲಿ ಸ್ವಲ್ಪ ಜಾಗವನ್ನು ಕೊಟ್ಟು, ಒಬ್ಬ ದಾದಿಯನ್ನು ಸಾಯಕ್ಕೆ ಕೊಡಬೇಕು. ಅಂತ್ಹೇಳಿ ಕೇಳಿಕಂಡ್ಲಂತೆ ಆಯಮ್ಮ. ಪ್ರಧಾನಿ ಹೋಗಿ ರಾಜನಿಗೆ ಹೇಳಿದನಂತೆ. ಆ ಮಾತಿಗೆ ರಾಜ ಹೇಳಿದನಂತೆ. : "ಸರ್ಕಸ್ ದರ್ಬಾರಿನಲ್ಲಿ ಓಗೋರ್ ಓತಾರೆ, ಬರೋರ್ ಬರ್ತಾ ಇದಾರೆ. ಇಲ್ಲಿ ಜಾಗವಿಲ್ಲ. ನನ್ನ ಏಳ್ ಜನ ಹೆಣತೀರ ಬಳಿಗೆ ತಗದುಕಂಡ್ಹೋಗಿ ಬಿಟ್ಟು ಬಾ" ಅಂತ ಅಪ್ಪಣೆಯಾಯಿತಂತೆ. ಪ್ರಧಾನಿಯಾಗಿರ್ತಕ್ಕಂತಾವ್ನು ಅದೇ ಪ್ರಕಾರ ಕರದುಕಂಡ್ಹೋಗಿ ಏಳುಜನಾ ಹೆಂಡತೀರ ಬಳಿಗೆ ಬಿಟ್ಟರಂತೆ.

> "ಅದಿನ್ನ್ಯಾವ ದೇಸವ್ರೋ ಯಾವ ಕುಲವ್ರೋ ನಾವು ಕಾಣೆವ್ರೋ
> ದೊರೆಯೇ ನಾವು ಕಾಣೇವು, ಸ್ವಾಮಿ ನಾವು ಕಾಣೇವ್ರೋ".

ಕರದುಕಂಡ್ಹೋದ ಮಾತ್ರದಲ್ಲೀ ಇವರೇಳು ಜನ ಹೆಣತಿಯವ್ರು ಒಂಬತ್ತು ಜನ ಗವಡೇರು ಎದುರುಗಂಡ್ರಂತೆ : ಪ್ರಧಾನಿ ಇವಳು ಯಾವ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ಮಗಳೋ ಈ ಯಮ್ಮ ನಮ್ಮ ಪಟ್ಣಕ್ಕೆ ಬಂದ ಮಾತ್ರದಲ್ಲಿ ನಮ್ಗೆಲ್ಲಾರ್ಗೂ ಒಂದು ಸತ್ಫಲವಾಯ್ತು. ನಮ್ಮ ಏಳು ಜನಕ್ಕೂ ಪುತ್ರ ಸಂತಾನವಿರ್ಲಿಲ್ಲ. ಈಯಮ್ಮ ಬಂದಮೇಲೆ ನಮ್ಮ ಪಟ್ಣವೇ ಒಂದು ಸುಭಿಕ್ಷವಾಯ್ತು. ಈಯಮ್ಮನ ಗರ್ಭದಲ್ಲಿ ಒಂದು ಗಂಡುಮಗುವೇ ಆಗಲಿ, ಒಂದು ಹೆಣ್ಣು ಮಗುವೇ ಆಗಲಿ, ನಾವದನ್ನು ನೋಡಿಕೊಂಡು ಸಂತೋಷಪಡ್ತೇವೆ.

ಹಾಗಂತ ಮಹಾರಾಜರಿಗೆ ಹೇಳುಹೋಗು ಅಂತ ಪ್ರಧಾನಿ ಕೈಯಲ್ಲಿ ಹೇಳಿಕಳಿಸಿದರಂತೆ. ಪ್ರಧಾನಿಯಾಗಿರತಕ್ಕಂಥಾವ್ನು ಕಳಿಸಿದ ರಥಾ ತೆಗೆದುಕಂಡು ಪಟ್ಣಕ್ಕೆ ಬಂದನಂತೆ.

ಆಗ ಚದುರಂಗ ಮಹಾರಾಜನ ಹೆಣ್ತಿ ಎಲ್ಲಕ್ಕೂ ದೊಡ್ಡವಳು ಚಂದ್ರಕಾಂತಿ, ಸಿದ್ಧ ಮಾಲಕ್ಷ್ಮಿ ತಲೆಯ ಏಳು ಮಾರುದ್ದ ಮಂಡೆ ಕೂದಲು ಹಿಡಕಂಡು ಈ ರಾಗಿ, ರಾಗಿ ಯಾವ ಪ್ರಕಾರವಾಗಿ ಬೀಸ್ತದೋ ಆ ಪ್ರಕಾರವಾಗಿ ಭರ್ರನೆ ತಲೆಯನ್ನು ತಿರುಗಿಸಿದರಂತೆ. ಆಯಮ್ಮನಿಗೆ ತಲೆ ತಿರುಗಿದಂತಾಯಿತಂತೆ. ಆಯಮ್ಮನ ತಗದುಕಂಡ್ಹೋಗಿ ಒಂದು ಮೂಲೆಯಲ್ಲಿ ಕುಂಡ್ರಸಿದರಂತೆ.

ಅದಿನ್ನ್ಯಾವ ದೇಸವ್ರೋ ಯಾವ ಕುಲವ್ರೋ ನಾವು ಕಾಣೆವ್ರೋ
ನಾವು ಕಾಣೆವ್ರೋ.

ಮಾತ್ರದಲ್ಲಿ–''ಅಮ್ಮಾ ಸ್ವಲ್ಪ ನಿಧಾನವಮಾಡಿ, ಈ ಗಲಾಟೆ ಮಾಡಬಾರದು. ಉಪಾಯದಿಂದ ಅಪಾಯದ ಕೆಲಸವನ್ನು ಮಾಡಬೇಕು. ಚಂದ್ರಕಾಂತಿ ಸೂಲಗಿತ್ತಿ ಸುಗ್ಗಮ್ಮನ ಮನೆಗೆ ಹೋದಳಂತೆ. ಆಗ ಟೈಮೇನು? ಹತ್ತು ಗಂಟೆ ಹನ್ನೆರಡು ಗಂಟೆ ಆಗಿತ್ತಂತೆ.

ಯಾಕಮ್ಮಾ? ನೀನು ರಾಜಾಧಿರಾಜನ ಮಡದಿ, ನನ್ನಂಥ ಪಾಪಿಷ್ಠ ಮನೆಗೆ ಇಷ್ಹೊತ್ತಿನಲ್ಲಿ ಬಂದಿದ್ದೀಯಲ್ಲ, ಏನು ಸಮಾಚಾರ? ಅಮ್ಮಾ, ಏನು ವಿಚಾರವ್ರೊ ಇಲ್ಲಾ. ಒಬ್ಬ ತಾಯಿ ಮಕ್ಕಳ್ನೇ ಮೆಚ್ಚಿ ನಮ್ಮ ರಾಜ ಏಳು ಜನರನ್ನು ಲಗ್ನವಾಗಿದ್ದ. ಏಳು ಜನಕ್ಕು ಪುತ್ರಸಂತಾನವಿಲ್ಲ. ಅದಕ್ಕೋಸ್ಕರವಾಗಿ ರಾಜ ಅರಣ್ಯ, ವನವಾಸಕೋಗ್ತೀನಿ ಅಂತ ಏಳಿ ಆ ಸಿದ್ಧ ಮಹಾಲಕ್ಷ್ಮಿಯನ್ನು ಕರದುಕೊಂಡು ನಮ್ಮ ಪಟ್ಟಣಕ್ಕೆ ಬಂದಿದಾನೆ. ಅವಳು ತುಂಬು ಗರ್ಭಿಣಿಯಾಗಿ ಹೆರಿಗ್ಗೆ ಇಲ್ಲಿಗೆ ಕಳ್ಸಿದ್ದಾರೆ. ಅವಳ ಹೊಟ್ಟೆವಳಗೆ ಒಂದು ಹೆಣ್ಣು ಮಗುವೇ ಹುಟ್ಟಲಿ ಅಥವಾ ಒಂದು ಗಂಡು ಮಗವೇ ಹುಟ್ಟಲಿ, ಅವಳ್ನೇ ಪಟ್ಟದ ರಾಣಿಮಾಡಿಕಂಡು, ನಮ್ಮನ್ನು ಕಸನೀರು ಗ್ವಾಡಿ ಮಾಡಿಕ್ಕಂಡು ನಮ್ಮನ್ನ ಯಾತಕ್ಕೂ ತರವಾಗಿಲ್ದಂಗೆ ಅನಾಲಾಯಕ ಮಾಡ್ತನೆ. ಅವಳ ಹೊಟ್ಟೆಯಲ್ಲಿ ಹುಟ್ಟುವ ಮಗುವನ್ನು ಕತ್ತುಮುರ್ದು ಗೊಬ್ಬರದ ಗುಂಡಿಯಲ್ಲಿ ಮುಚ್ಚಕ್ಕೇ ಸಾಧ್ಯವಾದರೆ ನಿನಗೊಂದು ಬಂಗಾರದ ತಗಡಿನ ಸೀರೆಮಾಡಿ ಉಡುಸ್ತೇವಮ್ಮ. ಅಂತ್ಹೇಳ್ಬುಟ್ಟು ಬೋಧನೆ ಏಳಿಬಿಟ್ಟು, ಆ ಸೂಲಗಿತ್ತಿ ಸುಗ್ಗಮ್ಮನ ಕರದುಕೊಂಡು ಬಂದರಂತೆ.

ಅದಿನ್ನ್ಯಾವ ದೇಸವ್ರೋ ಯಾವ ಕುಲವ್ರೋ ನಾವು ಕಾಣೆವು
ದೊರೆಯೇ ನಾವು ಕಾಣೇವು, ಗುರುವೇ ನಾವು ಕಾಣೇವು
ದೊರೆಯೇ ನಾವು ಕಾಣೇವು, ಗುರುವೇ ನಾವು ಕಾಣೇವು.

ಒಂದು ಮಾತೂ ನಮಗೆ ಗೊತ್ತಿಲ್ಲ. ಆ ರಾಜ ಯಾರು ಅನ್ನೋದೂ ಗೊತ್ತಿಲ್ಲ. ಆ ಪಟ್ನಾ ಅನ್ನೋದೂ ಗೊತ್ತಿಲ್ಲ. ಯಾವ ದೇಸವ್ರೋ? ಹಕ್ಕಿಗಳು ಎಲ್ಲಿ ಕೇಳಿಸ್ಕಂಡು ಆ ಕಥೆಯನ್ನು ನಮಗೆ ಹೇಳಿದ್ವವ್ರೋ? ಅದೂ ಸಾಂಗೋಪಾಂಗವಾಗಿರತಕ್ಕಂಥ ಕತೆ. ಇದನ್ನು ನಿಮ್ಮ ಮುಂದೆ ನಾವು ಮಕ್ಕಳು ಹೇಳಬೇಕಾಗಿ ಬಂತು.

ಆಗ ಹನ್ನೆಲ್ಡಾಳುದ್ದ ಮಾಳಿಗ್ಗೆ ಏಣಿ ಹಾಕಿದರಂತೆ. ಸೂಲಗಿತ್ತಿ ಅಂದರೆ ಊರಿಗೇ ತಾಯಿ ಸಮಾನ, ಬುದ್ಧಿವಂತೆ. ಅವಳೂ ಇವರಿಗೆ ವಿವೇಕ ಏಳಲಿಲ್ಲ. 'ಬೇಡಮ್ಮಾ, ಈ ಕಷ್ಟಾಬೇಡ್ರಿ ಅಂತ ಅವಳೂ ಹೇಳಲಿಲ್ಲ. ಆದರೆ ಬಂಗಾರದ ತಗಡಿನ ಸೀರೆಗೆ ಆಸೆಬಿದ್ದಳೇ ಹೊರ್ತು, ಈ ಸಂತಾನಕ್ಕೋಸ್ಕರ ಆಸೆಬೀಳಲಿಲ್ಲ. ಆಯಮ್ಮಾ ಸೇರಿಕಂಡು ಈ ಯಮ್ಮನ್ನ-ಅರಿಯದ ಮಗುವನ್ನು ಯಾವ ಸೀಮೆ ಹೆರಿಗೆ ಮಾಡಬೇಕು? ಅಂತ ಕೇಳಿದಳಂತೆ. "ತಾಯಿ ಹುಟ್ಟಿತ್ತಾಗಿಂದಾ ಅಡವಿಯೊಳಗಿದ್ದವಳು. ಹೆರಿಗೆಂದರೇನು ಇವತ್ತಿಗೂ ನನಗೆ ಗೊತ್ತಿಲ್ಲ. ಎಲ್ಲರಿಗೂ ನೀನು ತಾಯಿ ಸಮಾನ. ಯಾವ ಸೀಮೆ ಹೆರಿಗೆ ಮಾಡಬೇಕೂಂತ ನೀನೇ ಹೇಳ್ಬೇಕು ಹೊರ್ತು ನನ್ದೇನಮ್ಮ?" ಅಂದಳಂತೆ.

"ಅದಿನ್ಯಾವ ದೇಸವಿನ್ಯಾವ ಕುಲವ್ವೋ ನಾವು ಕಾಣೆವು
ಗುರುವೇ ನಾವು ಕಾಣೇವು, ಸ್ವಾಮಿ ನಾವು ಕಾಣೇವ್ವೋ".

ಆಗ ಏಣಿ ಹಾಕ್ಸಿ, ಕಣ್ಣಿಗೆ ಬಟ್ಟೆ ಕಟ್ಸಿ ಮೇಗಳಿಂದಾ ಇಳ್ಸಿ, ಆಡೀಲಿಂದಾ ಹತ್ಸೀ ಕಷ್ಟಕೊಟ್ಟರು. ಆಗ ಚಂದ್ರಕಾಂತಿ ಏಳು ಮಾರುದ್ದ ಮಂಡೇ ಕೂದಲ್ಹಿಡಕಂಡು ಹಡಕಿಬಿಟ್ಟಳಂತೆ. ಇನ್ನಿಬ್ಬರು ಎರಡು ಸೇರಿನ ಒನಕೆ ತಗಂಡು ಎದೇ ಮ್ಯಾಲಾಕ್ಕಂಡು ವಿನೋದವಾದ ಪದ್ಯವನ್ನಾಡಿಕಂಡು ಎದೆಮ್ಯಾಲೆ ಕುಟ್ಟಿದರಂತೆ. ಆ ಕುಟ್ಟುತ್ತಿದ್ದಂಗೆ ಮಾತು ಮಾತಾಡ್ತಿದ್ದಂಗೆ ಆಯಮ್ಮ ಹೇಳಿದ್ಲು 'ಅಮ್ಮಾ ನೀವು ಮಗೀನ ಹಸೀತಲೆ ಕಾಣ್ದೆರತಕ್ಕಂಥಾವರು. ನೀವು ಮಕ್ಕಳ ಮುಖವೇ ನೋಡದೆ ಇರತಕ್ಕಂಥಾವರು. ನನ್ನ ಗರ್ಭದಲ್ಲಾಗುವ ಮಗುವನ್ನು ನೀವು ಸಾಕ್ಕಂಡು ಸುಖವಾಗಿ ಭಾಳಿ, ಅನಂತರಾ ನನ್ನ ಪ್ರಾಣ ಕೊಂದ್ಹಾಕಿ' ಅಂತ ಅವರು ಕಾಲುಕಟ್ಟಿಕಂಡಳಂತೆ. ಅದನ್ನು ಕೇಳೀ, ಆಯಮ್ಮನಿಗೇ ಕಿಬ್ಬೊಟ್ಟೆ ಮೇಲೆ ಕುಟ್ಟಿದರಂತೆ. ಮಾತು ಮಾತಾಡ್ತಿದ್ದಂಗೆ ಒಂದು ಗಂಡು ಮಗು ಜನನವಾಯ್ತಂತೆ. ಅದನ್ನು ರಪ್ಪನೆ ನೆಲಕ್ಕೆ ಹೊಡ್ದು ಮಡ್ಲಾ ಕಟ್ಟಿಕಂಡ್ಲಂತೆ ಸೂಲಗಿತ್ತಿ ಸುಗ್ಗಮ್ಮ. ಆಮೇಲೊಂದು ಹೆಣ್ಣು ಮಗು ಹುಟ್ತು. ಅದನ್ನೂ ರಪ್ಪನೆ ನೆಲಕ್ಕೆ ಹೊಡ್ದು ಮಡ್ಲಿಗೆ ಕಟ್ಟಿಕ್ಕೊಂಡಳು. ಈ ಎರಡು ಮಕ್ಕಳನ್ನೂ ಹೂವಾಡಿಗರ ತ್ವಾಟದಲ್ಲಿ ಹಾಕಿದರಂತೆ. ಆ ಮಕ್ಕಳನ್ನು ಅಲ್ಲಿ ಬಿಸಾಡಿಬಿಟ್ಟು ಬಂದು, ಆಯಮ್ಮನಿಗೆ ಒಂದು ಬೀಳುಪರಕೆ, ಗಂಡುಕಲ್ ತೆಗೆದು ಮುಂದ್ಹಾಕಿದರಂತೆ.

ಅದಿನ್ಯಾವ ದೇಸವಿನ್ಯಾವ ಕುಲವ್ವೋ ನಾವು ಕಾಣೆವು
ದೊರಿಯೇ ನಾವು ಕಾಣೇವು.

ಹಾಗೆ ಮುಂದ್ಹಾಕಿ, ರಾಜನಿಗೆ ಒಂದು ಪತ್ರವನ್ನು ಬರೆದರಂತೆ. ಅದನ್ನು ನೋಡಿ ರಾಜ ಮತಂಗ ಪರ್ವತದ ಮೇಲೆ ಆಕೆಯನ್ನು ತೆಗೆದುಕಂಡ್ಹೋಗಿ ಸಿರಸೋದನೆ ಮಾಡಬೇಕೆಂದು ಪ್ರಧಾನಿಗೆ ಏಳಿದನಂತೆ ರಾಜ. ಪ್ರಧಾನಿ ತಗದುಕೊಂಡು ಓಗಿ ಕತ್ತರಿಸಿ ಸುಟ್ಟು ಗಂಗೆ ಪ್ರವೇಶವನ್ನು ಮಾಡಿದನಂತೆ.

ಅದಿನ್ಯಾವ ದೇಸವಿನ್ಯಾವ ಕುಲವ್ವೋ ನಾವು ಕಾಣೆವು

ಸ್ವಾಮಿ ನಾವು ಕಾಣೇವು, ಗುರುವೇ ನಾವು ಕಾಣೇವು.
ಪ್ರಧಾನಿ,
ಇವೆ ಕಾಣೊ ನನ್ನಾ ಮಕ್ಕಳೂ
ಸಿದ್ಧಮಾಲಕ್ಕೀಯ ಸುತರೂ ರಾಮಾ ರಾಮಾ

ಸಿವ ಸಿವ ಸಂಕರಾ ಜನಾರ್ಧನ, ಗಿರಿವರ್ಧನಾ ಪರಮಾತ್ಮ ಗವಿಯ ಗಂಗಾಧರಾ ನಾನೇನನ್ಯಾಯ ಮಾಡಿಕೊಂಡಿದ್ದಿನಪ್ಪಾ? ಗುರುದೇವ ಪರಮಾತ್ಮ ಮದುವೆಯಾದ ಸಿದ್ಧಮಾಲಕ್ಷ್ಮಿಯನ್ನು ಕರದುಕಂಡ್ಹೋಗಿ ಅಡವಿಪಾಲು ಮಾಡಿದ್ದೀನಲ್ಲಾ? ಏಳು ಜನಾ ಹೆಣ್ತಿಯರ ಮಾತು, ಒಂಬತ್ತು ಜನಾ ಗವಡಿಯವರ ಮಾತು, ಸೂಲಗಿತ್ತಿ ಸುಗ್ಗಮ್ಮನ ಮಾತು ಕೇಳಿದೆನಲ್ಲಾ? ನನ್ನ ಪತಿವ್ರತೆಯಾಗಿರತಕ್ಕಂಥಾ ಸಿದ್ಧಮಾಲಕ್ಷ್ಮಿಯನ್ನು ಮಂಕುಮರುಳುಮಾಡಿ ಕರದುಕಂಡು ಬಂದು ಅಡವಿಪಾಲು ಮಾಡಿದೆನಲ್ಲಾ? ಅಯ್ಯೋ ಪ್ರಧಾನಿ ಏನು ಬುದ್ಧಿ ಇಲ್ಲದಂತ ಕೆಲಸ ಮಾಡಿಕೊಂಡೆ? ನನ್ನ ಪತಿವ್ರತೆಯಾಗಿರತಕ್ಕಂಥ ಸಿದ್ಧಮಹಾಲಕ್ಷ್ಮಿಯನ್ನು ಏನು ಮಾಡಿದೆಪ್ಪ?

ಸ್ವಾಮಿ ನೀವ್ಹೇಳಿದಂತೆ ಮತಂಗಪರ್ವತದ ಮ್ಯಾಲೆ ಕತ್ತರ್ಸಿ ಸಿರಿಗಂಧ ಸೌದೆಯನ್ನು ತಂದು, ಸುಟ್ಟು ಹೋಮಾಮಾಡಿ ಗಂಗೆಪ್ರವೇಶವನ್ನು ಮಾಡಿದೆ.

"ಸಿವಾ ಸಿವಾ ಎಂಥಾ ಬುದ್ಧೀ ಮಾಡಿದೆನಯ್ಯಾ ನಾನು?
ಏನು ಅನ್ಯಾಯವನ್ನು ಮಾಡೀದ್ದೆನಯ್ಯಾ ನಾನು?
ನಾನು ನಾನು .

ಪರಮಾತ್ಮನೇ ನಾನು ಎಂಥ ವಸ್ತುವನ್ನು ಕಳೆದುಕಂಡು ಏನು ಅನ್ಯಾಯವನ್ನು ಮಾಡಿದೆ? ಪರಮಾತ್ಮನೇ ಹೇಳಿಕೆಯವರ ಮಾತನ್ನು ಕೇಳಿ, 'ಧರುಮರಾಯರು, ಮುನಿದರು' ಎಂಬ ಶಾಸ್ತರವಾಯಿತಲ್ಲಾ ಈ ಕತೆ. ಅಯ್ಯೋ ಪರಮಾತ್ಮನೇ ನನ್ನ ಮಕ್ಕಳೊಂದು ಕಡೆ, ನಾನೊಂದು ಕಡೆ, ಇಟ್ಟಾಡೀ ಈ ಪ್ರಪಂಚವೇ ನಾಶವಾಗುವ ಸ್ಥಿತಿಬಂತಲ್ಲಾ? ಪರಮಾತ್ಮನೇ ನನಗೆ ಯಾವತ್ತಿಗೆ ಪಾಪಪರಿಹಾರವಾಗುವುದು? ಪರಮೇಶ್ವರಾ, ಗುರುದೇವಾ "ಪ್ರಧಾನಿ ನೀನು ಎಲ್ಲಿ ಕತ್ತರಿಸಿದ್ಯೊ, ಅಲ್ಲಿ ನಾನ್ಹೋಗಿ ಒಂದು ತಿಂಗಳು ಭೂಪ್ರದಕ್ಷಿಣೆ ಮಾಡಿದ್ರೆ ಪಾಪ ವಿಮೋಚನೆಯಾಗುವುದು. ಆ ಜಾಗವನ್ನು ನನಗೆ ತೋರಿಸು. ಅಲ್ಲಿ ಒಂದು ತಿಂಗಳು ಭೂಪ್ರದಕ್ಷಣೆ ಮಾಡಿದರೆ ನನ್ನ ಪಾಪ ವಿಮೋಚನೆಯಾದೀತು" ಎಂಬುದಾಗಿ ಗೋಳಾಡಿ ಗುಳುಗುಳು ಗುಳು ಶೋಕಾಮಾಡಿಕಂಡು ಪ್ರಧಾನಿಯನ್ನು ಈ ಎರಡು ಮಕ್ಕಳು, ಹೂವಾಡಿಗರ ಅಣ್ಣಯ್ಯನನ್ನ ರಥದಲ್ಲಿ ಕುಂಡ್ರಿಸಿಕಂಡ.

ಸ್ವಾಮಿ ಅರಣ್ಯ ಮಾರ್ಗವಾಗಿ ರಥವು ಹೋತಾದಲ್ಲಾ
ರಥವ್ವೂ ಹೋತಾದಲ್ಲಾ.
ಹರಿಯೇ ಸಂಭೂ ಮಾದೇವನ ಕರುಣಾ ಹೊಂದಿರಲೂ ಸಂಕರಾ
ಹೊಂದಿರಲೂ ಸಂಕರಾ.

ಕೇಳಿರಿ ಮಹರಾಜನ ಕತೆಯಾ
ಕೇಳಿರಿ ಬಡತನದ ಕತೆಯಾ
ಕೇಳಿರಿ ವೈರವತದ ಕತೆಯಾ
ಕೇಳಿರಿ ಬಸುವೇಸನ ಕತೆಯಾ
ಲಾಲಸಿ ಕೇಳಿರಿ ಸ್ವಾಮಿ ಬಡತನದ ಕತೆಯಾ
ಬಡತನದ ಕತೆಯಾ.

ರಾಜನೂ ಪ್ರಧಾನಿಯಾ ಹೂವಾಡಿಗರಣ್ಣಯ್ಯನೂ ಮತಂಗ ಪರ್ವತಕ್ಕೋಗಿದ್ದರಲ್ಲ ಸ್ವಾಮೀ? ಅಲ್ಲಿಗೆ ಈಯಮ್ಮನ್ನ ಗವಿಗ್ಹಾಕಿ ಅನ್ನೆರಡು ವರ್ಸವಾಗಿತ್ತು. ಒಂದು ಪಕ್ಕವೆಲ್ಲ ಗೆದ್ದಲಿಡಿದು ಹೋಗಿತ್ತು. ಮೇಗಳ ಪಕ್ಕ ಮಾತ್ರ ಹಂಗೇ ಇತ್ತು. ಗವಿ ಬಾಕ್ಲಿಂದ ಗುಂಡನ್ನು ತೆಗೆದು, ಮುಳ್ಳನ್ನು ತೆಗದು ಮಕ್ಳಿಗೆ ಈ ತಾಯನ್ನು ತೋರ್ಸಿದ್ರು. ಪತಿಯಾಗಿರ್ತಕ್ಕಂಥವ್ರುನು ವ್ಹೋಗಿ ಕಾಲ್ದೆಸಿಗೆ ಕೂತ್ಕಂಡ್ರು. ಈ ಹೂವಾಡಿಗರ ಅಣ್ಣಯ್ಯನಾಗಿರತಕ್ಕಂಥಾವ್ನ ಪಕ್ಕದಲ್ಲಿ ಕೂತ್ಕಂಡ. ಪ್ರಧಾನಿ ತಲ್ದಸೆಗ್ಹೋಗಿ ಕೂತ್ಕಂಡ್ರು. ಎರಡು ಮಕ್ಕಳೂ ಓಗಿ ಎರಡು ಎದೆ ಕಚ್ಚಿಕಂಡೋ.

ಅಮ್ಮಮ್ಮ ಹಾಲ ಕೊಡವ್ವಾ, ಹಡೆದವ್ವ ತಾಯಿ
ನಮ್ಮಮ್ಮ ಮ್ಯಾಲಕೇಳವ್ವಾ.
ತಾಯೆಂಬೋ ಗುರುತು ಕಾಣೇವೇ, ನಮ್ಮಮ್ಮ ತಾಯಿ.
ನಮ್ಮಮ್ಮ ಹಾಲ ಕೋಡವ್ವಾ.
ತಾಯೆಂಬೋ ನೆರಳು ಕಾಣೇವೇ, ನಮ್ಮಮ್ಮ ತಾಯಿ
ಅಮ್ಮಮ್ಮ ಹಾಲ ಕೋಡವ್ವಾ.
ನೀನೊಮ್ಮೆ ಮಾತನಾಡವ್ವಾ, ಹಡೆದವ್ವ ತಾಯಿ
ನಮ್ಮಮ್ಮ ಮ್ಯಾಕೇಳವ್ವಾ.
ಉರುಗಣ್ಣ ಬಿಟ್ಟು ನೋಡೀದಾ, ಪರಮಾತ್ಮ ಶಿವನೆ
ಜೀವಗಾಳಿ ತುಂಬಿ ನೋಡೀದಾ.

ಪರಮಾತ್ಮನಾಗಿರತಕ್ಕಂಥವ್ನ ಜೀವಗಾಳಿ ತುಂಬಿಬಿಟ್ಟ. ಆ ಜೀವಗಾಳಿ ತುಂಬಿದ ಮಾತ್ರದಲ್ಲಿ ಈಯಮ್ಮನಿಗೆ ಹನ್ನೆರ್ಡ ವರ್ಸದ ಕಾಲವಾಗಿದೆ. ಮಕ್ಕಳ ಮ್ಯಾಲೆ ಉಸಿರಿಕ್ಕಂಡ್ಲಲ್ಲ? ಈಯಮ್ಮನಿಗೆ ಜ್ಞಾನೋದಯವಾಯ್ತು. ಹನ್ನೆರಡು ವರ್ಸದಲ್ಲಿ ಓಗಿರತಕ್ಕಂಥ ಹಾಲೂ ಕರಗಕಟ್ಟಿದಂಗಾಯ್ತಲ್ಲ ಗುರುದೇವ. ಎರಡು ಮಕ್ಕಳೂ ಎರಡು ಎದೇ ಕಚ್ಚಿಕಂಡೂ ಗಟಗಟನೆ ಎದಿಹಾಲು ಕುಡಿದುವಲ್ಲ? ಕುಡುದು ಮ್ಯಾಲೆ ಸಂತೋಷಪಟ್ಟು–

ಎದೆಯಾಲು ನಾವು ಕುಡಿದೇವೇ; ನಮ್ಮಮ್ಮ ತಾಯಿ
ಎದಿಯಾಲು ನಾವು ಕುಡಿದೇವೇ.

ತಾಯೆಂಬೊ ನೆರಳು ಕಂಡೇವೇ; ನಮ್ಮಮ್ಮ ತಾಯಿ
ತಾಯೆಂಬೋ ನೆರಳು ಕಂಡೇವೇ.

ತಾಯೆಂಬೋ. ನೆರಳು ಇವತ್ತು ನಾವು ಕಂಡೆವಮ್ಮ, ತಾಯಿಹಾಲು ಕುಡಿದು ನಾವು ಧನ್ಯರಾದೆವಮ್ಮ. ನಾವ್ರೊಂದು ಕಡೆ, ನೀನೊಂದು ಕಡೆ. ಕಂದೊಂದು ಕಡೆ ಕರುವ್ರೊಂದು ಕಡೆ ಇಟ್ಟಾಡೋಗಿದ್ದೆವಲ್ಲೊ ತಾಯಿ. ಆ ಪರಮಾತ್ಮನ ಅನುಗ್ರಹದಿಂದಾ ತಾಯೆಂಬೋ ನೆರಳು ಇವತ್ತಿಗೆ ಸಿಕ್ಕಿತಲ್ಲಮ್ಮ.

ಈಯಮ್ಮ ಮ್ಯಾಲಕ್ಕೆದ್ದು ಎರಡು ಮಕ್ಕಳ್ನೂ ತಬ್ಬಿಕಂಡು
ತಾಯೀ ಗುಳುಗುಳುನೆ ಸ್ವಾಕಾವ ಇನ್ನು ಮಾಡ್ಯಳು ದೊರೆಸಾನೀ
ಬುದ್ಧಿವಂತ ದೊರೆಸಾನೀ.

ಎಂದಿಗಿ ನನ್ನ ಮಕ್ಕಳು ನನ್ನ ಆಧೀನವಾದವಪ್ಪಾ? ನನ್ನ ಸತ್ಯವೇ ನನ್ನ ಕಾಪಾಡಿತಲ್ಲಾ. ಪರಮಾತ್ಮ ಸತ್ಯವೇ ನಿತ್ಯ, ಧರ್ಮವೇ ಚಿರಂಜೀವನ. ಸತ್ಯ ಯಾವತ್ತಿಗೂ ಸಾಯಿಸುವುದಿಲ್ಲ. ನಮ್ಮ ತಂದೆಗೆ ಎಷ್ಟು ಭಕ್ತಿಯಿಂದಿದ್ದು ತಪಸ್ಸು ಮಾಡಿದೆನೋ ಅದು ಇವತ್ತಿಗೆ ನನ್ನ ಕಾಪಾಡಿತು. ಗುರುದೇವಾ ಇದೆಲ್ಲ ನಿನ್ನ ಆಧೀನ. ಈ ಎರಡು ಮಕ್ಕಳನ್ನೂ ನಾ ಕಟ್ಟಿಕಂಡು ಈ ಪುರಬೀದಿಯಲ್ಲಿ ತಿರಿದುಂಡು ಬದುಕ್ತೀನಿ. ನನಗೆ ಪಟ್ಟ ಬೇಡ ಪಾಳ್ಯ ಬೇಡ, ಮಂದಿ ಬೇಡ ಮಾರ್ಬಲ ಬೇಡ. ಒಂದು ಚಾವಡಿಯಲ್ಲೋ ಮರದ ಕೆಳಗೋ ಇರುತ್ತೀನಿ" ಎಂಬುದಾಗಿ ಮಕ್ಕಳನ್ನು ಕಟ್ಟಿ ಮುದ್ದಾಡಿ ಮ್ಯಾಕ್ಕೆದ್ದು ನೋಡ್ತಾಳೆ. ಈ ಕಡೆ ಪತಿಯಾಗಿರ್ತಕ್ಕಂಥಾವ್ನು ಕಾಲ್ದಸೆಗೆ ಬಿದ್ದಿದ್ದಾನೆ. ಆಹಾ ಪರಮಾತ್ಮ–

ಕೈ ಮರ್ತಿದ್ದೇನೋ ಕಾಣೇ ಮೈ ಮರ್ತಿದ್ದೇನೋ ಕಾಣೇ
ಬಟ್ಟೆ ಮೇಲೆ ಜ್ಞಾನವಿಲ್ಲದೇ ಮಲಗಿದ್ದಿನೇನೋ ಕಾಣೇ.

ಪರಮಾತ್ಮ ಪತಿಯಾಗಿರ್ತಕ್ಕಂಥಾವ್ರುರು ಕಾಲ್ದಸೆಗೆ ಕೂತಿದ್ದಾರೆ. ನನ್ನ ಕೈ ತಗುಲ್ತೋ ಕಾಲ್ತಗುಲ್ತೊ, ಕಾಣೆನಲ್ಲಾ ಎಂಬುದಾಗಿ, ಅಷ್ಟು ಕಷ್ಟಕೊಟ್ಟಿದ್ದರು ಪತಿಪಾದಕ್ಕೆ ನಮಸ್ಕಾರ ಮಾಡ್ಕಂಡ್ಳು. ಅದೇ ಧರ್ಮಪತ್ನಿಯಾಗಿರ್ತಕ್ಕಂಥಾ ವಿಚಾರ. ಸ್ವಾಮಿ ನೀವು ಏನು ಅನ್ಯಾಯ ಮಾಡಿದ್ದರೂ ನಿಮಗೆ ಸೇರಲಿ. ನನ್ನ ಮಕ್ಕಳು ನನ್ನ ಅಧೀನವಾದವು. ನಿಮ್ಮ ಪಟ್ಣ ಬೇಕಿಲ್ಲ, ನಿಮ್ಮ ಪಾಳ್ಯ ಬೇಕಿಲ್ಲ. ಹಿಂದೆ ನೀವು ಹೇಳಿದ ಮಾತನ್ನು ಮರೆತು, ನಿಮ್ಮ ಹೆತ್ತೆಯವ್ರು ಬಾಳಿಗೆ ಕೊಟ್ಟು ಇಷ್ಟು ಕಷ್ಟವನ್ನು ನಿಷ್ಠುರವನ್ನ ಪಡಿಸಿದಿರಿ. ಅದ್ರೂ ಚಿಂತೆ ಇಲ್ಲ; ನಿಮ್ಮ ಪಟ್ಣಕೆ ನೀವು ದಯಮಾಡಿ. ನಾನು ಪುರಸಭೆಯಲ್ಲಿ ತಿರಿದುಂಡು ಈ ಮಕ್ಳನ್ನು ಸಾಕುತ್ತೀನಿ.

ನಿಮ್ಮನ್ ಆರೈದು ಸಾಕೀದಾ ಗುರುವು ಇನ್ನ್ಯಾರಪ್ಪಾ?
ತಾಯ್ತಂದಿನ್ನ್ಯಾರಪ್ಪಾ?
ನಮ್ಮನ್ ಆರೈದು ಕಾಪಾಡಿದ ಹೂವಾಡಿಗರಣ್ಣಯ್ಯಾ

ಹೂವಾಡಿಗರಣ್ಣಯ್ಯ?
ನಮ್ಮಾ ತಂದೆಗೆ ತಂದ್ಯಾಗಿ ಇವನೂ ಬದಲು ತಂದ್ಯಲವ್ವಾ
ಬದುಕು ತಂದ್ಯಲ್ಲವ್ವಾ.

ಶಿವ ನಿಮಗಿನ್ನ ಅತಿಶಯವಾಗಿರ್‍ತಕ್ಕಂಥಾ ತಂದೆ ತಾಯಿಗಿಂತಾ ಅತಿಶಯವಾಗಿರ್‍ತಕ್ಕಂಥಾ ನಮ್ಮ ತಾಯಿ, ತಾಯ್ದೆತ್ತಿ ನಡುನೀರಿನಲ್ಲಿ ಬಿಸಾಡಿ, ನೀನು ಬಂದು ಅಡವಿ ಪಾಲಾದ ಆಗಳಿಂದ ಎತ್ತಿ ಸಾಕಿ ಕಾಪಾಡಿರ್‍ತಕ್ಕಂಥಾ ಇವರೇ ನಮ್ಮ ತಂದೆ ತಾಯಿಗಳು, ನೀವಲ್ಲ.

ಚದುರಂಗ ಮಹಾರಾಜನು 'ಸಿದ್ಧಮಹಾಲಕ್ಷ್ಮಿ, ನಾನು ಮಾಡಿದಂಥಾ ಅಪರಾಧವನ್ನು ಕ್ಷಮಿಸಬೇಕು. ಇದು ನಾನು ಮಾಡಿದ ತಪ್ಪಲ್ಲ. ನನ್ನ ಏಳು ಜನಾ ಹೆಣ್ತೀಯವ್ರು ಮಾಡಿದ ತ್ಯಪ್ಪು. ನನ್ನ ಒಂಬತ್ತು ಜನ ಗವಡೀರು ಮಾಡಿದ ತ್ಯಪ್ಪು. ಸೂಲಗಿತ್ತಿ ಸುಗ್ಗಿ ಮಾಡಿರ್‍ತಕ್ಕಂಥ ತಪ್ಪು. ಈ ಅಪರಾಧವನ್ನು ನೀನು ಕ್ಷಮಿಸು. ನೀನು ಕೋಪದಿಂದ ಶಾಪವನ್ನು ನೀಡಿದರೆ ನಾನು ಧಗ್ಗನೆ ಭಸ್ಮವಾದರೂ ಆದೇನು. ಆದರೆ ನೀನು ಘನಮಹಾ ಪತಿವ್ರತೆ. ನನ್ನ ಪಟ್ಟಣಕ್ಕೆ ಬಂದು ನಮ್ಮನ್ನು ಉದ್ಧಾರಮಾಡಬೇಕು ಎಂದು ಕೇಳಿಕಂಡನು.

ಆಗ ಸಿದ್ಧಮಹಾಲಕ್ಷ್ಮಿ, ಎಲ್ಲಾ ಕ್ವಾಪದೃಷ್ಟಿಯನ್ನು ಬಿಟ್ಬಿಟ್ಟು, ಎಲ್ಲರೂ ಒಂದುಗೂಡಿ ಗುರುದೇವಾ

ಅವರೂ ಪಟ್ಟದ ಮಾರ್ಗವಾಗೀ ಬರುತರೆ ಮಹರಾಜಾ
ಬರುತರೆ ಮಹರಾಜಾ.

ಪಟ್ಣದ ಮಾರ್ಗವಾಗಿ ಬಂದು ಕೂತುಕಂಡು ಯೋಚನೆ ಮಾಡಿದ ಮಹಾರಾಜ. ನಾನು ಬುದ್ಧಿವಂತ ರಾಜ ಅಂತ ನಾನು ಏಚನೆ ಮಾಡಿಕಂಡಿದ್ದೆ. ನಾನು ಬೇಕಾದಷ್ಟು ದಾನಗಳನ್ನು ಮಾಡಿದ್ದೇನೆ. ನನ್ನ ಪಟ್ಣವೆಂದರೆ–

ಚದುರಂಗ ಮಹಾರಾಜನ ಪುರುವೇ ಇಳ್ಳಾರೇ ಕಾವ್ರುದು ಪುರವೇ
ಹಗಲಾಡೇ ಕಾವ್ರುದು ಪುರುವೇ
ಎತ್ತಾ ನೋಡಿದಾರು ಗುರುವೇ ಹನ್ನೆರಡು ಯೋಜನಾ
ಸುತ್ತಾ ನೋಡಿದಾರು ಗುರುವೇ ಹನ್ನೆರಡು ಯೋಜನಾ
ಅಯ್ಯ ಎತ್ತ ನೋಡಿದಾರು ಗುರವೇ ಬೀದಿ ಬಾ ಎಂತದೇ, ಬೀದಿ ಬಾ ಎಂತದೆ.

ಇಂಥ ರಾಜಾಧಿರಾಜ ನಾನು. ಇಷ್ಟು ಮಾಡಿದ್ದರೂ ನಾನು ಅವಿವೇಕದ ಮೂರ್ಖರಾಜ. ಈ ರಾಜ್ಯಭಾರವು ನನಗೆ ಯೋಗ್ಯವಾದದ್ದಲ್ಲ. ಆದರೆ ನನ್ನ ಮಗನಾಗಿರ್‍ತಕ್ಕಂಥಾ ಬುದ್ಧಿವಂತ ನಿಂಬೆಣ್ಣನೆಂಬತಕ್ಕಂಥವ್ನು ಹುಟ್ಟಿದ್ದಾನೆ. ಅವನಿಗೆ ರಾಜ್ಯಭಾರವನ್ನು ಕಟ್ಟಿ ನಾನು ನಿರಂಬಳವಾಗಿರ ಬೇಕಂತ ಯೋಚ್ನೆಮಾಡಿಕಂಡ. ಯೋಚ್ನೆಮಾಡಿಕಂಡು ನಿಂಬೆಣ್ಣನನ್ನು ಕರದು–''ಅಪ್ಪ ಈ ಪಟ್ಣಕ್ಕೆ ನೀನು ಅಧ್ಯಕ್ಷನಾಗಿ ರಾಜ್ಯಭಾರವನ್ನಾಳು. ನನ್ನ ರಾಜ್ಯದೃಷ್ಟಿ ಇಲ್ಲಿಗೆ ಹರೀತು''.

''ಅಪ್ಪ ನನ್ನ ತಂದೆ ಹೂವಾಡಿಗರಣ್ಣಯ್ಯ ಇರುವ ತನಕ ಈ ರಾಜ್ಯವು ನನ್ನದಲ್ಲ.

ನನ್ನನ್ನು ಆರೈದು ಕಾಪಾಡಿರತಕ್ಕಂಥ ತಂದೆ ಹೂವಾಡಿಗರಣ್ಣಯ್ಯ. ಆತನು ಮೃತಪಟ್ಟು ಆತನ ಉತ್ತರ ಕ್ರಿಯಾದಿ ಆದಮೇಲೆ ಈ ಪಟ್ಣ ನನ್ನದೇ ಹೊರ್ತು ಅಲ್ಲೀತನಕಾ ನನ್ದಲ್ಲ."

'ಸ್ವಾಮೀ ಸಂಭೂ ಮಾದೇವನ ಕರುಣಾ ಹೊಂದಿರಲೂ ಸಂಕರಾ
ಹೊಂದಿರಲೂ ಸಂಕರಾ'
'ಪ್ರಧಾನಿ, ರಾಜ್ಯಭಾರದ ಸುದ್ದಿ ಹಾಗಿರಲಿ, ಎಳಕಳ್ಳೋ
ಎಳುಕಳೋ ಪರುಧಾನಿ ಇಡಕಳ್ಳೇ ಪರುಧಾನೀ
ನನ್ನಾ ಏಳು ಜನ ಎಂಡತೀರ್ನ ಎಳ್ಕ್ಯೋ ಪರುಧಾನೀ
ಎಳುಕೋ ಪರಧಾನೀ.

"ಸ್ವಾಮಿ ಏನ್ಹೇಳ್ತೀರಿ? ಮಕ್ಕಳೆದುರ್ಗೆ ಪ್ರಾಣಕೊಂದ್ಹಾಕ್ಬೇಕು ಅಂತ ಹೇಳ್ತೀರಿ? ಬ್ಯಾಡಿ ಸ್ವಾಮಿ ಬ್ಯಾಡೀಸ್ವಾಮೀ ಬೇಡಿಕೊಂಬೂವೇ ನಾನು, ರಾಮಾ ರಾಮಾ".

ಸ್ವಾಮಿ ಮಾಡಿದಮ್ಮನಿಗೆ ಮನಸಾಕ್ಷಿ, ತೋಡಿದಮ್ಮನಿಗೆ ಜಲಸಾಕ್ಷಿ ಎಂದು ಧರ್ಮಶಾಸ್ತ್ರವಿರುವಲ್ಲಿ, ನಮ್ಮ ಮುಂದೆ ಅವರ ಪ್ರಾಣಹತ್ಯ ಮಾಡಾದಾ? ನೀವೇನಾದರೂ ಪ್ರಾಣಹತ್ಯಮಾಡಿದ್ರೆ ಮೊಟ್ಟಮೊದಲೇ ನಿಮ್ಮ ಪಾದದಮ್ಯಾಲೆ ನನ್ ನಾಲ್ಗೆ ಕಿತ್ಕಂಡು ಪ್ರಾಣತ್ಯ ಮಾಡ್ಕಂತೀನಿ. ಕೊಲ್ಲಲಾಗದು. ನಮ್ಮಕ್ಕ ತಂಗಿಯರು ಅವರು. ಈ ಎರಡು ಮಕ್ಕಳ್ನೂ ಈ ಅಕ್ಕ ತಂಗಿಯರಿಗೆ ಕೊಡಿ. ನಾನು ನಿಮ್ಮ ಪಟ್ಟಣದಲ್ಲಿ ಕಸನೀರು ಗೌಡಿಯಾಗಿ, ಪುರಬೀದಿಯಲ್ಲಿ ಕಸಾಗುಡಿಸ್ಕಂಡು ಇರ್ತೀನಿ. ಈ ಎರಡು ಮಕ್ಕಳ್ನೂ ಹಸೀತಲೆ ಕಾಣ್ದೆ ಇರತಕ್ಕಂಥಾ ಅವರ ಕೈಗೆ ಕೊಡಿ. ಅವರೂ ಈ ರಾಜ್ಯಭಾರವನ್ನು ಮಾಡಿಕಂಡು ಸುಖವಾಗಿರಲಿ. ನೀವೆಲ್ಲಾ ಸುಖವಾಗಿರಿ. ನಮ್ಮಕ್ಕೈದಿರನ್ನು ಕೊಲ್ಲಲಾಗದು" ಅಂತ್ಹೇಳ್ತಾಳೆ ಘನ ಮಹಾಪತುವ್ರತೆ.

ಆಗ ಇವರೇಳು ಜನ ಹೆಣತಿಯವರು, ಒಂಬತ್ತು ಜನಾ ಗವಡಿಯವರು "ನಮ್ಮನ್ನು ಕ್ಷಮಿಸಬೇಕಮ್ಮ, ನೀನು ಉಚ್ಚ ಮಹಾಪತಿವ್ರತೆ ಅಂತ ಈಗ ನಾವು ತಿಳಿದೆವಲ್ಲ" ಎಂಬುದಾಗಿ ಬಂದು ಕಾಲುಹಿಡಿದರಲ್ಲ.

"ಅಮ್ಮ, ನೀವು ಮೊಟ್ಟಮೊದಲು ಬಂದಿರತಕ್ಕಂಥಾವ್ರು. ತಾಯಿ ಸಮಾನ. ನನ್ನ ಪಾದಕ್ಕೆ ನೀವು ಬೀಳಬಾರದು" ಅಂತ ಹೇಳಿ ಅವರ ಪಾದಕ್ಕೆ ಈಯಮ್ಮನೇ ನಮಸ್ಕಾರ ಮಾಡಿದ್ಲು. ಅಮ್ಮ ನೀವೆಲ್ಲ ಸುಖವಾಗಿರಿ. ನನಗೆ ಕಷ್ಟಬಂದರೂ, ಅದು ನೀವು ಕೊಟ್ಟ ಕಷ್ಟವಲ್ಲ, ಯಾರೂ ಕೊಟ್ಟ ಕಷ್ಟವಲ್ಲ. ಪರಮಾತ್ಮ ಕೊಟ್ಟ ಕಷ್ಟ. ನನ್ನಹೇಬರಹ. ನಾವೆಲ್ಲ ಅವನ ಅಧೀನ. ಇಗೋ ನನ್ನ ಎರಡು ಮಕ್ಕಳ್ನ ನೀವು ಸಾಕ್ಕಂಡು ಸುಖವಾಗಿರಿ. ನಾನು ಕಸನೀರು ಗೌಡಿಯಾಗಿರ್ತೀನಿ" ಅಂತ ಮನೆ ಮಹಾಲಕ್ಷ್ಮಿಯಾಗಿರತಕ್ಕಂಥಾ ಸಿದ್ಧಮಹಾಲಕ್ಷ್ಮಿ ಹೇಳ್ತಾಳೆ.

ಎಳಕಳೇ ಪಾರುಧಾನೀ ಹಿಡಕೋ ಪರುಧಾನೀ
ಸೂಲಗಿತ್ತೀ ಸುಗ್ಗವ್ವನ್ನ ಎಳಕೋ ಪರಧಾನೀ ಎಳಕೋ ಪರಧಾನೀ.

"ಅಮ್ಮ ಸೂಲಗಿತ್ತಿ ಸುಗ್ಗಮ್ಮ ರಾಜನಪ್ಪಣೆಯಾಗಿದೆ, ನೀನು ಬರಬೇಕಂತೆ"
"ಯಾತಕ್ಕೆ?"
"ಅದು ಯಾತಕ್ಕೋ ನೀನು ಬರಬೇಕಂತೆ ಹೇಳ್ತಾ ಇದಾರೆ".

ಈ ಶಬ್ದವಾಗಲೇ ಅವಳ ಕಿವಿಗೆ ಬಿದ್ದೋಗಿದೆ. ಛಳಿ ಜ್ವರ ಆಕ್ಕಂಡು ಎದ್ದೋತದೇ ಸೂಲಗಿತ್ತಿ ಸುಗ್ಗಮ್ಮನಿಗೇ. ಇನ್ನು ನನ್ನ ಬಿಡದಿಲ್ಲ ರಾಜ ಅಂತ ಏಚನೆಮಾಡಿಕಂಡು ಬಂದ್ಲು.

"ಏನಮ್ಮಾ ಸೂಲಗಿತ್ತಿ ಸುಗ್ಗಿ, ನೀನು ಊರಿಗೇ ತಾಯಿದ್ದಂಗೆ. ಎಲ್ಲರಿಗೂ ತಾಯಿ ಸಮಾನ. ಒಂದು ಬಂಗಾರದ ತಗಡಿನ ಸೀರೆ ಆಸೆಗೋಸ್ಕರವಾಗಿ ಈ ಎರಡು ಮಕ್ಕಳ ಭಾಗ್ಯವನ್ನು ಕಳೆದಿರತಕ್ಕಂಥವ್ಳು ನೀನು. ಏ ಪಾಪೀ. ಪ್ರಧಾನಿ ಈಕೆಯನ್ನು ಎಣ್ಣೆಬಟ್ಟೆ ಮಾಡಿ ಸುಡಬೇಕು."

"ಸ್ವಾಮಿ ನಾನೊಬ್ಬಳೇ ಮಾಡಲಿಲ್ಲ. ನಿಮ್ಮ ಏಳು ಜನ ಹೆಣತಿಯರು, ಒಂಬತ್ತು ಜನ ಗವಡಿಯವರೂ ನಾನೂ ಸೇರಿಕಂಡು ಮಾಡ್ತಿರತಕ್ಕಂಥಾ ಕೆಲಸ.

ನೀವ್ರೂ ಒಬ್ರುಬಿಟ್ಟೊಬ್ಬರ ನೀವ್ರೂ ಕೊಲಬ್ಯಾಡಿ ಸ್ವಾಮೀ
ಕೊಲಬ್ಯಾಡಿ ಸ್ವಾಮೀ.

ಸ್ವಾಮಿ ಕೊಲ್ಲಬೇಕು ಅಂತಂದ್ರೆ ನಿಮ್ಮ ಏಳು ಜನ ಹೆಣ್ತೀರು ಮೊಟ್ಟಮೊದ್ಲು ನನಗೇಳಿದ್ರು. ನಾನು ಮಾಡಿದ್ದು ನಿಶ್ಚಯವೆ. ಒಬ್ರರನ್ಬಿಟ್ಟೊಬ್ರನ್ನ ಕೊಲ್ಬೇಡಿ. ಎಲ್ಲನ್ನೂ ಸೇರಿ ತೀರ್ಮಾನ ಮಾಡ್ಬಿಡಿ.

"ಅಲ್ಲವಮ್ಮಾ ನೀನು ಬುದ್ಧಿವಂತೆ ಅಂತ ಏಳಿದ್ದಕ್ಕೆ ನೀನು ಕ್ಷಮಪ್ಪಣೆ ಮಾಡಿದ್ಯಲ್ಲ" ಅಂತಂದ್ಬಿಟ್ಟು, ಆಯಮ್ಮನ ಮಾತ್ರ ಬಿಡಲೇ ಇಲ್ಲ. ಆ ಸುಗ್ಗಮ್ಮನ ಊರ ಮುಂದೆ ಎಣ್ಣೆಬಟ್ಟೆ ಮಾಡಿ ಸಿಕ್ಸಾಕಿದ್ರು.

ಆಗ ಈ ಮುಕ್ಕಳು ಕೂತುಕಂಡುವಲ್ಲ. ಚದುರಂಗ ಮುಹಾರಾಜರು ಮುದ್ರಿಕೆಯುಂಗುರವನ್ನು ತೆಗೆದು ಮಗನ ಕೈಗೆ ಕೊಟ್ಟರಲ್ಲ ಗುರುದೇವ. ಮಗನಾಗಿರತಕ್ಕಂಥಾವ್ರು ಹೂವಾಡಿಗರಣ್ಣಯ್ಯನನ್ನ ಕರೆಸಿ ಪಟ್ಟಮಂಚದ ಮ್ಯಾಲೆ ಕುಂಡ್ರಸಿ ಸ್ವಾಮಿ–

ನೀನೂ ತಂದಿಗೆ ತಂದ್ಯಾಗಿ ನನಿಗೇ ಬದುಕು ತಂದ್ಯಲ್ಲಪ್ಪಾ,
ಬದುಕು ತಂದ್ಯಲ್ಲಪ್ಪಾ.
ನಮ್ಮಾ ಗುರುವಿಗೆ ಗುರುವಾಗಿ ಬದುಕು ನೀ ಮಲ್ಲಪ್ಪಾ
ಬದುಕು ನೀ ಮಲ್ಲಪ್ಪಾ.

ತಂದಿಗೆ ತಂದೆ, ಗುರುವಿಗೆ ಗುರುವಾಗಿ ನೀನು ನಮ್ಮನ್ನು ಕಾಪಾಡಿದಿ. ನೀನಿಲ್ಲದ ಮ್ಯಾಲೆ ನಾವು ಎಲ್ಲಿ ಉಳೀತಾ ಇದ್ವಿ? ನಮ್ಮ ತಾಯಿ ಎಲ್ಲಿ ಸಿಕ್ಕತಾ ಇದ್ಲು? ನಮ್ಮ ತಂದೆ ನಮಿಗೆ ಎಲ್ಲಿ ಸಿಕ್ಕತಾ ಇದ್ದ? ಈ ಪಟ್ಣ ನಮಿಗೆ ಸೇರ್ತಾ ಇತ್ತ? ಇದು ಎಲ್ಲ ನಿನ್ನ ಅಧೀನ.

ನೀನು ಇರುವ ತನಕ ಈ ಪಟ್ಣ ನಿನ್ನದು, ನಮ್ಮದಲ್ಲ. ನೀನು ಕಾಲವಾದ ಮೇಲೆ ಈ ಪಟ್ಣದ ರಾಜ್ಯಭಾರ ನನ್ನದು. ನೀನಿರೋತನಕ ನನ್ನದಲ್ಲ ಅಂತ್ಹೇಳಿಬಿಟ್ಟು ಆಕಡೆ ಹೂವಾಡಿಗರಣ್ಣಯ್ಯ, ಈ ಕಡೆ ಚದುರಂಗ ಮಹಾರಾಜರು, ಈ ಕಡೆ ಎರಡು ಮಕ್ಕಳು, ಆ ಕಡೆ ಸಿದ್ಧಮಹಾಲಕ್ಷ್ಮಿ, ಆ ಕಡೆ ಚಂದ್ರಕ್ಕಾಂತೆ, ಮಲ್ಲಿಕ್ಕಾಂತೆ ಇವರೆಲ್ಲ ಒಂದೇ ಪಟ್ಟೆಮಂಚದ ಮ್ಯಾಲೆ ಕೂತಕಂಡು ಪಟ್ಟಾಭಿಷೇಕವನ್ನು ಮಾಡಿ–

ನೀವು ತೂಗೀರಿ ರಂಗಾನ ತೂಗೀರಿ ಬಾಲಾನ
ತೂಗಿರಿ ಆನಂದ ಅಚ್ಯುತನ.
ಮಾಗಡಿ ರಂಗಾನ ತೂಗಿರಿ ನೀವು
ಬಾಲ ಸಂಜೀವನ ತೂಗಿರಿ ನೀವು
ಬೈಲುಮಂದ್ರಾಯನ ತೂಗಿರಿ–ನೀವು
ಮಾಗಡಿ ರಂಗಾನ ತೂಗೀರಿ
ನೀವು ತೂಗೀರಿ ರಂಗಾನ ತೂಗೀರಿ ಬಾಲಾನ
ತೂಗೀರಿ ಆನಂದ ಅಚ್ಯುತನ.

ಮಂಗಳ ಶುಭ ಮಂಗಳ
ಮಂಗಳ ಜಯ ಮಂಗಳ.

ದೀಪ ಧೂಪಗಳೆಲ್ಲ ಈಬತ್ತಿ ಪರಿವಾರ
ಹಾಕಿ ನನ್ನಮ್ಮನ ಗುಡಿವಳಗೇ
ಹಾಕಿ ನನ್ನಮ್ಮಾನ ಗರ್ಭದ ಗುಡಿವಳಗೆ
ಧೂಪರಹೊಗಿ ಬಾಳೊ ನಿಲುಬಾಗ್ಲಿಗೇ.
ಮಂಗಳ ಜಯ ಮಂಗಳ; ಮಂಗಳ ಶುಭ ಮಂಗಳ.

ಕಿರುಜಾಜಿ ಮೊರದಲ್ಲಿ ಎದುರಿನವಳಾರತಿಯಾ
ಸತ್ಯವಿದ್ದರೆ ನಮ್ಮ ಮಾತಾಯಿಗೇ
ಸತ್ಯವಿದ್ದರೆ ನಮ್ಮ ಮಾತಾಯ ಮಲಿಗವ್ವಾಗೆ
ಸತ್ಯದಿಂದಾರತಿ ತಂದ್ಹಚ್ಚಿರೋ.

ಮಂಗಳ ಜಯ ಮಂಗಳ ಮಂಗಳ ಶುಭ ಮಂಗಳ
ಕಿರುಜಾಜಿ ಮುಗುಳಲ್ಲಿ ಎದುರಿನವಳಾರತಿಯಾ.

ಸತ್ಯವಿದ್ದರೆ ನಮ್ಮ ಮಲಿಗವ್ವಾಗೇ
ಸತ್ಯವಿದ್ದರೆ ನಮ್ಮ ಮಾತಾಯ ಮಲಿಗವ್ವಾಗೆ
ಸತ್ಯದಿಂದಾರತಿ ತಂದ್ಹಚ್ಚಿರೋ
ಮಂಗಳ ಜಯ ಮಂಗಳ ಮಂಗಳ ಶುಭ ಮಂಗಳ.

ಆರತಿ ದೀಪ ಮಂಗಳ ಹಚ್ಚಿರೋ
ಜಯಾ ಜಯ ಮಂಗಳ

ಸುಭಾ ಸುಭ ಮಂಗಳ
ಆರತಿ ದೀಪು ಮಂಗಳ ಹಚ್ಚಿರೋ.

ಯಾತದ ಯಲವಂಕ ಕ್ವಾಟೆ ಭುಪಾಲ
ಕ್ವಾಟೇ ಭುಪಾಲನು ಕ್ವಾಟೆಯಾಗಾಳುಬೇಕೆಂದು
ಬೆಳಗಿದರಾರತಿಯಾ ಮುತ್ತೈದೇರಲ್ಲ
ಬೆಳಗಿದರಾರತಿಯಾ.

ಜಯಾ ಜಯ ಮಂಗಳ ಸುಭಾ ಸುಭ ಮಂಗಳ
ಜಯಾ ಜಯ ಮಂಗಳ
ಆರತಿ ದೀಪು ಮಂಗಳೆನ್ನಿರೋ.

◆◆◆◆

ಹಾಡಿದವರು : **ಚೌಡಿಕೆ ಸುಬ್ಬಯ್ಯ**, ನೆಲಮಂಗಲ.

# ೧೬. ಸ್ಯಾನಯ್ಯ

ಒಂದು ಪಟ್ಟದಲ್ಲಿ ಸ್ಯಾನಯ್ಯ ಅಂತ ಇದ್ದ. ಅವನಿಗೆ ನಾರಂದನ ಮಗಳನ್ನು ಕೊಟ್ಟು ಲಗ್ನಾಗಿತ್ತು. ಆದರೆ ಈ ಸ್ಯಾನಯ್ಯ ಹೇಣ್ತಿಬಿಟ್ಟು ಸೂಳೆಮನಿಗೆ ಹೋಗಿಬಿಟ್ಟ. ಇತ್ಲಾಗೆ ಸ್ಯಾನಯ್ಯನ ಹೇಣ್ತಿಗೆ ಕನಸುಬೀಳುತ್ತೆ –

ತಂದಾನಿ ತಾನು ॥ ಪಲ್ಲವಿ ॥

ಕನಸ ಕಂಡೇನತ್ತೆ ಕಂಗೆಟ್ಟೆ ಎದ್ದೇನೆ *
ದರುಶುಣದಾಗೆ ಏ ಬರುವ್ರೋದಾ
ದರುಶುಣದಾಗೆ ಬರುವಂಥ ಸಪುನಾವ
ನೆನ್ನೆ ಕಂಡೇ ನಮ್ಮತ್ತೆ ಏ ಇರುವ್ರೋಳಲ್ಲ.

ಹೆಣ್ಣೇನಂಬೊಳು ನೀನು ಸಣ್ಣ ಮುಸುಕು ಹೊರುಲೇನು
ಸಾರುಗಚರಿ ನನ್ನ ಏ ಮಗ ಶಾನ
ಸಾರುಗಚರಿ ನನ್ನ ಏ ಮಗ ಶಾನ ನನ ಸೊಸಿಯೇ
ನೀ ಕಂಡ ಕನಸು ಏ ಭಯವಿಲ್ಲ.

ಹಿತ್ತಲಾಗಿರವ್ರೊ ದುಂಡು ಮುತ್ತ ಕೇರ್‍ಯಾಡೋಳೆ
ಕಪ್ಪೀನ ಕಿವಿಯ ಏ ದರುಣವ್ವ
ಕಪ್ಪೀನ ಕಿವಿಯ ಏ ದರುಣವ್ವ ನನ ತಂಗಿ
ನಿಸ್ತ್ರೀ ಇರುವ್ರೋದು ಏ ನೆಲಿಹೇಳೆ.

ಅತ್ತಿಗೆ ನಾದುನಿ ಲೆತ್ತ ಪಗಡಾಡುವಾಗ
ತೆಪ್ಪಿ ಹಾಕ್ಯಾಳು ಏ ಪಗಡೇಯ
ತೆಪ್ಪೀನೆ ಹಾಕ್ಯಾಳು ಪಗಡೆಯ ಅಣ್ಣಯ್ಯ
ಅತ್ತಿಗ್ಯು ನನಿಗು ಏ ಮನ ಮುನಿಸು.

ಅತ್ತಿಗ್ಯು ಏ ನನಿಗು ಮನ ಮುನಿಸು ಅಣ್ಣಯ್ಯ
ಅತ್ತಿಗೆ ಇರುವ್ರೋದು ಏ ನೆಲೆಯಿಲ್ಲ.

ಸ್ಯಾನಯ್ಯ ಸೂಳೆಮನಿಗೆ ಹೋದಮೇಲೆ ನಾರಂದ 'ನನ ಮಗಳಿಗೆ ಗಂಡ್ರ ಐಶ್ವರ್ಯ ಇಲ್ದಾತಲ್ಲ? ಗಂಡನ ಆಸೆ ಇಲ್ದಾತಲ್ಲ. ನನ್ನ ಮಗಳನ್ನು ಯಾತರದಲ್ಲಿ ಇಡಬೇಕು?' ಅಂತ ಯೋಚನೆಮಾಡಿ ಒಂದು ಅರಮನೆ ಕಟ್ಟುಸ್ತಾನೆ. ಅಲ್ಲಿ ಆಕಿಗೆ ಓಕಳಿ ತಗದು ಹೊಯ್ದದ್ದು ಒಂದು ಕೊಣ ತುಂಬಿತ್ತು. ಆಕೆ ಎಲೆ ಅಡಿಕೆ ಹಾಕಿ ಉಗುಳಿದ್ದು ಒಂದು ರಾಶಿಯಾಗಿತ್ತು. ಆಕೆ ಇದ್ರಿಗೆ ಚಿತ್ರಪಟ ಎಲ್ದು. ಅದುನ್ನೋಡಿ ಬೇಜಾರಾದ್ರೆ ಇದುನ್ನೋಡಿ ಬೇಜಾರ ಕಳಕೋ. ಇದುನ್ನೋಡಿ ಬೇಜಾರಾದ್ರೆ, ಅದುನ್ನೋಡಿ ಬೇಜಾರ ಕಳಕೊ ಅಂತ. ಅದರಮ್ಯಾಲೆ ಮಾತಿನೋವ್ ಎರಡು ಅರಗಿಣಿ ಮಾಡಿಕೊಡ್ತಾನೆ. ಗಿಣಿಕೂಡ ಮಾತಾಡ್ಕಂತಿರು ಅಂತ. ಅಷ್ಟು ಸೌಕರ್ಯದಿಂದ ಮಗಳಿಟ್ಟು, ಈಕೆ ಗಂಡ ಎಲ್ಲಿದಾನೆ ಹುಡಿಕ್ಕೆಂಡು ಬರುನಾಂತ

* ಎರಡು ಸಾಲಿಗೊಮ್ಮೆ ಪಲ್ಲವಿಯನ್ನು ಹಾಡುವರು.

ಸೂಳೆಮನಿಗೆ ಹೋಗ್ತಾನೆ. ಯಾರು? ಸ್ಯಾನಯ್ಯನ ಮಾವ ನಾರಂದ.

ಮಾವ ಹೋದ. ಸೂಳೆ ಮನೆಯಾಗಿದ್ದ ಅಳಿಯ ಸ್ಯಾನಯ್ಯನ್ನ ಕರಿತಾನೆ.

ಹೇಡಿಯೇ ಹೊರಹೊಲ್ಡು ರಂಬೇಡಿಯೆ ಹೊರಹೊಲ್ಡು
ಜೋಡು ತೊಟ್ಟೋನೆ ಏ ಹೊರಹೊಲ್ಡು
ಜೋಡುನೆ ತೊಟ್ಟೋನೆ ಹೊರಹೊಲ್ಡು ಸೂಳೇರ
ಬೇಡಿಕೊಂಬೇನೆ ಏ ಹೊರಹೊಲ್ಡು.

ಸ್ಯಾನಯ್ಯ ಸೂಳೆ ತೊಡೆಮ್ಯಾಲೆ ತಲೆ ಹಕ್ಕಂದು ಮಲಗಿದ್ದ. ಆವಾಗ ಮಾವ ನಾರಂದ 'ಹೇಡಿಯೇ ಹೊರಹೊಲ್ಡು. ರಂಬೇಡಿ ಹೊರಹೊಲ್ಡು. ಜೋಡ ತೊಟ್ಟೋನೆ ಹೊರ ಹೊಲ್ಡು' ಅಂತ ಹೀನಕುಲ ಮಾತಾಡಿದ. ಅದಕೆ ಸ್ಯಾನಯ್ಯ ಏನಂದ? "ನೋಡೆ ನಮ್ಮ ಮಾವ ಬಂದುದಾನೆ. ನಾಳೆ ಇಷ್ಟೋತ್ತಿನಾಗ ನಮ್ಮ ಮಾವಗು ನಮಿಗು ಬಾಳ ಸವಲಗ್ಯ ಆಕತೆ. ನೀನು ಬರೋಳೋ ಬರೋಳಲ್ವೊ?" ಅಂತ ಸೂಳೆ ಕೇಳಿದ. ಕೇಳತ್ಲು ಆಕೆ ಏನಂತಾಳೆ –

ಅಚ್ಚಿಗೂ ಬರುವ್ರೊಳು ಸೂಳೆ ಮೆಚ್ಚಿಗೂ ಬರುವ್ರೊಳು ಸೂಳೆ
ನಿನ್ನ ಕಿಚ್ಚಂದ್ರೆ ಸೂಳೆ ಏ ಬರುವ್ರೋಳೇನೊ?
ಆಗುಕೆ ಬರುವ್ರೊಳು ಸೂಳೆ ನಿನ್ನ ಭೋಗುಕೆ ಬರುವ್ರೊಳು ಸೂಳೆ
ನಿನ್ನ ಸಾವಂದ್ರೆ ಸೂಳೆ ಏ ಬರುವಳೇನೋ?
ನಿನ್ನ ಸಾವಂದ್ರೆ ಸೂಳೆ ಏ ಬರುವಳೇನೋ ಸ್ಯಾನಯ್ಯ
ಕೇಳೊ ಬಲ್ಲಂಥ ಏ ಹಿರಿಯೋರ.

'ಅಚ್ಚಿಗೆ ಬರುವ್ರೊಳು ಸೂಳೆ, ಮೆಚ್ಚಿ ಬರುವ್ರೊಳು ಸೂಳೆ, ನಿನ್ನ ಸಾವಂದ್ರೆ ಸೂಳೆ ಬರ್ತ್ತಾಳ? ನೀನು ಮದುವ್ಯಾದ ಹೆಂಡ್ರಾದ್ರೆ ಬರ್ತ್ತಾಳೆ? ಅಂದ್ಲು. ಆವಾಗ ಅವ್ನು –

ಹೋಗೋನೋಗಾತೇನಿ ಸಾಯೋನು ಸಾಯತೇನಿ
ನನ್ನ ಮಂಡಿಗೆ ಎಣ್ಣೆ ಏ ಎರೆಯಬಾರೆ
ಚೆನ್ನುದ ಗಿಳುಲಾಗೆ ಪನ್ನೀರನೆ ಬಿಟುಕೊಂಡು
ಹಿಂದುಲು ಕೆಂಜಡಿಯ ಏ ಉಗುಬಾಳೊ.

ಆವಾಗ ಹಿಂದುಲು ಕೆಂಜಡೆ ಆಕೆ ಉಗುಚಿ ಆಕೆ ಪನ್ನೀರೆಣ್ಣೆ ಹಾಕಿ ತಲೆ ಬಾಚಬೇಕಾದ್ರೆ ಇವ್ನೇನಂತ ಕೇಳ್ತಾನೆ– "ಏನೆ ನನ್ನಂಥ ಕಾಲ್ಗೋರು ನನ್ನಂಥ ಕೈನೋರು ನನ್ನಂಥ ಪರಾಕ್ರಮಶಾಲಿಗಳು ನಿಮ್ಮೂರಾಗಿದ್ದಾರೇನೆ? ಇಪಟಿಗೆ ನಾನು ಹೋಕೇನಿ. ನೀನು ಯಾರ್ನಾರ ಮಾಡ್ಕೆಂತಿಯೋ ಹಂಗೆ ಇರ್ತಿಯೊ?" ಅಂದುಬಿಟ್ಟ. ಹಂಗಂತಲೂ ಆಕೆ ಮಾರಾಯ ನಿನ್ನ ಮುಂತಾಗಿ ಯಾರು ಬ್ಯಾಡ ನನಿಗೆ. ಸಾಕು ನಿನ್ನ ಸೌಕರ್ಯ ಆತಲ್ಲ. ಇಪಟಿಗೆ ನನ್ ಹಾರ್ತಕೆ ನಾನು ಇರ್ತೆನಿ, ನಿನ್ನಾರ್ತಕೆ ನೀನಿರು. ಇಪಟಿಗೆ ಯಾರೂ ಬ್ಯಾಡ. ಅಂದುಂದ್ರೆ ಆಕಿಗೆ ಏನೂ ಮಾಡುತ್ತಿದ್ದಿಲ್ಲ ಅವನು. ಆವಾಗ ಆಕೆ ತಲೆ ಬಾಚ್ತುದ್ಲಲ್ಲ ಏನಂದ್ಲು–

ನನ್ನಂಥ ಕಾಲೋರು ನನ್ನಂಥ ಕೈಯೋರು
ನನ್ನಂಥ ಶೂಲ ಏ ಗೆಲವ್ರೋರು.
ನನ್ನಂಥಾನೇ ಶೂಲ ಗೆಲವ್ರೋರು ಎಲ್ಲಾದರು
ನಿಮ್ಮ ಪಟ್ಟುಣದಾಗೆ ಏ ಐದಾರೇನೆ?

ನಿನ್ನಂಥ ಕಾಲೋರು ನಿನ್ನಂಥ ಕೈಯೋರು
ನಿನ್ನಂಥ ಶೂಲ ಏ ಗೆಲವ್ರೋರು.
ನಿನ್ನಾಂಥಾನೇ ಶೂಲ ಗೆಲವ್ರೋರು ಸ್ಯಾನಯ್ಯ
ನಿಮ್ಮ ಪಟ್ಟಣುದಾಗೆ ಏ ಘನಬಾಳ.

ಹಂಗಂದ ಮಾತಿಗೆ ಕಂದುರುಬಾಕಾನಿರದು
ಎದ್ದು ಗುದ್ಯಾನೆ ಏ ನಡುಬೆನ್ನ.
ಎದ್ದು ಗುದ್ಯಾನೆ ನಡುಬೆನ್ನು ಸ್ಯಾನಯ್ಯ
ಅವಳ ಮೂಗು ಮುಂದೆಲಿಯ ಏ ಕೊಯದಾನೆ.

ಮುಚ್ಚಳನೇದಾಗೆ ನೀರನೆ ಹೊಯ್ಕಂಡು
ನೋಡಿಕೋಳೆ ನಿನ್ನ ಏ ಸಯರೂಪ.

ಅವ್ನು ಕಂದರು ಬಾಕಾಕಿದ್ರೆ ಉಳದಾಳ? ಸಾಯೋ ಹಂಗಾದ್ಲು. "ನಾನು ಸಾಯೋಳು ಸಾಯ್ತೇನೆ. ಆ ನಮ್ಮವ್ವನ್ನ ಕರೆಸು. ನನ್ನ ಒಂದ್ ಸ್ವಲ್ಪ ಮಣ್ಣಿಗೆ ದಫನ್‌ಮಾಡಿ ಹೋಗು" – ಅಂತಂದ್ಲು ಆ ಮಿಂಡಗಾರ್ತಿ. ಆವಾಗ ಅವ್ನು ಸೂಳೆ ಅವ್ವನ್ನ ಕರೆಕಳುಸ್ತಾನೆ.

ಹಕ್ಕೀಯ ಕೊಳ್ಳೀಗೆ ಗಕ್ಕಾನೆ ಚೀಟಿ ಬರೆದು
ಗಕ್ಕಾನು ನಂದೆವ್ನ ಏ ಬರಿಹೇಳು
ಗಕ್ಕಾನೆ ನಂದೆವ್ನ ಬರಿಹೇಳಾಕೆ ಮಗಳು
ಹೊಟ್ಟೆಬ್ಯಾನೆಂದು ಏ ಹೊರುಳ್ಯಾಳೊ.

ಕಾಗೆಯ ಕೊಳ್ಳೀಗೆ ಬೇಗಾನ ಚೀಟಿ ಬರೆದು
ಬೇಗಾನೆ ನಂದವ್ನ ಏ ಬರಿಹೇಳು
ಬೇಗಾನ ನಂದೆವ್ನ ಬರಿಹೇಳಾಕೆ ಮಗಳು
ಕಾಲಾಬ್ಯಾನೆಂದು ಏ ಮನಿಗ್ಯಾಳು.

"ನಿನ್ನ ಮಗಳು ಸತ್ತಿದಾಳೇಂತ ಸುದ್ದಿ ಕಳಿಸು ನಮ್ಮವ್ವೆಗ್" ಅಂತಾಳೆ ಸೂಳೆ ಸಾಯೋ ಹಾಗಿದ್ದಾಗಲೆ. ಆವಾಗ ಸುದ್ದಿ ಕೊಟ್ಟ. ಆಕೆ ಅವ್ವ ಅತ್ಲಿಂದಲೆ ಸಿಟ್ಟುತ್ತಿ ಬೈಕೆಂತಲೆ ಬರ್ತಾಳೆ ಅವ್ನಿಗೆ –

ಕಾಡ ಕಾರೆಸೊಪ್ಪ ಹುಡಿಕೆಂದುಲು ತಿಂಬೊ
ಕಾಡಬ್ಯಾಡ ಮಗನೆ ಏ ಕರಿಯ ಸ್ಯಾನ
ಕಾಡ ಬ್ಯಾಡ ಮಗನೆ ಏ ಕರಿಯ ಸ್ಯಾನ ನನ ಮಗಳೀಗೆ
ಮೂಲವಾಗಿದ್ಯ ಏ ವಗುತಾನಕೆ.

ನಾಯಿಯಂಥ ಮುಂಡೆ ಬಾಯಾಗೊಂದಲ್ಲಿಲ್ಲ
ಬೀದಿನಾಯ್ ನೀನ್ಯಾರೀಗೆ ಏ ಬೊಗಳಿದ್ದೆ?

"ನೀನು ಎಲ್ಲಿಂದ ಸೆರೆಯಾಗಿದ್ದೆ ನನ ಮಗಳಿಗೆ? ನನ್ನ ಮಗಳ ವಗತನಕ್ಕೆ ನೀರಿಡ್ದೆ, ಮೂಲವಾದೆ" ಅಂತ ಬೈದ್ಲು ಆ ಸೂಳೆ ಅವ್ವ. 'ನಾಯಿಯಂಥ ಮುಂಡೆ ನೀನ್ಯಾಕೆ ಬೋಗಳಿಯಾಂತ' ಆಕಿಗು ಅವ್ವಿಗು ಜಗಳಬಿತ್ತು. ಆ ಸೂಳೆ ಆಕಿಗಿನ್ನು ಜೀವಹೋಗಿಲ್ಲ. ಆಕೆ ಹೇಳ್ತಾಳೆ –

ಹೋಗೋರೋಗಾತೀರಿ ಸಾಯೋಳು ಸಾಯತೇನಿ
ನನ ಕೊಂಡಕೆ ಬೇಗವ ಅನುಮಾಡೊ.
ಹಕ್ಕಿ ಸುಳಿಯದ ಬೈಯ ಪಕ್ಷಿ ಸುಳಿಯದು ಬೈಯ
ನಿನ್ನ ನಾರೀಗೆ ಕೊಂಡ ಏ ಅನುಮಾಡೊ.

ಹೊಂಡಾವ ತಗುಸ್ಯಾನೆ ಕೆಂಡವ ಮಾಡುಸ್ಯಾನೆ
ಸೂಳೆಯ ಹೆಣುವ ಏ ದಫಮಾಡೆ
ಸೂಳಿಯನೇ ಹೆಣುವ ಏ ದಫಮಾಡೆ ಸ್ಯಾನಯ್ಯ
ತಾ ಗಾಜೀನ ಬಾವ್ಯಾಗೆ ಏ ಮುಖದೊಳುದ.
ಗಾಜೀನ ಬ್ಯಾವ್ಯಾಗೆ ಏ ಮುಖದೊಳುದ ಸ್ಯಾನಯ್ಯ
ತನ್ನೇಣತೂರೀಗೆ ಏ ಮುಖವಾದ.

ಸೂಳೆಯಲ್ಲಿ ತಂಟೆ ತಗದು, ಆಕೆನ್ನೆಲ್ಲ ಒಪ್ಪಾಗಿ ಹೊಂದಿಸಿ ಹೆಣ ದಫನ್ ಮಾಡಿ, ಹೇಂಡ್ತಿ ಊರಿಗೆ ಮಖಾಗಿ, ಗಾಜಿನ ಬಾವ್ಯಾಗೆ ಮುಖತೊಳಕ್ಕಂದು ಬಂದ ಹೇಂಡ್ತಿ ಮನೆಗೆ.

ಬಂದೋನು ಪಟ್ಟಣದ ಹೊರಗಿನ ದೇವಸ್ಥಾನದಲ್ಲೇ ಇದ್ದು ಅವ್ವಿವ್ಗೆ 'ನಿನ್ನ ಮಗ ಬಾಳ ಮುಂಡ ಪಾಳ್ಳೇಗಾರ ಬಂದಾನೆ. ಆರತಿ ಅಕ್ಕುಸ್ತಿ ತಗಂದು ಹೋಗಬೇಕಂತೆ ಇದ್ರುಗೊಳ್ಳಾಕೆ' ಅಂತ ಪರ್ದಾನಿಕೂಟೆ ಹೇಳಿಕಳಿಸಿದ. ಆಕೆ ನನ್ನ ಮಗ ಬಂದ ಅಂತ ಸಂತೊಸ್ದಿಂದ ಹಟ್ಯಾಳ ಹೆಣ್ಮಕ್ಳನ್ನೆಲ್ಲ ಕರ್ಕಂದು, ಆರತಿ ಅಕ್ಕುಸ್ತಿ ಮಾಡ್ಕೆಂದು, ಕಳಸ ಕಟ್ಗೆಂದು, ಸೊಸೆ ಇದ್ಲಲ್ಲ ಸ್ಯಾನಯ್ಯನ ಹೇಂಡ್ತಿ ಆಕೆನು ಕರಕಂದು ಬಂದ್ಲು ಅವನ್ನ ಇದ್ರಗೊಳ್ಳಾಕೆ.

ಎಲ್ಲರು ಬಂದ್ರು ಅವನಿದ್ದತಾಕೆ. ಇದರಾಗೆ ಅವನ ಹೇಂಡ್ತಿನು ಇದ್ಲು. ಆದ್ರೆ ಇವನಿಗೆ ಹೇಂಡ್ತಿ ಅನ್ನೋದು ಗೊತ್ತಿಲ್ಲ. ಬಿಟ್ಹೋಗಿ ಬಾಳ ವರ್ಷಾಗಿತ್ತು. ಆಮ್ಯಾಗೆ ಏನಾತೂಂದ್ರೆ ಆಕೆ ಆಚೇಲಿ ಹೆಣ್ಮಕ್ಳಿದ್ರು. ನಡತಾವ ಸೊಸೆಯಿದ್ಲು ಕಳಸ ಹಿಡ್ಕಂಡು. ಆಕೆಮ್ಯಾಲೆ ದೃಷ್ಟಿಬಿತ್ತು ಇವುನ್ಗೆ. ಯಾರ ಮ್ಯಾಲೆ? ಹೇಂಡ್ತಿ ಮ್ಯಾಲೆನೆ.

ಆಚೇಳಾರತಿಗಿಂತ ಈಚೇಳಾರತಿಗಿಂತ
ನಡುವ್ರೊಳಾರತಿ ಏ ರಜ ಬಾಳ
ನಡುವೀನೋಳಾರತಿ ರಜಬಾಳ ನಮ್ಮವ್ವ
ಆ ಹೆಣ್ಣು ನನಿಗೆ ಏ ಕೊಡುವರೇನೆ?

ಕೆಳಗಾಲ ಕೇರ್‍ಯಾಗೆ ಹಲಗಪ್ಪ ಗೌಡರು ಮಗಳು
ಕೊಟ್ಟೈತ್ತೆ ಆಲೂರ ಏ ಒಳಲೀಗೆ
ಕೊಟ್ಟೈತೆ ಆಲೂರ ಒಳಲೀಗೆ ನನ ಮಗನೆ
ದೊಡ್ಡೋರ ಗೊಡವೆ ಏ ನಮಗ್ಯಾಕೊ?

ಆವಾಗ 'ಈಕೆ ನಿನ್ನೆಂಡ್ತಿ ನನ್ನ ಸೊಸೆ' ಅಂತ ಹೇಳ್ಳೇಯಿಲ್ಲ. ವಟ್ಟಕೊಡ್ಲೇಯಿಲ್ಲ ಅವ್ವ ಅವ್ನಿಗೆ. ದೊಡ್ಡೋರ ಗೊಡವೆ ನಮಿಗ್ಯಾಕಪ್ಪ? ಆಕೆನ್ನ ಆಲೂರು ಒಳಲಿಗೆ, ಅಂತಂದ್ರೆ ಆಲೂರಿನ ಒಂದು ಮನಿಗೆ ಕೊಟ್ಟಿದೆ ಅಂತಂದ್ಲು. ಆಮ್ಯಾಲೆ ಸೊಸೆ ಅವರಪ್ಪ ಅಷ್ಟು ಸೌಕರ್ಯದೀಲಿ ಇಟ್ಟುದ್ನಲ್ಲ? ಅಲ್ಲಿಗೋದ್ಲು. ಇಲ್ಲಿ ಸ್ಯಾನಯ್ಯನ ಅವ್ವ ಮಗನ್ನ ಕರಕಂದು ಮನಿಗೋದ್ಲು. ಹೆಂಡ್ತಿ ತೋರಸ್ಬೇಕಾತಲ್ಲ? ಆಕೆ ಇಂತತಾವ ಅದಾಳೆ ಅನ್ನೋದೆ ವಟ್ಟಕೊಡ್ಲಿಲ್ಲ.

ಆಕೆ ಇಲ್ಲಿ ಅವರಪ್ಪ ಕಟ್ಟಿಸಿದ ಮನೆಯಲ್ಲಿದಾಳೆ. ಆಕೆ ಎಲೆ ಅಡಿಕೆ ಮೆದ್ದು ಉಗುಳಿದ್ದೊಂದು ರಾಶಿಯಾಗಿರೋದಂತೆ. ಆಕಿಗೆ ಓಕುಳಿ ತೆಗೆದು ಹೊಯ್ದದ್ ಒಂದು ಕೊಣ ತುಂಬಿರದಂತೆ. ಬಾಳ ರೂಪಸ್ತೆ. ಮಾತಿಗೆ ಮಾತಿನ ಅರಗಿಣೆ ಮಾಡಿಸಿಕೊಟ್ಟಿದ್ದ. ಚಿತ್ರಪಟ ಬರೆಸಿ ನೋಡಿ ನೋಡಿ ಬ್ಯಾಸರ ಕಳಕಳವ್ವಾಂತ ಇದರಿಗಿಡಿಸಿದ್ದ ಅವರಪ್ಪ.

ಸ್ಯಾನಯ್ಯಗೊಬ್ಳು ತಂಗಿಯಿದ್ಲು. ಆಕೆ ಏನಂತ ಹೇಳ್ತಾಳೆ? "ಅಣ್ಣ ನಾವು ಅತ್ತಿಗೆ ನಾದ್ನಿ ಲೆತ್ತ ಪಗಡೆ ಆಡ್ತಿದ್ವಿ. ನಮಗೆ ತೆಪ್ಪ ಹಾಕಿ ಬಿಟ್ಲು ಪಗಡೆಯ. ಅತ್ತಿಗ್ಗೆ ನನಿಗೆ ಮನ ಮುನಿಸಾಗೇತೆ ಅಣ್ಣಯ್ಯ. ಅತ್ತಿಗೆ ಇರೋದು ನೆಲಿಯಿಲ್ಲ" ಅಂತ ಹೇಳಿದ್ಲು. ಇಕಿನು ಏನು ಎತ್ತ ಅಂತ ವಟ್ಟ ಕೊಡ್ಲಿಲ್ಲ. ಆಮ್ಯಾಲೆ ಹೇಂಡ್ತಿಗೆ ಶಾಪಕೊಡ್ತಾನೆ : "ನನ್ನೆಂಡ್ತಿ ಎಲ್ಲಿದಾಳೆ? ಆಕೆ ಅಂಗಳ ಬೇಯ್ಬೇಕು. ಆಕೆ ಮನೆಯೆಲ್ಲ ಬೆಂದಂಗಾಗಬೇಕು. ನನಗಂಡ ಬಂದಾನೆ ಅನ್ನೋದು ಆಕಿಗೆ ಶಬ್ದ ಬೀಳಬೇಕು. ಆಕೆಯಾಗೇ ಹೊರಿಕೆ ಬರಬೇಕು" ಅಂತ ಶಾಪ ಕೊಟ್ಟ. ಅಮ್ಯಾಲೆ ಗೊತ್ತಾತು. ಆಕೆ ಮನೆತಾವ ಹೋಕ್ತಾನೆ ಪರ್ದಾನಿ ಕರಕಂಡು.

ನಾನೆಯ ಹೋಗುವಾಗ ನಿಂಬೆಲ್ಲ ಕಿರುಗಿಡ
ನಿಂಬೆಲ್ಲಾ ಕತೆ ಏ ಫಲವಾಗಿ
ನಿಂಬೆಲ್ಲಾನಾಕತೆ ಫಲವಾಗಿ ಪರುದಾನಿ
ನನ್ನ ರೆಂಬೆ ಇನ್ನೆಂಗೆ ಏ ಇರುವಳಯ್ಯ?

ನಾನೂವ ಹೋಗುವಾಗ ಬಾಳೆಲ್ಲ ಕಿರುಗಿಡ
ಬಾಳೆಲ್ಲಾಕತೆ ಏ ಫಲವಾಗಿ

ಬಾಳೆಲ್ಲಾನಾಕತೆ ಫಲವಾಗಿ ಪರುದಾನಿ
ನನ್ನ ಬಾಲೆ ಇನ್ನೆಂಗೆ ಏ ಇರುವಳಯ್ಯ?

ಸ್ಯಾನಯ್ಯ ಪರ್ದಾನಿ ಜೊತೆ ಬಿಟ್ಟಿರೋದಿಲ್ಲ. ಎಲ್ಲ ಕೇಳ್ಕಂತ ಹೋದ್ನಲ್ಲ? ಪರ್ದಾನಿ ಏನಂತ ಹೇಳ್ದ? "ನೀನು ಹಿಂದೆ ಬಾಳೆ ತೆಂಗು ಎಲ್ಲ ಹಾಕಿಹೋಗಿದ್ದೆ. ಈಗ ಅವೆಲ್ಲ ಫಲಕ್ಕೆ ಬಂದಿದಾವೆ. ನಿನ್ನೆಂಡ್ತಿ ನೆರದು ಪರಸಂಭ್ರಂತೆಯಾಗಿದ್ದಾಳೆ" ಅಂತ ಹೇಳ್ದ. ಆವಾಗ ಇವ್ನು ಶಾಪಕೊಟ್ಟಿದ್ದು ಕೇಳುಸ್ತತೆ. ಅಷ್ಟಕ್ಕೆ ಆಕಿ ಮನೆ ಬಾಗಲಿಗೆ ಬಂದಿರ್ತಾರೆ ಇವ್ರುರು. ಆವಾಗ –

ಮಾವರು ಮಗುನೆ ಬಂದು ಬಾಗಲಾಗ್ಯೆದಾರೆ
ಬಾಗಲ ಬೆಂದೆ ಏ ಮನಿಬೆಂದೆ
ಬಾಗಲಾನೆ ಬೆಂದೆ ಮನಿಬೆಂದೆ ಒಳಗಿರುವ
ನನ್ನ ನಾರೀಗೆ ಸಿಡಲು ಏ ಎರಗಲಯ್ಯ.

ಅತ್ತೆಯ ಮಗುನೆ ಬಂದು ಅಂಗುಳದಾಗ್ಯೆದರೆ
ಅಂಗಾಳ ಬೆಂದೆ ಏ ಮನಿ ಬೆಂದೆ
ಅಂಗಾಳ ಬೆಂದೆ ಮನಿಬೆಂದೆ ಒಳಗಿರುವ
ನನ್ನ ರೆಂಬೀಗೆ ಸಿಡಲು ಏ ಎರಗಲಯ್ಯ.

ಆವಾಗ ಇಕಿಗೆ ಗಂಡ ಬಂದಾನೆ ಅನ್ನೋದು ಗುರ್ತಾತು. ಇವನು ಹೋದ ಒಳೀಕೆ ಬಾಗಲ ಬಡ್ಡಿಗೆ. ಬಾಗಲ ಕಾಯಾಕೆ ಹನ್ನೆಲ್ಡ್ ಮಂದಿ ಗೌಡೇರ್ನ ಇಟ್ಟುದ್ದ. ಅವರು ಇವ್ರುರ್ನ ಮುಂದುಕು ಬಿಡವಲ್ರು ಹಿಂದುಕು ಬಿಡುವಲ್ರು. ಒಳೀಕ್ ಹೋಗಾಕೆ ಬಿಡುಲೇವಲ್ರು. ಆವಾಗ ಗೌಡೇರು –

ಹನ್ನೆಲ್ಡೇನೆ ವರುಷ ಕನ್ಯೆ ಬಾಗುಲಕಾದೆ
ಇನ್ನೆ ಕೊಡುರಾಯ ಏ ನಮ ಚಾರ್ಜು
ಇನ್ನೆಯ ಕೊಡುರಾಯ ನಮ ಚಾರ್ಜು ಅಂಬೋವತಿಗೆ
ತೋಳ ಪೆಂಡೇವ ಏ ತಗುದಿಟ್ಟ.

ಹತ್ತಾನೆ ವರುಷ ನಿಸ್ತ್ರೇ ಬಾಗುಲ ಕಾದೆ
ಮತ್ತೆ ಕೊಡುರಾಯ ಏ ನಮ ಜಾರ್ಜು
ಮತ್ತೇನೆ ಕೊಡುರಾಯ ನಮ ಚಾರ್ಜು ಅಂಬೋವತಿಗೆ
ಕಾಲಪೆಂಡೇವ ಏ ತಗದಿಟ್ಟ.

ಆವಾಗ ಬಾಕಲು ಕಾಯೋ ಗೌಡರಿಗೆ ತೋಳಾಗಿನ ಬಂಗಾರ, ಕಾಲಾಗಿನ ಬಂಗಾರ ಎಲ್ಲ ತೆಗೆದುಕೊಟ್ಟ. ಈಗ ಒಳಗೆ ಬಿಟ್ರು. ಹೋದ ಒಳಿಕೆ.

ಅಲ್ಲಿ ಒಳಗೆ ಮಾತಿನೋವು ಎಲ್ಡ್ ಗಿಣಿ ಇದ್ವಲ್ಲ? ಅವು ಕೈಹಚ್ಚಂದ್ವು. ಆಮ್ಯಾಲೆ

ಇವನು ಹೋದೂನು ನೋಡಿದ ಆಕೇನ. ಆಕಿದ್ದುದ್ ನೋಡಿ ತಡಕಳಕಣದಾಗಿಲಿಲ್ಲ. ಆಕಿಗೊಂದು ಬಿರುನುಡೆ ಮಾತಾಡಿಬಿಟ್ಟ. ಏನಂತಪ್ಪಾಂದ್ರೆ –

ಪರುಷರ ಇಲ್ಲದೋರ ಹರುಸಾವ ನೋಡಿರೆ
ಅರುಷಣದ ರಾಶಿವಳ ಏ ಮನೆಯ ಮುಂದೆ
ಅರುಷಣದ ರಾಶಿವಳ ಮನೆಯ ಮುಂದೆ ಪರದಾನಿ
ಇವಳ ಪುರುಷರಿನ್ನೇನ ಏ ಕಡಿಮೆಯ್ಯ?

ಗಂಡಾರು ಇಲ್ಲದೋಳ ಅಂದಾವ ನೋಡೀರೆ
ಗಂಧಾದ ರಾಶಿವಳ ಏ ಮನೆಯ ಮುಂದೆ
ಗಂಧಾದ ರಾಶಿವಳ ಮನೆ ಮುಂದೆ ಪರುದಾನಿ
ಇವಳಿಗೆ ಗಂಡರಿನ್ನೇನು ಕಡಿಮೆಯ್ಯ?

"ಅಯ್ಯೋ ಹಿಂಗಿರೋಳಿಗೆ ಗಂಡ್ರೇನು ಕಡಿಮೆ ಮಿಂಡ್ರೇನು ಕಡಿಮೆ" ಅಂದುಬಿಟ್ಟ. ಆವಾಗ ಆ ಗಿಣಿಗಳು "ಇಷ್ಟ್ ವರ್ಷಮುಟ ಇಟ್ಟೆಸಾಡಿದೇವಿ. ಈಗ ಬಂದಾನೆ ಇವನು. ಇಷ್ಟ್ ವರ್ಷ ಸೂಳೆ ಮನೆ ಸುತ್ತಿ ಇಂತ ಅಪರಾಧ ನುಡಿಯಾಕೆ –

ಅಣ್ಣಿ ಹೂವಿನಂಗೆ ಕೆನ್ನೆಲ್ಲ ನೆರಿಬಂದು
ನಮ್ಮಮ್ಮಾಗು ನಿನಿಗು ಏ ವರವೇನೊ?
ಅಮ್ಮಾಗು ಏ ನಿನಿಗು ವರವೇನೊ ಸ್ಯಾನಯ್ಯ?
ನಿನ್ನ ನಕ್ಕ ನಾಲೀಗೆ ಏ ಕೀಳುಸೇವು.

ಹತ್ತಿ ಹೂವಿನಂಗೆ ನೆತ್ತೆಲ್ಲ ನೆರಿಬಂದು
ನಮ್ಮಕ್ಕಾಗು ನಿನಿಗು ಏ ವರವೇನೊ?
ಅಕ್ಕಾಗು ಏ ನಿನಿಗು ವರವೇನೊ ಸ್ಯಾನಯ್ಯ
ಏನು ಅಪರಾಧ ಏ ನುಡಿದೇಯೊ?

ಬೆಕ್ಕಾನೆ ತರುಸೇವು ಕುತ್ತೀಗೆ ಮುರಸೇವು
ನಿನ್ನ ನಕ್ಕನಾಲೀಗೆ ಏ ಕೀಳುಸೇವು
ನಕ್ಕಾನೆ ನಾಲೀಗೆ ಕೀಳುಸೇವು ಸ್ಯಾನಯ್ಯ
ನಮ್ಮಕ್ಕಾಗು ನಿನಗು ಏ ವರವೇನೊ"?

ಅಂತ ಇವನಿಗೆ ದಬಾಯಿಸಿದುವು. "ಎಲ್ಲದು ಮಾತಾಡಿ ತೀರಿಸ್ದೆ. ನಿನಗೆ ವಯಸ್ಸಾಗೆತೆ. ನಮ್ಮಕ್ಕ ಹೆಂಗದಾಳೆ? ಈಗ ಬಂದು ಇಂಥ ಅಪಚಾರ ನುಡಿತಿಯಲ್ಲ? ಗಂಡ್ರೇನ್ ಕಡಿಮೆ ಮಿಂಡ್ರೇನ್ ಕಡಿಮೆ ಅಂತೀಯ? ನಿನ್ನ ನಕ್ ನಾಲಿಗೆ ಕೀಳಿಸಿಬಿಟ್ಟೇವು. ಬೆಕ್ಕು ತರಿಸಿ ಕುತ್ತಗೆ ಮುರಿಸಿಬಿಟ್ಟೇವು" ಅಂತಾವೆ. ಆಮ್ಯಾಲೆ ಬಿಟ್ಟುವು. ಒಳೀಕೆ ಹೋದ ಹೇಣ್ತಿತಾಕೆ.

ಹೇಂಡ್ತಿ ತಾಕೆ ಹೋದ. 'ಅಯ್ಯೊ ಶಿವ ಶಿವ ನನ್ಗಂಡ ಈಗ ಬಂದ್ರಲಾ' ಅಂತಂದು ಬೇಗ ಅಡಿಗೆ ಮಾಡಿದ್ಲು ಹೇಂಡ್ತಿ. ಅಡಿಗೆ ಮಾಡಿ ಊಟುಕ್ಕಿಟ್ಲು.

ಈ ಮಾವಿರ್ತಾನಲ್ಲ? ನಾರಂದ 'ಇಷ್ಟೇ ದಿನಾಗೇತೆ, ನನ್ ಮಗಳಿಗು ಇವನಿಗೂ ವರಲ್ಲ. ಇವರ್‍ನ ಕೂಡಗೂಡಬಾರ್ದು ಗಂಡ ಹೇಂಡ್ತಿಯ ಅಂದು ಏನ್ಮಾಡಿಬಿಟ್ಟ? ಆಕೆ ಅಡಿಗೆ ಮಾಡಿಟ್ಟು ಒಳಾಕೆ ಹೋದಕೂಟ್ಲೆ. ಇವನು ಆ ಅಡಿಗ್ಯಾಗೆ ಗಂಡ್‌ಗಾರೆ ಮುಳ್ಳಾಗಿ ನಿಂತ್ಕಂಡ.

ಈಕೆ ಸ್ಯಾನಯ್ಯಗೆ ಊಟ ನೀಡಿದ್ಲು. ಅವನು ನೋಡಿದ. ಇವನಿಗೆ ಗೊತ್ತಾತು. "ಏನೆ ನಾನು ಊಟ ಮಾಡಂಗಿಲ್ಲ ನಾ ಒಲ್ಲೆ" ಅಂದುಬಿಟ್ ಎದ್ದ. ಆಮ್ಯಾಲೆ "ಮಂಚ ತಯಾರು ಮಾಡೆ, ಹಾಸಿಗೆ ಹಾಸೆ, ಅರಗಳಿಗೆ ಕುಂತರ ಹೋಕೇನಿ ನಿಂತಾಕೆ ಬಂದುದ್ಕಿಲ್ಲಿ. ನಿಮ್ಮಪ್ಪ ಕಾಳಗಕ್ಕೆ ಕರಿತಾನೆ, ಯುದ್ದಕ್ಕೆ. ನಾನು ಹೋಕೇನಿ" ಅಂದ. ಆಕೆ ಹಾಸಿದಳು. ಇವಾಗ ಮಾವಿದ್ದೋನು ಮಾಯತಂತ್ರದಿಂದ ದೊಡ್ಡದೊಂದ್ ಹೆಬ್ಬಾವಾಗಿ ಬಿದ್ದುಬಿಟ್ಟ. "ನೋಡ್ರೀ ನೀವು ಬಾರಿ ಪರಾಕ್ರಮಿಗಳು ಅಂತಾರೆ, ಈ ಹಾವರ ಹೊಡಿರಿ" ಅಂದ್ಲು. ಆಕೆಗೆ ಗೊತ್ತಿಲ್ಲ ಅಪ್ಪನೆ ಹೀಗಾಗಿದ್ದಾನೇಂತ. "ನೋಡೆ ಈ ಹಾವು ಹೊಡಿಯೋದ್ ನಾನು ಅಡೆ ಅಂತೀಯ? ಈಗ ನಿನ್ನೆದ್ರಿಗೆ ಮೂರು ತುಂಡ್‌ಮಾಡಿ ಕತ್ರಿಸಿಹಾಕ್ತಿದ್ದೆ. ಇದು ಹಾವಲ್ಲ. ಇಷ್ಟೆಲ್ಲ ಮಾಡೋನು ನಿಮ್ಮ ತಂದೆ ನಾರಂದ. ನಿಮ್ಮ ತಂದೆಮ್ಯಾಲೆ ಈಗ ಕೈಮಾಡಾಕೆ ಆಗದುಲ್ಲ. ಇನ್ನೀಗ ಯುದ್ದಕ್ ಕರಿತಾನೆ. ನಾನು ಹೋಗ್ತೇನಿ. ನಿನ್ನ ಹರಕೆ ಇರಲಿ. ನಮ್ಮನ್ನ ಕೂಡಗೊಡ್ಲಿಲ್ಲ, ಮಾತಾಡಿಗೊಡ್ಲಿಲ್ಲ, ಅಡಿಗೆ ಮಾಡಿದ್ದ ಉಣ್‌ಗೊಡ್ಲಿಲ್ಲ, ಇಳ್ಳೇವು ಕೊಟ್ಟಿದ್ದ ಹಾಕ್ಕೊಡ್ಲಿಲ್ಲ. ಇಷ್ಟೆಲ್ಲ ಮಾಡೋನು ನಿಮ್ಮ ತಂದೆ ನಾರಂದ. ನಿಮ್ಮ ತಂದೆ ಮ್ಯಾಲೆ ನಾನು ಕೈಮಾಡಕಾಗದುಲ್ಲ. ಏನ್ಮೈತೂ ನಂದು ಪರಿಸ್ಥಿತಿ. ನಾನು ಹೋಕೇನಿ. ಮದುವ್ಯಾದ ರಿಣ ಸಂಬಂಧಗಳು ಬಿಡಬಾರ್ದೂಂತ ಬಂದುದೇನಿ. ಅಂದು ಕೈಮ್ಯಾಲೆ ಕೈ ಹೊಡ್ದು ನಾನು ನಿಮ್ಮಪ್ಪನ ಕೂಟೆ ಯುದ್ಧಮಾಡುವಾಗ, ಮೇಲು ಅಂತಸ್ತಿನ ಮೇಲೆ ಹತ್ತಿನಿಂತು ನೋಡು. ನಿನ್ನ ಮುತ್ತೈದೆತನ ಮೇಲಾಗಿದ್ರೆ ನನ್ನ ಕತ್ತಿಕೈ ಅಲ್ಲಿ ಬಲುಮೆಯಾಗಿ ಬರ್ತದೆ. ನಿನ್ನ ಮುತ್ತೈದೆತನ ಅಡಿಯಾದ್ರೆ ನಂದು ಅಡಿಯಾಕತೆ" ಅಂತ ಹೇಳಿ ಹೋಗಿಬಿಟ್ಟ. ಅವನು ಹೋಗುವಾಗ ಆಕೆ ಬಾಳ ದುಕ್ಕಮಾಡಿಬಿಟ್ಟಳು. ಈಗ ಬರೋ ನನ ಗಂಡ ಮೊದಲೆ ಬಂದುದ್ರೆ ನಾಲ್ಕು ಮಕ್ಕಳರ ಆಕುದ್ವು. ನಮ್ಮ ಮನೆತನ ಬೆಳಿತಿತ್ತು. ಹಿಂಗೆ ಬಂದು ಹಿಂಗೇ ಹೊಲ್ಟ್ ಹೋದ್ನಲಾಂತ ಆಕಿಗೆ ಬಾಳದುಕ್ಕಾತು. ಆವಾಗ ಆಕೆ ಹಾಡ್ಯಾಡಿ ಅಳ್ತಾಳೆ –

ಈಗ ಬರುವ್ರೋ ರಾಯ ಆಗ ಬಂದಿದ್ದರೆ*
ಬಾಲೈಯರ ಕಂಡಿರುವೆ ಮನೆ ತುಂಬಾ
ಇಂದೆ ಬರುವ್ರೋ ರಾಯ ಹಿಂದೆ ಬಂದಿದ್ದಾರೆ
ಕಂದಯ್ಯನಡೆವೆ ಮನೆ ತುಂಬಾ.

ಮುಂದೆ ರೋಸಳಿ ನಿನ್ನ ಚಂದಾವ ನೋಡಿದರೆ
ನೀನು ಬಾಗಾಲ ಬಿಟ್ಟು ಹೊರಳೇನೆ
ಆಗ ರೋಸಳಿ ನಿನ್ನ ಚಂದಾವ ನೋಡಿದರೆ
ನಿನ್ನ ಹೊಸ್ತಾಲ ಬಿಟ್ಟು ಹೊರಳೇನೆ.

---

* ಈ ಭಾಗವನ್ನು ಪಲ್ಲವಿ ಇಲ್ಲದೆ ಬೇರೆ ಧಾಟಿಯಲ್ಲಿ ಹಾಡುವರು.

"ಆಗ ನಿನ್ನ ಚಂದ ಚಾರ, ನಿನ್ನ ಒಗತನ ನೋಡಿದ್ರೆ ನಾನು ನಿನ್ ಮನೆ ಹೊಸಲು ಬಿಟ್ಟು ಹೋಕುದ್ದಲ್ಲ" ಅಂತ ಹೇಳ್ದ.

ಈ ಸ್ಯಾನಯ್ಗು ಇಕಿಗು ಆಗಿನ ಕಾಲದಾಗೆ ಸಣ್ಣ ಹುಡುಗರಿದ್ದಾಗಲೆ ಮದುವೆ ಮಾಡಿ ಬಿಟ್ಟಿದ್ರು. ಆಮ್ಯಾಲೆ ಅವನು ಹೇಂಡ್ತಿ ನೋಡೇ ಇಲ್ಲ. ಸೂಳೆಮನಿಗೆ ಹೋಗಿಬಿಡ್ತಾನೆ. ಆಮ್ಯಾಲೆ ನಡೆದಿದ್ದು ಇಷ್ಟೆಲ್ಲ.

ಈಗ ಈಕೆ ನನ ಗಂಡನ ಕತ್ತಿಕೈ ಮೇಲಾಗಿ ಬರಲಿ ಅಂತಂದು ಮೇಲಂತಸ್ತಿನ ಮನೆಮ್ಯಾಗೆ ಹತ್ತಿಗೆಂದ್ಲು ಯುದ್ಧಮಾಡದ ನೋಡಾಕೆ.

ಆವಾಗ ಸ್ಯಾನಯ್ಯನ ಕಡೆ ದಂಡು ಬಂತು. ನಾರಂದನ ಕಡೆ ದಂಡು ಬಂತು. ಯುದ್ಧ ನಡಿತು. ಯುದ್ಧದಾಗೆ ನಾರಂದನ ಕೈ ಮೇಲಾಯ್ತು. ಆಗ ಸ್ಯಾನಯ್ಯನ ತಲೆ ಒಡ್ದೇಬಿಟ್ರು. ಆವಾಗ ಈಕೆ ಇಲ್ಲಿ ಕುಂತಿದ್ಲಲ? ಅಲ್ಲಿಗೆ ದಂಡಿನಾಗೆ ಸ್ಯಾನಯ್ಯ ಮಡಿದನಂತೆ ಅಂತ ಸುದ್ದಿ ಹೋತು. ಆ ಹೊತ್ತ್ಯಾಗ ಈಕೆ ಮೇಲಂತಸ್ತಿನ ಮನೆ ದುಮುಕಿ ಅಂಥ ರಣಾಗ್ರದಾಗು, ಅಂಥ ದಂಡಿನಾಗು ಹೋಗಿ ಗಂಡನ ಚರೆಪಟ್ಟೆ ನೋಡಿದ್ಲಲ ಗುರ್ತಾತು. ಗಂಡನ ತಲೆ ತಗಂದು ಮಡ್ಲಿಗೆ ಕಟ್ಗೆಂದು ಬಂದ್ಲು ಅಪ್ಪನ ಮನಿಗೆ, ಬರತ್ಲು "ಅಪ್ಪಾ .... ನನಿಗೆ ಕೊಂಡ ತಗಿಸಿ ಕೆಂಡ ಮಾಡಿಕೊಡಪ್ಪ. ನಾನು ಇರದುಲ್ಲ ನರ್ಕಲಿವಳಿಗೆ. ನಾನು ಹೋಕೆನಿ ಸ್ವರ್ಗಹೊಂದಿ. ನನ ಗಂಡನ ತಲೆ ಮಡ್ಲಾಗೈತೆ. ಇಬ್ರು ಸ್ವರ್ಗ ಹೊಂದುತೇವಿ ನಾವಿನ್ನ".

ಇವ್ನೇನಂದ ಅಪ್ಪ ? "ಏ ಹುಚ್ಚ್ನನ್ ಮಗಳೆ ಇಷ್ಟೆಲ್ಲ ಮಾಡಿದ್ದು ಯಾತ್ಕೇಂತ ತಿಳಿದಿದ್ದಿ? ಯಾರಿಗಾಗೀಂತ ತಿಳಿದಿದ್ದಿ? ನಿನಗಾಗಿ. ರನ್ನದ ರಾಟ್ಯೆತೆ ಚಿನ್ನದ ಕದರೈತೆ ಅನುಗಾಲ ಕೂತುಣುವಂತೆ ನನ ಮನಿಯಾಗೆ. ನಿನ್ಯಾಕೆ ಕೊಂಡಹಾಯದು? ಬ್ಯಾಡ ..... ಬ್ಯಾಡವ್ವಾ" ಅಂತಂದ.

ಆಕಿಗೆ ಸಿಟ್ಟು ಬಂತು "ಇಷ್ಟ್ ವರ್ಷದ ಮೇಲೆ ಈಗ ಬಂದಂತ ನನ್ನ ಗಂಡನ್ನ ತಗ್ದು, ನನ್ನ ವಗ್ತಾನಕ್ಕೆ ನೀನೆ ಮೂಲವಾದೆ. ನಿನ್ನ ರಾಟೆ ಉರಿಲಪ. ಚಿನ್ನದ ಕದರು ಉರಿಲಿ. ನಾನು ಇರತಕ್ಕ ಸ್ಥಳವಲ್ಲ ಈ ನರಕಲೆ" ಅಂತಂದು ಅಣ್ಣನ ಮನಿಗೆ ಹೋದ್ಲು ತಂಗಿ. ಅಣ್ಣಗೆ "ಅಣ್ಣಾ ನನಿಗೆ ಕೊಂಡ ತಗಸಿ ಕೆಂಡ ಮಾಡಿಸಿಕೊಡಪ್ಪ. ನಾನು ನನ ಗಂಡನ ತಲೆ ಮಡ್ಲಾಗೆ ಕಟಿಗೆಂದು ಮುತ್ತೈದೆತನದಿಂದ ಕೆಂಡಹಾಯ್ತೇನಿ" ಅಂದ್ಲು.

ಆವಾಗ "ನೀನು ಇರತಕ್ಕ ಸ್ಥಳ ಇದಲ್ಲ ನಡಿಯವ್ವ" ಅಂತಂದು ಅಣ್ಣೇನ್ಮಾಡ್ದ? ದೊಡ್ಡ ಕೊಂಡ ತಗಸ್ದ. ತಂಗಿಗೆ ಹೊಸ ಸೀರೆ ತಂದ, ಮಡ್ಲಕ್ಕಿ ತಂದ, ಮುಡಿದಂಡೆ ತಂದ. ಆಮ್ಯಾಲೆ ಸೀರೆ ಉಡಿಸಿ ಮಡ್ಲಕ್ಕಿ ಹಾಕಿ ಮುಡಿದಂಡೆ ತಂದ. ಆಮ್ಯಾಲೆ ಸೀರೆ ಉಡಿಸಿ ಮಡ್ಲಕ್ಕಿ ಹಾಕಿ ಮುಡಿದಂಡೆ ಸೂಡಿಕೊಂಡು, ಗಂಡನ ತಲೆ ಮಡ್ಲಾಗೆ ಇತ್ತು, ಬಳೆನು ತಗದಿದ್ದಿಲ್ಲ ಏನು ಇಲ್ಲ. ಗಂಡ ಹೆಂಡ್ತಿ ಇಬ್ರು ಸ್ವರ್ಗಹೊಂದಾನ ಅಂದು ಕೆಂಡಕೆದುರಾಗಿ ಹೊಂಟ್ಲು. ಆವಾಗ ಇವನು ಆಕೆ ಅಪ್ಪ 'ಎಲ್ಲದ್ರಾಗು ನನ್ ಮಗಳ ಉಳಿಸಿದೇನಿ, ಇದೊಂದ್ರಾಗೆ ಉಳಿಸಿಬಿಟ್ರೆ ನನ್ನ ಮಗಳು ನನ್ನ ಮನಿಯಾಗಿರ್ತಾಳೆ' ಅಂತಂದು ಮೂಡಗಾಡಿಕೋಗಿ ಉಡೇವುದಪ್ಪುತೋಲ ಸುಂಟರಗಾಳೀಯಾಗಿ ಬಂದು ಆಕೆ ಕಣ್ಣಿಗೆ ಕೌವ್ಲಾಗೆ ಕವಕಂದು, ಆಕೆ

ಗಂಡನ ತಲೆ ಹೊಡ್ಕಂಡ್ ಹೋಗಾಕೆ ನೋಡಿದ. ಆಗಲಿಲ್ಲ. ಆ ಕೆಂಡ ಕೆಡಸಿಬಿಟ್ರೆ ಮಗಳು ಸಾಯದುಲ್ಲ ಅಂದು ಗುಡುಗು ಮಿಂಚು ಮಳೆ ಎಲ್ಲ ತಾರಾಡ್ಕೆಂತ ಬರಂಗೆ ಮಾಡ್ದ.

"ಅಣ್ಣಾ ಇಷ್ಟೆಲ್ಲ ಮಾಡಿದ್ದೆಲ್ಲ ಎಲ್ಲಿ ಹೋತಪ.? ಅಪ್ಪ ನನಿಗೆ ಬಿಡ್ತಾಯಿಲ್ಲ. ಗುಡುಗು ಮಿಂಚು ಮಳೆ ತಾರಾಡ್ಕೆಂತ ಬಂತು. ನನಿಗೆ ಮುತ್ತೈದೆ ಸಾವಿಲ್ಲ" ಅಂತಂದ್ಲು. ಆವಾಗ ಅಣ್ಣ ಅತ್ಲಾಳ ಮಳೆ ಅತ್ಲಾಗೆ ಇತ್ಲಾಳೆ ಮಳೆ ಇತ್ಲಾಗೆ ಕರಗಂಗ್ ಮಾಡ್ದ. ಜೋಡು ಕಾಮನ ಬಿಲ್ಲು ಒಡ್ಡಿದ ಮಳೆಗೆ. ಆಗ ನಿಚ್ಚಳಾಯ್ತು. ಸುಂಟರಗಾಳಿಗೆ ಕೆಂಡ ಆರಿದ್ದುಲ್ಲ. ಗಂಡನ ತಲೆ ಮಡ್ಲಾಗೆ ಕಟಿಗೆಂದು ಕೊಂಡ ಹಾದೊ.

ಆವಾಗ ಶಿವಪಾರ್ವತಿ ನಂದಿ ಏರಿಕೆಂದು ಹೋಕುದ್ರಂತೆ. ಅವರು ಈಕೆನ್ನೋಡಿ - ಮುತ್ತೈದೆ ಹೆತ್ಕಮಗಳು ಮುತ್ತೈದೆಯಾಗಿ ಕೊಂಡಹಾದ್ಲು ಏನಿರಬೋದು ಅಂತಂದು ಶಿವ ಪಾರ್ವತಿ ಅಲ್ಲಿಗೆ ಬಂದ್ರು.

ಬಂದು ನೋಡಿ, ಆಕಿ ಕಥೆಯೆಲ್ಲ ಕೇಳಿ. ಅವರಿಬ್ರಿಗು ಜಲ್ಮಕೊಟ್ರು. ಜೀವಪಡೆದ್ಲು. ಅಮ್ಯಾಲೆ "ನೀವು ಈ ನರಕಲೆ ವಳಗಿದ್ರೆ ಎಂದಿಗು ಬಾಳಗೊಡಲ್ಲ ನಿಮ್ಮಪ್ಪ. ನಾವು ಹೋಗಾನ ಬರ್ರಿ" ಅಂತಂದು ಶಿವನ ಸದರಿಗೆ ಕರಕಂದು ಹೋದ್ರಂತೆ. ಅವರು ಅಲ್ಲಿ ಶಿವನ ಸ್ಮರಣೆ ಮಾಡ್ಕೆಂತ ಸಂತೋಷ್ದಿಂದ ಇಂದ್ರಂತೆ.

ಈ ಸ್ಯಾನಯ್ಯಗೆ ಅಷ್ಟ್‌ದಿನಮುಟ ಸೂಳೆ ಮನೆಯಾಗಿದ್ರು ತಂಗಿ ನೆನಮು ಮಾಡಿಕೊಳ್ಳೋನಿಗೆ ಈಗ ತಂಗಿ ಗ್ಯಾನ ಬಂದ್ಬಿಡ್ತು. "ಇರಾಕೊಬ್ಬ ತಂಗಿ ಇದ್ದು ಎದ್ದು ಬಿದ್ದು ನನ್ನ ಕನಸಿನಾಗೆ ಇದ್ದಂಗಾಕತೆ. ನನ ಕಣ್ಣಾಗೆ ಇದ್ದಂಗಾಕತೆ. ಎಷ್ಟತ್ತಿನ ಮಾತು? ನೀವು ಉಗುದು ಉಗುಳು ಆರದ್ರಾಗೆ ನಾನು ತಂಗಿ ನೋಡ್ಕೆಂದ್ ಬರ್ತೇನಿ" ಅಂತ ಶಿವಗೆ ಹೇಳಿ ಬಂದ್ಬಿಟ್ಟ ತಂಗಿತಾಕೆ.

ಬಂದು "ತಾಯೀ" ಅಂದ.

"ಅಯ್ಯೋ ಸತ್ತಂತ ನಮ್ಮಣ್ಣ ಬಂದನೊ ಏನೋ" ಅಂದ್ಲು ಒಳಗಿಂದ್ಲೆ. ಆಮ್ಯಾಲೆ ನೀರ್ ತಗಂದ್ ಬಂದು ತಂಬಿಗೆ ಕೊಡಬೇಕಲ್ಲ? ತಂಬಿಗೇನು ಬಿಟ್ಟು ಎಲ್ಲಾದ್ನು ಬಿಟ್ಲು. ಹಂಗೆ ತೆಕ್ಕೆಮಾಡಿ ಹೆಡಮುರಿಗೆ ಮಾಡಿ ಹಿಡಕಂಡ್ ಬಿಟ್ಟಳು ಅಣ್ಣನ್ನ.

"ಅಣ್ಣಾ ನೀನು ಸತ್ತೋದಿ ಅಂತ ಮಾಡಿದ್ದೆ. ದಂಡಿನಾಗೆ ಸಾಯಿಗೊನಿಸಿದ್ರು ಅಂತ ಮಾಡಿದ್ದೆ. ಎಲ್ಲಿಂದ ಬಂದಿದಿಯಪ್ಪ ನೀನು?" ಅಂದ್ಲು. ಅವಾಗ ಅವ್ನು 'ನಾನೀಗೇನ್ಗತೆ ಮಾಡ್ಲಿ? ಇಕೆಂಗ್ ಹಿಡ್ಕಂಡ್ ಬಿಟ್ಟೆಲ್ಲ? ತಂಗಿ ನೋಡಬೇಕಾಗಿತ್ತು ನೋಡಿದೆ. ಇನ್ನು ಹೋಗೋದೆಂಗೆ? ಶಿವಗು ಅಕ್ಷೆಯ ಕೊಟ್ ಬಂದಿದೇನಿ. ಉಗದು ಉಗುಳು ಆರದ್ರಾಗೆ ಬರ್ತೇನೀಂತ, ಅಂತ ಯೋಚನೆಮಾಡಿ ಬಕಣದಾಳವು ಒಂದಿಡಿ ಅಡಿಕೆ ತಗಂದು ಚಲ್ಲಿದ್ನಂತೆ ಕಡೀಕೆ. ಚಲ್ಲತ್ಲು ಆವಾಗ "ಎಲ್ಲೇ ಎಸಾಕಂಡು ಅಡಿಕೆ ಚಲ್ಲಿದ್ವೆ" ಅಂದ. ತಂಗಿ ಅವ್ನನ್ನ ಆರ್ಸಾಕೆ ಕೈಬಿಟ್ಲು. ಆಕೂಡ್ಲೆ ಅವನು ಮಂಗಳಮಾಯಾಗಿ ಹೋದ ಮತ್ತೂವ. ಆಮ್ಯಾಲೆ ಅವರಿಬ್ರು ಗಂಡ ಹೆಂಡ್ತಿ ಸುಖವಾಗಿ ಅಲ್ಲಿದಾರೆ. ನಾವಿಲ್ಲದೇವಿ.

◆◆◆◆

ಹಾಡಿದವರು : **ನೀಲಮ್ಮ**, 90 ವರ್ಷ, ಹರಿಜನ
ಬೇಲೂರು, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

# ೧೭. ಸಿರಿದೇವಿ

ಕಾಂಭೋಜ ಎಂಬೊ ಪಟ್ನ ಕಲ್ಯಾಣುದಯ್ಯ*
ಕಾಂಭೋಜ ರಾಜನಯ್ಯ
ಬುದ್ಧಿಶಾಲಿ ಎಂಬೊ ಮಂತ್ರಿ
ಏಳುಜನ ಬಂಟ ರಾವುತರು
ಶಿವ ಏಳುಜನ ಹೆಂಡಾರಯ್ಯ.

ಕಾಂಭೋಜ ಎಂಬ ಪಟ್ನ. ಕಾಂಭೋಜ ರಾಜರು, ಬುದ್ಧಿಶಾಲಿಯಾದ ಮಂತ್ರಿ. ಆರು ಜನ ದೇವಾಂಗನೆಯರು. ಕಿರಿಯವಳು ಸಿರಿದೇವಿ. ಪರಮಾತ್ಮ ಅವರಿಗೆ ಬೇಕಾದ ಸಕಲ ಐಶ್ವರ್ಯವನ್ನು ಕೊಟ್ಟಿದ್ದಾನೆ. ಬಾಳ ಸತ್ಯದಿಂದ ರಾಜ್ಯಭಾರ ಮಾಡುತ ಇದ್ದಾರೆ. ಅಂಥ ಐಶ್ಯರ್ಯದ ಕೊನೆಯಲ್ಲಿ ಪರಮಾತ್ಮ ಅವರಿಗೆ ಚಿಂತೆ ಇಟ್ಟಿದ್ದಾನೆ.

ಮಕ್ಕಳಿಲ್ಲಾದ ಚಿಂತೆ ನೋಡ್ರಿ ರಾರೇರಿ
ಬಾಳವಾಡೆ ಹತ್ತೈತೆ ಭಾವಿಸ್ತೈತೆ
ಪರಶಿವನಿಗೆ ನೆನಿತಾರೊ ರಾಮ
ಶಿವನ ಪೂಜೆಮಾಡುತಾರೊ
ಶಿವಸಂಬೊ ಮಾದೇವ.

ಅಂತಪ್ಪ ಕಾಂಭೋಜ ರಾಜರು ಒಬ್ಬರಲ್ಲ ಇಬ್ಬರಲ್ಲ ಏಳಜನ ಹೆಂಡರನ್ನ ಲಗ್ನವಾಗಿದ್ದಾರೆ. ಒಬ್ಬರಿಗೂ ಸಂತಾನವಿಲ್ಲ. ಸಂತಾನಹೀನರಾಗಿ ಕಂಡಕಂಡ ದೇವರಿಗೆಲ್ಲಾ ಕೈಮುಗಿಯುತ್ತಿದ್ದಾರೆ. ಯಾವ ದೇವರ ಕರುಣವೂ ಹರಿಯಲಿಲ್ಲ. ಮಕ್ಕಳಿಲ್ಲ ಎಂದು ಹೇಳಬಹುದು. ಮಕ್ಕಳನ್ನು ಪಡೆಯಲಿಕ್ಕೆ ನಮ್ಮ ಇಷ್ಟವಲ್ಲ. ಆ ಶಂಕರನ ಕರುಣಾವು ಹರಿಯಬೇಕೆಂದು ಹಗಲು ರಾತ್ರೀಲಿ ಆ ಶಿವನ ಧ್ಯಾನದಲ್ಲಿ ಕಾಲಕಳೆಯುತ್ತಾ ಇದ್ದಾರೆ. ಒಂದು ವರ್ಷಕ್ಕೆ ಹನ್ನೆರಡು ತಿಂಗಳು. ಏಳು ಜನ ಬಂಟರಾವುತರು ತಿಂಗಳಿಗೊಂದು ಸಾರಿ ಬಂದು ಸಂಬಳ ತೆಗೆದುಕೊಂಡು ಹೋಗುತ್ತಿದ್ದರು. ತಿಂಗಳ ಮೇಲೆ ಒಂದು ವಾರವಾದರೂ

ಅವರು ಸಂಬಳಕೆ ಬರಾಲಿಲ್ಲ ರಾರೇರಿ
ಮಹಾರಾಜರು ನೋಡೀರಯ್ಯ
ಮಂತ್ರಿಗೇನಂತ ಹೇಳುತಾರು
ಶಿವಹರ ಎನ್ನದೇವ
ಶಿವಸಂಬೊ ಮಾದೇವ.

ಅಯ್ಯ ಮಂತ್ರಿ, ಏಳಜನ ಬಂಟರಾವುತರು ತಿಂಗಳ ಮೇಲೆ ಒಂದು ವಾರವಾದರೂ ಸಂಬಳಕ್ಕೆ ಏತಕ್ಕೆ ಬರಲಿಲ್ಲ? ಅವರನ್ನು ಕರೆದುಕೊಂಡು ಬಾ. ತಿಂಗಳ ಸಂಬಳ ಪಾವತಿ

* ಪ್ರತಿಸಾಲಿನಲ್ಲಿ 'ಕಲ್ಯಾಣುದಯ್ಯ' ಅಥವಾ 'ರಾರೇರಿ' ಎಂದು ಸೇರಿಸಿಕೊಂಡು ಹಾಡುತ್ತಾರೆ.

ಮಾಡೋಣ ಅಂತ ಹೇಳುತ್ತಾರೆ. ಬುದ್ಧಿಶಾಲಿಯಾದ ಮಂತ್ರಿ ಏಳೂ ಜನ ಬಂಟರಾವುತರ ಬಳಗೆ ಹೋಗಿ ಅಯ್ಯಾ ಬಂಟರಾವುತರೆ, ತಿಂಗಳ ಮೇಲೆ ಒಂದು ವಾರವಾದರೂ ನೀವು ಸಂಬಳಕ್ಕೆ ಯಾತಕ್ಕೆ ಬರಲಿಲ್ಲ? ಬನ್ನಿ ಸಂಬಳ ಪಾವತಿ ಮಾಡತೇವೆ ಅಂತಾ ಕರೀತಾ ಇದಾರೆ. ಬಂಟರಾವುತರಾದರು ಏನು ಹೇಳ್ತಾ ಇದಾರಪ್ಪ. ಅಯ್ಯ ಮಹಾಮಂತ್ರಿಗಳೆ, ಇಂಥ ಸಂತಾನಹೀನರಾದ ರಾಜ್ಯದಲ್ಲಿ ಈ ಹುಟ್ಟುಬಂಜೆ ಪಟ್ಟಣದಲ್ಲಿ ನಾವು ಸರ್ವಥಾ ಕೆಲಸ ಮಾಡುವುದಿಲ್ಲಪ್ಪ. ನಿಮ್ಮ ಸಂಬಳ ನಮಗೆ ಬೇಕಾಗಿಲ್ಲ. ನಾವು ಎಲ್ಲಿಯಾದರೂ ಹೋಗುತ್ತೇವೆ. ಹಾಗೆಂದು ಹೇಳುತ್ತಿದ್ದಾರೆ. ನನ್ನ ಮುಂದೆ ಹೇಳಬೇಡಿ. ರಾಜರ ಮುಂದೆ ಹೇಳಿ. ನೀವು ಎಲ್ಲಿಯಾದರೂ ಹೋಗಬಹುದು ಎಂದಾಗ–

ರಾಜರ ಬಳಿಗೆ ಬಂದಾರಯ್ಯ ರಾರೇರಿ
ನಿಮ್ಮ ಸಂಬಳ ಬೇಡ ನಮಗೆ
ನಿಮ್ಮ ಕೆಲಸ ಬೇಡ ನಮಗೆ
ನಾವು ಎಲ್ಲಾರ ಹೋಗುತೀವ್ರೊ ರಾಮ ರಾರೇರಿ
ಶಿವಶಂಬೋ ಮಾದೇವ.

ಮಹಾಪ್ರಭು, ಇಂಥ ಸಂತಾನಹೀನರಾದ ರಾಜ್ಯದಲ್ಲಿ ನಾವು ಸರ್ವಥಾ ಕೆಲಸ ಮಾಡುವುದಿಲ್ಲ. ನಾವು ಎಲ್ಲಿಯಾದರೂ ಹೋಗಿಬಿಡುತ್ತೇವೆ. ಹಾಗೆಂದು ಬಂಟ ರಾಹುತರು ಹೇಳೋಣವೆ, ಉರಿಯುವ ಕೆಂಡಕ್ಕೆ ಮತ್ತಷ್ಟು ಎಣ್ಣೆಯನ್ನು ಹೊಯ್ದಂತಾಯಿತು. ಅಯ್ಯ, ಮಕ್ಕಳಿಲ್ಲ, ಮಕ್ಕಳಿಲ್ಲ ಎಂದು ಹೇಳಬಹುದು. ಮಕ್ಕಳನ್ನು ಪಡೆಯಲಿಕ್ಕೆ ನಮ್ಮ ಇಷ್ಟವಲ್ಲ. ಆದರೆ ಮಕ್ಕಳಿಲ್ಲದವರನ್ನು ಎತ್ತಿ ಆಡಬಾರದಪ್ಪ. ಮಕ್ಕಳಿಲ್ಲ ಎಂದು ರಾಜ್ಯಬಿಟ್ಟು ಹೋಗಬಾರದು. ಸಂಬಳ ತೆಗೆದುಕೊಂಡು ನೀವು ಕೆಲಸಕ್ಕೆ ನಡೆಯಿರಿ. ನಾನೇ ಕಾಡಿಗೆ ಹೋಗಿ ಶಿವನನ್ನು ಕುರಿತು ತಪಸ್ಸುಮಾಡಿ ಆ ಶಿವನಲ್ಲಿ ಸಂತಾನವನ್ನು ಬೇಡಿಬರುತ್ತೇನೆಂದು ಬಂಟ ರಾವುತರಿಗೆ ಸಂಬಳ ಪಾವತಿಮಾಡಿ ಅವರನ್ನು ಕೆಲಸಕ್ಕೆ ಕಳುಹಿಸಿ, ಮಹಾರಾಜರಾದರೋ ಅರಮನೆಗೆ ಬಂದು ಆರು ಜನ ದೇವಾಂಗನೆಯರೆ, ಸಿರಿದೇವಿ, ಈ ಜನನಿಂದೆಯನ್ನು ನಾನು ಕೇಳಲಾರೆ. ನಾನೇ ಕಾಡಿಗೆ ಹೋಗಿ ಶಿವನನ್ನು ಕುರಿತು ತಪಸ್ಸುಮಾಡಿ ಆ ಶಂಕರನಲ್ಲಿ ಸಂತಾನಬೇಡಿ ಬರುತ್ತೇನೆ. ನೀವು ಅರಮನೆಯಲ್ಲಿ ಶಿವಧ್ಯಾನ ನಿರತರಾಗಿ, ಆ ಶಿವನ ಪೂಜೆ ಮಾಡಿಕೊಂಡಿರಿ. ಹಾಗೆಂದು ಏಳು ಜನ ಹೆಂಡರಿಗೆ ಹೇಳಿಬಿಟ್ಟು ಮಹಾರಾಜರಾದರೋ–

ಇಂದು ಕಾಡೀಗೆ ಹೊರಟಾರಲ್ಲೊ ರಾರೇರಿ
ಹನ್ನೆರಡ ಗಾವ್ರೂದ ಬಂದಾರಲ್ಲೊ
ಹಕ್ಕಿ ಪಕ್ಷಿ ಇಲ್ಲಾದಂಥ
ದಟ್ಟಕಾಡೀನ ಒಳಾಗಯ್ಯ
ಸಿವನ ಧ್ಯಾನವ ಮಾಡುತಾರೊ ರಾಮ
ಶಿವಶಂಭೊ ಮಾದೇವ.

ಹನ್ನೆರಡು ಗಾವುದ ಗೊಂಡಾರಣ್ಯಕ್ಕೆ ಹೋಗಿ ಹಕ್ಕಿ, ಪಕ್ಷಿ, ನೀರು ನೆರಳು ಇಲ್ಲದ

ಸ್ಥಳದಲ್ಲಿ ಒಂದು ವಾರ ಏಳು ದಿವಸ ಅನ್ನ ನೀರುಗಳನ್ನು ತೊರೆದು ಆ ಶಿವನ ಧ್ಯಾನ ಮಾಡಿದ್ದಾರೆ.

ಶಿವನ ಕರುಣ ಹರಿಯಲಿಲ್ಲೋ
ಶಿವಾ ಹರಾ ಮಾದೇವ.

ಆ ಪರಮಾತ್ಮನು ದರುಶನವೆ ಕೊಡಲಿಲ್ಲ. ಹಸಿವು ಬಾಯಾರಿಕೆಯನ್ನು ತಡೆಯಲಾರದೆ ಈ ಮಕ್ಕಳಗೊಡವೆಯೇ ಬೇಡ ಎಂದು ರಾಜರಾದರೆ ಪಟ್ಟಣಕ್ಕೆ ತಿರುಗಿದ್ದಾರೆ.

ಇತ್ತ ಅರಮನೆಯಲ್ಲಿ ಏಳು ಜನರಾದ ಅಕ್ಕತಂಗಿಯರು ಈ ದಿವಸ ಹೊಳೆಗೆ ಹೋಗಿ ಸ್ನಾನಮಾಡಿ ಏಳು ಕೊಡ ಮಡಿನೀರನ್ನು ತರಬೇಕೆಂದು ಅಕ್ಕ ತಂಗಿಯರು ಏಳೂ ಕೊಡ ತೆಗೆದುಕೊಂಡು–

ಇಂದು ಹೊಳೆಗಿನ್ನು ಹೊರಟಾರಲ್ಲೊ ಕಲ್ಯಾಣಿದಯ್ಯ
ಇಂದು ಹೊಳೊನ್ನು ಬಂದಾರಲ್ಲೊ
ಹೊಳೆಯಲಿ ಸ್ನಾನ ಮಾಡ್ಯಾರಲ್ಲೊ
ಏಳು ಕೊಡಗಳ ಬೆಳಗ್ಯಾರಲ್ಲೊ
ಗಂಗಾಪೂಜೆ ಮಾಡ್ಯಾರಲ್ಲೊ
ಅರಮನೆಗೆ ಹೊರಟಾರೊ
ಶಿವಾ ಹರಾ ಎನ್ನ ದೈವೇ.

ಅಕ್ಕತಂಗಿಯರು ಹೊಳೆಯಲ್ಲಿ ಸ್ನಾನಮಾಡಿ ಏಳು ಕೊಡಗಳನ್ನು ಬೆಳಗಿ ಗಂಗಾಪೂಜೆಯನ್ನು ಮಾಡಿಕೊಂಡು, ಗಂಗೆ ತೆಗೆದುಕೊಂಡು ಹೊರಡುವಾಗ ಕಿರಿಯವಳಾದ ಸಿರಿದೇವಿ ಅಕ್ಕಗಳಿರಾ ನೀವು ಅರಮನೆಗೆ ನಡೆಯಿರಿ. ನಾನು ಸ್ವಲ್ಪ ತಡೆದು ಬರುತ್ತೇನೆಂದು ಆರು ಮಂದಿ ಅಕ್ಕಗಳನ್ನು ಅರಮನೆಗೆ ಕಳುಹಿಸಿ, ಕಿರಿಯವಳಾದ ಸಿರಿದೇವಿ ನಡುಹೊಳೆಯಲ್ಲಿ ಪ್ರಾಣದಾಸೆಯನ್ನೆ ತೊರೆದು ಆ ಪರಮಾತ್ಮನ ಧ್ಯಾನಮಾಡ್ತಾ ಇದ್ದಾಳೆ. ಕೈಲಾಸದಲ್ಲಿ ಪಾರ್ವತಿ ಪರಮೇಶ್ವರ, ನಂದೀಶ್ವರನ ಮೇಲೆ ಕುಳಿತು ಇರುವೆಂಬತ್ತು ಕೋಟಿ ಜೀವರಾಶಿಗಳಿಗೆ ಪಡಿಯನ್ನು ಅಳೆದುಕೊಂಡು ಹೋಗುತ್ತಿರುವಾಗ ಪಾರ್ವತಾದೇವಿ ಆ ಸಿರಿದೇವಿಯ ಭಕ್ತಿಯನ್ನು ನೋಡಿ ಹೋಗತಕ್ಕಂಥ ನಂದಿಯನ್ನು ಹಿಡಿದು ನಿಲ್ಲಿಸಿದ್ದಾಳೆ. ಏಕೆ ಪಾರ್ವತಾ, ನಂದಿಯನ್ನು ಹಿಡಿದು ನಿಲ್ಲಿಸಿದಿ?

ಪರಮಾತ್ಮ, ಅದೋ ಹೆಣ್ಣುಮಗಳು ಪ್ರಾಣದಾಸೆಯನ್ನೇ ತೊರೆದು ನಡುಹೊಳೆಯಲ್ಲಿ ಕುಳಿತುಕೊಂಡು ನಮ್ಮ ಧ್ಯಾನಮಾಡ್ತಾ ಇದ್ದಾಳೆ. ಕಣ್ಣೀರಿನ ಕಾಲುವೆಯನ್ನೇ ಹರಿಸ್ತಿದ್ದಾಳೆ. ಅವಳಿಗೇನೋ ಕಷ್ಟ ಬಂದಿದೆ. ಅಲ್ಲಿಗೋಗಿ ಬಾ ಪರಮಾತ್ಮ. ಪಾರ್ವತಾ ಭೂಲೋಕದಲ್ಲಿ ಇರುವೆಂಬತ್ತು ಕೋಟಿ ಜೀವರಾಶಿಯಾದಿಯಾಗಿ ಕೂಡಾ ಗುರುವೆ, ಪರಮಾತ್ಮ ಎಂದು ಹಗಲು ರಾತ್ರಿ ನಮ್ಮ ಧ್ಯಾನಮಾಡ್ತಾರೆ. ನಮ್ಮ ಪೂಜೆಮಾಡ್ತಾರೆ. ಆದ್ರ ನಾನು ಯಾರಾರ ಬಳಿಗೆಂದು ಹೋಗಲಿ ಪಾರ್ವತಾ? ನೋಡು, ಯಾರಲ್ಲಿ ಭಕ್ತಿ ಇದೆಯೋ ಅಂಥವರನ್ನು

ಅವ್ರುರು ಹೊಳೆಯಲ್ಲಿ ತೇಲಿಕೊಂಡು ಹೋಗುತ್ತಿದ್ದರೂ ಸಹ ಅವರನ್ನು ನಾನು ದಡಕ್ಕೆ ಹಾಕಬಲ್ಲೆ. ಅವ್ರುರು ಮರದಿಂದ ಬಿದ್ದರೂ ಅದರಿಂದ ಪೆಟ್ಟಾಗದಂತೆ ಕಾಪಾಡಬಲ್ಲೆ. ಪಾರ್ವತಾ, ಅವರೊಂದು ಸರ್ಪವನ್ನೇ ತುಳಿಯಲಿ, ಆ ಸರ್ಪವು ಅವರನ್ನು ಕಚ್ಚದಾಗೆ ಮಾಡಬಲ್ಲೆ. ಅಂಥ ಭಕ್ತಿ ಅವರಲ್ಲಿದ್ರೆ ಸಾಕು. ನಾನು ಅವರಿದ್ದೆಡೆಯಲ್ಲೇ ಇರುತ್ತೇನೆ. ನಾನಿಲ್ಲದ ಸ್ಥಳವಿಲ್ಲ. ಎಲ್ಲಿಯೂ ನಾನೇ ನಾನಾಗಿದ್ದೇನೆ. ಪಾರ್ವತಾ ನಡಿ ಹೋಗೋಣ.

ನೀನು ಹೇಳುವ ಮಾತೇನೋ ಸತ್ಯ. ಭೂಲೋಕದಲ್ಲಿ ದೇವರೇ ಇಲ್ಲ ಎಂದೇಳುವವರು ಎಷ್ಟೋ ಮಂದಿ ಇದ್ದಾರೆ. ದೇವರನ್ನೆ, ಗುರುಹಿರಿಯರನ್ನೆ ನಿಂದನೆಮಾಡುವವರಿದ್ದಾರೆ. ಅಂಥವರೆಲ್ಲರಿಗೂ ದೇವರಿದ್ದಾನೆ. ದೇವರ ಧ್ಯಾನಮಾಡಬೇಕು. ದೇವರ ಪೂಜೆಮಾಡಬೇಕು ಅಂತದ್ದು ಗೊತ್ತಾಗಬೇಕಾದರೆ ನಿನ್ನ ಮಹಿಮೆಯನ್ನು ತೋರಿಸಲೇಬೇಕು. ಅಲ್ಲಿಗೆ ಹೋಗಿ ಅವಳಿಗೇನು ಕಷ್ಟ ಬಂದಿದೆ ಅಂತ ವಿಚಾರಿಸಲೇಬೇಕು ಪರಮಾತ್ಮ. ನಾನು ಅಲ್ಲಿಯವರೆಗೆ ನಂದಿಯನ್ನು ಬಿಡುವುದಿಲ್ಲ ಎಂದು ಹೇಳುತ್ತಿದ್ದಾಳೆ. ಶಂಕರನಾದರೂ ಆ ತಕ್ಷಣವೆ ಸಿರಿದೇವಿಯ ಎದುರಿಗೆ ಬಂದು ಪ್ರತ್ಯಕ್ಷನಾಗಿದ್ದಾನೆ. ಸಿರಿದೇವಿ ಕಣ್ಣತೆರೆದು ನೋಡಿ ಪರಮಾತ್ಮನ ಪಾದಕ್ಕೆ ಶರಣುಹೋಗಿದ್ದಾಳೆ. ತಥಾಸ್ತು ಮಗಳೆ. ಹೇಳು ಕಂದ, ಯಾತಕ್ಕೋಸ್ಕರವಾಗಿ ನಮ್ಮ ಧ್ಯಾನ ಮಾಡುತ್ತಿರುವೆ? ನಿನಗೇನು ವರಬೇಕು? ಕೇಳು ಮಗಳೆ. ಬೇಡಿದ ಇಷ್ಟಾರ್ಥವನ್ನು ಕೊಡುವೆ ಎಂದು ಹೇಳುತ್ತಿದ್ದಾನೆ ಪರಮಾತ್ಮನು. ಸಿರಿದೇವಿ ಏನು ವರ ಕೇಳತ ಇದ್ದಾಳೆ. ಪರಮಾತ್ಮ ನೀನು ಕೊಟ್ಟಂಥ ಸಕಲೈಶ್ವರ್ಯ ಭಾಗ್ಯವೆಲ್ಲ ಇದೆಯಪ್ಪ. ನಾವು ಏಳು ಜನ ಅಕ್ಕ ತಂಗಿಯರಿದ್ದೇವಪ್ಪ ಸಂತಾನ ಹೀನರಾಗಿದ್ದೇವೆ. ಜನಗಳ ನಿಂದನೆಯನ್ನು ಕೇಳಲಾರೆವು. ನಮಗೆ ಸಂತಾನವನ್ನು ಕರುಣಿಸಿ

ಕಾಪಾಡೊ ನನ್ನಯ್ಯ ಶಿವಾಹರ ಮಾದೇವಾ.

ಅಮ್ಮಾ ಮಗಳೆ, ಎಂಥ ವರವನ್ನು ಬೇಡಿಬಿಟ್ಟೆಯಮ್ಮ? ಬೇಡಬೇಡ ಕಂದ. ಆ ಮಕ್ಕಳಗೊಡವೆಯೇ ಬೇಡ. ಮಕ್ಕಳಿಂದ ಮುಂದೆ ನಿನಗೆ ಬಹಳ ಕಷ್ಟವಿದೆಯಮ್ಮ. ಕಣ್ಣೀರಿನಲ್ಲಿ ಕೈತೊಳೆಯಬೇಕಾಗುತ್ತದೆ. ಮಕ್ಕಳನ್ನು ಬಿಟ್ಟು ನಿನಗೆ ಬೇಕಾದ ಸಕಲೈಶ್ವರ್ಯ ಭಾಗ್ಯಗಳನ್ನು ಕೇಳು. ಬೇಡಿದಿಷ್ಟಾರ್ಥವೆಲ್ಲವನ್ನು ಕೊಡುವೆನಮ್ಮ. ಪರಮಾತ್ಮ –

ಬಾಲಾರಿಲ್ಲಾದ ಮ್ಯಾಲೆ ಬಾಲೀದಾತರ ಜನ್ಮ
ಬಾಡೀಗೆ ಎತ್ತು ದುಡಿದಂಗೆ–ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗೆ ॥

ಕಂದಾನ ಕೊಡು ಸಿವನೆ ಬಂಧಾನ ಪಡಲಾರೆ
ಹಂಗೀನ ಬೋನ ಉಣಲಾರೆ–ನನ್ನಯ್ಯ
ಬಂಜೆಂಬೊ ಸಬುದ ಕೇಳಲಾರೆ ॥

ಪರಮಾತ್ಮ, ಆ ಮಕ್ಕಳ ದೆಸೆಯಿಂದ ನನಗೇನೆ ಕಷ್ಟ ಬಂದರು ಬರಲಿ ಪರಮಾತ್ಮ.

ನನಗೆ ಸಂತಾನವನ್ನು ಕರುಣಿಸಬೇಕೆಂದು ಆ ಸಿವನ ಪಾದವನ್ನು ಹಿಡಿದುಕೊಂಡಿದ್ದಾಳೆ. ಅಮ್ಮ ನಿನ್ನ ಇಷ್ಟದಂತೆಯೇ ಆಗಲಿ. ಇಗೋ ಈ ನಿಮ್ಮ ಕರ್ಮಕ್ಕೆ ನಾನು ಹೊಣೆಯಾಗಬೇಕಿದೆ. ಕಣ್ಣಮುಚ್ಚಿ ಕುಳಿತುಬಿಡು. ನಿನ್ನ ತುರುಬಿನಲ್ಲಿ ಏಳು ಅಮೃತ ಗುಳಿಗೆಗಳನ್ನಿಡುತ್ತೇನೆ. ಆ ಅಮೃತಗುಳಿಗೆಯನ್ನು ನೀವು ಏಳು ಜನ ಅಕ್ಕತಂಗಿಯರು ಸೇವ್ನೆಮಾಡಿ. ಹಾಗೆಂದು ಶಂಕರನು, ಸಿರಿದೇವಿ ಕಣ್ಣಮುಚ್ಚಿ ಕುಳಿತಿದ್ದಾಳೆ. ಪರಮಾತ್ಮನು ಅಮೃತಗುಳಿಗೆಯನ್ನು ಅವಳ ತುರುಬಿನಲ್ಲಿಟ್ಟು ಆಶೀರ್ವದಿಸಿ ಅಂತರ್ಧನಾಗಿದ್ದಾನೆ. ಕಣ್ಣು ತೆರೆದು ನೋಡಿ ಸಿರಿದೇವಿ ತಕ್ಷಣವೇ ಕೊಡವನ್ನು ಹೊತ್ತುಕೊಂಡು ಅರಮನೆಗೆ ಬರುತ್ತಿದ್ದಾಳೆ. ಮನುಷ್ಯರ ಮನಸ್ಸು ಬಹಳ ಆತುರದ ಮನಸ್ಸು. ಯಾವ ಕಾರ್ಯವನ್ನು ಮಾಡಿದರೂ ಆತುರದಿಂದ ಮಾಡಬಾರದು. ಮಧ್ಯ ದಾರಿಗೆ ಬಂದು ಏನು ಯೋಚ್ನೆಮಾಡ್ತಾ ಇದ್ದಾಳೆ? ಪರಮಾತ್ಮನು ಮಕ್ಕಳಗೊಡವೆಯೇ ಬೇಡವೆಂದ. ನಾನು ಹಟಮಾಡಿ ಮಕ್ಕಳು ಬೇಕೆಂದೆ. ಕಣ್ಣಮುಚ್ಚಿ ಕುಳಿತುಬಿಡಮ್ಮ ತುರುಬಿನಲ್ಲಿ ಅಮೃತಗುಳಿಗೆಯನ್ನಿಡುತ್ತೇನೆ ಅಂತೇಳಿದ. ಇಟ್ಟನೊ ಇಲ್ಲವ್ರೊ? ಅರಮನೆಗೆ ಹೋಗುವತನಕ ಅವಳ ಮನಸ್ಸು ನಿಲ್ಲದೆ ಮಧ್ಯದಾರಿಯಲ್ಲಿ–

ಕೊಡವ ಇಳಿಸಾಳಲ್ಲೊ ರಾರೇರಿ
ಮಂಡೇಯ ಒದರಾಳಲ್ಲೊ
ಸಿವನ ಮಾಯ ನೋಡಿರಯ್ಯ
ಅಮೃತ ಗುಳಿಗೆ ಮಾಯವಾಗಿ
ಏಳು ಮಲ್ಲಿಗೆ ಹೂವಾದವ್ರೊ ರಾಮ
ಶಿವಶಂಬೊ ಮಾದೇವ.

ಪರಮಾತ್ಮನು ಎಂಥಾ ಮಹಿಮನಪ್ಪ? ಅಮೃತ ಗುಳಿಗೆಯು ಮಾಯವಾಗಿ ಮಲ್ಲಿಗೆ ಹೂವಾಗಿದ್ದಾವೆ. ಹೂವನ್ನು ಕಂಡು ಸಿರಿದೇವಿ ನಂಬಿದವರಿಗೆ ಒಂದು ಕಲ್ಲೇ ದೇವರು. ನಂಬದವರಿಗೆ ಜಗತ್ತಿನಲ್ಲಿ ದೇವರೇ ಇಲ್ಲ. ಶಿವನು ಕೊಟ್ಟ ವರ ಅವೇ ಎಂದು ನಂಬಿ ಆ ಏಳು ಮಲ್ಲಿಗೆಗಳನ್ನು ತನ್ನ ಮುಡಿಯಲ್ಲಿ ಮುಡಿದು ಅರಮನೆಗೆ ಬಂದಿದ್ದಾಳೆ. ಅಕ್ಕಗಳಿರಾ, ಪರಮಾತ್ಮನನ್ನು ಮೆಚ್ಚಿಸಿ ಆ ಶಂಕರನಲ್ಲಿ ವರತಂದಿದ್ದೇನೆ. ನಿಮಗೆಲ್ಲ ಕೊಡ್ತೀನಿ ಬನ್ನಿ ಅಕ್ಕ ಎಂದು ಆರು ಮಂದಿ ಅಕ್ಕಗಳನ್ನು ಕರೆಯುತ್ತಿದ್ದಾಳೆ. ಆ ಹುಟ್ಟು ಬಂಜೆ ಆಗಿದ್ದಂಥ ಅಕ್ಕಗಳು ತಂಗಿ ಕೊಡಮ್ಮ ತಂಗಿ. ಶಿವದರ್ಶನಮಾಡಿದ ನೀನು ಶಿವಶರಣೆ ಮಲ್ಲಮ್ಮ ಇದ್ದಂಗೆ. ಅಕ್ಕಮಹಾದೇವಿ ಇದ್ದಂಗೆ. ಕೊಡು ತಂಗಿ. ಹಾಗೆಂದು ಆರು ಜನಗಳು ಬಂದು ನಿಂತಿದ್ದಾರೆ. ಅವರ ಎದುರಿನಲ್ಲಿ ಕೊಡವನ್ನು ಕೆಳಗಿಳಿಸಿ ತನ್ನ ಮಂಡೆಯನ್ನು ಒದರುತ್ತಾಳೆ. ಒಂದು ಹೂವೇ ಮಾಯವಾಗಿಬಿಟ್ಟಿದೆ. ಅದೆಲ್ಲವ್ರೂ ಶಿವನ ಲೀಲೆ. ನಾವು ಒಂದು ಸಾಮಾನ್ಯ ವಸ್ತುವನ್ನೆ ಕಳೆದುಕೊಂಡಾಗ ಹತ್ತಾರು ಸಾರಿ ಹುಡುಕಿ ನೋಡ್ತೇವೆ. ಸಂತಾನ ಫಲವೆ ಕಳೆದುಹೋದಾಗ ದಾರಿಯೆಲ್ಲ ಹುಡುಕಿ ನೋಡಿದ್ಲು. ಒಂದು ಹೂವು ಸಿಗಲಿಲ್ಲ. ಆರು ಹೂವುನ್ನ ಕೈಯಲ್ಲಿ ಹಿಡಿದುಕೊಂಡು ಪರಮಾತ್ಮನು ಆರು ವರ ಕೊಟ್ಟಿದ್ದಾನೆ ಅಕ್ಕ. ಅದರಲ್ಲಿ ಐದು ವರ ನಿಮಗೆ ಕೊಡ್ತಿನಿ. ಒಂದು ವರ ನಾನು ಸೇವನೆ ಮಾಡ್ತೇನೆ. ಇಷ್ಟವಿದ್ದವರು

ಸೇವ್ನೆಮಾಡಬಹುದು ಎಂದು ಹೇಳಿದಳು. ಆರು ಜನ ದೇವಾಂಗನೆಯರು ಒಂದೇ ತಂದೆಯ ಮಕ್ಕಳಾದ್ದರಿಂದ ಒಬ್ಬರನ್ನು ಬಿಟ್ಟು ಒಬ್ಬರು ಸೇವನೆ ಮಾಡೊಹಂಗಿಲ್ಲ. ತಂಗಿ, ಆರು ಜನಗಳಿಗೆ ಐದು ವರ ಕೊಟ್ಟರೆ ಒಬ್ಬಳಿಗೆ ಕೋಟ್ರೆ ಒಬ್ಳಿಗೆ ಸಿಟ್ಟು. ಯಾರಿಗೆ ಕೊಡೂದು? ಯಾರಿಗೆ ಬಿಡೋದಮ್ಮ? ನೀನು ಮತ್ತೊಮ್ಮೆ ಶಿವನನ್ನು ಕಾಣಬಹುದು. ತಂದಿರುವ ಆರು ವರಗಳನ್ನು –

'ನಮಗೆ ಕೊಡೆ ತಂಗ್ಯವ್ವ' ಹರುನೆ ಮಾದೇವಿ
ಕೊಟ್ಟು ಬಂಜೆಯಾಗಲೇನ್ರೆ? ಹರುನೆ ಮಾದೇವಿ
ನನಗೆ ಒಂದು ಬಿಡಿರವ್ವ ಹರುನೆ ಮಾದೇವಿ
ಹೀಗಂದು ಬೇಡ್ಯಾಳೋ ಹರುನೆ ಮಾದೇವಿ
ಅಂಬ ಶಿವನೆ ಮಾದೇವಿ.

ಅಕ್ಕಗಳಿರ, ತಂದ ಆರು ವರಗಳನ್ನು ನಿಮಗೇ ಕೊಟ್ಟು ನಾನು ಬಂಜೆಯಲಾಗಲೆ ಅಕ್ಕ? ನನಗೊಂದು ಬಿಡಿ ಅಕ್ಕ. ಹಾಗೆಂದು ಒಬ್ಬರಿಗೊಬ್ಬರು ದುಕ್ಕ ಮಾಡ್ತಾ ಇದ್ದಾರೆ. ಅಷ್ಟರೊಳಗಾಗಿ ಪರಮಾತ್ಮನ ಪಾದವನ್ನು ಕಾಣಲಿಕ್ಕೆ ಹೋಗಿದ್ದಂತ ಯಾವ ಕಾಂಭೋಜರಾಜರು ಪಟ್ಣದ ಹೊರಗಡೆ ಬಂದು ಅರಮನೆಗೆ ವರ್ತಮಾನ ಕಳಿಸಿದರು. ವರ್ತಮಾನವನ್ನು ಕೇಳಿದಾಕ್ಷಣವೆ ಅಕ್ಕಗಳಿರಾ, ಯಾರೂ ಚಿಂತೆಮಾಡಬೇಡಿ. ನಮ್ಮ ದೊರಿಯು ಬಂದಿದ್ದಾರೆ. ಶಿವನನ್ನು ಮೆಚ್ಚಿಸಿ ಎಷ್ಟು ವರಗಳನ್ನು ತಂದಿದ್ದಾರೊ. ಆ ವರ ಈ ವರಗಳನ್ನು ಸೇರಿಸಿ ಎರಡೆರಡು ವರಗಳನ್ನು ಸೇವನೆ ಮಾಡೋಣ ಬನ್ನಿ ಎಂದು ಪತಿಯನ್ನೆ, ಪರಮಾತ್ಮನನ್ನು ಕರೆತಂದಂತೆ ಅರಮನೆಗೆ ಕರೆತಂದು ಆತನಿಗೆ ಸ್ನಾನ, ಪೂಜೆ, ಊಟ ಎಲ್ಲವನ್ನೂ ಮಾಡಿಸಿದರು. ಸಂತೋಷದಿಂದ ಬಂದು ಕೂತಿದ್ದಾರೆ ಮಹಾರಾಜರು. ಆ ಏಳು ಜನ ಅಕ್ಕತಂಗಿಯರು ಬಂದು ಪತಿಯ ಪಾದಕ್ಕೆ ಶರಣುಮಾಡಿಕೊಂಡು ಅಕ್ಕಪಕ್ಕದಲ್ಲಿ ಕುಳಿತುಕೊಂಡರು. ಕಿರಿಯವಳಾದ ಸಿರಿದೇವಿ, ಸ್ವಾಮಿ, ಪರಮಾತ್ಮನ ದರ್ಶನವಾಯಿತೆ? ಶಂಕರನು ಎಷ್ಟು ವರಗಳನ್ನು ಕೊಟ್ಟಿದ್ದಾನೆ? ಆ ವರಗಳನ್ನು ನಮಗೆ ಕೊಡಿ ಹಾಗೆಂದು ಕೇಳತಾವ್ರೆ. ಮಹಾರಾಜರಾದರೋ, ಸಿರಿದೇವಿ ಸಾಕು ಬಾಯ್ಮುಚ್ಚು. ಏಕೆ ಪ್ರಭು? ಎಲ್ಲಿದ್ದಾನೆ ದೇವರು? ಭೂಲೋಕದಲ್ಲಿ ಪೂಜೆಮಾಡುವ ದೇವರೆಲ್ಲವೂ ಕಲ್ಲು. ಹಾಗನ್ನಬೇಡಿ ಸ್ವಾಮಿ. ಒಂದು ವಾರ, ಏಳು ದಿವಸ ಅರಣ್ಯದಲ್ಲಿ ಅನ್ನನೀರು ತೊರೆದು ಧ್ಯಾನಮಾಡಿದರೂ ಆ ಶಿವನು ದರುಶನವನ್ನೇ ಕೊಡಲಿಲ್ಲ. ಆ ಶಂಕರನ ಸುದ್ದಿಯನ್ನು ನನ್ನ ಎದುರಲ್ಲಿ ಆಡಬೇಡ. ಹಾಗೆಂದು–

ಇಲ್ಲಾವ್ರೋ ದೇವಾರಿಲ್ಲಾವ್ರೋ
ಇಂಥ ಕಲ್ಲೀನ ಪ್ರತುಮೇಗೆ ಕೈಯ ಮುಗಿದಾರು
ಇಲ್ಲಾವ್ರೊ ದೇವರಿಲ್ಲಾವ್ರೋ ||ಪ||
ಕಂಚೀನ ಮಳೆಯಿಂದ ಕಡೆದ ಲಿಂಗಾನ ತಂದು
ಪಂಚಮುಖನೆಂದು ಪೂಜೇಯ ಮಾಡಿದರ
ಇಲ್ಲಾವ್ರೊ ದೇವಾರಿಲ್ಲಾವ್ರೊ.

ಸ್ವಾಮಿ ಹಾಗನ್ನಬಾರದು. ದೇವರಿಲ್ಲದ ವಸ್ತುವೇ ಇಲ್ಲ. ಪರಮಾತ್ಮನು ಎಲ್ಲೆಲ್ಲಿಯೂ ತಾನೇ ಆಗಿದ್ದಾನೆ.

ಎಲ್ಲಿರುವನು ನಿನ್ನ ಶಿವನು?
ಎಲ್ಲಿಹನೆಂದು ಪೂಜಿಸಲಿ
ಶಿವನಿಲ್ಲದ ತಾವ ಮತ್ತೆಲ್ಲಿ ತೋರಿಸಲಿ? ॥ಪ॥

ಕಲ್ಲಿನೊಳಗು ಶಿವ ಮಣ್ಣಿನೊಳಗು ಶಿವ
ನೀರಿನೊಳಗು ಶಿವ ಮರದಲ್ಲು ಶಿವನೆ ॥1॥

ಅಲ್ಲುಂಟು ಇಲ್ಲೆಂಬೂದಿಲ್ಲ
ಶಿವನಿಲ್ಲದ ವಸ್ತುವೆ ಇಲ್ಲ
ಅಲ್ಲುಂಟು ಇಲ್ಲಿಲ್ಲ ಎನ್ನುವ
ಮೂಢರಿಗೆ ಅಲ್ಲಲ್ಲಿ ತೋರಿಸಿಹನಲ್ಲ? ॥2॥

ಆ ಪರಮಾತ್ಮನು ಇಲ್ಲದ ವಸ್ತುವೇ ಇಲ್ಲ ಸ್ವಾಮಿ. ಅಂಥಾವನೇನು ನಿನ್ನ ಶಿವನು! ಹೌದು. ಆದರೆ ಶಿವನನ್ನು ಒಲಿಸುವುದು ಬಹಳ ಕಷ್ಟ ಸ್ವಾಮಿ.

ಶಕ್ತಿಗೆ ಸಿಕ್ಕದು ವಿರಕ್ತಿಗೆ ಸಿಕ್ಕದು
ಭಕ್ತಿಗೆ ಸಿಕ್ಕೈತೆ ಮುಕ್ತಿ.

ಅನ್ನಾಹಾರವನ್ನು ತೊರೆದು ಕುಂತರೂ ಆ ಶಿವನು ದರ್ಶನಕೊಡುವುದಿಲ್ಲ. ಭಕ್ತಿ ಇದ್ದರೆ ಆ ಶಿವನನ್ನು ಇಲ್ಲೇ ಕಾಣಬಹುದು. ನಾನು ಕುಂತ ಸ್ಥಳದಲ್ಲಿ ಆ ಶಿವನ ದರುಶನ ಮಾಡಿ ಆ ಶಂಕರನಲ್ಲಿ ಆರು ವರಗಳನ್ನು ತಂದಿದ್ದೀನಿ. ಆರು ವರಗಳಲ್ಲಿ ಐದು ವರಗಳನ್ನು ಅಕ್ಕಗಳಿಗೆ ಕೊಡುತ್ತೇನೆ. ನಾನೊಂದು ಸೇವನೆ ಮಾಡುತ್ತೇನೆ. ನಮಗೆ ಅಪ್ಪಣೆ ಕೊಡಬೇಕೆಂದು ಬೇಡುತ್ತಿದ್ದಾಳೆ. ಆರು ಜನ ದೇವಾಂಗನೆಯರಾದರೋ, ಸ್ವಾಮಿ, ತಂಗಿ ಮತ್ತೊಮ್ಮೆ ಶಿವನನ್ನು ಕಾಣಬಹುದು. ತಂದಿರೋ ಆರು ವರಗಳನ್ನು ನಮಗೇ ಕೊಡಿಸಿಬಿಡಿ ಹಾಗೆಂದು ಕೇಳುತ್ತಿದ್ದಾರೆ. ಮಹಾರಾಜರಾದರೋ ಸಿರಿದೇವಿ, ನೀನು ಬಹಳ ಭಕ್ತಿವಂತೆ. ತಂದಿರೋ ಆರು ವರಗಳನ್ನ ನಿನ್ನ ಅಕ್ಕಗಳಿಗೆ ಕೊಟ್ಟುಬುಡು. ಪತಿಯೇ ಪರದೈವ ಎಂದು ನಂಬಿದ ಸತಿಯರು ಪತಿಯ ಮಾತನ್ನು ಒಂದು ತೃಣವಾದರೂ ಮೀರುವುದಿಲ್ಲ. ತಮ್ಮ ಅವರೇ ಪತಿವ್ರತೆಯರು. ಅಂಥ ಪತಿವ್ರತೆಯಾದ ಸಿರಿದೇವಿ ಪತಿಯ ಮಾತಿಗೆ ಪ್ರತಿಹೇಳಲಾರದೇನೆ ಸ್ವಾಮಿ ನಿಮ್ಮಿಷ್ಟದಂತೆಯೇ ಆಗಲಿ. ಇಗೋ ತಂದಿರುವ ಆರು ವರಗಳನ್ನ, ಅಕ್ಕಗಳಿಗೆ ಕೊಡುತ್ತೇನೆ. ನನ್ನದೊಂದು ಮಾತು ನಡೆಸಬೇಕು ಸ್ವಾಮಿ. ಏನು ಮಾತು ಸಿರೀದೇವಿ? ಅವರುಗಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಹೆಣ್ಣಾಗಲಿ, ಗಂಡಾಗಲಿ ಹುಟ್ಟಿದ ಆರು ಮಕ್ಕಳನ್ನು ನನ್ನ ಮಡಿಲಿಗ್ಹಾಕಬೇಕು. ನನ್ನ ವಶ ಕೊಡಬೇಕು. ಹಾಗೆಂದು ಭಾಷೆಯನ್ನು ಕೊಟ್ಟರೆ ಆರು ವರಗಳನ್ನು ಅಕ್ಕಗಳಿಗೆ ಕೊಡುತ್ತೇನೆ. ಇದಕ್ಕೇನು ಹೇಳುವಿರಿ ದೇವಾಂಗನೆಯರೆ?

ಮಹಾಮಹದಾಜ್ಞೆ, ಇಗೋ ತಂಗಿ, ನಮ್ಮ ಬಂಜೆತನ ಹೋದರೆ ಸಾಕಮ್ಮ. ಹುಟ್ಟಿದ ಮಕ್ಕಳನ್ನು ಆ ತಕ್ಷಣವೆ ನಿನ್ನವಶ ಕೊಟ್ಟುಬಿಡುತೇನಮ್ಮ. ಮಡ್ಲಿಗಾಕತೇನಮ್ಮ ಎಂದು ತಂಗಿಗೆ ಆರು ಜನ ಭಾಷೆಕೊಡುತ್ತಿದ್ದಾರೆ ಅಕ್ಕಗಳಿಂದ ಭಾಷೆ ತೆಗೆದುಕೊಂಡು ಪರಮಾತ್ಮನಿಂದ ಪಡೆದ ಆರು ಮಲ್ಲಿಗೆ ಹೂವುಗಳನ್ನು ಅಕ್ಕಗಳಿಗೆ ಕೊಟ್ಟಿದ್ದಾಳೆ. ಅಕ್ಕಗಳು ಸೇವನೆಮಾಡಿ –

ಗರ್ಭಾವ ಧರಿಸ್ಯಾರೊ
ಶಿವಾ ಹರಾ ಎನ್ನ ದೈವೇ.

ಪರಮಾತ್ಮನ ಕರುಣ ಹರಿದು ಆರು ಜನ ದೇವಾಂಗನೆಯರು ಗರ್ಭವತಿಯರಾಗಿದ್ದಾರೆ. ನೋಡು ತಮ್ಮ, ಗರ್ಭಿಣಿ ಕಾಲದಲ್ಲಿ ಹೆಣ್ಣುಮಕ್ಕು ಯಾವಾಗಲೂ ಶಿವನ ಧ್ಯಾನಮಾಡುತಿರಬೇಕು. ಆರು ಜನ ದೇವಾಂಗನೆಯರು ಹಗಲು ರಾತ್ರಿ ಶಿವನ ಧ್ಯಾನಮಾಡ್ತಾ ಇದಾರೆ. ಶಂಕರನ ಕರುಣ ಹರಿದು ನವಮಾಸ ತುಂಬಿ–

ಗಂಡು ಮಕ್ಕಳ ಹೆತ್ತಾರಲ್ಲೋ ರಾರೇರಿ
ರಾಜಾಡಂಗುರ ಹೋಡಿಸ್ಯಾನೊ ರಾರೇರಿ
ಭೇರಿಗಳ ಬಡಿಸ್ಯಾನೊ
ಸಕ್ಕರೆ ಹಂಚ್ಯಾರಲ್ಲೊ
ಸೂತೂಕ ಕಳದಾರಲ್ಲೋ
ತಿಂಗಳಿಗೊಂದು ದಿವ್ಸ ಕಡಿಮ್ಯಾಗಿ ರಾರೇರಿ
ನಾಮಕರಣ ಮಾಡುತಾರೊ ರಾಮ ರಾರೇರಿ
ಶಿವಶಂಬೊ ಮಾದೇವ.

ಏಕಕಾಲದಲ್ಲಿ ಆರುಜನ ಗಂಡಮಕ್ಕು ಹುಟ್ಟಿದ್ದಾರೆ. ರಾಜನ ಸಂತೋಷಕ್ಕೆ ಸ್ಥಳವೇ ಇಲ್ಲ. ಪಟ್ಟಣದಲ್ಲೆಲ್ಲ ಡಂಗೂರ ಹೊಡಸಿ ಸಕ್ಕರೆ ಹಂಚಿಸಿದ್ದಾನೆ. ಒಂಬತ್ತು ದಿವ್ಸಕ್ಕೆ ಸೂತಕ ಪರಿಹಾರವಾಗಿ ತಿಂಗಳಿಗೊಂದು ದಿವಸ ಕಮ್ಮಿಯಾಗಿ ಮಕ್ಕಳಿಗೆ ನಾಮಕರಣ ಮಾಡುವ ಉದ್ದೇಶವಾಗಿ ಅರಮನೆ ಜೋಯಿಸರನ್ನು ಕರಿಸಿಬಿಟ್ಟಿದ್ದಾನೆ. ಜೋಯಿಸರು ಬಂದು ಬಿಟ್ಟಿದ್ದಾರೆ. ಜೋಯಿಸರೆ? ಏನು ಪ್ರಭು? ಇದೋ, ಮಕ್ಕಳಿಗೆ ನಾಮಕರಣವಾಗಬೇಕು. ಜೋಯಿಸರು ಮಕ್ಕಳು ಹುಟ್ಟಿದ ನಾಮ ನಕ್ಷತ್ರ ನೋಡಿ, ಮಹಾರಾಜರೆ ಈ ಆರುಮಕ್ಕಳು ಒಂದೇ ವಾರ ಒಂದೇ ನಕ್ಷತ್ರದಲ್ಲಿ ಹುಟ್ಟಿದ್ದಾರೆ. ಇವರಿಗೆ ಒಂದೇ ನಾಮಕರಣವಾಗಬೇಕು.

ಅರಸರಾಜಾರೆಂಬುತಾರೊ ಶಿವಾ ಹರ ದೈವೇ.

ಅರಸರಾಜರೆಂದು ನಾಮಕರಣಮಾಡಿ ಬೇಕಾದ ಫಲ ತಾಂಬೂಲಾದಿಗಳನ್ನು ತೆಗೆದುಕೊಂಡು ಜೋಯಿಸರಾದರೆ ಹೊರಟುಬಿಟ್ಟಿದ್ದಾರೆ. ಕಿರಿಯವಳಾದ ಸಿರಿದೇವಿ, ಹಿಂದೆ ಭಾಷೆ ಕೊಟ್ಟಂತೆ ಈ ಆರು ಮಂದಿ ಮಕ್ಳನ್ನ ನನ್ನ ಮಡ್ಲಿಗೆ ಹಾಕಬೇಕು. ನನ್ನ ವಶಕೊಡಬೇಕು ಅಂತ ಕೇಳ್ತಾ ಇದಾಳೆ. ಆರು ಜನ ದೇವಾಂಗನೆಯರಿಗೆ ಒಬ್ಬರಿಗೂ ಮನಸೆ ಇಲ್ಲ.

ಕಷ್ಟಕಾಲದಲ್ಲಿ ಇರುವಂಥ ಉದಾರ ಮನಸ್ಸು ಸುಖಬಂದಾಗ ಯಾರಿಗೂ ಇರುವುದಿಲ್ಲ. ಅಲ್ಲ ಅಕ್ಕ? ಈ ಆರು ಮಕ್ಕನ್ನು ನನ್ನ ವಶಕೊಡಬೇಕು. ನನ್ನ ಮಡ್ಲಿಗಾಕಬೇಕು ಅಂತ ಕೇಳ್ತಾಳಲ್ಲ? ಆ ಗೊಡ್ಡು ಮುಂಡೆ ಕೈಯಗೆ ಕೊಟ್ರೆ ಇಂಥ ಅರಗಿಣಿಯಂಥ ಮಕ್ಕಳನ್ನ ಅವಳು ಹೆಂಗ ಸಾಕ್ತಾಳವ್ವ? ನಾನಂತೂ ಕೊಡೊದಿಲ್ಲಪ್ಪ. ಒಬ್ರಿಗೂ ಕೊಡೊ ಮನ ಇಲ್ಲ. ರಾಜರಾದರೋ, ದೇವಾಂಗನೆಯರೆ ನುಡಿದಂತೆ ನಡೆಯುವುದೇ ಮನುಷ್ಯನ ಧರ್ಮ. ಹಿಂದೆ ನೀವು ಭಾಷೆಯನ್ನು ಕೊಟ್ಟಂತೆ ಈ ಆರು ಮಕ್ಕಳನ್ನು ಸಿರಿದೇವಿಯ ವಶಕೊಡಲೇಬೇಕು. ಆ ತಕ್ಷಣವೇ ಒಂದು ಮಂಟಪವನ್ನು ರಚಿಸಿ ಸಿರಿದೇವಿಗೆ ಹೊಸಬಟ್ಟೆಯನ್ನು ಉಡಿಸಿ ಆರು ಮೊರಗಳನ್ನು ತರಿಸಿ ಮಕ್ಕಳನ್ನು ಮೊರದಲ್ಲಿ ಹಾಕಿ ತಂಗಿ, ಇವು ನಮ್ಮ ಮಕ್ಕಳಲ್ಲಮ್ಮ, ನಿನ್ನ ಮಕ್ಕಳು. ಇಗೊ, ನಿನ್ನ ಇಷ್ಟಾನುಸಾರ ಮಕ್ಕಳನ್ನು ಸಾಕಬಹುದು ಎಂದು ಆರು ಮಂದಿ ಮಕ್ಕಳನ್ನು ಸಿರಿದೇವಿ ಮಡ್ಲುಗೆ ಹಾಕಿದ್ದಾರೆ. ಮಕ್ಕಳಿಗೆ ತೊಟ್ಲುಶಾಸ್ತ್ರ ಮಾಡ್ತಾ ಇದ್ದಾಳೆ. ಮಗು ಹುಟ್ಟಿದಾಗ ಹೊಸದಾಗಿ ತೊಟ್ಲುತಂದು ಮಕ್ಕಳಿಗೆ ತೊಟ್ಲು ಹಾಕಬೇಕಾದ್ರೆ ಹತ್ತಾರು ಜನ ಮುತ್ತೈದೆ ಹೆಣಮಕ್ಕಳನ್ನ ಕರಸಿ ಅವರಿಗೆಲ್ಲ ಅರಿಶಿಣ-ಕುಂಕುಮ, ಹಣ್ಣು ಸಕ್ಕರೆ ಕೊಟ್ಟು ತೊಟ್ಲನ್ನ ಹೂವಿನಿಂದ ಅಲಂಕಾರಮಾಡಿ, ಶಾಸ್ತ್ರಮಾಡಿ, ಜೋಗುಳ ಹಾಡಿಸಿದರೆ ಭಾಳ ಒಳ್ಳೇದಪ್ಪ. ಸಿರಿದೇವಿ ಹತ್ತಾರು ಜನ ಮುತ್ತೈದೆ ಹೆಣ್ಣುಮಕ್ಕನ್ನ ಕರಸಿ ಅವರಿಗೆಲ್ಲ ಅರಿಶಿಣ-ಕುಂಕುಮ ಕೊಟ್ಟು, ಹಣ್ಣು ಸಕ್ಕರೆ ಕೊಟ್ಟು, ಹೂವಿನಿಂದ ಅಲಂಕಾರ ಮಾಡಿ ಹ್ಯಾಗೆ ಜೋಗುಳ ಹಾಡ್ತಾರೆ ನೋಡಪ್ಪ-

ಹೂವೆಲೆ ಹೂವೆ ಮುದ್ದು ಹಣ್ಣೆ ತಾವರೆ ಮುದ್ದು
ಹಣ್ಣುಳ್ಳ ಮರಕೆ ಗಿಣೆ ಮುದ್ದು-ಕಂದಯ್ಯ
ನೀ ಮುದ್ದು ನಮ್ಮ ಮನಿಗೆಲ್ಲ.

ಯಾಲಕ್ಕಿ ಗಿಡ ಹುಟ್ಟಿ ಎಲಿಗೊಂದೆ ಕಾಯಾಗಿ
ಹೆಣ್ಣುಟ್ಟಿ ಹೆರರ ಮನಿಗಾಗಿ ಕಂದಯ್ಯ
ನೀ ಹುಟ್ಟಿ ಮನಿಗೆ ದೊರಿಯಾದೆ.

ಕಾಲಾಸೆ ಹೆಳವಾಗೆ ಕಣ್ಣಾಸೆ ಕುರುಡಾಗೆ
ವಸ್ತ್ರಾದ ಆಸೆ ಬಡವೇಗೆ-ಕಂದಯ್ಯ
ನಿನ್ನಾಸೆ ನಮಗೆ ಅನುಗಾಲ.

ಆಡಿ ಬಾ ಕಂದಯ್ಯ ಅಂಗಾಲ ತೊಳೆದೇನು
ತೆಂಗೀನಕಾಯ ತಿಳಿನೀರ-ತಕ್ಕಂಡು
ಬಂಗರುದ ಪಾದ ತೊಳದೇನು.

ಯಾತಯತರ ಗಾಳಿ ಎಲಿಯ ತ್ವಾಟದ ಗಾಳಿ
ಸುತ್ತಾಲು ಗಾಳಿ ಸುಳಿಗಾಳಿ-ಕಂದಯ್ಯ
ತೊಟ್ಲೇಲ ಗಾಳಿ ಮನಿತುಂಬ.

ನನ್ನಯ್ಯನಂತೋರು ಹನ್ನೆರಡು ಮಕ್ಕಳು
ಹೊನ್ನೇಯ ಬುಡದ ನೆರಳಾಗಿ–ಆಡುವಾಗ
ಸನ್ಯಾಸಿ ಜಪುವ ಮರುತಾನೊ.

ಇಂಥ ಸೊಗಸಾದ ಜೋಗುಳವನ್ನು ಹಾಡಿಕೊಂಡು ಮಕ್ಕಳನ್ನ ಭಾಳ ಚನ್ನಾಗಿ ಸಾಕ್ತಾ ಇದ್ದಾರೆ.

ಮಕ್ಕಳೆಂಗೆ ಬೆಳೀತಾವ್ರೊ ರಾರೇರಿ
ಬಾಳೆ ಬೆಳದಂಗೆ ಬೆಳೇದಾವ್ರೊ ರಾರೇರಿ
ಆರು ತಿಂಗಾಳು ಕಳದಾವಯ್ಯ ರಾಮ ರಾರೇರಿ
ಶಿವಶಂಬೋ ಮಾದೇವ.

ಆರು ತಿಂಗಳ ಕಳೆದುಹೋಗಿವೆ. ಹಿರಿಯರಾದ ಆರು ಜನ ದೇವಾಂಗನೆಯರು, ಹೆತ್ತ ತಾಯಿಗಳು ಮಕ್ಕಳನ್ನು ಕೊಟ್ಟು ಆರು ತಿಂಗಳಾಯಿತು. ಒಬ್ಬ ತಾಯಿ ಆರು ಮಕ್ಕಳನ್ನು ಹೇಗೆ ಸಾಕ್ತಾ ಇದ್ದಾಳೊ, ಹೋಗಿ ಮಕ್ಕಳಿಗೆ ಹಾಲು ಸಕ್ಕರೆಯನ್ನು ಕೊಟ್ಟು, ಮಕ್ಕಳನ್ನು ಎತ್ತಿ ಮುದ್ದಾಡಿ ಬರೋಣ ಎಂದು ಆರು ಜನ ಹೆತ್ತ ತಾಯರು ತಂಗಿಯ ಅರಮನೆಗೆ ಬಂದಿದ್ದಾರೆ. ಆರು ತಿಂಗಳ ಮಕ್ಕಳು ಒಂದು ವರ್ಷದ ಮಕ್ಕಳಿದ್ದಹಾಗಿವೆ. ಮಕ್ಕಳನ್ನು ಆಟವಾಡಿಸ್ತ ಕೂತಿದ್ದಾಳೆ ಸಿರಿದೇವಿ. ಆರು ಜನ ದೇವಾಂಗನೆಯರು ಬಂದು ಆ ಮಕ್ಕಳ ಆಟವನ್ನು ನೋಡುತ್ತಿದ್ದಾರೆ. ಆಡೋ ಮಕ್ಕಳು ಹೆತ್ತ ತಾಯಿಯರ ಮುಖವನ್ನು ಕಂಡ ಕೂಡಲೇ–

ಬೆದರಿ ಬೆದರಿ ಬೀಳುತಾವೆ ರಾರೇರಿ
ಚಿಟ್ಟಾನೆ ಚೀರುತಾವ್ರೊ ರಾರೇರಿ
ಸಿರಿದೇವಿಯನ ಅಪ್ಪುಚತಾವೆ ರಾರೇರಿ
ಶಿವಶಂಬೊ ಮಾದೇವ.

ಮಕ್ಕಳು ಬೆದರಿ ಹೋಗಿ ಆ ಸಿರಿದೇವಿಯನ್ನ 'ಬಾಚಿಕೊಳತಾವೆ'. ಅಯ್ಯೋ ಶಿವಶಿವ, ಇದೇನು ವಿಚಿತ್ರವಪ್ಪ? ಅಯ್ಯೋ ಮಕ್ಕಳಿರ, ಅವರೇ ನಿಮ್ಮ ಹೆತ್ತ ತಾಯಿಗಳು. ನಾನೊಬ್ಬಳು ಸಾಕಿದ ತಾಯಿ. ಹೆತ್ತ ತಾಯಂದಿರನ್ನು ನೋಡಿ ಹೆದರಬಹುದೆ? ಕಂದಗಳಿರ ಹೋಗಿ, ಅವರ ಬಳಿಗೆ ಹೋಗಿ ಅವರ ಪ್ರೀತಿಯನ್ನು ಪಡೆಯಿರಿ. ಅವರು ತಂದಿರುವಂಥ ಹಾಲು, ಸಕ್ಕರೆಯನ್ನು ಸೇವ್ನೆಮಾಡಿ ಎಂದು ಮಕ್ಕಳನ್ನು ಕೊಡಲಿಕ್ಕೆ ಹೋಗಿದ್ದಾಳೆ. ಏನು ಪ್ರಯತ್ನಮಾಡಿದರೂ ಮಕ್ಕಳು ಹೋಗಲಿಲ್ಲ. ತಂಗಿ, ಮಕ್ಕಳನ್ನು ಬಾಳ ಚೆನ್ನಾಗಿ ಸಾಕಿದ್ದೀಯಮ್ಮ, ನಿನ್ನನ್ನೇ ತಾಯಿ ಎಂದು ನಂಬಿದ್ದಾವೆ. ಎಲ್ಲಿಯಾದರೇನು? ಮಕ್ಕಳು ಬೆಳೆದರೆ ಆಯ್ತು. ನಮ್ಮ ವಂಶ ಉದ್ಧಾರವಾದರೆ ಸಾಕಮ್ಮ. ಈ ಹಾಲು, ಸಕ್ಕರಿಯನ್ನು ಮಕ್ಕಳಿಗೆ ಕೊಡಮ್ಮ ಎಂದು ತಂಗಿ ವಶಕೊಟ್ಟು ಆರು ಜನ ದೇವಾಂಗನೆಯರು–

ಅರಮನೆಗೆ ತಿರಿಗ್ಯಾರೊ ಶಿವಾ ನಾರಾಯಣೀ ದೈವೆ.

ಎಂದು ಅರಮನೆಗೆ ಬಂದು ಹಗಲು-ರಾತ್ರಿಯಲ್ಲಿ ಚಿಂತೆಯನ್ನೇ ಮಾಡುತ ಒಂದು ವರ್ಷ ಕಳೆದಿದ್ದಾರೆ. ಮಕ್ಕಳಿಗೆ ಒಂದೂವರೆ ವರ್ಷವಾಯಿತು. ಈಗಲಾದರೂ ಮಕ್ಕಳಿಗೆ ಜ್ಞಾನೋದಯ ಬಂದಿದೆ. ನಮ್ಮ ತಾಯಿ ಎಂದು ನಂಬಬಹುದಲ್ಲವೆ? ಬನ್ನಿ ಅಕ್ಕ, ಮಕ್ಕಳಿಗೆ ತಿಂಡಿ ಹಾಲು ಸಕ್ಕರೆ ಕೊಟ್ಟು ಬರೋಣವೆಂದು-

ತಂಗಿ ಮನೆಗೆ ಬಂದರಯ್ಯ ರಾರೇರಿ
ಆರು ಮಂದಿ ಮಕ್ಕಾಳಯ್ಯ ರಾರೇರಿ
ಅಂಗಳದೊಳಗೆ ಆಡುತಾವೆ ರಾರೇರಿ
ಹೆತ್ತ ತಾಯರು ಬಂದ್ರು ನೋಡ್ರಿ. ರಾರೇರಿ
ಮಕ್ಕಳಾಟವ ನೋಡುತಾರೆ ರಾರೇರಿ
ಆಡೋ ಮಕ್ಕಳ ನೋಡೀರಯ್ಯ ರಾರೇರಿ
ಅರಮನೆಯೊಳಗೆ ಓಡಾವಲ್ಲೇ ರಾಮ ರಾರೇರಿ
ಶಿವಶಂಬೋ ಮಾದೇವ.

ಹೆತ್ತತಾಯರು ಬಂದು ಮಕ್ಕಳಾಟವನ್ನು ನೋಡುತ್ತ ನಿಂತಿದ್ದಾರೆ. ಆಡುವ ಮಕ್ಕಳು ಅವರ ಮುಖವನ್ನು ಕಂಡಾಕ್ಷಣವೆ ಅರಮನೆಯೊಳಗೆ ಓಡಿಹೋಗಿ ಅಮ್ಮ, ಯಾರೋ 'ಮಾರೇರು' ಬಂದು ನಿಂತಿದಾರಮ್ಮ, ಅವರನ್ನು ನೋಡಿದರೆ ನಮಗೆ ಬಾಳ ಭಯವಾಗ್ತದೆ. ಬಾಗಲು ಮುಚ್ಚಿಬಿಡಮ್ಮ. ಹಾಗೆಂದು ಕೂಗಾಡುತ್ತಿದ್ದಾವೆ ಮಕ್ಕಳು. ಸಿರಿದೇವಿ ಹೊರಗೆ ಬಂದು ನೋಡುತ್ತಾಳೆ. ಅಕ್ಕಗಳು ನಿಂತಿದ್ದಾರೆ. ಶಿವಶಿವ ಇದೇನು ವಿಚಿತ್ರವಪ್ಪ? ಈ ಮಕ್ಕಳ ಮಾತನ್ನು ನನ್ನ ಅಕ್ಕಗಳು ಕೇಳಿದರೆ ನನಗೇನನ್ನಬಹುದು? ಈ ಗೊಡ್ಡುಮುಂಡಿ ಏನು ಚಾಡಿ ಹೇಳಿದ್ದಾಳೊ ಹಾಗೆಂದು ತಿಳಕೊಳ್ಳಬಹುದು. ಹಾಗೆಲ್ಲ ಹೆತ್ತ ತಾಯರನ್ನು ನಿಂದನೆಮಾಡಬಾರದು ಮಕ್ಕಳಿರ. ಭೂಲೋಕದಲ್ಲಿ ಯಾವ ಮಗನು ಹೆತ್ತ ತಾಯನ್ನು ನಿಂದನೆ ಮಾಡುವನೋ ಅವನು 'ರೌರವ ನರಕ' ಕ್ಕೆ ಬೀಳವನು. ಹೆತ್ತ ತಾಯಿ ಒಂದು ದೊಡ್ಡ ಸಮುದ್ರವಿದ್ದಂತೆ. ಹತ್ತಾರು ಕಾಲುವೆಗಳು ಎಂಥ ಕಲ್ಮಷವನ್ನು ತಂದುಹಾಕಿದರೂ ಸಮುದ್ರವು ಹೇಗೆ ಸ್ವಚ್ಛಮಾಡುವುದೋ ಹಾಗಂತೆ ಹೆತ್ತ ತಾಯಿ. ಹೆತ್ತ ತಾಯನ್ನು ನಿಂದನೆಮಾಡಬೇಡಿ. ಅವರೇ ನಿಮಗೆ 'ಜಲ್ಮ ಕೊಟ್ಟ ತಾಯಿಗಳು'. ನಾನೊಬ್ಬ ಸಾಕಿದ ತಾಯಿ. ಅವರ ಬಳಿಗೆ ಹೋಗಿ, ಅವರು ತಂದಿರುವ ತಿಂಡಿಯನ್ನು ಸೇವನೆ ಮಾಡಿ ಮಕ್ಕಳುಗಳಿರ.

ಅಮ್ಮ, ಅವರು ನಮ್ಮ ತಾಯವರಲ್ಲಮ್ಮ. ಅವರ ಬಳಿಗೆ ನಮ್ಮನ್ನು ಕಳುಗಬೇಡಮ್ಮ. ನೀನೇ ನಮಗೆ ಹೆತ್ತತಾಯಮ್ಮ. ಹಾಗೆಂದು ಮಕ್ಕಳು ಅವರುಗಳ ಬಳಿಗೆ ಹೋಗಲಿಲ್ಲ. ದೇವಾಂಗನೆಯರು ಮಕ್ಕಳ ಮಾತನ್ನು ಕೇಳಿ, ತಂಗಿ, ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ನಮ್ಮನ್ನೇ ನಿಂದ್ನೆಮಾಡಿದ್ರೆ ನಮಗೇನಾರ ಕೋಪವೇನಮ್ಮ? ತಂಗಿ ಹಿರಿಯೋರು ಮಾಡಿದ ಗಾದೆ ಸುಳ್ಳೇನಮ್ಮ, 'ಸಾಕಿದವರ ಕಡೆ ಮಕ್ಕಳು, ಪೂಜಿದವರ ಕಡೆ ದೇವರು' ಎನ್ನೊ ಗಾದಿ'? ಚಿಕ್ಕ ವಯಸ್ಸಿನಿಂದ ನೀನೇ ಸಾಕಿದ್ದರಿಂದ ನಿನ್ನನ್ನೇ ತಾಯೆಂದು ನಂಬಿದ್ದಾವೆ.

ಎಲ್ಲಿಯಾದರೇನು? ಮಕ್ಕಳು ಬೆಳೆದರೆ ಆಯಿತು. ನಮ್ಮ ವಂಶ ಉದ್ಧಾರವಾದರೆ ಸಾಕು. ಈ ಹಾಲು, ತಿಂಡಿ, ಸಕ್ಕರೆಯನ್ನು ಅವರಿಗೆ ಕೊಡಮ್ಮ ಎಂದು ಹೇಳಿ ತಿಂಡಿ, ಹಾಲು, ಸಕ್ಕರೆಯನ್ನು ತಂಗಿಯ ವಶಕ್ಕೆ ಕೊಟ್ಟುಬಿಟ್ಟು ಆರು ಜನ ದೇವಾಂಗನೆಯರು ಅರಮನೆಯಕಡೆ ತಿರುಗಿ –

ಹಡೆದು ಬಂಜೇರಾದೆವಲ್ಲೆ ರಾಮ ರಾರೇರಿ
ಬೇರೆ ಮಕ್ಕಳಾಗಲಿಲ್ಲ ರಾಮ ರಾರೇರಿ
ಅಕ್ಕ ಹ್ಯಾಗೆ ಮಾಡಲೇ? ಹರುನೆ ಮಾದೇವಿ
ಹ್ಯಾಗೆ ಹೊತ್ತ ಕಳೆಯಲೆ? ಹರುನೆ ಮಾದೇವಿ
ಅಂಬ ಶಿವನೆ ಮಾದೇವಿ.

ಮೂರು ವರ್ಷಗಳು ಕಳೆದುಹೋಗಿದ್ದಾವೆ. ಅಕ್ಕ, ಮೂರು ವರ್ಷವಾಯಿತು. ನಮಗೆ ಬೇರೆ ಮಕ್ಕಳಾದರೂ ಆಗಲಿಲ್ಲ. ಆ ಆರು ಮಕ್ಕಳಲ್ಲಿ ಒಬ್ಬರೂ ನಮ್ಮ ಬಳಿ ಬರಲಿಲ್ಲ. ಆ ಗೊಡ್ಡುಮುಂಡೆಯೇ ಭಾರಿ ಚಾಡಿಹೇಳಿದ್ದಾಳೆ. ಖಂಡಿತ ಅವರು ತಾಯವ್ರಲ್ಲ ಎನಿಸಿ ಕೈಬಿಟ್ಟ ಬಿಡತಾಳೆ. ಏನು ಮಾಡ್ಲಿ ಅಕ್ಕ ಎಂದವರ ಕಣ್ಣೀರು ತಪ್ಪೋ ಹಾಂಗಿಲ್ಲ.

ಅದೇ ಪಟ್ಟದಲ್ಲಿ 'ಜಾಟಗಾತಿ ಪರಿಯವ್ವ, ಅರಮನೆ ಮುಂದೆ ಹೋಗುತ್ತಿರುವಾಗ ಇವರು ಅಳುವುದನ್ನು ನೋಡಿ, ಅರಮನೆಯೊಳಗೆ ಹೋಗಿ 'ಯಾಕವ್ವ ಇಂಗೆ ಅಳ್ತಾ ಕುಂತಿದ್ರಿಯಲ್ಲವ್ವ. ರಾಜಾಧಿರಾಜರ ಹೆಂಡಿರಾಗಿ? ಏನ ಹೇಳ್ಲೆ ಪರಿಯವ್ವ. ಹುಟ್ಟಿದ ಆರು ಮಂದಿ ಮಕ್ಳನ್ನ ಆ ಗೊಡ್ಡುಮುಂಡೆ ಸಿರಿದೇವಿ ವಶಕೊಟ್ಟುಬಿಟ್ಟೆ. ಆದರೆ ಅವಳು ಏನು ಚಾಡಿ ಹೇಳ್ಯಾಳವ್ವ.? ನಾವು ಹೋದ್ರ, ಮಾರೇರ, ಚೌಡೇರ ಎಂದೆ ನಿಂದ್ನೆ ಮಾಡಲಿಕ್ಕ ಹತ್ತಾವ. ನಮ್ಮ ಬಳಿಗ ಬರಾಂಗಿಲ್ಲ. ಅಯ್ಯ ಮೂರು ವರ್ಷವಾಯ್ತವ್ವ. ನಮಗೆ ಬ್ಯಾರೆ ಮಕ್ಕಳಾದರೂ ಆಗಲಿಲ್ಲ. ನಾವ 'ಹೆಂಗ' ಹೊತ್ತು ಕಳೆಯಲ್ಹೇಳೆ ಪರಿಯವ್ವ.? ಅದಕ್ಕಿಷ್ಟು ದುಕ್ಕ ಮಾಡಿದೀರ? ಎದ್ದು ಬಿದ್ದು ಅರಮನೆ ಮುಂದೆ ತಿರಗತಿದ್ದೆ. 'ರವಷ್ಟು' ಹೇಳಿದ್ರೆ ಐದೇ ನಿಮಿಷದಲ್ಲಿ ಮಕ್ಳುನ್ನ ನಿಂ ಕಡೆ ತಿರಗಿಸತಿದ್ನಲ್ಲಮ್ಮ?

ಅಯ್ಯ ಮಣ್ಯಾತಗಿತ್ತಿ ಅಂಥ ವಿದ್ಯೆ ಇದೇನ?

ಅಂಥ ವಿದ್ಯೆ ಹೆಂಡ್ರುಗೆ ಗಂಡಿಲ್ದಂಗೆ. ಗಂಡಗೆ ಹೆಂಡ್ತಿಲ್ದಂಗೆ, 'ಪಂಚಂಪರೋಡಿ ಮಾಡುದಕೆ ನನಗೆ ಜಾಟಗಾತಿ ಪರಿಯವ್ವ ಅಂತಾರೆ. ಜಾಟಗಾತಿ ಪರಿಯವ್ವ ಅಂತ ಹೆಸ್ರು ಈ ಪಟ್ಟಣದಲ್ಲಿ. ಪರಿಯವ್ವ.? ಏನ್ರವ್ವ? ಆ ಮಕ್ಳು ನಂ ಕಡೆ ತಿರುಗಿದರೆ ಸಾಕವ್ವ. ಅಷ್ಟೇ ತಾನೆ? ನಾನು ಕೇಳಿದ ಸಾಮಾನು ತರ್ಸಿ ಕೊಟ್ರೆ ಐದೇ ನಿಮಿಷದಲ್ಲಿ ಆ ಮಕ್ಳು ನಿಂ ಕಡೆ 'ಗರ್ರನೆ ತಿರುಗಬುಡುವಂಗೆ' ಮಾಡತೀನ್ರಮ್ಮ. ಏನ ಸಾಮಾನು ಕೇಳತಾರಪ್ಪ ? ಒಂದ ಸೇರು 'ಗಾಂಜಾ'. ಒಂದ ಸೇರು 'ಅಪ್ನಿ', ಒಂದು ಸೇರು 'ಕಡ್ಲೆ. ಒಂದ ಸೇರು 'ಸಕ್ರೆ', ಒಂದ ಸೇರು 'ತುಪ್ಪ' ತರುಸಿಕೊಡ್ರವ್ವ. ಸಾಮಾನ್ನೆಲ್ಲ ತರುಸಿಕೊಡ್ತಾರೆ. ಸಾಮಾನ್ನೆಲ್ಲ ಅವಳ ಮನಗೊಯ್ದು ಗಾಂಜಾ–ಅಪ್ನಿ ಎಲ್ಲಾ 'ಅರದು' ಆರು ಲಾಡು, ಮಾಡ್ತಾಳೆ. ಲಾಡು ಉಂಡಿ, ಹಾಲು ಅರಮನಿಗೊಯ್ದು ಹಿಂದ ಹೆಂಗ ನೀವು ತಿಂಡಿ ಒಯತಿದ್ರ, ಹಾಂಗ ಇದೇ ತಿಂಡಿ ಒಯ್ದು ಕೊಟಬಂದುಬಿಡ್ರಿ. ಆ ಲಾಡು ಉಂಡಿ ತಿಂದ ಐದೇ ನಿಮಿಷದಾಗ ಆ ಆರು ಮಂದಿ ಮಕ್ಳು ನಿಂ ಕಡೆ ತಿರುಗಬಿಡತಾವ. ಅಷ್ಟಾದ್ರೆ ಸಾಕಮ್ಮ ಪರಿಯಜ್ಜಿ. ಅದೇ ಲಾಡ

ಉಂಡಿ ತಕ್ಕೊಂಡು ಆರು ಜನ ದೇವಾಂಗನೆಯರು–

ತಂಗಿ ಮನೆಗೆ ಬಂದಾರಲ್ಲೊ ರಾರೇರಿ
ಆರು ಮಂದಿ ಮಕ್ಕಳಯ್ಯ ರಾರೇರಿ
ಅಂಗಳದೊಳಗೆ ಆಡುತಾವ್ರೊ ರಾರೇರಿ
ಮಕ್ಕಳಾಟ ನೋಡತಾರೊ ರಾಮ ರಾರೇರಿ
ಶಿವಶಂಬೋ ಮಾದೇವ.

ಮೂರು ವರ್ಷದ 'ಮಕ್ಳು ಆರು ವರ್ಷದ ಮಕ್ಕಳಿದ್ದಾಗಿವೆ.' ಆದ್ರೆ ಆರು ಮಕ್ಳು ಅಂಗಳದಲ್ಲಿ ಆಟ ಆಡತಾ ಇವೆ. ಬಂದಂತ ದೇವಾಂಗನೆಯರು ಅರಮನೆಗೆ ಹೋಗಿ ತಂಗಿ ನಾವು ಈ ದಿವ್ಸ ಹಬ್ಬಮಾಡಿದ್ದವಮ್ಮ. ಲಾಡು ಉಂಡಿ ಮಾಡಿದ್ದಿವಿ. ಮಕ್ಕಳಿಗೆ ಕೊಟ್ಟು ಹೋಗಬೇಕಂತ ಬಂದಿವವ್ವ. ಈಗ ಮಕ್ಳು ಎಲ್ಲೋಗಿದ್ದಾವವ್ವ? ಆಟ ಆಡತಾವಕ್ಕ. ಒಳ್ಳೇ ಕೆಲಸ. ಭಾಳ ಚನ್ನಾಗಿ ಸಾಕಿದ್ದೇಯಮ್ಮ. ಇಗೋ ಈ ಲಾಡು, ಉಂಡಿ ಹಾಲನ್ನು ಮಕ್ಕಳಿಗೆ ಕೊಡಮ್ಮ ಎಂದು ತಂಗಿ ವಶಕೊಟ್ಟ ಆರು ಮಂದಿ ದೇವಾಂಗನೆಯರು ಅರಮನೆಗೆ ಹಿಂತಿರುಗಿದ್ದಾರೆ.

ಆಡೋ ಮಕ್ಕಳನ್ನು ಸಿರಿದೇವಿ ಹ್ಯಾಂಗ ಕರೀತಿದಾಳಪ್ಪ? ನಮ್ಮ ತಾಯಾರು ಕರೀತಾರೊ ತಮ್ಮ. ಹ್ಯಾಗ ಕರಿತಾರೊ ನಮ್ಮ ತಾಯರು? ಎಲ್ಲಿ ಹೋಗಿದ್ದಿ ಬಾರೋ, ಎರಕಲ್ಲ ಮಲ್ಲ ಬಾರೋ. ನೀ 'ನೆಗೆದು ಬಿದ್ದೋಗ' ಊಟ ಮಾಡು ಬಾರೋ ನಿನ್ನ 'ಉಳ್ದೋಗ' ಊಟ ಮಾಡು. ನಿನ್ನ ಕಲ್ಡಿಕಡಿಯ ಬಾರೊ. ಇದೆ ಏಕವಚನ ಯಾವಾಗಲೂ ನಂ ಹೆಣ್ಣು ಮಕ್ಳು ಕರಿಯೋದು! ಆದ್ರೆ ತಾಯರು ಯಾವಾಗಲೂ ಮಕ್ಳನ್ನ ನಿಂದ್ನೆ ಮಾಡಬಾರದಪ್ಪ. ಸಿರಿದೇವಿ ಆಡೋ ಮಕ್ಳನ್ನ ಹ್ಯಂಗೆ ಕರೀತಾಳಪ್ಪ?

ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ
ತಾಯ್ನಾಡು ಜಯಭೇರಿ ನಾವಾಗುವೆನ್ನಿ.

ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ
ಗೆಳೆತನದ ವರದ ಹಸ್ತ ನೀಡಿ ಬನ್ನಿ
ಮಲೆತಿರುವ ಭೇದಗಳ ಬಿಟ್ಟು ಬನ್ನಿ

ಒಂದೆ ತಾಯಿಯ ಮಡಿಲ ಮಕ್ಕಳೆನ್ನಿ
ಒಂದೆ ತಾಯಿಯ ನುಡಿಯ ನುಡಿವೆವೆನ್ನಿ
ಕೀಳು ನಾವೆಂಬುವರ ಕಣ್ತೆರೆವೆರೆನ್ನಿ
ಬೀಳು ನಾವೆಂಬುವರ ಬಾಯ್ಮುಚ್ಚಿ ಬನ್ನಿ ॥ ಕನ್ನಡದ ॥

ಗಂಗ ಕದಂಬಾದಿ ಚಾಲುಕ್ಯ ರಾಷ್ಟ್ರಕೂಟ
ಯಾದವ ಬಲ್ಲಾಳ ವಿಜಯನಗರ ವೀರರ

ಗತವೈಭವ ಕಾಣುವ ನವಶಕ್ತಿಯ ತುಂಬುವ
ಭುವನೇಶ್ವರಿ ನೀಡುವ ಸಂದೇಶ ಸಾರುವ ॥ ಕನ್ನಡ ॥

ಬನ್ನಿ ಮಕ್ಕಳೆ ಎಲ್ಲರೂ ಒಂದೇ ತಾಯಿಯ ಮಕ್ಕಳಿದ್ದಂತಿರಬೇಕು. ನಾವೆಲ್ಲರೂ ಭಾರತ ತಾಯಿಯ ಮಕ್ಕಳು. ಬನ್ನಿ ಮಕ್ಕಳೆ. ಹಾಗೆಂದು ಆರು ಮಕ್ಕಳನ್ನು ಮಂಚದ ಮ್ಯಾಲೆ ಕೂರಿಸಿ ಹೆತ್ತ ತಾಯರು ಕೊಟ್ಟಂಥ ಲಾಡು ಉಂಡಿ ಹಾಲನ್ನ ಮಕ್ಕಳಿಗೆ ಕೊಟ್ಟಿದ್ದಾಳೆ. 'ಲಾಡು ಉಂಡಿ'ಯನ್ನು ತಿಂದು ಹಾಲ ಕುಡಿದ ಐದೇ ನಿಮಿಷದಲ್ಲಿ ಅಫ್ನಿ-ಗಾಂಜಾ ಎಂದರೆ ಸಾಮಾನ್ಯವೇ ಅಪ್ಪಾ? ದೊಡ್ಡೋರು ಬದುಕೋದೆ ಕಷ್ಟ. ಹಸುಮಕ್ಕಳು ಬದುಕುವುದುಂಟೆ? ಐದೇ ನಿಮಿಷದಲ್ಲಿ–

ಜ್ಞಾನತಪ್ಪಿ ಬಿದ್ದಾವಲ್ಲೊ ರಾರೇರಿ
ಉಳ್ಳಾಡಿ ಹೋಗುತಾವ್ರೋ ರಾರೇರಿ
ಮಂಚದ ಕೆಳಗೆ ಉರಳ್ಯಾವಲ್ಲೊ ರಾರೇರಿ
ಮಕ್ಕಳ ನೋಡುತಾಳೊ ರಾರೇರಿ

ಅವಳ ದುಕ್ಕ ನೋಡಯ್ಯ ಹರುನೆ ಮಾದೇವಿ
ಏನು ಬಂತು ಮಕ್ಕಳಾ ಹರುನೆ ಮಾದೇವಿ
ಬಾಚಿಬಾಚಿ ಹಿಡಿತಾಳೆ ಹರುನೆ ಮಾದೇವಿ
ಮಕ್ಕಳು ನಿಲ್ಲಾವಲ್ಲಯ್ಯ ಹರುನೆ ಮಾದೇವಿ
ಅಂಬ ಶಿವನೇ ಮಾದೇವಿ.

ಇದ್ದಕ್ಕಿದ್ದ ಹಾಗೆ ಮಕ್ಕಳು ಜ್ಞಾನಹಾರಿ ಮಂಚದ ಕೆಳಗೆ ಉರುಳಿಉರುಳಿ ಬೀಳ್ತಾ ಇದ್ದಾವೆ. ಪರಮಾತ್ಮ, ಇದೇನು ವಿಚಿತ್ರವಪ್ಪ? ನಾನಾದರೋ ಹುಟ್ಟುಬಂಜೆ. ಆರು ಜನ ಮಕ್ಕಳಿಗೆ ಇಂಥ ಕಾಯಿಲೆ ಇದ್ದಕ್ಕಿದ್ದ ಹಾಗೆ ಬರಬಹುದೆ? ಹಾಗೆಂದು ಆರು ಮಕ್ಕಳನ್ನು ಬಾಚಿಬಾಚಿ ಹಿಡಿಯುತ್ತಿದ್ದಾಳೆ. ಮಕ್ಕಳು ನಿಲ್ಲೋ ಹಾಗಿಲ್ಲ, ಪ್ರಜ್ಞೆತಪ್ಪಿ ಉಳ್ಳಾಡಿತ್ತಿದ್ದಾವೆ. ಮತ್ತೈದು ನಿಮಿಷ ಕಳಿವುದರೊಳಗಾಗಿ ವಾಂತಿ ಬೇಧಿ ಶುರುವಾಗಿಬಿಡತು. ಮೂರು ನಾಲ್ಕು ವಾಂತಿ ಬೇಧಿ ಆಗುವುದರೊಳಗಾಗಿ ಮಕ್ಕಳು ಬಿದ್ದಲ್ಲಿಯೇ ಬಿದ್ದುಬಿಟ್ಟಿದ್ದಾವೆ. 'ಹಾಕಿದ ಕೈ, ಹಾಕಿದ ಕಾಲು.' ಕಣ್ಣೆಲ್ಲ ಹೊಳದು ಹೋಗಿದ್ದಾವೆ. ನಮ್ಮ ಮನೆಗಳಲ್ಲಿ ಒಂದು ಮಗುವಿಗೆ ವಾಂತಿ ಬೇಧಿ ಆಗುತ್ತಿದ್ದರೆ ಮನೆ ಮಂದಿ ಎಲ್ಲ ಎತ್ತಿಎತ್ತಿ ಸೋತುಹೋಗುತ್ತೇವೆ. ಆರು ಮಂದಿ ಮಕ್ಕನ್ನು ಒಬ್ಬ ತಾಯಿ ಎಷ್ಟು ಉಪಚಾರ ಮಾಡಿರಬಹುದು?

ಆಯ್ಯಾ ಪರಮಾತ್ಮ, ನಾನಾದರೊ ಮಕ್ಕಳಿಲ್ಲದ ಗೊಡ್ಡುಮುಂಡೆ. ನನ್ನ ಸ್ವಾಮಿಯಾದರೋ ನಿನ್ನಿಂದಲೇ ನನ್ನ ವಂಶ ಉದ್ದಾರವಾಯಿತೆಂದು ನನ್ನನ್ನೇ ಹೊಗಳುತ್ತಿದ್ದಾರೆ. ಅವ್ರು ಬಂದು ನೋಡುದರೆ ನನಗೇನನ್ನಬಹುದು? ಅಯ್ಯೊ, ಹೆತ್ತತಾಯಿಯರು ಬಂದು ನೋಡಿದರೆ ನನಗೇನನ್ನಬಹುದು? ಹಾಗೆಂದು ಮಕ್ಕಳನ್ನು ಬಾಚಿ ಹಿಡಿದುಕೊಂಡು ಅರಮನೆಯ ಹೊರಗೆ ಬಂದು ಇನ್ನು 'ನಗಾರಿ'ಯನ್ನು ಬಡಿದಿದ್ದಾಳೆ. ನಗಾರಿಯ ಶಬ್ದ 'ರಾಜಾಸ್ಥಾನ'ಕ್ಕೆ ಕೇಳಿದಾ

ಕ್ಷಣವೇ ಮಹಾರಾಜರಾದರೋ, ಮಂತ್ರಿ ನನ್ನ ಸತ್ಯದ ಸಿರಿದೇವಿ ಏತಕ್ಕೆ ನಗಾರಿ ಬಾರಿಸಿದಳು? ಏನು ವಿಷಯ ಕೇಳಿ ತಿಳಿದುಕೊಂಡು ಬಾ. ಆಗಬಹುದು ಪ್ರಭು. ತಕ್ಷಣವೇ ಮಂತ್ರಿ ಓಡಿ ಬಂದಿದ್ದಾನೆ. ತಾಯೆ, ಯಾತಕ್ಕೋಸ್ಕರವಾಗಿ ನಗಾರಿಯನ್ನು ಬಡಿದೆಯಮ್ಮ? ಸಿರಿದೇವಿ ಮಂತ್ರಿಯನ್ನು ಎಂದೆಂದೂ ಅರಮನೆಯ ಒಳಗೆ ಕರೆದವಳೇ ಅಲ್ಲ–

ಅಣ್ಣ ಒಳಗೆ ಬಾರಯ್ಯ ಹರುನೆ ಮಾದೇವಿ
ಮಂತ್ರಿ ಒಳಗೆ ಕರೆದಳೊ ಹರುನೆ ಮಾದೇವಿ
ಅಣ್ಣ ಮಕ್ಕಳ ನೋಡಯ್ಯ ಹರುನೆ ಮಾದೇವಿ
ಮಾಯದ ಕಾಯ್ಲೆ ಬಂತಲ್ಲೊ ಹರುನೆ ಮಾದೇವಿ
ಅಂಬ ಶಿವ್ನೆ ಮಾದೇವಿ.

ಮಂತ್ರಿಯನ್ನು ಒಳಗೆ ಕರೆದು ಅಣ್ಣಯ್ಯ ಇದೇನು ವಿಚಿತ್ರ? ಅಣ್ಣ ನಾನು ನಿರಪರಾಧಿಯಣ್ಣ. ಇದರ ವಿಚಿತ್ರವನ್ನು ನಾನು ಹೇಳಲಾರೆ. ಆಹಾರದಲ್ಲೇನಾದರೂ ವ್ಯತ್ಯಾಸವಾಯಿತೆ ತಾಯಿ! ಇದು ವಿಚಿತ್ರವಾಗಿದೆ ಅಣ್ಣ. ನಾನೇನನ್ನು ಹೇಳಲಾರೆ ಅಣ್ಣ. ಆ ತಕ್ಷಣವೇ ಮಂತ್ರಿ ಗಾಬರಿಬಿದ್ದು ರಾಜಾಸ್ಥಾನಕ್ಕೆ ಓಡಿದ್ದಾನೆ. ಮಕ್ಕಳನ್ನು ಎತ್ತಿಕೊಂಡು ಕುಳಿತ್ತಿದ್ದಾಳೆ. ಹೆತ್ತ ತಾಯರು ಕೊಟ್ಟಂತ ತಿಂಡಿಯಿಂದಲೇ ಮಕ್ಕಳಿಗೆ ಕಾಯಿಲೆ ಬಂದಿರುವುದು ಅವಳಿಗೆ ಚೆನ್ನಾಗಿ ಗೊತ್ತಿದೆ. 'ಚಿತ್ರಪಠ'ದಲ್ಲಿದ್ದ ಹಂಸಪಕ್ಷಿ ಜೀವದಿಂದ ಹಾರಿಬಂದು 'ಮುತ್ತಿನಹಾರ' ನುಂಗಿದ್ದನ್ನು ವಿಕ್ರಮ ಕಣ್ಣಾರೆ ಕಂಡ. ಹೇಳಿದರೆ ಯಾರಾದರೂ ನಂಬಿದರೆ ? ಹೆತ್ತ ತಾಯಂದಿರು ಕೊಟ್ಟ ತಿಂಡಿಯಿಂದಲೇ ಮಕ್ಕಳಿಗೆ ಇಂಥ ಕಾಯಿಲೆ ಬಂದಿತೆಂದು ಹೇಳಿದರೆ ಯಾರಾದರೂ ನಂಬುವರೆ? ಇದೆಲ್ಲವೂ ಶಿವನಾಟ. ಪರಮಾತ್ಮ ನಿನ್ನ ಕರುಣವಿದ್ದಂತೆ ಆಗಲಿ ಎಂದು ಸಿರಿದೇವಿ ಮಕ್ಕಳನ್ನು ಎತ್ತಿಕೊಂಡು ಕುಳಿತಿದ್ದಾಳೆ. ರಾಜನಿಗೆ ವರ್ತಮಾನ ಹೋದಾಕ್ಷಣವೆ ರಾಜರು ಧಾವಿಸಿ ಸಿರಿದೇವಿ ಅರಮನೆಗೆ ಬರುತ್ತಿದ್ದಾರೆ. ಆರು ಜನ ದೇವಾಂಗನೆಯರು ಈ ವಿಷಯ ಕೇಳಿದ ಕೂಡಲೆ ಬೊಬ್ಬಿಟ್ಟುಕೊಂಡು ಬರುತ್ತಿದ್ದಾರೆ–

ಅವರ ಗೋಳ ನೋಡಯ್ಯ ಹರುನೆ ಮಾದೇವಿ
ಏನು ಮೋಸಮಾಡಿದ್ರೆ ಹರುನೆ ಮಾದೇವಿ
ಗೊಡ್ಡು ಮುಂಡೆಯಲ್ಲಿ ಹರುನೆ ಮಾದೇವಿ
ಆರು ಮಕ್ಕಳ ಕೊಡಿಸಿ ಹರುನೆ ಮಾದೇವಿ
ವಿಷವ ಹಾಕಿಬಿಟ್ಟಳೊ ಹರುನೆ ಮಾದೇವಿ
ಅಂಬ ಶಿವನೆ ಮಾದೇವಿ.

ಆರು ಜನ ಹೆತ್ತ ತಾಯಿಯರು ಬಂದು ಸ್ವಾಮಿ, ಎಂಥ ಮೋಸ ಮಾಡಿಬಿಟ್ರೆ? ಮೂರು ವರ್ಷಗಳಿಂದ ಯಾವಾಗ ಅವಳಿಗೆ ಮಕ್ಕಳು ಆಗಲಿಲ್ಲವೋ, ಯಾರಿಗೂ ಮಕ್ಕಳೇ ಇರಬಾರದೆಂದು ಖಂಡಿತವಾಗಿ ವಿಷವನ್ನು ಕೊಟ್ಟುಬಿಟ್ಟಳೆಂದು ಆ ನಿರಪರಾಧಿಯ ಮೇಲೆ ಈ ಪಾಪಿಗಳು ಚಾಡಿಹೇಳುತ್ತಿದ್ದಾರೆ. ರಾಜನ ಮನಸ್ಸು ಒಪ್ಪೋ ಹಾಗಿಲ್ಲ. ದೇವಾಂಗನೆಯರೆ, ಬಾಯಿಮುಚ್ಚಿ. ಸಿರಿದೇವಿ ಎಂದಿಗೂ ಮಕ್ಕಳಿಗೆ ವಿಷವನ್ನು ಕೊಡುವವಳಲ್ಲ. ದೇವಿ, ಇದು

ಏನಾದರೂ ವ್ಯತ್ಯಾಸ ನಡೆದಿದ್ದರೆ ಹೇಳು. ಮಂತ್ರಿ, ಸಿರಿದೇವಿ ಎಂದಿಗೂ ಅಸತ್ಯವನ್ನು ನುಡಿವಳಲ್ಲ. ವೈದ್ಯರನ್ನು ಕರೆಸು, ಮಕ್ಕಳನ್ನು ಪರೀಕ್ಷಿಸಿ ನೋಡೋಣ. ವೈದ್ಯರು ಬಂದು ಪರೀಕ್ಷೆಮಾಡಿ, ಖಂಡಿತ ವಿಷಬಿದ್ದಿದೆ, ಮಕ್ಕಳು ಬದುಕೋದು ಕಷ್ಟ ಎಂದು ಹೇಳಿಬಿಟ್ರು. ರಾಜನಿಗೆ ತಡೆಯಲಾರದಷ್ಟು ದುಕ್ಕ. ಸಿರಿದೇವಿ, ನಿನ್ನಿಂದಲೇ ನನ್ನ ವಂಶ ಉದ್ಧಾರವಾಯಿತೆಂದು ನಿನ್ನನ್ನೇ ಹೊಗಳುತ್ತಿದ್ದೆ. ನೀನು ಸಾಕಿ ಬೆಳೆಸಿದ ಸಸಿಗಳನ್ನು ನೀನೇ ಕತ್ತರಿಸಿ ಹಾಕಿದೆಯ ? 'ಪಾಪಿಮುಂಡೆ', ಪಾಪಿ ಮುಂಡೆ. ಇಷ್ಟೊಂದು ಪ್ರೇಮದಿಂದ ಮಕ್ಕಳನ್ನು ಸಾಕಿ ಯಾವ ಕೈಯಿಂದ ವಿಷವನ್ನು ಕೊಟ್ಟೆ? ಅಯ್ಯೋ ಪಾಪಿ ಮುಂಡೆ. ನಿನ್ನನ್ನು ನೋಡಲಾರೆನಲ್ಲ. ನಿಂದಿಸಬೇಡಿ ಸ್ವಾಮಿ ನನ್ನನ್ನು. ತಡೆಯಲಾರದಷ್ಟು ದುಕ್ಕ, ತಡೆಯಲಾರದಷ್ಟು ಕೋಪ. ಆದರೆ ಆ ಮಕ್ಕಳನ್ನು ನೋಡಿದಾಕ್ಷಣವೇ ರಾಜನು ತಡೆಯಲಾರದೆ, ಏಳು ಜನ ಬಂಟ ರಾವುತರನ್ನು ಕರೆಸಿದ. ಬಂಟರಾವುತರೆ? ಏನು ಪ್ರಭು? ನನ್ನ ಮಕ್ಕಳಿಗೆ ವಿಷವನ್ನು ಕೊಟ್ಟಂಥ ಈ ಪಾಪಿಮುಂಡೆಯನ್ನು 'ಏಳು ಹೊರೆ ಹುಣಸೆ ಬರಲನ್ನು ತಂದು, ಉಕ್ಕಿನ ಕಂಬಕ್ಕೆ ಕಟ್ಟಿ', 'ಹೆಜ್ಜೆಗೆ ರಯ್ತ ಇಳಿಯವರೆಗ್ಗೂ'–

ಹೊಡೆಯಿರೆಂದು ಹೇಳುತಾನೆ ರಾರೇರಿ
ಕಣ್ಣಕಟ್ಟಿ ಹೋಡೀತಾರೊ ರಾರೇರಿ
ರಯ್ತ ಸೋರಿ ಹೋಗುತಾವೊ ರಾರೇರಿ
ಬಾಧೆ ತಾಳಲಾರಳಯ್ಯ ರಾಮ ರಾರೇರಿ
ಹೊಡಿಸಬೇಡೋ ನನ್ನ ದೊರಿಯೆ ರಾಮ ರಾರೇರಿರಿ
ಶಿವಶಂಬೊ ಮಾದೇವ.

ವಿಚಿತ್ರ, ವಿಚಿತ್ರವಾಗಿ ರಕ್ತವು ಚೆಲ್ಲಾಡುವಂತೆ ಹೊಡೆಯುತ್ತಿದ್ದಾರೆ. ಬಾಧೆಯನ್ನು ಸಹಿಸಲಾರದೆ ಸಿರಿದೇವಿ ಸ್ವಾಮಿ, ಇಷ್ಟೊಂದು ವಿಚಿತ್ರ ಹಿಂಸೆಯನ್ನು ಕೊಡುವುದಕ್ಕಿಂತ ನಿಮ್ಮ ಕೈಯಲ್ಲಿರುವ ಖಡ್ಗದಿಂದ ಒಂದೇ ಬಾರಿಗೆ ನನ್ನ ಪ್ರಾಣವನ್ನು ಕಳೆಯಬಾರದೆ ಸ್ವಾಮಿ? ಥೂ ಚಾಂಡಾಲಿ. ನನ್ನ ಮಕ್ಕಳಿಗೆ ವಿಷವನ್ನು ಕೊಟ್ಟಂಥ ಪಾತಕಿ. ಸ್ವಾಮಿ ನನ್ನನ್ನು ರಕ್ಷಿಸು. ಹಾಗೆಂದು ಪಾದವನ್ನು ಹಿಡಿಯುತ್ತಿದ್ದಾಳೆ. ನೆಲಕ್ಕೆ ಸೊರಗಿ ಬಿದ್ದಿದ್ದಾಳೆ. ರಾಜನು ನೋಡಲಾರದೆ, ಬಂಟ ರಾವುತರೆ ಶಿಶುಹತ್ಯೆ ಮಾಡಿದ ಈ ದ್ರೋಹಿಯನ್ನು ಇಲ್ಲಿ ಪ್ರಾಣತ್ಯೆ ಮಾಡಬೇಡಿ. 'ಹನ್ನೆರಡು ಗಾವುದ ದೂರ ಒಯ್ದು ಹಕ್ಕಿ ಪಕ್ಷಿ ನೀರು ನೆಳ್ಳು' ಇಲ್ಲದ ಸ್ಥಳದಲ್ಲಿ ದೊಡ್ಡ ಸಮಾಧಿಯನ್ನು ತೆಗೆದು, ಸಮಾಧಿಯಲ್ಲಿ ಮುಳ್ಳಿನ ಹಾಸಿಗೆಯನ್ನು ಹಾಸಿ, ಪ್ರಾಣಸಹಿತವಾಗಿ ಮುಳ್ಳಿನ ಮೇಲೆ ಹಾಕಿ, ಎದಿಯ ಮ್ಯಾಲೆ ಹಾಸುಗಲ್ಲನ್ನು ಎಳದು ಬನ್ರಿ. ಎಳೆದುಕೊಂಡು ಹೋಗಿ. ಹಾಗೆಂದು ಏಳು ಜನ ಬಂಟ ರಾವುತರಿಗೆ ಅಪ್ಪಣೆ ಮಾಡಿದ್ದಾನೆ. ನಿರಪರಾಧಿಯಾದ ಸಿರಿದೇವಿಯನ್ನ ರಾಜಾಜ್ಞೆಯಂತೆ ಬಂಟರಾವುತರು ಕಾಡಿಗೆ ಕರೆದುಕೊಂಡು ಹೊರಟಿದ್ದಾರೆ. ಪಟ್ಟಣದ ಗಂಡು ಹೆಣ್ಣು ಎಲ್ಲರೂ ಆ ಸಿರಿದೇವಿಯನ್ನು ನೋಡಿ ಕಣ್ಣೀರುಹಾಕುತ್ತಿದ್ದಾರೆ. ಸಿರಿದೇವಿ ಬಾಳ ಸತ್ಯವಂತೆ. ಆರು ಜನ ಅಕ್ಕಗಳಿಂದ ಆ ಸಿರಿದೇವಿಗೆ ಎಂಥ ಕಷ್ಟ ಬಂದಿತು? ಅಯ್ಯೋ ಅಮ್ಮ ನಮ್ಮನ್ನು ಬಿಟ್ಟು ಹೋಗತೀಯಮ್ಮ? ತಾಯಿಯನ್ನು ಕಳೆದುಕೊಂಡು ಮಕ್ಕಳಂತೆ ಆ ಪಟ್ಟಣದ ಪ್ರಜೆಗಳೆಲ್ಲರೂ ಕಣ್ಣೀರುಹಾಕುತ್ತಿದ್ದಾರೆ. ಆ ಪ್ರಜೆಗಳನ್ನು ನೋಡಿದ ಸಿರಿದೇವಿ ಏನಂದು ಹೇಳುತ್ತಿದ್ದಾಳೆ–

ನ್ಯಾಯಕ್ಕೆ ಕಣ್ಣಿಲ್ಲ ಪ್ರೀತೀಗೆ ಬೆಲೆ ಇಲ್ಲ
ಹೆಣ್ಣಿನ ಗೋಳೀಗೆ ಕಡೆಯಿಲ್ಲ–ಅಣ್ಣಯ್ಯ
ಕಣ್ಣೀರು ಧಾರೆ ಬಾಳೆಲ್ಲ ॥

ಎಳಗರು ಎತ್ತಲ್ಲ ದಳವಾಯಿ ದೊರಿಯಲ್ಲ
ಮನೆಗೆ ಬಂದಳಿಯ ಮಗನಲ್ಲ–ತವರರೀಗೆ
ಮಾತ ತಂದವಳು ಮಗಳಲ್ಲ.

ದೂರಿಗೋದ ಹೆಣ್ಣುಜನ್ಮ ಹೊರುವುದಕ್ಕಿಂಥ
ಬೀದೀ ನಾಯಿಯ ಜನ್ಮ ಕಡುಲೇಸು–ಎಲೆ ಜೀವ
ಹೆಣ್ಣಾಗಿ ಬಾಳ ಹೊರುಬೇಡ.

ಪಟ್ಟಣದ ಪ್ರಜೆಗಳೆಲ್ಲರೂ ದುಕ್ಕಸಾಗರದಲ್ಲಿ ಮುಳುಗಿಹೋದರು. ನಿರಪರಾಧಿಯಾದ ಸಿರಿದೇವಿಯನ್ನು ರಾಜಾಜ್ಞೆಯಂತೆ ಹನ್ನೆರಡು ಗಾವುದ ಗೊಂಡಾರಣ್ಯಕ್ಕೆ ಒಯ್ದು, ದೊಡ್ಡ ಸಮಾಧಿಯನ್ನು ತೆಗೆದು, ಸಮಾಧಿಯಲ್ಲಿ ಮುಳ್ಳಿನ ಹಾಸಿಗೆಯನ್ನು ಮಾಡಿ, ಆ ಮುಳ್ಳಿನ ಹಾಸಿಗೆಯಲ್ಲಿ ಹಾಕಲು ಜನಗಳು ಅವಳನ್ನು ನೋಡಿ ಮರುಗುತ್ತಿದ್ದಾರೆ. ಏಕೆ ಮರುಗುತ್ತಿರುವಿರಿ ಬಂಟರಾವುತರೆ? ಅಮ್ಮ ನಿನ್ನನ್ನು ಹೇಗೆ ಈ ಮುಳ್ಳಿನಲ್ಲಿ ಹಾಕಲಮ್ಮ? ರಾಜದ್ರೋಹದಿಂದ ನನ್ನನ್ನು ರಾಜಾಜ್ಞೆಯಂತೆ ಮುಳ್ಳಿನ ಹಾಸಿಗೆಯಲ್ಲಿ ಹಾಕಿರಪ್ಪ. ಅಮ್ಮ ನಿನ್ನನ್ನು ನೋಡಲಾರೆನಮ್ಮ.

ಹೆಣ್ಣೀನ ಜೀವನ ಮಣ್ಣಾಗಬೇಕೆ
ಗಂಡಿನ ಜೀವ ಹೊನ್ನಾಗಬೇಕೆ ॥ ಪಲ್ಲವಿ ॥

ನನ್ನ ಬಾಳೆಲ್ಲ ಬಯಲಾಗಿ
ಬರಿದಾಗಬೇಕೆ ಹಾಳಾಗಬೇಕೆ ॥ ಪ ॥

ನನ್ನ ಮಾಂಗಲ್ಯಯೋಗವು ಬಲವಾಗಲಿ
ನನ್ನ ಸ್ವಾಮಿಯು ಸ್ಥಿರಕಾಲ ಸುಖಿಬಾಳಲಿ ॥ ಪ ॥

ಈ ಬಾಳೇತಕೊ ಈ ಗೋಳೇತಕೊ
ಈ ದೇಹವು ದೇವಾನ ಅಡಿ ಸಾಗಲಿ. ॥ ಪ ॥

ಅಣ್ಣಗಳಿರಾ, ನನ್ನನ್ನು ನೋಡಿ ಎಳ್ಳಷ್ಟು ಮರುಗದಂತೆ, ರಾಜಾಜ್ಞೆಯಂತೆ ಮುಳ್ಳಿನ ಮೇಲೆ ಹಾಕಿ. ಹಾಕಿಬಿಡಿರಣ್ಣ. ರಾಜರ ಅಪ್ಪಣೆಯಂತೆ ಮುಳ್ಳಿನ ಮೇಲೆ ಹಾಕಿ. ಎದೆಯ ಮೇಲೆ ಉಕ್ಕಿನ ಹಾರೆಯನ್ನು ಹೊಡೆದು ಹಾಸುಗಲ್ಲನ್ನು ಹೇರಿದ್ದಾರೆ.

ಸತ್ತು ಹೋದಳೋ ಸಿರಿದೇವಿ ಶಿವಹರಾ ಮಾದೇವಾ!

ನಿರಾಪರಾಧಿಯಾದ ಸಿರಿದೇವಿಗೆ ಇಂದು ಮರಣದಂಡನೆಯಾಯಿತು. ಬಂಟ ರಾಹುತರು ಇನ್ನು ಪಟ್ಣಕ್ಕೆ ತಿರುಗಿದ್ದಾರೆ. ಇತ್ತ ಅರಮನೆಯಲ್ಲಿ ಆರು ಮಕ್ಕಳು ಅವು ಅಲ್ಲೇ ಸಾಯಲಿಲ್ಲ.

ವೈದ್ಯರ ಸಲಹೆಯಿಂದ ಆ ಮಕ್ಕಳಿಗೆ ವಾಂತಿ ಭೇದಿ ಎಲ್ಲ ನಿಂತುಹೋಗಿ ಒಂದು ವಾರದೊಳಗಾಗಿ ಮಕ್ಕಳಿಗೆ ಚಲೋ ಜ್ಞಾನಬಂತು. ಜ್ಞಾನ ಬಂದ ಮೇಲೆ ಹೆತ್ತ ತಾಯರು ಎತ್ತಿಕೊಂಡು ಕೂತಿದ್ದಾರೆ. ತಾಯರ ಮುಖ ನೋಡಿದ ಮಕ್ಕಳು ತಂದೆಯ ಬಳಿಗೆ ಓಡಿ ಹೋಗಿ ಅಪ್ಪಾಜಿ, ಇವರ್ಯಾರು ಅಪ್ಪಾಜಿ? ಇವರೇ ನಿಮ್ಮ ಹೆತ್ತ ತಾಯರು. ಅಪ್ಪಾಜಿ, ಇವರು ನಿಜವಾಗಿ ನಮ್ಮ ಹೆತ್ತತಾಯಂದಿರಲ್ಲಪ್ಪ. ಇಲ್ಲ ಮಕ್ಕಳೇ, ಇವರೇ ನಿಮ್ಮ ಹೆತ್ತ ತಾಯಂದಿರು. ಅಪ್ಪಾಜಿ, ನಮ್ಮ ತಾಯಿ ಸಿರಿದೇವಿ ಎಲ್ಲಿ?

ನಮ್ಮ ಅರಮನೆ ಇದಲ್ಲ ಅಪ್ಪಾಜಿ. ಬಾ ನಮ್ಮರಮನೆಯನ್ನು ತೋರಿಸು. ಹಾಗೆಂದು ಆರು ಮಕ್ಕಳು ತಂದೆಯನ್ನು ಎಳೆದುಕೊಂಡು ಸಿರಿದೇವಿ ಅರಮನೆಗೆ ಬಂದಿದ್ದಾರೆ. ಅಮ್ಮಾ ಎಂದು ಅರಮನೆಯಲ್ಲಿ ಕೂಗಾಡುತ್ತಿದ್ದಾರೆ. ಮಕ್ಕಳಿರಾ, ಅವ್ಳು ಮಕ್ಕಳನ್ನು ಹೆತ್ತವಳಲ್ಲ. ಹುಟ್ಟುಬಂಜೆ. ಅವಳು ಸಾಕಿದ ತಾಯಿ. ನಿಮಗೆಲ್ಲ ವಿಷ ಕೊಟ್ಟಿದ್ದಳು. ಅದಕ್ಕೋಸ್ಕರವಾಗಿ ಅವಳನ್ನು ಅರಣ್ಯದಲ್ಲಿ ಪ್ರಾಣಸಹಿವಾಗಿ ಹೂಳಿಸಿಬಿಟ್ಟಿದ್ದೇನಿ. ಅಪ್ಪಾಜಿ, ಅಪ್ಪ, ಎಂಥ ಮೋಸಮಾಡಿದೆಯಪ್ಪ? ಯಾರ ಮಾತನ್ನು ಕೇಳಿ ನಮ್ಮ ತಾಯನ್ನು ಪ್ರಾಣಸಹಿತವಾಗಿ ಹೂಳಿಸಿಬಿಟ್ಟೆಯಪ್ಪ? ನಮ್ಮನ್ನು ತಾಯಿಲ್ಲದ ತಬ್ಬಲಿಗಳನ್ನಾಗಿ ಮಾಡಬಿಟ್ಟೆಯಪ್ಪ –

ತಾಯಿಲ್ದ ಮಕ್ಕಳಿಗೆ ಬಾಯಿಲ್ಲ ಸಿರಿಯಿಲ್ಲ
ಬಾ ಎಂದು ಕರಿವಾರು ಯಾರಿಲ್ಲದಾಯ್ತೆ ಅಬ್ಬಯ್ಯ
ಹಾಲ ಕುಡಿಸುವರ್ಯಾರು ಅನ್ನ ಉಣಿಸುವರ್ಯಾರು
ಓಡಿ ನಾವು ಬೀಳಾಲು ಎತ್ತುವರ್ಯಾರು ಅಬ್ಬಯ್ಯ?

ಅಪ್ಪಾಜಿ, ತಾಯಿಲ್ದ ತಬ್ಬಲಿಗಳನ್ನಾಗಿ ಮಾಡಿಬಿಟ್ಟೆಯಪ್ಪ. ಹಾಗೆಂದು ಮಕ್ಕಳು ಆ ತಾಯಿಯನ್ನು ಮರೆಯುವಂತಿಲ್ಲ. ಒಂದೆರಡುವಾರ ಕಳೆಯುವುದರೊಳಗಾಗಿ ಮಕ್ಕಳು ರಾಜನನ್ನೆ ಹಿಂಡಿ ಹಿಂಡಿ ಬಾಧಿಸ್ತಾ ಇದ್ದಾವೆ. ಪಾಪಿ ಮುಂಡೆ, ಇಷ್ಟೊಂದು ಪ್ರೇಮದಿಂದ ಸಾಕಿ ಯಾವ ಕೈಯಿಂದ ಮಕ್ಕಳಿಗೆ ವಿಷವನ್ನು ಕೊಟ್ಟು, ಈ ಆರು ಮಕ್ಕಳನ್ನು ನನ್ನ ಕೊಳ್ಳಿಗೆ ಕಟ್ಟಿಹೋದೆಯ? ಹಾಗೆಂದು ರಾಜನು ಹಗಲೂ ರಾತ್ರಿ ಕಣ್ಣೀರುಹಾಕುತ್ತಿದ್ದಾನೆ. ಒಂದೆರಡುವಾರ ಕಳೆದ ಮ್ಯಾಲೆ, ತಾಯಿಯ ಹಂಬಲ ಮರೆತು ತಂದೆಯ ಮಾತಿನಲ್ಲಿ ನಂಬಿಕೆ ಇಟ್ಟು ಹೆತ್ತ ತಾಯಂದಿರ ಬಳಿ ಮಕ್ಕಳು ಸುಖವಾಗಿ ಬೆಳೆಯುತ್ತಾ ಇವೆ.

ಇತ್ತ ನಿರಪರಾಧಿಯಾದ ಸಿರಿದೇವಿಗೆ ಇಂದು ಮರಣದಂಡನೆಯಾಯಿತು. ಕೈಲಾಸದಲ್ಲಿ ಪಾರ್ವತಿಪರಮೇಶ್ವರ ಇರುವೆಂಬತ್ತುಕೋಟಿ ಜೀವರಾಶಿಗಳಿಗೆ ಪಡಿಯನ್ನಳೆಯಬೇಕೆಂದು–

ಶಿವನು ಕೈಲಾಸ ಬಿಟ್ಟನಯ್ಯ ಹಾರೀ
ಅಣ್ಣ ಬರುವ್ರೊ ಮಾರ್ಗದೊಳಗೆ ಹಾರೀ
ತಾಯಿ ಪಾರ್ವತಾದೇವಿ ನೋಡಿ ಹಾರೀ
ಸಿರಿದೇವಿಯ ಸಮಾಧಿಯ ಹಾರೀ
ಅಣ್ಣ ಕಂಡಾಳು ನೋಡಿರಯ್ಯ ರಾಮ ರಾರೇರಿರಿ
ಶಿವ ಶಂಬೊ ಮಾದೇವ.

ತಾಯಿ ಪಾರ್ವತಾದೇವಿ ಸಿರಿದೇವಿಯ ಸಮಾಧಿಯನ್ನು ನೋಡಿಬುಟ್ಟು ಏನಂತ ಹೇಳುತ್ತಿದ್ದಾಳೆ? ಪರಮಾತ್ಮ ಇದೇನು ವಿಚಿತ್ರ ನಾಟಕ? ಸಿರಿದೇವಿ ನಿರಪರಾಧಿ. ನಿರಪರಾಧಿಗೆ ಇಂಥ ಶಿಕ್ಷೆಯನ್ನು ವಿಧಿಸಬಹುದೆ? ಭೂಲೋಕದಲ್ಲಿ ಸತ್ಯವೇ ಇಲ್ಲದಂತಾಯಿತಲ್ಲ? ಸಿರಿದೇವಿ ಏನಾದರೂ ಮಕ್ಕಳಿಗೆ ವಿಷವನ್ನು ಕೊಟ್ಟಳೆ? ನರಮನುಷ್ಯರು ನ್ಯಾಯವನ್ನು ಒಯ್ದು ಅನ್ಯಾಯ ಮಾಡ್ತಾರೆ. ನಾವು ಹಾಗೆ ಮಾಡಬಾರದು. ದರ್ಮ ಕರ್ಮವನ್ನು ತ್ರಾಸಿನಲ್ಲಿ ತೂಗಬೇಕು. ಸತ್ಯವಂತರನ್ನು ಕಾಪಾಡುವುದು ನಮ್ಮ ಕರ್ತವ್ಯ. ಸಿರಿದೇವಿ ಮಹಾ ಪ್ರತಿವ್ರತೆ. ನಿರಾಪರಾಧಿ. ಅವಳಿಗೆ ಇಂಥ ಶಿಕ್ಷೆಯನ್ನು ಎಂದಿಗೂ ಕೊಡಬಾರದು. ಆದರೆ ಭೂಲೋಕದಲ್ಲಿ ದೇವರಿದ್ದಾನೆ, ಸತ್ಯ ಇದೆ ಎನ್ನತಕ್ಕದ್ದು ಎಲ್ಲರಿಗೂ ಗೊತ್ತಾಗಬೇಕಾದರೆ ಸತ್ಯವಂತೆಯಾದ ಸಿರಿದೇವಿಯು ಪ್ರಾಣವನ್ನು ಪಡೆಯುವವರೆಗೂ–

ನಂದಿ ಮುಂದೆ ಬಿಡುವ್ರೋದಿಲ್ಲ ರಾರೇರಿ
ಬನ್ನಿ ಹೋಗಾನಂಬೂತಾಳೊ ರಾರೇರಿ
ನಮ್ಮ ಸತ್ಯ ಉಳಿಸಬೇಕೊ ರಾರೇರಿ
ಶಿವಶಂಬೊ ಮಾದೇವ ರಾರೇರಿ

ಪಾರ್ವತಾ ? ಏನು ಪರಮಾತ್ಮ ? ಭೂಲೋಕದಲ್ಲಿ ಎಲ್ಲಿಯ ಧರ್ಮ, ಎಲ್ಲಿಯ ಸತ್ಯ? ತಂದೆ ತಾಯಿ, ಗುರು ಹಿರಿಯರೆಂಬ ಪರಿಜ್ಞಾನವೇ ಇಲ್ಲ. ನ್ಯಾಯ ಅನ್ಯಾಯವನ್ನೇ ಪರಿಗಣಿಸ್ತಿಲ್ಲ. ಆದರೆ ಪ್ರಜೆಗಳಿಗೆ ನಾವು ಯಾವಾಗಲೂ ಸುಖವನ್ನು ಕೊಡಬಾರದು. ಅವರಿಗೆ ಕಷ್ಟವನ್ನು ಕೊಟ್ಟರೆ ಮಾತ್ರ ನಮ್ಮ ಧ್ಯಾನ, ನಮ್ಮ ಪೂಜೆ ಮಾಡುವರು. ಸುಖಕೊಟ್ರೆ ನಮ್ಮನ್ನೆ ಮರೆತುಬಿಡುವರು ಪಾರ್ವತಾ. ಅದಕ್ಕೊಸ್ಕರವೇ ಸ್ವಾಮಿ ಮಳೆರಾಯ ಈ ರೀತಿ ಆಗಿರುವುದು. ತಂದೆ ತಾಯಿಗಳನ್ನೇ ಮರೆಯುವರು. ನಮ್ಮನ್ನು ಮರೆಯುವುದು ಮಹಾಲೆಕ್ಕವೇ ಸ್ವಾಮಿ? ಆದರೆ ನಾವು ಧರ್ಮ ಪರಿಪಾಲನೆ ಮಾಡಬೇಕು. ಧರ್ಮವನ್ನು ತಿಳಿದುಕೊಂಡು ಬಾಳುವಂಥ ಪ್ರಜೆಗಳು ಇದ್ದೇ ಇದ್ದಾರೆ. ನಮ್ಮ ನೀತಿಯಂತೆ ಅವಳ ಪ್ರಾಣವನ್ನು ಪಡೆಯಲೇಬೇಕು. ನಡೆಯಿರಿ ಹೋಗೋಣವೆಂದು, ಸಿರಿದೇವಿಯ ಸಮಾಧಿಯ ಬಳಿಗೆ ಶಿವ–ಪಾರ್ವತಿಯರು ಬಂದು ಇಳಿದಿದ್ದಾರೆ. ಅವಳಿಗೆ ಕೊಟ್ಟಿದ್ದ ವಿಚಿತ್ರ ಹಿಂಸೆಯನ್ನು ನೋಡಿ ಪಾರ್ವತಾದೇವಿ– ಸ್ವಾಮಿ ? ಏನು ಪಾರ್ವತಾ ?

ನರಮನುಷ್ಯರೆಂಥ ಅಜ್ಞಾನಿಗಳು. ನ್ಯಾಯ ಅನ್ಯಾಯಗಳನ್ನು ಪರಿಗಣಿಸದೆ, ರಕ್ತಮಯವಾಗುವಂತೆ ಹೊಡೆದು, ಮುಳ್ಳಿನ ಹಾಸಿಗೆಯನ್ನು ಮಾಡಿ, ಪ್ರಾಣಸಹಿತವಾಗಿ ಮುಳ್ಳಿನ ಮೇಲೆ ಹಾಕಿ, ಎದೆಯ ಮೇಲೆ ಉಕ್ಕಿನ ಹಾರೆಯನ್ನು ಹೊಡೆದು, ಹಾಸುಗಲ್ಲನ್ನೆ ಹೇರಿಬಿಟ್ಟಿದ್ದಾರೆ ಸ್ವಾಮಿ. ಅವಳಿಗೆ ಹೇಗೆ ಪ್ರಾಣದಾನ ಮಾಡುವೆ ಪರಮಾತ್ಮ? ಪಾರ್ವತಾ, ನನ್ನ ಭಕ್ತರ ಕಷ್ಟವು ಅವರಿಗೊಂದು ಪರ್ವತವಾಗಿರಬಹುದು. ನನಗೆ ಮಾತ್ರ ಒಂದೇ ಒಂದು ತೃಣ. ಅಂಥ ಭಕ್ತಿ ಅವರಲ್ಲಿದ್ದರೆ ಸಾಕು. ಆ ಪರ್ವತದಂತಹ ಕಷ್ಟವನ್ನು ಒಂದು ತೃಣವಾಗಿ ಹರಿಸಬಲ್ಲೆ. ಸಿರಿದೇವಿ ಬಾಳ ಪತಿವ್ರತಾ ಶಿರೋಮಣಿ. ಆದರೆ ಅವಳಲ್ಲಿರತಕ್ಕಂಥ ಧರ್ಮದಿಂದ ಅವಳಿಗೆ ಬಂದಿರುವ ವಿಪತ್ತನ್ನು ಒಂದೇ ತೃಣದಲ್ಲಿ ಹರಿಸುತ್ತೇನೆ ನೋಡು ಪಾರ್ವತಾ. ಹಾಗೆಂದು ಶಂಕರನು ತನ್ನ ಭಸ್ಮವನ್ನು ಸಮಾಧಿಯ ಮೇಲೆ ಉಗ್ಗಿ (ಚೆಲ್ಲಿ)ದ್ದಾನೆ. ತ್ರಿಶೂಲದಿಂದ ಮೂರುಸಲ ನಿವಾಳಿಯನ್ನು ಮಾಡಿ ಆಶೀರ್ವಾದಿಸುತ್ತಿದ್ದಾನೆ. ಶಂಕರನ ಮಹಿಮೆಯಿಂದ–

ಮುಳ್ಳೀನ ಹಾಸೀಗೆ ನೋಡೀರಯ್ಯ ರಾರೇರಿ
ಅಳ್ಳೇ ಹಾಸೀಗೆ ಆಯಿತಲ್ಲೊ ರಾರೇರಿ
ಎದಿಮ್ಯಾಲೆ ಹೊಡೆದಂತ ರಾರೇರಿ
ಉಕ್ಕೀನ ಹಾರೆ ನೋಡಿರಯ್ಯ ರಾರೇರಿ
ಅವಳ ಸೊಂಟಕ್ಕೆ ಡಾಬಾಯ್ತೊ ರಾರೇರಿ
ಮೇಲೆ ಏರೀದ ಹಾಸುಗಲ್ಲು ರಾರೇರಿ
ಒಳ್ಳೆ ಹೊದ್ದಿಕೆ ಆಯಿತಲ್ಲೊ ರಾರೇರಿ
ಸುಖ ನಿದ್ರೇಲಿ ಮಲಗಿದಂಗೆ ರಾರೇರಿ
ಶಿವ ಶಿವ ಎಂದು ಎದ್ದಾಳಲ್ಲೋ ರಾಮ ರಾರೇರಿ
ಶಿವಶಂಬೊ ಮಾದೇವ.

ಪರಮಾತ್ಮನ ಕರುಣದಿಂದ, ಆ ಶಿವನ ಅನುಗ್ರಹದಿಂದ, ಮುಳ್ಳಿನ ಹಾಸಿಗೆ ಹೋಗಿ ಅಳ್ಳೆ ಹಾಸಿಗೆಯಾಯಿತು. ಎದೆಮ್ಯಾಲೆ ಹೊಡೆದ ಉಕ್ಕಿನ ಹಾರೆ ಅವಳ ಸೊಂಟಕ್ಕೆ ಬಂಗಾರದ ಪಟ್ಟಿಯಾಯ್ತು. ಮೇಲೆ ಹೇರಿದ ಹಾಸುಗಲ್ಲು ಒಳ್ಳೆಯ ಹೊದಿಕೆಯಾಗಿ ಸುಖನಿದ್ರೆಯಲ್ಲಿ ಮಲಗಿದಂಗೆ, ಶಿವ ಶಿವ ಎಂದು ಎದ್ದು ಕುಂತಿದ್ದಾಳೆ. ಎದುರಿನಲ್ಲಿ ಶಿವ–ಪಾರ್ವತಿಯರು ನಿಂತಿದ್ದಾರೆ. ಹೋಗಿ ಅವರ ಪಾದಕ್ಕೆ ಶರಣುಮಾಡಿ –

ದೇವ ದೇವ ಧವಳಾಚಲ ಮಂದಿರ
ಗಂಗಾಧರನಿಗೆ ನಮೋ ನಮೋ

ದಾನವ ದೈತ್ಯ ಕುಲಾನವ ಚಂದಿರ
ಚರ್ಮಾಂಬರನಿಗೆ ನಮೋ ನಮೋ
ನಾರಾಯಣ ಹರಿ ನಮೋ ನಮೋ
ಪರಸತಿ ಪಾರ್ವತಿ ಮುಖ ಪಂಕಜವನು
ವಿಕಸಿಪ ರಸಿಕಗೆ ನಮೋ ನಮೋ
ಶರಣರ ಜನವನದುರಿತ ನಿವಾರಣ
ಪರಮ ಪಾವನಗೆ ನಮೋ ನಮೋ
ಹಾಲಾಹಲವನು ಲೀಲಾಜಾಲದಿ
ಹೀರಿದ ವರಧಿಗೆ ನಮೋ ನಮೋ
ಕಾಳೋರಗಧರ ಚಂದ್ರಕಳಾಧರ
ಚಿನ್ಮಯರೂಪಗೆ ನಮೋ ನಮೋ
ನಾರಾಯಣ ಹರಿ ನಮೋ ನಮೋ
ನಮೋ ನಮೋ ನಮೋ ನಮೋ.

ತಥಾಸ್ತು ಮಗಳೆ. ಏಳು ಕಂದ. ಇಗೋ ನಿನ್ನ ಭಕ್ತಿಗೆ ಮೆಚ್ಚಿ ನಿನಗೆ ಪ್ರಾಣದಾನ ಮಾಡಿದ್ದೇನೆ. ನಿನಗೇನು ವರಬೇಕು ಬೇಡು ಮಗಳೆ. ಅಷ್ಟೆಲ್ಲ ಕಷ್ಟವನ್ನು ಅನುಭವಿಸಿದ ಆ ಸತ್ಯವಂತೆಯಾದ ಸಿರಿದೇವಿ ಪರಮಾತ್ಮನನ್ನು ಏನು ವರ ಕೇಳುತ್ತಿದ್ದಾಳೆ–

ನನಗೆ ಮಕ್ಕಾಳ ಕೊಡೊ ಶಿವನೆ ರಾರೇರಿ
ಮಕ್ಕಳ ಭಾಗ್ಯವ ಬೇಡುತಾಳೊ ರಾರೇರಿ
ಪರಶಿವನು ನೋಡೀರಯ್ಯ ರಾಮ ರಾರೇರಿ
ಶಿವಶಂಬೊ ಮಾದೇವ.

ಪರಮಾತ್ಮ ನನಗೆ ಸಂತಾನವನ್ನು ಕರುಣಿಸಿ ನನ್ನನ್ನು ಕಾಪಾಡು ಗುರುದೇವ. ಎಂಥ ಮಗಳಮ್ಮ? ಹಿಂದೆ ಮಕ್ಕಳನ್ನು ಬೇಡಿಕೊಂಡು, ಮಕ್ಕಳಿಂದ ಇಷ್ಟೆಲ್ಲ ಕಷ್ಟವನ್ನು ಅನುಭವಿಸಿ ಮತ್ತೂ ಮಕ್ಕಳ ಬೇಡುವೆಯಮ್ಮ? ಬೇಡ ಬೇಡ ಕಂದ. ಮಕ್ಕಳಿಂದ ಮುಂದೆ ಬಹಳ ಕಷ್ಟವಮ್ಮ. ಪರಮಾತ್ಮ ಬಂಜೆಯರಿಗೆ ಸ್ವರ್ಗದಲ್ಲಿ ಸ್ಥಳವೇ ಇಲ್ಲವಂತೆ. ಮಕ್ಕಳಿಂದ ಏನು ಕಷ್ಟ ಬಂದರೂ ಬರಲಿ. ನನಗೊಬ್ಬ ಮಗನನ್ನು ಕರುಣಿಸಬೇಕು ಸ್ವಾಮಿ. ಹಾಗೆಂದು ಶಿವನ ಪಾದವನ್ನು ಹಿಡಿದಿದ್ದಾಳೆ. ಪಾರ್ವತಾದೇವಿ ಪರಮಾತ್ಮ ? ಏನು ಪಾರ್ವತಾ ? ಮಕ್ಕಳೆಂದರೆ ಹೆಣ್ಣು ಮಕ್ಕಳಿಗೆ ತುಂಬಾ ಆಸೆ. ಪಾಪ ಹೋಗಲಿ, ಅವಳಿಗೊಂದು ಸಂತಾನವನ್ನು ಕರುಣಿಸು ಪರಮಾತ್ಮ. ಆಗಲಿ ಪಾರ್ವತಾ, ಆಗಲಿ ಮಗಳೆ. ನಿನ್ನಿಷ್ಟದಂತೆ ಆಗಲಿ. ತೆಗೆದುಕೊ. ಹಾಗೆಂದು ತನ್ನ ಜೋಳಿಗೆಯಲ್ಲಿದ್ದಂತಹ ಒಂದು ಹಣ್ಣನ್ನು ತೆಗೆದು ಸಿರಿದೇವಿಗೆ ಕೊಟ್ಟಿದ್ದಾನೆ. ಇದನ್ನು ಸೇವನೆ ಮಾಡು ಮಗಳೆ. ನಿನಗೂ ಒಬ್ಬ ಮಗನಾಗುತ್ತಾನೆ. ಹಾಗೆಂದು ಪರಮಾತ್ಮನು ಅವಳ ಸೆರೆಹಾಕಿದ್ದ ಸ್ಥಳವನ್ನೇ ಒಂದು ಅರಮನೆಯಾಗಿ ನಿರ್ಮಿತಮಾಡಿ, ಬೇಕಾದ ಭಕ್ಷ್ಯ ಭಂಡಾರವನನ್ನು ತುಂಬಿ ಸಿರಿದೇವಿ ನೀನಿಲ್ಲಿ ವಾಸವಾಗಿರು ಕಂದ ಹಾಗೆಂದು ಹೇಳುತ್ತಿದ್ದಾನೆ ಪರಮಾತ್ಮ. ಸಿರಿದೇವಿಯಾದರೋ ಪರಮಾತ್ಮ, ಸಂತಾನಹೀನಳನ್ನು ಮಾಡಿ ನನ್ನ ಪತಿಯಿಂದ ದೂರಮಾಡಿ, ಈ ಅರಣ್ಯದಲ್ಲಿ ವಾಸಮಾಡಲು ಅಪ್ಪಣೆ ಮಾಡಿದೆಯಲ್ಲ. ನಾನು ಯಾವ ಕರ್ಮಮಾಡಿದ್ದಕ್ಕೋಸ್ಕರ ಇಂಥ ಶಿಕ್ಷೆಯನ್ನು ವಿಧಿಸಿದೆ ಸ್ವಾಮಿ ಎಂದು ಪರಮಾತ್ಮನಲ್ಲಿ ಬೇಡುತ್ತಿದ್ದಾಳೆ. ಶಂಕರನಾದರೋ ಅವಳಿಗೇನು ಧೈರ್ಯಹೇಳುತ್ತಿದ್ದಾನೆ? ಆದರೆ ಒಬ್ಬ ಕಷ್ಟದೋರಿಗೆ ಒಂದು ಧೈರ್ಯಹೇಳಬೇಕೋ ತಮ್ಮ. ಯಾರಾರೊಬ್ರು ಆಸ್ಪತ್ರೇಲಿರೋರ್ನ ಕಾಯಿಲೆ ಇರ್ತಾರೆ, ಅವರನ್ನ ನೋಡೋಕೆ ಹೋದೋರು ಇದ್ಯಾವ ಮಹಾ ದೊಡ್ಡ ಕಾಯ್ಲೆನಪ್ಪ. ಕುಡಿಯೋ ಗಂಜೀಯ ಅಂದ್ರೆ ಅವನಿಗೆಷ್ಟೊ ಧೈರ್ಯ. ಕಾಫೀನು ಕುಡಿತಾನೆ. ಕಾಯ್ಲೇನು ಗುಣವಾಗತದೆ. ಅಯ್ಯೋ ಏನಾಗ್ತೀಯೋ ಕಾಣಪ್ಪ ಅಂತ ಅತ್ತುಬಿಟ್ರೆ ಅವನು ಹಂಗೇ ಹಾರ್ಟ್‌ಫೇಲಾಗಿ ಸಾಯ್ತಾನೆ! ಆ ಅಂಥ ಸಿರಿದೇವಿಗೆ ಪರಮಾತ್ಮ ಏನು ಧೈರ್ಯ ಹೇಳ್ತಾ ಇದ್ದಾನೆ –

ಓ ರಾಜಕುಮಾರೀ ಕಾಲಕ್ರಮೇಣ
ವಿಧಿಯಿಂದಾಗಿ ಕಾಡಸೇರಬೇಕಾಯಿತೆ
ಎಲ್ಲ ಯುಗದಿ ಆಯಿತೆ ಇಂಥ ಶೋಧನೆ–
ನಿತ್ಯ ಪೂರ್ಣನಾದ ರಾಮ ಸತಿಯ ಕಾಡಿಗಟ್ಟಿದ
ಸತ್ಯಸಂಧನಾದ ಹರಿಶ್ಚಂದ್ರ ಬೆಲೆಗೆ ಮಾರಿದ
ಸತಿಯ ಪಣವನ್ನೆದು ಧರ್ಮ ಜೂಜನಾಡಿದ
ಚಿತೆಗೆ ಮೊದಲು ನಿನ್ನ ಪತಿಯೆ ಮಾಡಿದ ಓ

ಕೇಳು ಕಂದ, ಇದೆಲ್ಲವೂ ವಿಧಿಯ ಸಂಕಲ್ಪ. ನೀವೆಲ್ಲರೂ ವಿಧಿಯ ಕೈಗೊಂಬೆಗಳು. ವಿಧಿಯ ಸಂಕಲ್ಪವನ್ನು ಮೀರುವುದು ನನ್ನಿಂದಲೂ ಅಸಾಧ್ಯ. ಆದರೆ ಇದು ಯುಗ ಯುಗಾಂತರದಲ್ಲು ಯಾರನ್ನೂ ಬುಟ್ಟುದ್ದಲ್ಲ ವಿಧಿ. ಆ ವಿಧಿಯಿಂದ ಮಗಳೆ ನೀವು ಪಾರಾಗಬೇಕಾದರೆ –

ಏನೇ ಬರಲಿ ಎಲ್ಲೇ ಇರಲಿ
ಧರ‍್ಮ ತಲೆಯ ಕಾಯಲೀ
ಮನುಜಳಲ್ಲಿ ಅಮರಳೆಂಬ ಕೀರ್ತಿ ತುಂಬಲಿ
ಎಲ್ಲ ಯುಗದಿ ಆಯಿತೆ ಇಂಥ ಶೋಧನೆ?

ಕೇಳು ಕಂದ, ಏನು ಕಷ್ಟ ಬಂದರೂ ಧರ‍್ಮವನ್ನು ಮಾತ್ರ ಬಿಡಬಾರದು ಮಗಳೆ. ಆ ಧರ‍್ಮವೆ ನಿಮ್ಮನ್ನು ಕಾಪಾಡುವುದಮ್ಮ. ಹಾಗೆಂದು ಶಂಕರನು ಅವಳಿಗೆ ಇತಿಹಾಸವನ್ನು ಹೇಳಿದ್ದಾನೆ. ಶಿವನ ವಾಕ್ಯವನ್ನು ಕೇಳಿದ ಸಿರಿದೇವಿ ಅಂಥವರೆಲ್ಲ ಅಷ್ಟೊಂದು ಕಷ್ಟವನ್ನು ಅನುಭವಿಸಿರುವಾಗ ನನಗೆ ಯಾವ ದೊಡ್ಡ ಕಷ್ಟ ಪರಮಾತ್ಮ? ಹಾಗೆಂದು ಶಿವನ ಪಾದಕ್ಕೆ ಶರಣುಹೋಗಿದ್ದಾಳೆ. ಶಂಕರನು ಅವಳ ಸತ್ವ ಪರೀಕ್ಷೆಗೋಸ್ಕರವಾಗಿ ಅಮ್ಮ, ಮಗಳೆ ನಿನ್ನ ಪತಿಯು, ನಿರಪರಾಧಿಯನ್ನು ನ್ಯಾಯ ಅನ್ಯಾಯವನ್ನು ಪರಿಗಣಿಸದೆ ನಿನಗೆ ವಿಚಿತ್ರ ವಿಚಿತ್ರವಾಗಿ ಹೊಡೆಸಿ ನಿನ್ನನ್ನು ಪ್ರಾಣಸಹಿತ ಹೂಳಿಸಿಬಿಟ್ಟ. ನಾನು ಹೋಗಿ ನಿನ್ನ ಪತಿಯನ್ನು ಕಾಡಲೇನಮ್ಮ? ಆತನಿಗೆ ಕಷ್ಟ ಕೊಡಲೇನಮ್ಮ? ಅಂತ ಪರಮಾತ್ಮನು ಸಿರಿದೇವಿಯನ್ನು ಕೇಳ್ತಾನಂತೆ. ಅದಕ್ಕೆ ಸಿರಿದೇವಿ ಏನನ್ನಬೇಕು? ಎಷ್ಟು ಕಷ್ಟ ಕೊಟ್ಟನಯ್ಯ ಪಾಪಿ. ಎರಡು ತುಂಡಿಗೆ ಕಡಿ ಅಂತ ಹೇಳಬೇಕು. ಅಂದರೆ, ತಮ್ಮ . ಈಗಿನ ಹೆಣಮಕ್ಳು ಹಾಗೇನಪ್ಪ ಹೇಳೋದು!

ಗಂಡ–ಹೆಂಡ್ತಿ ಇಬ್ರಿದ್ರಂತೆ. ಗಂಡ ಎಂಥವನೂಂದ್ರೆ ಉಣದೆ ಬೇಸಾಯ ಹೂಡೋನಲ್ಲ. ಎದ್ದ ಕೂಡ್ಲೆ ಊಟ ಆಗಬೇಕು. ಆಯಮ್ಮ ಏನಮಾಡ್ತು? ಊರ‍್ನಲ್ಲಿ ಒಂದು ಜನಪದ ಸಾಹಿತ್ಯವೋ ಒಂದು ಹರಿಕಥೆಯೋ ಅಂದರೆ ಬಾಳ ಪ್ರೇಮ. ಹರಿಕಥೆ ನಡೀತಾ ಇತ್ತು. ಬನ್ರಿ ಹೋಗೋಣಾಂತ ಕೇಳಿದಳು. ಆತ ಇಲ್ಲ ನೀನೇ ಹೋಗು ಅಂತ್ಹೇಳ್ದ. ಬಂದು ಹರಿಕಥೆ ಕೇಳಕೊಂಡ್ಹೋಗಿ ಮನಿಕಂತು. ಸ್ವಲ್ಪ ಲೇಟಾಗಿ ಏಳ್ತು. ಈತ ಮನಿಗಿದ್ದವನು ಎದ್ದ. ಆಯಮ್ಮನಿಗೆ ಈತ ಉಣದೆ ಬ್ಯಾಸಾಯ ಹೂಡೋನಲ್ಲ ಅಂತ ಗೊತ್ತಿತ್ತು. ಎದ್ದು ಒಲೆ ಕಚ್ಚಿಕೊಂಡು ರೊಟ್ಟಿ ಹಿಟ್ಟುಮಿದೀತಾ ಇತ್ತು. ಈ ಅಪ್ಪ ಗಡಗಡ ಮುಖ ತೊಳಕೊಂಡ. ತಾರೆ ರೊಟ್ಟೀಯ ಅಂತ ಬಂದ ಒಲೆ ಹತ್ರ. ಇನ್ನ ರೊಟ್ಟಿ ಆಗಿಲ್ಲ. ತಡೀರಿ ಸ್ವಲ್ಪ ಅಂದ್ಲು. ಆ ಕೂಡ್ಲೆ ಒಂದು ಹೊಡೆತ ಕಪಾಲಕ್ಕೆ ಹೊಡೆದುಬುಡೋದೆ! ಇಷ್ಟೊತ್ತನಕ ಮನಿಗಿದ್ಯ ? ಇನ್ನೂ ರೊಟ್ಟಿ ಹಾಕಿಲ್ವೆ ? ಅಂತ ಹೊಡೆದಕೂಡಲೆ ಆಯಮ್ಮ ಏನ ಮಾಡಿಬುಟ್ಲು ! ಒಲಿಯಾಗೆ ನೀರು ಹುಯ್ದು ಹಟ್ಟಿ ಹೊರಗೆ ಕುಂತುಬಿಟ್ಲು. ಇನ್ನೇನ ನನಿಗೆ ರೊಟ್ಟಿ ಸುಟ್ಟುಕೊಡತಾಳ? ಯಾವಾಗಾರ ರೊಟ್ಟಿತಂದುಕೊಡ್ಲಿ ಅಂತ ಬೇಸಾಯಕೆ ಹೊರಟೇಬಿಟ್ಟ. ಸರಿ ತಮ್ಮ ಬೇಸಾಯಕೆ ಊರ ಬಿಟ್ಟಿದ್ದರ ತಡ ಸುರುಮಾಡಿಕೊಂಡುಬಿಟ್ಲು. ಅಯ್ಯೊ ಇವನ ಹೊಟ್ಟೆ ಬಿಗಿಯ. ಇವ್ನ ನೆಗೆದುಬಿದ್ದೋಗ. ಏನ ಉರಿದು ಹಾಳಾಗಿ ಹೋಗ್ತಾನಪ್ಪ. ಇವ್ನಮನೆ ಹಾಳಾಗೋಗ

ಅಂತ ಏನೇನೋ ಬೈತಾಕುಂತಿದ್ಲು. ನಮ್ಮ ಗೌಡರ ತಾಯಿ ಏನ್ಮಾಡ್ತು? ಅಷ್ಟತ್ಗೆ ಅಲ್ಲಾಸೆ ಬಂದು ಏನಮ್ಮಾ? ಸೂರ್ಯ ಉದಯಕ್ಕೆ ಎದ್ದೋರೆಲ್ಲ ಶಿವಶಿವ ಅಂತ ಹೇಳತಾರೆ. ಎದುರಿಗೆ ಬಂದೋರೆಲ್ಲ ಶರಣಪ್ಪ ಅಂತ ನಮಸ್ಕಾರ ಮಾಡತಾರೆ. ಧ್ಯಾನಮಾಡ್ತಾರೆ. ಇಷ್ಟತ್ಗೆ ಕೆಟ್ಟಕೆಟ್ಟ ಬೈಗಳ ಬೈತೀಯಲ್ಲ? ಯಾರನ್ನ ಬಯ್ತಿಯಮ್ಮ ಅಂತ ಕೇಳ್ತು. ಮತ್ಯಾರನ್ನ ಬಯ್ಯಕ್ಕೋಗಲ್ರಿ? ನಮ್ಮೆಜಮಾನರಿದಾರಲ್ಲ ನನ್ನ ಗಂಡನ್ನೆ. ನೆನ್ನ ರಾತ್ರೆ ಹರಿಕಥೆ ಕೇಳಾಕೆ ಹೋದೆ. ಒಂದು ಗಂಟೆ ಲೇಟಾಗಿ ಮನಿಕೊಂಡೆ. ಹಂಗು ನನಗೆ ನಿದ್ರೆ ಬರಲಿಲ್ರಿ. ಇವರು ಎದ್ದಕೂಡಲೇ ಉಣ್ಣೋರಂತ ಹೇಳಿ ಹಿಟ್ಟ ಮಿದ್ದುಕೊಂಡು ಕೂತಿದ್ದಿನ್ರಿ. ಮನಗಿದ್ದವರು ಎದ್ದು ಬಂದು ರೊಟ್ಟಿ ಕೊಡೂಂದ್ರು. ಸ್ವಲ್ಪ ತಡೀರಂದಕೂಡಲೆ ನೋಡಜ್ಜಿ ಎಂಥ ಹೊಡೆತ ಹೊಡದಿದಾರೆ. ರಾತ್ರಿ ಉಂಡುದ್ದನ್ನೆಲ್ ಹೆಗ್ಗಣದ ದೊಗರಿಗಾಕುದ್ನ. ಅವನ ಹೊಟ್ಟೆ ಬಿಗಿಯ. ಅವ್ನ ಹೋದ ದಾರೀ ಅತ್ಲಾಗೆ ಹೋಗ. ಹಾಗೇಂತ ಬಾಳ ಬೈದಬುಟ್ಲು. ಸಟಾಕ ಹೊಡಿದಿದ್ಕೆ ಆನಾಡಿ ಬೈಗಳ ಬಯ್ದುಬುಟ್ಲು.

ಸಿರಿದೇವಿಗೆ ಕೊಟ್ಟಂತ ವಿಚಿತ್ರ ಹಿಂಸೇನ ಕೊಟ್ಟಿದ್ರೆ ಅವನ್ನೆ ಹಲ್ಲಾಗೆ ಕಡದ್ಹಾಕಬುಡತಿದ್ರು ಈಗಿನ ಹೆಣಮಕ್ಳು. ಆದರೆ ಸಿರಿದೇವಿಗೆ ಪರಮಾತ್ಮನು, ನಿನ್ನ ಗಂಡನಿಗೆ ಕಷ್ಟಕೊಡಲೇನಮ್ಮ ಅಂತ ಕೇಳಿದಾಗ, ಆ ಸಿರಿದೇವಿ ಏನ ಹೇಳ್ತಿದ್ದಾಳೆ? ಪರಮಾತ್ಮ ? ಏನಮ್ಮಾ ಮಗಳೆ? ನನ್ನ ಪತಿಯಿಂದ ನನಿಗೆ ಮರಣವಾದದ್ದರಿಂದಲೇ ನಿನ್ನ ಪಾದವು ನನಗೆ ದೊರತಿದ್ದು. ಭೂಲೋಕದಲ್ಲಿ ಪತಿಯೇ ಒಂದನೇ ದೇವರು. ನೀನು ಎರಡನೇ ದೇವರು. ನನಗೆ ಕಷ್ಟವನ್ನು ಕೊಟ್ಟರು ನನ್ನ ಪತಿಯನ್ನು–

ಕಾಡಬೇಡೋ ನನ್ನಯ್ಯ
ಶಿವಾ ನಾರಾಯಣ ದೈವೇ.

ನನಗೆ ಕಷ್ಟವನ್ನು ಕೊಟ್ಟರೂ ನನ್ನ ಪತಿಯನ್ನು ಕಾಡಬೇಡ ಪರಮಾತ್ಮ. ಹಾಗೆಂದು ಶಿವನ ಪಾದಕ್ಕೆರಾಗಿದ್ದಾಳೆ. ಆಗ ಶಂಕರನು ಏನೆಂದು ಹೇಳುತ್ತಿದ್ದಾನೆ? ಆದರೆ ಅಮ್ಮ ಭೂಲೋಕದಲ್ಲಿರುವ ಹೆಣ್ಣುಮಕ್ಕಳೆಲ್ಲ ನಿನ್ನ ಕಥೆಯನ್ನು ಕೇಳಿ ನಿನ್ನ ಹಾಗೆ ಪತಿ ಭಕ್ತಿಯಿಂದಿರಲಮ್ಮ. ಪತಿವ್ರತಾ ಧರ್ಮವು ಅವರ ಹೃದಯದಲ್ಲಿ ಮೂಡಿ ಅಂಥ ಪತಿವ್ರತೆಯರಿಂದಲೇ ಜಗತ್ತಿನ ಕಲ್ಯಾಣವಾಗಿ ಪತಿವ್ರತಾ ಧರ್ಮದಿಂದಿರಲಮ್ಮ. ಮೊದಲು ಪತಿಯ ಸೇವಯನ್ನು ಮಾಡಿ ಆಮೇಲೆ ನನ್ನ ಪೂಜೆಯನ್ನು ಮಾಡು. ನನ್ನ ಧ್ಯಾನವನ್ನು ಮಾಡು. ಪತಿಯ ಸೇವೆಮಾಡದವರು ಬೇಕಾದಷ್ಟು ದೇವರಸೇವೆ, ಪೂಜೆಯನ್ನು ಮಾಡಿದರೂ ಫಲವಿಲ್ಲವಮ್ಮ. ಅಂಥ ಪತಿವ್ರತಾ ಧರ್ಮವು ನಿನ್ನ ಹೃದಯದಲ್ಲಿ ಮೂಡಿದೆ. ನಿನ್ನ ಕಥೆಯನ್ನು ಕೇಳಿ ಎಲ್ಲಾ ಹೆಣ್ಣು ಮಕ್ಕಳು ಅದನ್ನೇ ಕಲಿಯಲಮ್ಮ ಎಂದು ಶಿವನು ಆಶೀರ್ವಾದಮಾಡಿ ಅಂತರ್ಧನಾಗಿ ಕೈಲಾಸಕ್ಕೆ ಹೋಗಿದ್ದಾನೆ.

ಜಯ ಗುರುಮಂಗಳ ನಮಃ
ಪಾರ್ವತೀಪತೆ ಹರಹರಾ ಮಹಾದೇವ.

◆ ◆ ◆ ◆

ಹಾಡಿದವರು : **ಚೌಡಿಕೆ ಗೋವಿಂದಪ್ಪ,** ಹೀರೆನಲ್ಲೂರು,

ಸಂಗ್ರಹ : ೯–೫–೧೯೭೮

# ೧೮. ರುದ್ರಕುಮಾರ

ಅಯ್ಯ ರುದ್ದಾರ ಮಾದೇವಿ ಶಿವನೆ ಚಂದಾರಗೊಮಾರು.

ಚಂದ್ರಗೊಮಾರ, ರುದ್ರಗೊಮಾರ ಎಂಬ ಅಣ್ಣತಮ್ಮಗೋಳು ಇಬ್ರು ರುದ್ರುಮಾದೇವಿ ಮಕ್ಳು.

ಸಿವಸಿವ ಬಾಳ ಬಡುಸ್ತಾನ ಬಂದು
ಅವ್ರು ಕೂಲೀಗೆ ಹೋಗುವಾರು
ಚಂದಾರಗೂಮಾರ ಸಿವನೆ ರುದ್ದಾರಗೂಮಾರ.

ನೀರುಳ್ಳಿಮಡಿಯನ್ನು ಅಗೆಯುವುದಕ್ಕಾಗಿ ಕೂಲಿಗೆ ಹೋಗಿರುವರು. ಸತ್ಯವಂತೆಯಾದ ರುದ್ರುಮಾದೇವಿ ಬಾಳ ಬಡುಸ್ತನ ಬಂದು–

ಬೇಲಿ ಮ್ಯಾಗಾಲು ಸೊಪ್ಪು ಸಿವನೆ ಸೆರಗೊಡ್ಡಿಕುಯ್ದಾಳು
ಎರಡು ಮಕ್ಕಳಿಗೂವೆ ಸೊಪ್ಪು ಬೇಸೀಕೊಂಡಿ ತಾನು
ಮಕ್ಕಳಿಗೆ ತರುವಾಗ ಸಿವನೆ ಮೂವಾರು ಬಂದೇಯ

ತಾಯಿಮಕ್ಕಳು ಒಂದೇ ಪಂಕ್ತಿಯಲ್ಲಿ ಊಟಮಾಡುತ್ತಿರುವಾಗ ಅಯ್ಯ, ಗಜವತಿ ರಾಜುನ ಪಟ್ಟಣದಲ್ಲಿ ಗಜವತಿ ರಾಜನ ಆನೆ ಎಂಬುವ್ರುದು ಪಟ್ಟದಾನೆ, ಹನ್ನೆರಡು ವರುಸದಿಂದ ಹುಲ್ಲು ನೀರು ತೊರದಿದೆ. ಆ ದಿನ ಗಜವತಿ ರಾಜ ಹೋಗಿ, ಎಲೆ ಪಟ್ಟದಾನೆ, ನಮ್ಮ ಪಟ್ಟಣದಲ್ಲಿ ನೀನು ಹುಲ್ಲು ನೀರು ಬಿಡುವುದಕ್ಕೆ ಏನು ಕಾರಣ? ಎಂದ. ಕೇಳಯ್ಯ ಗಜವತಿ ರಾಜ. ನಿನ್ನ ಪಟ್ಟಣದಲ್ಲಿ ನಾನು ಹುಲ್ಲುನೀರು ಬಿಡಬೇಕಾದರೆ ಏನುಕಾರಣ ಅಂದ್ರೆ, ನಿನ್ನ ಮಗಳು–

ಅಯ್ಯ ಗಜವಾತಿ ಇರುವಾಳು
ಅವಳ ಮಂಗಳ ಮಾಡಿದಾರೆ
ನಾನು ಹುಲ್ಲಾನೆ ತಿನ್ನುವೇನು
ನಾನು ನೀರಾನೆ ಕುಡಿವೇನು.

ಆಗ ಗಜವತಿರಾಜ ಬಂದು, ಮಗಳೆ ಗಜವತಿ ಕೇಳಮ್ಮ, ನಮ್ಮ ಪಟ್ಟಣದಲ್ಲಿರುವ ಆನೆ ಎಂಬುವದು ಹುಲ್ಲುನೀರು ಬಿಟ್ಟಿರುವುದು. ಯಾತಕ್ಕಾಗಿ ಎಂದರೆ, ನಿನ್ನ ಮಂಗಳ ಮಾಡಿದರೆ ಅದು ಹುಲ್ಲು ನೀರು ತಿನ್ನುತ್ತಂತೆ–

ನಡಿಯಮ್ಮ ಹೋಗುವಾನ ಆಚೆಗೆ
ಆನೆಗೆ ಮಂಗಳ ಮಾಡುವಂತೆ.

ಕೇಳಯ್ಯ ತಂದೆ, ಊರ ಮುಂದೆ ಇರುವ ಹೆಬ್ಬಾಲದ ಮರಕೆ ಕಬ್ಬಿಣಾದ ಸರಪಳಿ ಹಾಕಿ ಕಟ್ಟಿದ್ದೀಯ ತಂದೆ. ನನಗೆ ಭಯವಾಗುತ್ತೆ –

ಹನ್ನೆರಡು ಸಾವಿರ ನಮಿಗೆ ದಂಡನು ಕೊಡಲೆಬೇಕು
ಆನೇಗೆ ಮಂಗಾಳ ನಾನು ಮಾಡೂತೀನೆಂದಾಳು .

ಆಗ ನೋಡಯ್ಯ, ಗಜವತಿ ರಾಜ ಹನ್ನೆರಡಸಾವಿರ ದಂಡು ಮಂದಿ ಮಾರ್ಬಲ ಸಮೇತವಾಗಿ ಮಂಗಳ ಮಾಡುವಷ್ಟರಲ್ಲಿ ಆನೆ ಗಜವತಿ ಹಿಡಕೋತು. ಹನ್ನೆರಡು ಸಾವಿರದಂಡು ಆ ಗಜವತಿ ಬಿಡಿಸಿಕೊಳ್ಳುವುದಕ್ಕಾಗಿ ಹೋದವರನ್ನೆಲ್ಲ ಸಂಹಾರ ಮಾಡಿ ಆ ಆಲದ ಮರವನ್ನು ಬೇರಿನಂಗೇ ಉರಳಿಸಿ ಆನೆ ನೋಡಯ್ಯ ಗಜವತಿ ಹೊತ್ಕೊಂಡು ಮಲನಾಡಿಗೋಗುತ್ತೈತೆ ಸಿವನೆ. ಪಟ್ಟುಣದ ಜನರು ಗಜವತಿ, ಗಜಪತಿ ರಾಜ ಸಿವಸಿವಾ, ಗಜವತಿ ಹೊತ್ಕೊಂಡು ಆನೆ ಮಲನಾಡಿಗೋಗಬಿಡತು. ಯಾವ ರೀತೀಲಿ ಯಾರು ತಂದು ನನ್ನ ಮಗಳ ನನಿಗೆ ತೋರತಾರೆ–

ಪಟ್ಟಾನೆ ಕೊಡುತೀನಿ ಗಜವಾತಿ ಕೊಡುತೀನಿ.

ಆನೆ ಹೊಡದು ಗಜವತಿ ತಂದು ತೋರಿದೋರ್ಗೆ ನನ್ನ ಮಗಳು ಕೊಟ್ಟು ಮದುವೆ ಮಾಡಿ, ಪಟ್ಟಾನೆ ಅವ್ರ ಸ್ವಾಧೀನಕ್ಕೆ ಕೊಡತೀನಿ ಎಂಬುದಾಗಿ ರಾಜ ಸಾರಿಸವ್ನೆ. ಈ ಸುದ್ದಿಯನ್ನು ಕೇಳಿ ರಾಜಾಧಿರಾಜರ ಮಕ್ಳು ಆನೆ ಹೊಡದು ಗಜವತಿ ತರೂಕಾಗೋದಿಲ್ವೆ ಅಂತ ಹೇಳಬುಟ್ಟು ನಾವು ತರ್‍ತೀವಿ, ನಾವು ತರ್‍ತೀವಿ ಅಂತ ವಿಳ್ಳೇವು ಹಿಡಿದವ್ರೆ. ಊರ ಮುಂದೆ ಕಿತ್ತು ಉಳ್ಳಸಿದ್ದ ಆಲದಮರವನ್ನು ಕಂಡು, ಸಿವಸಿವ ಹನ್ನೆರಡ ಸಾವಿರ ದಂಡೇ ಈ ರೀತಿಯಾಗಿ ಮಡಿದೈತೆ. ಆಲದ ಮರವನ್ನೆ ಈ ರೀತಿಯಾಗಿ ಕಿತ್ತು ಉರುಳಿಸರುವಾದು. ನಾವ್ಹೋದರೆ ನಮ್ಮ ಖಂಡಿತ ಬಿಡುತ್ತ? ಅದು ಸಾಧ್ಯವಿಲ್ಲ ಎಂದು ವಾಪ್ಸು ತಂತಮ್ಮ ಪುರವನ್ನು ಸೇರಿದ್ದಾರೆ. ಈ ಡಂಗುರ ಮೂಲಕ ತಿಳದವರು ಯಾರು? ರುದ್ರುಗೊಮಾರ. ಯಾರವ್ವ ತಾಯಿ ಈ ರೀತಿಯಾಗಿ ಸಾರತ ಇದ್ದಾರೆ ? ಅಯ್ಯೋ ನನ ಕಂದ, ಏನಂಥ ಹೇಳಲಪ್ಪ? ಗಜವತಿ ರಾಜನ ಪಟ್ಟಣದಲ್ಲಿ ಆನೆ ಹನ್ನೆರಡು ಸಾವಿರ ದಂಡ್ನ ಮಡಕ ಮಾಡಿ, ಆಲದಮರ ಬೇರಮುಟ್ಟ ಕಿತ್ತು ಉರಳಿಸಿ, ಗಜವತಿ ಹೊತ್ಕೊಂಡು ಮಲನಾಡಿಗೋಗಿದೆಯಂತೆ. ಮಗನೆ ನಾವು ತಿನ್ತಾ ಇರುವುದು ಸೊಪ್ಪು ಕಣಪ್ಪ

ನಮುಗ್ಯಾಕೊ ನನುಕಂದ: ಸಿವನೆಸತ್ಯೇನ ಊಟಾವು
ಗಜವಾತಿ ಸುದ್ದಿ ಬೇಡ ಮಗನೆ ಕೂಲೀಯ ಮಾಡಯ್ಯ

ಏನಮ್ಮ ನೀನಿಂಥ ಮಾತಾಡತ ಇದ್ದೀಯ? ರುದ್ರುಗೊಮಾರ ಎಂಬ ಹೆಸರು ನನಗಿರುವಾದು. ನಾನು ಆನೆ ಹೊಡದು ಗಜವತಿ ತಂದು ಲಗ್ನ ಆಗದೆ ಹೋದ್ರೆ –

ನಿನ್ನಾ ಮಗನು ಅಲ್ಲ ನಾನು ರುದ್ದಾರಗೊಮಾರ.
ಅಯ್ಯ ಉಣ್ಣೊ ಊಟಾವು ಬಿಟ್ಟು
ತಾನು ಬಂದೇಬಿಟ್ಟಾನು ನೋಡು.

ಗಜವತಿ ರಾಜನ ಪಟ್ಟುಣಕ ಬಂದು, ಪಟ್ಟಣವನ್ನು ಸುತ್ತಿ ಗಜವತಿ ರಾಜನ ಅರಮನೆ ಮುಂದೆ ಬಂದು ನಿಂತಕೊಂಡು, ಆನೆ ಹೊಡದು ಗಜವತಿ ತರತೀನಿ ಎಂದು ಕೂಗಿದಾಗ ಗಜವತಿ ರಾಜ–

ಆಗ ನೋಡಯ್ಯ ಗಜವತಿ ರಾಜನು, 'ಏನಪ್ಪ ಮಗನೆ, ನೀನು ಆನೆ ಸಂಗಡ ಹೋಗುಬ್ಯಾಡ, ಗಜವತಿಯ ಸುದ್ದಿ ಬ್ಯಾಡ. ನಿನಗೊಪ್ಪಿದ ಹೆಣ್ಣ ತಂದು ನಾವು ಮದ್ವೆ ಮಾಡತೀವಿ. ರಾಜ್ಯಭಾರನೆ ಕೊಡತೀವಿ ಕಣಪ್ಪ ರುದ್ರಗೊಮಾರ ಹೋಗಬೇಡ ಅಂದ. ಅದೊಂದು ಮಾತು ಹೇಳಬೇಡ ಮಾವಯ್ಯ. ನಾನು ಆನೆ ಹೊಡೀಲೆಬೇಕು; ಗಜವತಿ ತರಲೇಬೇಕು ಎಂದು ವಿಳ್ಳೇವು ಹಿಡಿದು ಸುಂಗಾರವಾಗವ್ನೆ. ಕೈಯಲ್ಲಿ ಚಂದ್ರಾಯ್ದ ಹಿಡಿಕೊಂಡು, ಆ ಗಜವತಿರಾಜನ ಕೈಯಲ್ಲಿದ್ದ ಮುದ್ರೆ ಉಂಗ್ರವನ್ನು ಈಸ್ಕೊಂಡು ತಾನು ಪಟ್ಟಣವನ್ನು ಬಿಟ್ಟು ಗಜವತಿ ತರುವ್ರೋದಕಾಗಿ ಹೊರಟಿದ್ದಾನೆ.

ಆ ಊರಿನಲ್ಲೊಬ್ಬ ಮಡಿವಳಸಟ್ಟಿ ಮಾರಣ್ಣ ಹರಿಯೋ ಸಮುದ್ರವನ್ನು ಕಾಲಿನಲ್ಲಿ ತಡಕೊಂಡು, ಬಟ್ಟೆ ಮಡಿ ಮಾಡತ ರುದ್ರುಗೊಮಾರನ ಕಂಡು ಎಲಿಗಪ್ಪ ರುದ್ರುಗೂಮಾರ? ಈ ರೀತಿಯಾಗಿ ಹೋಗ್ತಾ ಇದ್ದೀಯ? ಅಂದ. ಕೇಳಯ್ಯ ಮಾರಣ್ಣ, ನಾನು ಆನೆ ಹೊಡದು ಗಜವತಿ ತರುವುದಕಾಗಿ ಹೋಗ್ತಾ ಇದ್ದೀನಿ. ಬಟ್ಟೆ ಒಗೆಯೋದು ಬುಟ್ಟು ಮಾರಣ್ಣ ನಗತ ನಿಂತಕೊಂಡ. ಯಾಕಪ್ಪ ಮಾರಣ್ಣ ನಗತ ಇದ್ದೀಯ? ಆನೆ ಗಜವತೀನ ಮಲನಾಡಿಗ್ಹೊತ್ಕೊಂಡು ಹೋಗಿದ್ರೆ ನಾನು ಸುಮ್ನೆ ಇರುತಿದ್ನೇನಣ್ಣ–

ಒಂದೇ ಗುದ್ದೀಗೆ ಗುದ್ದಿ
ನಾನೇ ಗಜವಾತಿನ ಲಗ್ನ ಆಗುತಿದ್ದೆ.

ಬಾರಯ್ಯ ಮಾರಣ್ಣ ಆಗಲಿ
ಜೋತೇಲಿ ಹೋಗುವಾನ.

ಬಟ್ಟೆ ಸಣೆಯೋದು ಬುಟ್ಟು
ಮಡಿವಾಳಿ ಹೊರಟೇಬುಟ್ಟಾನು ನೋಡಿ.

ಏಗ್ರಾನ ಹೊಳಿಯಾಗೆ
ಹೋಗೂತ ಇರುವಾರು.

ಏಳುಮೆಟ್ಟಿನ ಯಾಗ್ರ ಯಾರಯ್ಯ ನನ್ನ ಹೊಳೆ ಒಳಗೆ ಬರುವರೆಂದು ಏಗ್ರ ಹಿಡಿಯಲು ಬಂದಾಗ, ಇದುನಾರ ಹೊಡಿತೀಯ ಏನೋ ಮಾರಣ್ಣ ಅಂದನು. ಕೇಳಯ್ಯ ರುದ್ರುಗೊಮಾರ, ಈ ಏಗ್ರನ್ನ ಒಂದೇ ಗಚ್ಚಿಗೆ ಕಡದ್ಹಾಕಬುಡತಿದ್ದೆ. ನನ್ನೆಸ್ರು ನಮ್ಮಣ್ಣನ ಹೆಸ್ರು–

ದೊಡ್ಡಸಿದ್ದ ಸಣಸಿದ್ದ ನಾವ್ರೂ, ಸಿದ್ದಪ್ಪನ ಒಕ್ಕಲಯ್ಯ
ಕಡಿಯೋದೆ ಇಲ್ಲ ನಾನು, ಎಂದು ಹೇಳೀದ ಮಾರಣ್ಣ.
ರುದ್ದಾರಗೊಮಾರ, ಒಂದೇ ಕತ್ತೀಗೆ ಕಡುದ
ತುದಿ ಉಗುರ ತುದಿಬಾಲ, ಸಿವನೆ ರುದ್ದಾರ ಕುಯಿದಾನು.
ಮೋಟುಗುರು ಮೋಟುಬಾಲ, ಸಿವನೆ ಮಾರಣ್ಣ ಕುಯಿದಾನು.

ಯಾಕಪ್ಪ ಮಾರಣ್ಣ? ಅದುನ್ನ ನೀನು ಕುಯ್ಕೋತ ಇದೀಯ? ಅಣ್ಣ ಯಾರ ಹತ್ರನಾದ್ರೂ

ಇರುತ್ತೆ ಕಾಣಣ್ಣ. ಅಕಸಮಾತು ನೀನು ಕಳುದ್ರೆ ನನ್ಹತ್ರ ಇರುತ್ತೆ ಅಂತ ಹೇಳವ್ನೆ. ಅದುನ್ನ ಬುಟ್ಟು ಮುಂದುಕ್ಹೋದಾಗ ಏಗ್ರನ ಹೆಂಡ್ತಿ –

ರಾಕ್ಷಾನೆ ಬರುವಾದು ಸಿವನೆ ಯಾರೀರು ಸಿವಸಿವ
ನನ ಗಂಡಾನ ಪ್ರಾಣಾವ
ನೀವು ಕಳದಿ ಬರಲಿಬಹುದೆ?
ಇದನಾರ ಹೊಡಿತೀಯ ಏನೊ
ಮಾರಣ್ಣ ಅಂದಾನು.

ಏಗ್ರುನ ಹೆಂಡ್ರಿ ಕಾಣಣ್ಣ ಇದು. ನಾನು ಹೊಡಿಯೂದಿಲ್ಲ ಎಂದು ಹೇಳಿದಾಗ, ಸಿವಸಿವ ರುದ್ರುಗೊಮಾರ ಒಂದೇಟು ಕೊಟ್ಟಿದ್ದಾನೆ. ಆಗ ಅದು ಬಿಟ್ಟು ಅವರ್ನ ಮುಂದುಕ ಹೋಯ್ತು. ಮಾರಣ್ಣ ರುದ್ರುಗೊಮಾರ ಮುಂದುಕ್ಹೋಗುವಾಗ ರಾಕ್ಷಸಿ ಹೋಗಿ ಏಳ್ಹೆಡೆ ಸರ್ಪ ಆಗಿ–

ಕ್ವಾಟೇಯ ಕಟ್ಟಿಕೊಂಡು
ನನ್ನ ಹೊಳೆಯಾಗೆ ಬಲ್ಲಿರಯ್ಯ
ನನ್ನ ಏಳ್ಹೆಡೆ ಹೊಳಿಗಾಗಿ
ನಿಮ್ಮ ಹಾರಾಡಿ ಬುಟ್ಟಸೂವೆ.

ನೋಡಿದೇನೊ, ನಾಗೇಂದ್ರುನಾರ ನೀನಾರ ಹೊಡಿಯಪ್ಪ ಮಾರಣ್ಣ ಎಂದಾಗ ಅಣ್ಣ ನನ್ನ ಮನೆ ಹೆಸ್ರು ಸಣಸಿದ್ದ ದೊಡಸಿದ್ದ ಸುಳ್ಳಂತೆ ಕಾಣಣ್ಣ –

ದೊಡ್ಡುನಾಗ ಸಣ್ಣನಾಗ ನಾವೂ
ನಾಗೇಂದ್ರುನ ಒಕ್ಕುಲಯ್ಯ
ಹೊಡಿಯೋದೆ ಇಲ್ಲ ಎಂದು
ಆಗ ಹೇಳತಾನೆ ಮಾರಣ್ಣ.

ರುದ್ದುರಗೊಮಾರ ಚಂದ್ರಾಯ್ದ
ತಕ್ಕೊಂಡಿಬುಟ್ಟೇನಲ್ಲ
ಏಳ್ಹೆಡೆ ಕತ್ತರಿಸಿ ಎಸದೇಯ ಇರುವಾನು.

ಆನೆ ಕಾಡಿಗಾಗಿ ಬರುತ್ತಾ ಇರುವರು. ಆನೆಕಾಡನ್ನು ಬಿಟ್ಟು –

ಮಲನಾಡಿಗೆ ಬರುತವ್ರೆ ಸಿವನೆ
ಮಲನಾಡಿನಲ್ಲಿ ನೋಡು.
ಆನೇಯ ನೋಡಯ್ಯ ಮಾರಣ್ಣ
ಎಲ್ಲಿ ನಿಂತಿರುವಾದು?
ಎಲ್ಲೈತೆ ತೋರುಸಣ್ಣ ನಾನು

ಒಂದೇ ಗುದ್ದೀಗೆ ಗುದ್ದಿ
ಗಜವತಿ ತರುತೀನಿ ನನಗೆ
ಆನೇಯ ತೋರಿಸಯ್ಯ.

ನೋಡಯ್ಯ ಮಾರಣ್ಣ. ಆನೆ ಅಂಜೂರದ್ಹತ್ತಿ ಮರದಡಿಲಿ ನಿಂತೈತೆ. ಆನೆಮ್ಯಾಲೆ ಗಜವತಿ ಕುಂತವಳೆ. ಅಂಜೂರದ್ಹತ್ತಿ ಹಣ್ಣು ಕುಯ್ದು ಕುಯ್ದು ಅವಳ ಕೈಗೆ ಹಾಕತಾ ಐತೆ. ಅದ ತಿನ್ನಲಾರದೆ ಅವಳು ಹಿಂದುಕ ಎಸೀತಾ ಇದ್ದಾಳೆ, ಹೋಗಯ್ಯ ಎಂದು ಹೇಳತಾನೆ. ನೋಡಿದ ಕೂಡಲೆ ಮಾರಣ್ಣ

ಆನೇಯ ಸುದ್ದಿ ಬ್ಯಾಡ ಅಣ್ಣ
ಗಜವತಿ ಸುದ್ದಿ ಬ್ಯಾಡ.
ನಮ್ಮೂರಾಗಿರತನಕ ಅದು
ಸಣ್ಣಾದಾಗಿತ್ತು ಕಾಣೊ
ಈವಾಗ ನೋಡಿದಾರೆ ನನಗೆ
ಭಯವೆ ಆಗೂತೈತೆ.
ನಡಿಯಣ್ಣ ಹೋಗುವಾ
ನಮಿಗೆ ಗಜವತಿ ಸುದ್ದಿ ಬ್ಯಾಡ.

ಎಲೆಎಲೆ ಮಾರಣ್ಣ, ನೀನೇನಂತ ಹೇಳತಾ ಇದ್ದೀಯ? ಒಂದೇ ಗುದ್ದಿಗೆ ಗುದ್ದಿ ಗಜವತಿ ಮದಿವಾಗಬೇಕು ಅಂತ ಹೇಳಿದಂತ ಮಾರಣ್ಣ ಈ ದಿನ ಆನೆ ಸುದ್ದಿ ಬ್ಯಾಡ, ಗಜವತಿ ಸುದ್ದಿ ಬ್ಯಾಡ ಅಂತ ಹೇಳತ ಇದ್ದೀಯ. ಎರಡು ತಟ್ಟೆ ಹೆಣಿಯಪ್ಪ ಎಂದು ಎರಡು ತಟ್ಟೆ ಹೆಣಸವ್ನೆ. ಎರಡು ಕರೇಕಲ್ಲು ತಟ್ವೆ ಒಳಗಿಟ್ಟುಕೊಂಡು ಅಂಜೂರದ್ಹತ್ತಿ ಮರಕ್ಕು, ತಾನು ನಿಂತಿದ್ದ ಸ್ಥಳಕ್ಕೂ ನೂಲ್ಹಗ್ಗವನ್ನು ಬಿಟ್ಟು, ನೂಲು ಹಗ್ಗದ ಮೇಲೆ ಮಡಿವಳಿ ಮಾರಣ್ಣನ್ನು ಎತ್ಕೊಂಡು ಅಂಜೂರದ್ಹತ್ತಿ ಮರಕೋಗಿ, ಮಡಿವಳಿ ಮಾರಣ್ಣ ಅಂಜೂರದ್ಹತ್ತಿ ಮರಕ್ಕೆ ಹೋಗಿ ಗಲಾಟೆ ಮಾಡುದರೆಲ್ಲಾದ್ರು ಇವ್ನು ಬಿದ್ದೋಗಬುಡುತಾನೆ ಅಂತ ಮರುಕ್ಕೆ ಬಿಗದವ್ರೆ. ತಂದೆ ಕೈಯಾಗುಳ ಉಂಗ್ರ ಗಜವತಿ ಕೈಯೊಳಗೆ ಬುಟ್ಟವ್ನೆ. ಗಜವತಿ ನೋಡಿ ಸಿವಸಿವ ನಮು ತಂದೆ ಇಲ್ಲೀವರಗು ಯಾಕ ಬಂದ? ನಾನ್ಹೋದ್ರು ಚಿಂತೆ ಇಲ್ಲ. ನಂ ತಂದೆ ಪಟ್ಟಣ ಆಳದೆ ಇಲ್ಲಿಗ್ಯಾಕ ಬಂದ? ಕಣ್ಣುಬಿಟ್ಟು ನೋಡಿ ಗಜವತಿ ದುಕ್ಕವನ್ನು ಮಾಡುವಾಗ ಎರಡು ತಟ್ಟೆಯನ್ನು ಆನೇ ಮ್ಯಾಲೆ ಕುಳ್ಳಿರಿಸಿ ಒಂದು ತಟ್ಟೆಗೆ ಗಜವತಿ ಕೂರುಸಕೊಂಡು, ಒಂದು ತಟ್ಟೆ ಒಳಗೆ ಗಜವತಿ ತೂಕುದ ಎರಡು ಕರೇಕಲ್ಲನ್ನಿಟ್ಟು ಮೇಲಕ್ಕೆ ಆಕೆಯನ್ನು ಎತ್ಕೊಂಡಬಿಟ್ಟು ಆ ತಟ್ಟೆ ಮೇಲೆ ತಟ್ಟೆಯನಿಟ್ಟು ಗಜವತಿ ಒಂದು ಕಂಕಳಲ್ಲಿ, ಮಾರಣ್ಣ ಒಂದು ಕಂಕಳಲ್ಲಿ, ಇವರಿಬ್ರಾನು ಎತ್ಕೊಂಡು ನೆಲಗಾಡಿಗೆ ಬಂದವನೆ. ನೆಲಗಾಡಿನಲ್ಲಿ ನಡದು ಬರುವಾಗ–

ಆನೆ ಕಾಡನ್ನು ಬಿಟ್ಟು ಸಿವನೆ
ಒಂಟೆ ಕಾಡನ್ನು ಬಿಟ್ಟು

ಮಲುನಾಡದೇಸ ಬಿಟ್ಟು ಸಿವನೆ
ಬರುತಾಲೆ ಇರುವಾರು ಸಿವನೆ
ಗಜವತಿ ಪಟ್ಟಾಣ ಮುಂದೆ
ಎಲೆ ಎಲೆ ಮಾರಣ್ಣ ನನಗೆ
ಹಸಿವೆ ಆಗಿರುವಾದು
ಗಜವತಿಗೇಳಯ್ಯ ನೀನು
ಅಡುಗೇಯ ಮಾಡೆಂದು.

ಆಗ ನೋಡಯ್ಯ ಗಜವತಿಗೆ ಮಾರಣ್ಣ ಏನಂತ ಹೇಳತಾನೆ? ಅಮ್ಮಾ ರುದ್ರಗೊಮಾರನಿಗೆ ಬಾಳ ಹಸಿವಾಗಿದೆಯಂತೆ.

ಅಡುಗೇಯ ಮಾಡುಬೇಕು
ನೀನಿಲ್ಲಿ ಅಡುಗೇಯ ಮಾಡುಬೇಕು.

ಹೇಳಯ್ಯ ಮಾರಣ್ಣ, ಈ ಕಾಡಿನಲ್ಲಿ ಅಡಿಗೆಮಾಡು ಅಂದ್ರೆ ಯಾವ ಪಾತ್ರೆ ಇರುವಾದು? ಯಾವ ಪಡಿ ಇರುವುದು? ಯಾವ ರೀತೀಲಿ ನಾನು ಅಡುಗೆಮಾಡಲಿ ಎಂದು ದುಕ್ಕವನು ಮಾಡುವಾಗ ಸಿವಸಿವಾ ಪಾರ್ವತಿ ಪರಮೇಶ್ವರ ಇರುವೆಂಬತ್ತು ಕೋಟಿಗೆ ಪಡಿಯನ್ನಳೆದು ಬರುವಾಗ ಉಳಿದ ಪಡಿಯನ್ನು ಆ ಗಜವತಿಗೆ ಕೊಟ್ಟವರೆ. ಅಡಿಗೆ ಮಾಡ್ಕೊಂಡು ಊಟವನ್ನು ಮಾಡರಮ್ಮ ಅಂತೇಳಿ ಪಾರ್ವತಿ ಪರವೇಸ್ವರ ಆ ಪಡಿಯನ್ನು ಕೊಟ್ಟು ಕೈಲಾಸವನ್ನು ಸೇರವರೆ. ಇತ್ತ ಗಜವತಿ ಅಡಿಗೆಯನ್ನು ಮಾಡುತ್ತಿರುವಳು. ಅಡಿಗೆ ಮಾಡುವ ಸಮೀಪದಲ್ಲಿ ಮಾರಣ್ಣ ಕುಂತವ್ನೆ. ರುದ್ರುಗೊಮಾರ ನಿದ್ರೆ ಮಾಡತ ಮಲಗವ್ನೆ.

ಅಂಜೂರದ್ಹತ್ತಿ ಹಣ್ಣ ತಟ್ಟೆಯ ಮೇಲ ಹಾಕಿಹಾಕಿ ತಟ್ಟೆ ತುಂಬಿ ಮೈಮೇಲೆ ಬಿದ್ದಾಗ ಆನೆ, ಇದೇನು ಗಜವತಿ ಹೆಣ್ಣು ತಿಂತಾ ಇಲ್ಲ. ಕೈಬಿಟ್ಲು ಅಂತ ಮೇಲುಕ ನೋಡೂವತ್ಗೆ ಬರಿ ತಟ್ಟೆ ಇದಾವೆ, ಗಜವತಿ ಇಲ್ಲ –

ಕದ್ದಾರೊ ಯಾರೆಂದು? ಆಗ ಕೋಪ ಬಂದೀತು ನೋಡು
ದಪ್ಪಾ ಮರುಗಳನೆಲ್ಲ, ಸುತ್ತಾ ಇರುವ ಮರುಗಳನೆಲ್ಲ
ಮುರುದಿತ್ತು ಆ ಆನೆ, ಗಜವಾತಿ ಬಂದಂಥ
ದಾರೀಲಿ ಬರುವಾದು, ಸಿವನೆ ದಾರೀಲಿ ಬರುವಾದು.

ಗಜವಾತೆಂಬುವಳು ಆನೆ ಸಂಗಡ ಹೋಗಿದ್ಲು. ಆನೆ ಬರುವ ಸುದ್ದಿ ಶಬ್ದವನ್ನು ಕೇಳಿ ಮಾರಣ್ಣ ಮಾರಣ್ಣ ಆನೆ ಬಂದೇಬುಡತು. ನಿಮ್ಮ ರುದ್ದುರುಗೊಮಾರನೆಬ್ಬಿಸಯ್ಯ ಅಂದಾಗ ಆ ಮಡಿವಳ ಸಟ್ಟಿ ಮಾರಣ್ಣ ಹೆದುರಕೊಂಡು ಓಡೋಗಿ ಬಿದುರುಮಳೆಗೆ ಬಿದ್ದವ್ನೆ. ರುದ್ದುರಗೊಮಾರ್ನ ಎಬ್ಬಿಸಲೆ ಇಲ್ಲ. ಗಜವತಿ, ಸಿವಸಿವ ನನ್ನ ಮಾತ್ರ ಬುಡೋದಿಲ್ಲ, ರುದ್ರುಗೊಮಾರನ್ನ ಏನ ಮಾಡುತ್ತೊ ಎಂದು–

ಎದ್ದೇಳಿ ಸ್ವಾಮಿ ಆನೆ ಬಂದೀತು ಎಂದು
ರುದ್ದಾರಗೊಮಾರನ ಗಜವಾತಿ
ಎಬ್ಬೀಸಿ ಇರುವಾಳು.

ಎಲೆ ಎಲೆ ಗಜವಾತಿ ವಲ್ಲೀಯ ತೆರೆಯನು ಮಾಡಮ್ಮ –

ವಲ್ಲೀಯ ತೆರೆ ಒಳುಗೆ
ನೀನು ಇಲ್ಲೀಯೆ ಇರಮ್ಮ.
ಆನೇಯ ಕಡಿತೀನಿ ಒಂದೇ
ಗಚ್ಚೀಗೆ ಕಡುದ್ಹಾಕಿ
ಪ್ರಾಣಾವ ಕಳಿಯುತೀನಿ ಎಂದು
ಹೇಳಿ ಹೊರಟಾನು ನೋಡು
ಆನೇಯ ಕಡಿಯಲು ನನ್ನ
ಕೈಲಿ ಆಗಾದೆ ಹೋದ್ರೆ
ನೀನೇಯ ಹೋಗಮ್ಮ ಆನೆ ಸಂಗಾಡ ಹೋಗಮ್ಮ

ಹಾಗೆಂದು ರುದ್ರಗೊಮಾರ ಹೇಳಿ ಅಂತರಂಗದಲ್ಲಿ ಹೋಗಿ ಆನೆ ಮೇಲೆ ಕೂತ್ಕೊಂಡು–

ಒಂದೇ ಗಚ್ಚೀಗೆ ಕಡುದ ಆನೆ
ಒಂದೇ ಗಚ್ಚೀಗೆ ಕಡುದ ಅನೆ
ಆನೇಯ ರಯಿತ ನೋಡಿ
ತಾನು ಮೂರ್ಚೆಬಿದ್ದಾನು ನೋಡು.

ಅದು ನೋಡಿ ಗಜವಾತಿ ತಾನೇ ಬಂದು ಚಿನ್ನದ ಗಿಂಡೀಲಿ ಪನ್ನೀರು ತಂದು, ರುದ್ರಗೊಮಾರನ ಪ್ರಾಣಸಂರಕ್ಷಣೆ ಮಾಡಿಕೊಂಡು, ಎತ್ಕೊಂಡು ಬಂದು, ಸಣ್ಣವಲ್ಲಿ ಮೇಲೆ ಬಿಟ್ಟುಕೊಂಡು ಅಡಿಗೆನು ಮಾಡಿದಳು. ಅಮ್ಮಾ ಮಾರಣ್ಣ ಎಲ್ಲೀಗೋದ? ಸ್ವಾಮಿ ಆನೆ ಬಂದಿತೆಂದ ಕೂಡಲೇ ಹೆದುರಿಕೊಂಡು ಇತ್ತ ಮುಂದೆ ಓಡಿಹೋದ. ಎಲೋ ಮಾರಣ್ಣ ಅಂತ ಕೂಗ್ತಾನೆ. ಅಣ್ಣಯ್ಯ ಬಿದಿರ ಮಳೆಲಿದೀನಿ ಕಾಣೊ. ಬಾರೊ ಅಂತ ಕೂಗಿದ. ಬಿದಿರ ಮೆಳೆಲಿರೋ ಮಾರಣ್ಣನ ಕರಕೊಂಡು ಬಂದು ಊಟವನ್ನಾಕಿ ತಾವ್ರೂ ಎಲ್ಲ ಸಂತೋಷದಿಂದ ಊಟವನ್ನು ಉಂಡರು. ಆನೆ ಕಥೆ ಇಲ್ಲಿಗೆ ಮುಗದೀತಮ್ಮ. ನಾವ್ರೋಂದ ಗಳಿಗೆ ನಿದ್ರೆ ಮಾಡತೀವಿ. ನೀನು ಮಾರಣ್ಣ ಎಚ್ಚರವಾಗಿರಪ್ಪ ಅಂತೇಳಿ, ಗಜವತಿ ರುದ್ರಗೊಮಾರ ನಿದ್ರೆ ಮಾಡತ ಮಲಗವ್ರೆ–

ಮೂಡಾಲಿಂದ ನೋಡು ಸಿವನೆ
ಸುಳಿಗಾಳಿ ಬೀಸೀತು.
ಆನೇಯ ಕಿವಿಗಾಳು ಅತ್ತು
ಇತ್ತು ಬಡದಾಡಿದಾವು.

ಆಗ ಮಡಿವಾಳಸೆಟ್ಟಿ ಮಾರಣ್ಣ ಆನೆ ಹೋಡೀತೀನಿ ಅಂತ ಸುಳ್ಳೇಳಬುಟ್ಟ, ಪ್ರಾಣ ಹೋಗೇಬುಡತು ಅಂದು–

ಓಡೀ ಓಡೀ ತಾನು ಸಿವನೆ
ಹಕ್ಕಿನಾರೆ ಬೋನೀಗೆ ಬಿದ್ದಾನು
ಆನೆಯ ವಾಸನ ಸಿವನೆ
ಏಗ್ರಾಗೆ ತಗಲೀತು
ಏಗ್ರಾವೆ ಬರುತ್ತೈತೆ ಆನೆ ತಿನ್ನಾಲು ಬರುವಾದು
ಆನೇಯ ಬಿಟ್ಟೀತು ಸಿವನೆ ಗಜವಾತಿ ಕಂಡೀತು.

ಆನೆ ತಿನ್ನೋಕ ಬಂದ ಏಗ್ರ ಆನೆ ತಿನ್ನೋದ ಬಿಟ್ಟು–

ಗಜವಾತಿ ಹೊತ್ತುಕೊಂಡು ಸಿವನೆ
ಹೋಗುತ ಇರುವಾದು.
ರುದ್ದಾರಗೊಮಾರ ಸಿವನೆ
ಗುರುತಿಲ್ದೆ ಮಲಗವ್ನೆ.

ಗಜವತಿ ಎಂಬುವಳ ಕೊಳ್ಳಾಗೆ ಕಂಠೀಹಾರ ಇತ್ತು. ಶಿವ ಶಿವ ಈ ದಾಟಿನ ಮೇಲಾದರು ಬರಲಿ ಎಂದು ಕೊರಳಲ್ಲಿದ್ದ ಕಂಠೀಹಾರವನ್ನು–

ಅಲ್ಲಿಂದ ಒಂದೊಂದ ಸಿವನೆ ಉದುರಿಸುತ ಹೋದಾಳು

ಏಗ್ರಾವೆ ಹೊತ್ತುಕೊಂಡು ಗವೀಗೆ, ಬರುತಾಲೆ ಇರುವಾದು
ಗವಿಗೆ ತಂದೂಬಿಟ್ಟು, ಅದರೊಳಗೆ ಸೂರುದಮಾನ್ಯೆ ರತ್ನುಮಾನ್ಯೆ

ಗಜವತಿ ಜತೆಗೆ ಮುಂದಾಗಿ ಸೂರುದಮಾನ್ಯೆ, ರತ್ನುಮಾನ್ಯೆರ ತಂದು ಬಿಟ್ಕೊಂಡ್ಯೆತೆ. ಅವರ ಜತೆಗೆ ಗಜವತೀನು ತಂದು ಬಿಟ್ಕಂತು. ಮ್ಯಾಲೆ ಮುಚ್ಚಳಕೆ ಮುಚ್ಚಿ ಆಹಾರಕಾಗಿ ಹೋಗೈತೆ. ಮಾರಣ್ಣ ಬಂದು ತನ್ನ ಅಸಂಭವಿಕದಲ್ಲಿ ರುದ್ರುಗೊಮಾರ್ನ ಸಂಗಡದಲ್ಲಿ ಮಲಿಗವ್ನೆ. ಎಚ್ಚರಿಕೆಯಾಯ್ತು. ರುದ್ರುಗೊಮಾರ, ಎಲ್ಲಪ್ಪ ಮಾರಣ್ಣ ಗಜವತಿ? ಆನೆ ಹೊಡುದ ಮ್ಯಾಲೆ ಇನ್ನೇನ ಭಯ ಅಂತ ಯಾರ ಕೂಟೆ ಹೋಗವಳೆ ಕಾಣಣ್ಣ.

ಮೋಸ ಮಾಡಿ ಹೋದ್ಲು ನಮಿಗೆ
ಅನ್ಯಾಯ ಮಾಡಿದಾಳು.

ಎಲೆ ಎಲೆ ಮಾರಣ್ಣ ಇಂಥ ಮಾತಡಬ್ಯಾಡ ಎಂದು ರುದ್ರಗೊಮಾರ ಸುತ್ತಮುತ್ತ ನೋಡ್ದಿದಾಗ ಕಂಠೀಹಾರ ಉದುರಿತ್ತು. ಉದುರಿದ ಕಂಠೀಹಾರನೆಲ್ಲ ಆಯ್ಕೊಂಡು ಆ ಏಗ್ರುದ ಹೊಳೆ ಹತ್ರುಕ ಬಂದು ಆ ಅವುಸರದಲ್ಲಿ ದಟ್ಟಕಾಡಿನಲ್ಲಿದ್ದ ಗವಿ ಹತ್ತುಕ ಬಂದು ಎಲೆ ಮಾರಣ್ಣ, ಈ ಮುಚ್ಚಳಿಕೆ ತಗೀತಿನಿ. ಇದರೊಳಗೆ ಗಜವತಿ ಅವಳೆ. ಇಳುದು ತಕ್ಕೊಡಯ್ಯ. ನಾನಿಳಿಯಲ್ಲ ಕಣ್ಣಾ. ಒಳಗಡೆ ಗಜವತಿ ತಿಂತಾ ಐತೆ ಏಗ್ರ ಕಾಣಣ್ಣ. ಖಂಡಿತವಾಗು ನಾನದರೊಳಗೆ ಇಳೀದಿಲ್ಲ ಅಂದ. ಇಲ್ಲಕಣೊ ಏಗ್ರಿಲ್ಲ. ಗಜವತಿ ಇದ್ದಾಳೆಂದು ರುದ್ರುಗೊಮಾರ ಹೇಳಿದಾಗ ನನಿಗೆ ಭಯವಾಗುತ್ತಪ್ಪ, ನಾನು ಒಳಗೆ ಇಳಿಯೋಲ್ಲ. ತಟ್ಟೆ ಹೆಣಿಸ್ಕೊಂಬಿಟ್ಟು, ಸೊಂಟಕ್ಕೆ ಹಗ್ಗ ಹಾಕೊಂಬಿಟ್ಟು ರುದ್ರಗುಮಾರ್ನ ಮಾರಣ್ಣ ಒಳುಕ್ಕ ಬಿಟ್ಟವ್ನೆ. ಅದರೊಳಕ್ಕೆ ಹೋಗಿ

ನೋಡಿದಾಗ ಸುರುಮಾನ್ಯೆ ರತ್ನುಮಾನ್ಯೆರೆಂಬ ಎರಡು ಹೆಣ್ಣಿದ್ದು ಮುಂದಾಗಿ ಅವರ್ನ ತಗುದುಬುಟ್ಟು, ಕಡೆಗೆ ಗಜವತಿನ ತಕ್ಕೊಟ್ಟ. ಗಜವತಿ ತಗುದಾದ ಮೇಲೆ ರುದ್ರಗೊಮಾರ್ನ ಸೇದುತ್ತಾ ಇದ್ದ ಮಡಿವಳಸಟ್ಟಿ ಮಾರಣ್ಣ–

ರುದ್ದರನ ಹಗ್ಗಾವ ಕೊಯ್ದು
ಕೆಳಗೇ ಬಿಟ್ಟನಲ್ಲೊ.
ರುದ್ದಾರಗೋಮಾರುನ ಸಿವನೆ
ಹಗ್ಗಾವ ಕೊಯಿದಾನು.
ಮಡಿವಾಳ ಮಾರಣ್ಣ ಅವನ
ಕೆಡವೀಯ ಹೊರಟಾನು.

ಗಜವತಿ ಸುರುದಮಾನ್ಯೆ, ರತ್ನುಮಾನ್ಯೆರು, ಏನಯ್ಯ ಮಡವಳಸಟ್ಟಿ ಮಾರಣ್ಣ ಇಂಥ ಕೆಲ್ಸ ಮಾಡಿಬಿಟ್ಟೈಲ್ಲ? ಹಗ್ಗ ಹರ್ಕ್ಕೊಂಡು ಬಿದ್ದೋಯ್ತಮ್ಮ. ಏಗ್ರ ಬರುತ್ತೆ ನಡೀರಮ್ಮ ಪಟ್ಟಣ ಸೇರೋಣ ಎಂದು–

ಕರಕೊಂಡೆ ಬರುತಾನೆ ಸಿವನೆ
ಗಜವಾತಿ ರಾಜಾನ
ಪಟ್ಟಣಕೆ ಬರುವಾರು ಸಿವನೆ
ಗಜವಾತಿ ರಾಜಾಗೆ

ಏನಯ್ಯ ಗಜವತಿರಾಜ, ನಾನು ಆನೆ ಹೊಡದು ಗಜವತಿ ತಂದಿವ್ನಿ. ಅವ್ರುರ ಜೊತೆಗೆ ಇನ್ನಿಬ್ರು ತಂದಿವ್ನಿ ಕಾಣಯ್ಯ.–

ಕೊಟ್ಟಾವ ಕುಟ್ಟಸಯ್ಯ ನೀನು
ಪಟ್ಟಾವ ಸಾರುಸಯ್ಯ.
ಮೂರು ಮಂದಿ ಹೆಣ್ಣ
ನನಿಗೆ ಮದಿವೇಯ ಮಾಡಯ್ಯ.

ಏನಮ್ಮ ಗಜವತಿ ಸುರುದಮಾನ್ಯೆ, ರತ್ನುಮಾನ್ಯೆ? ಸ್ವಾಮಿ, ನಮಗೆ ಹನ್ನೆರಡು ವರ್ಷ ಗೌರಿವ್ರತ ಇರುವಾದು. ಗೌರೀವ್ರತ ಮುಗಿಯೋತನಕ ನಾವು ಮದಿವ್ಯಾಗೋದಿಲ್ಲ ಎಂದು ಅವರು ಬ್ಯಾರೆ ಬಿಡಾರದಲ್ಲಿ ಗೌರೀಪೂಜೆಯನ್ನು ಹಿಡಿದವರೆ.

ಸಿವಾ ರುದ್ದುರುಗೋಮಾರ, ರಾಕ್ಷಸ ಗವಿಯೊಳಗೆ ಅಲ್ಲಿದ್ದ ಹೆಣದ ಮೂಳೇನೆಲ್ಲಾ ಗ್ವಾಡೆಗೆ ಅರ್ಧಂಬಳಿಗ್ಗತ್ತಿ ಬಂದಾಗ ಕೆಳಗೆ ಬಿದ್ದು ಉದುರ್ಹೋದ. ಗ್ವಾಡೆ ಗೂಟದಲ್ಲಿ ಸೇರಿಕೊಂಡು, ಪರಮಾತ್ಮ ಪಾರ್ವತಿ ಪರಮೇಶ್ವರ ಕೈಬಿಟ್ರೆ ಸಿವಸಿವ ಎಂದಾಗ, ಪಾರ್ವತಿ ಕಾಡಿನಾಗ ಬಂದು ಸಿವನೆ ನೀವು ಸುರುಹೊನ್ನೆ ಮರವನ್ನೇರಿ. ಇಲ್ಲಿಂದ ರುದ್ರುಗೊಮಾರ್ನ ಮೇಲಗಡೆ ತಗದು ಬಿಡತೀನೆಂದು, ತಾನು ಉಟ್ಟಿದ್ದ ಅರವತ್ತು ಮೊಳದ ಸೀರೆಲ್ಲಿ ಹತ್ತು

ಮೊಳ ಉಟಕೊಂಡು ಐವತ್ತು ಮೊಳ ಅದರೊಳಗೆಬುಟ್ಟು ಹಿಡಕೊಳ್ಳಪ್ಪ ರುದ್ರಗೊಮಾರ ಎಂದು ಕೈಹಿಡಿದು ಮೇಲುಕ್ಕೆ ಎತ್ತಿ, ಗವಿಯಿಂದ ಹೊರುಗೆ ತಗುದಬುಟ್ಟು ಕೈಲಾಸವಾಸವಾಗಿ ಹೊರಟುಹೋಗಿದ್ದಾಳೆ.

ಅಲ್ಲಿಂದ ನೋಡಯ್ಯ ಸಿವನೆ ರುದ್ದಾರಗೊಮಾರ
ಕೈಯಲ್ಲಿ ಚಂದ್ರಾಯ ಹಿಡುಕೊಂಡು ಬರುತಾನೆ.
ಹೇಮಾವತಿ ಎಂಬ ಸಿವನೆ ಪಟ್ಟಣಕೆ ಬರುತಾನೆ
ಹೇಮಾವತಿ ಎಂಬ ಹೆಣ್ಣೆ ಏಳೂ ಮಾಡೀಲವಳೆ.
ಏಗ್ರಾವ ಎಂಬೂದು ಅವರ ಪಟ್ಟಾವನ್ಹಾಳು ಮಾಡಿ
ಹೇಮಾವತಿ ಎಂಬ ಹೆಣ್ಣ ಒಂದಾನೆ ಇಟ್ಟೈತೆ.

ರುದ್ರಗೊಮಾರ ಬಂದು ಬಾವೀಕಲ್ಲ ಮ್ಯಾಲೆ ಕುಂತವ್ನೆ. ಕಾಲಿಲ್ಲದವರ, ಕೈಯಿಲ್ದವರ ಕಟ್ಕೊಂಡು ಬರುತ್ತಿದ್ದಂಥ ಏಗ್ರ ನೋಡುಬುಟ್ಟು ರುದ್ರುಗೊಮಾರ್ನ, ಯಾರೋ ಬಂದು ಮಹಾ ಸತ್ಯವಂತ ಈ ಬಾವೀಕಲ್ಲ ಮ್ಯಾಲೆ ಕುಂತವ್ನೆ? ಕೈಲಿ ಕಾಲಲ್ಲಿದ್ದ ಹೆಣಾವನ್ನು ಬಿಟ್ಟು ಅರಮನೆಗೆ ಬಂದು, ಪೀತಾಂಬರವನುಟ್ಕೊಂಡು ಹೇಮಾವತಿಯಿಂದ ಬಂಗಾರದ ಬಿಂದಿಗೆಯನಿಡಕೊಂಡು ಬಾವಿ ನೀರಿಗೆ ಬಂದು ಕೇಳಪ್ಪ ಮಾಸತ್ಯವಂತ, ಯಾರಪ್ಪ ನೀನು? ನಮ್ಮ ಮನೆಯಲೊಬ್ಬು ಹೇಮಾವತಿ ಎಂಬ ಹೆಣ್ಣವಳೆ–

ಕೊಟ್ಟು ಮದುವೆ ಮಾಡಿ ನಿನ್ನೀಗೆ ಪಟ್ಣಾವ ಬಿಡುತೀನಿ
ಎಲೆ ಎಲೆ ಏಗ್ರಾವೆ ನಿನ್ನ ಮಾಯ ನಾನು ಬಲ್ಲೆ
ನಿನ್ನಾ ಮಗಳ ಸುದ್ದಿ ನನಿಗೆ ಬ್ಯಾಡವು ಕಾಣಮ್ಮ

ಕೇಳಪ್ಪಾ ಸ್ವಾಮಿ, ಪಟ್ಣ ತಿನ್ಕೊಂಡಬುಟ್ಟು, ಪಟ್ಣದಾಗ ಜನಾನೆಲ್ಲ ಹಾಳುಮಾಡಿ. ಹೇಮಾವತಿ ಎಂಬೋ ಹೆಣ್ಣ ಏಳ ಮಾಡೀಲಿಟ್ಕೊಂಡಿದಾನೆ. ಆಕೆಯಿಂದ ಈ ಪಟ್ಣ ಉದ್ದಾರವಾಗಲಿ ಅಂತ ಇಟ್ಕೋಂಡಿದೀನಿ, ನಿನ್ನ ಕುಟ್ಟೆ ಕಳಸಿಕೊಡ್ತೀನಿ–

ಬಾರಯ್ಯ ಎಂದೀತು ಅವಳ ಕರಕೊಂಡೆ ಬರುವ್ರೋದು
ರುದ್ದಾರಗೊಮಾರುನ ಕರಕೊಂಡು ಮನೆಗೆ ಬಂದೀತು ನೋಡು
ಹೇಮಾವತಿ ಎಂಬ ಬಾಲೆ ರುದ್ದರನ ಕಂಡಾಳು

ಸಿವಸಿವ ಎಂದು ರಾತ್ರಿಯನ್ನು ಕಳೆದು, ಬೆಳಗಿನಜಾವದಲ್ಲಿ ಎದ್ದು ಏಗ್ರ ಬಂದು ಸ್ವಾಮಿ, ಹೆಣ್ಣು ಮಗಳನ್ನು ಮದ್ವಿಯಾಗುತೀಯಾ? ನಿನ್ನ ಪಟ್ಟಣಕೆ ಕರಕೊಂಡೋಗ್ತೀಯ? ಅಂದಾಗ, ಕೇಳಮ್ಮ, ನನಗೆ ತಾಯಿ ತಂದೆ ಬಂಧು ಬಳಗದೋರು ಬೇಕಾದ ಜನರಿರುವರು. ನಾನು ಈಗ ಲಗ್ನ ಆಗೋದಿಲ್ಲ. ಕಳಿಸಿಕೊಡೋದಾಗಿದ್ರೆ ಹೇಮಾವತಿಯನ್ನು ಕಳಿಸಿಕೊಡು. ಪಟ್ಣ ಬಿಟ್ಟು ನೀನು ಶೀಘ್ರದಲ್ಲೆ ಹೋಗಬೇಕು. ಇಂಥಾ ಕೆಲಸ ಮಾಡಬುಟ್ಟು ಪಟ್ಣ ಹಾಳುಮಾಡಿಬಿಟ್ಟೆ. ಹೇಮಾವತಿಯಿಂದ ನಾನು ಪಟ್ಣ ಆಳುಸ್ತೀನಿ ಎಂದ. ಹಾಗಂತ ಹೇಳಿದಾಗ ಆ ಪಟ್ಣವನ್ನು ಹೇಮಾವತಿ ಹೆಸುರ್ಗೆ ಬಿಕ್ಕಟ್ಟು ಮಾಡಿಕೊಟ್ಟು ಏಗ್ರ ಹೊರಟೋಗಿದೆ. ಸತ್ಯುವಂತೆಯಾದ ಹೇಮಾವತಿ ರುದ್ರುಗೊಮಾರ–

ಪಟ್ಟಾಣ ಬಿಟ್ಟು ಸಿವನೆ ಬರುತಾಲೆ ಇರುವಾರು
ಬೆಕ್ಕಿನ ಜೂಜೀನ ಹೆಣ್ಣಿಗೆ ಬಂದಾನು ನೋಡಯ್ಯ
ಬೆಕ್ಕಿನ ಜೂಜೀನ ಹೆಣ್ಣು ಎರಡೇನೆ ಇರುವಾವು.

ಆಗ ನೋಡಯಯ್ಯಾ ಸಿವಸಿವ, ಬೆಕ್ಕನ ಜೂಜೀನ ಪಟ್ಟಣಕೆ ಬಂದು ರಾಜಾಧೀರಾಜರಿಗೆ ಶರಣುಮಾಡಿದಾಗ, ರಾಜ ಏನಂಥ ಸಾರಸ್ಯವನೆ? ಕೇಳರಯ್ಯ, ನನ್ನ ಎರಡು ಹೆಣ್ಣುಮಕ್ಕಳ ಕೂಟೆ ಬೆಳಕ್ಹರಿಯೋತನಕ ಜೂಜಾಡಿ ಗೆದ್ದವರಿಗೆ ನಮ್ಮ ಮಕ್ಕಳನ್ನು ಕೊಟ್ಟು ಮದ್ವೆ ಮಾಡತೇನಿ ಅಂತ ಸಾರಿಸವ್ನೆ. ಆಗಲಿ ಅಂತ ರುದ್ರುಗೊಮಾರ ಬೆಕ್ಕಿನ ಜೂಜಿಗೆ ಒಪ್ಕೊಂಡಿದ್ದಾನೆ. ಬೆಕ್ಕಿನ ಜೂಜು ಹ್ಯಾಗಂದ್ರೆ ಸ್ವಾಮಿ ನಮ್ಮಕ್ಕಳು ನೀವು ಜೂಜಾಡುವಾಗ ಈ ಬೆಕ್ಕು ತಲೆಮ್ಯಾಲೆ ದೀಪ ಹೊತ್ಕೊಂಡು ಬೆಳಕ್ಹರಿಯೋತನಕ ಒಂದಸಾರೀನು ಎತ್ತಾಕದಂಗೆ ಕೂತಬುಟ್ರೆ ನಮ್ಮನೆಲಿ ನೀನು ಜೀತಕಿರಬೇಕು. ನೀವು ಜೂಜಾಡುವಾಗ ಬೆಕ್ಕು ದೀಪ ಎತ್ತಾಕಿ ಹೋಗಿದ್ದೆ ಆದ್ರೆ ನನು ಮಕ್ಕಳು ಇಬ್ರೂನು ಕೊಟ್ಟು ನಿನಿಗೆ ಲಗ್ನಮಾಡ್ತೀನಯ್ಯ ಅಂತ ಕರಾರುಬರದವ್ರೆ. ಆ ರೀತಿಯಾಗಿ ಅಂದಾಗ ರುದ್ರಗೊಮಾರ ಇದಕ್ಕೆ ತಕ್ಕ ಪ್ಲಾನು ಏನು ಮಾಡಬೇಕು ಎಂದು–

ವಡ್ಡಾರ ಗುರುವಯ್ಯ ಮೂರು ಇಲಿಯಾನೆ ಹಿಡಕೊಡೊ
ಇಲಿಯಾನೆ ಹಿಡಿಸ್ಯಾನೊ
ಬೆಕ್ಕೀನ ಜೂಜೀಗೆ ಬಂದಾನೊ ನೋಡಯ್ಯ.

ಮೂರಿಲಿ ಜೋಬಿನಲ್ಲಿ ಬಿಟ್ಟಕೊಂಡು ರುದ್ರುಗೊಮಾರ ಜೂಜಾಡುವ ಕಾಲದಲ್ಲಿ ಒಬ್ಬರಿಗು ಕಾಣದಂಗೆ ಮೂರಿಲಿಯ ಅದರ ಮುಂದುಕ ಬಿಟ್ಟವ್ನೆ. ಮೂರು ಸಾರಿ ಎತ್ತಾಕಿ ಹೋಗಿಬಿಡ್ತು. ಆಗ ಬೆಕ್ಕಿನ ಜೂಜೀನ ಹೆಣ್ಣ ಆಡಿದ ಮಾತಿನಂತೆ ರುದ್ರುಗೊಮಾರನ ಹಿಂದೆ ಕಳಿಸಿಕೊಟ್ಟವ್ನೆ–

ಅಯ್ಯ ಪಟ್ಟಣಕೆ ಬರುತಾನೆ ಸಿವನೆ ರುದ್ದಾರಗೊಮಾರ
ಗಜವಾತಿ ರಾಜಾನ ಪಟ್ಟಣಕೆ ಬಂದಾನೊ
ಅಲ್ಲೀಗೆ ಹನ್ನೆರಡು ವರುಷ ತುಂಬೆ ಹೋಗ್ಯೆತೆ.

ಹೂವಾಡಿಗರ ಅಜ್ಜಮ್ಮನ ಮನಿಗೆ ಕರುಕೊಂಡೆ ಬರುತಾನೆ. ಹೂವಾಡಿಗರ ಅಜ್ಜಮ್ಮ ಆ ಪಟ್ಟಣದಲ್ಲಿ ಗಜವತಿ, ಸುರುದಮಾನ್ಯೆ, ರತ್ನುಮಾನ್ಯೆ ಎಂಬ ಮೂರು ಹೆಣ್ಣಿಗು ಹೂ ಕಟ್ಟಿಕೊಡತ ಇದ್ದಾಳೆ. ಗಜವತಿ ಪಟ್ಟಣಕೆ ಬಂದು ಸೇರವ್ರೆ ಹೂವಾಡಿಗರಜ್ಜಿ ಮನೆಗೆ. ಹೇಮಾವತಿ, ಬೆಕ್ಕಿನ ಜೂಜಿನ ಹೆಣ್ಣು ಎಂದೇಳಿ ಮೂರು ಹೆಣ್ಣಾ ಮಕ್ಳ ತಂದು ಆ ಹೂವಾಡಿಗರಜ್ಜಿ ಮನೇಲಿಟ್ಟವ್ನೆ. ಯಾರಿಗಜ್ಜಿ ನೀನು ಹೂಕಟ್ಟೋದು ಅಂತ ಕೇಳಿದಾಗ, ಆ ತಾಟಕಿ ಎಂಬ ಮುದುಕಿ ಕೇಳಪ್ಪ ಈ ಪಟ್ಟಣದಲ್ಲಿ ಮಡಿವಳಸಟ್ಟಿ ಮಾರಣ್ಣ ಆನೆ ಹೊಡದು ಗಜವತಿ ತಂದವನೆ. ಸುರುದುಮಾನ್ಯೆ, ರತ್ನುಮಾನ್ಯೆ ತಂದವ್ನೆ. ಅವ್ರ ಮೂರ ಜನರಿಗೆ ನಾನು ಹೂ ಕಟ್ತೇನಿ ಅಂತ ಹೇಳಿದಾಗ, ನೀನು ಅಡಿಗೆ ಮಾಡಜ್ಜಿ. ನಾನು ಹೂ ಕಟ್ಕೊಡ್ತೀನಿ. ಹೂ ಕಟ್ತೇನಿ ಅಂತ ರುದ್ರುಗೊಮಾರನೆ ಹೂ ಕಟ್ಟವ್ನೆ. ಗಜವತಿ ತರತೀನಂತ ಹೇಳಿ ಹೇಮಾವತಿ ಆ ರುದ್ರುಗೊಮಾರ ತಂದೆ ಕೈಯಗಳ ಮೌರ‍್ಯ ಉಂಗ್ರ ಈಸ್ಕೊಂಡು ಹೋಗಿದ್ನಲ್ಲ–

ಹೂವೀನ ಮಾಲೆಲ್ಲಿ ಸಿವನೆ ಉಂಗ್ರಾವ ಸೇರಿಸಾನು
ಅಯ್ಯ ಗಜವಾತಿ ಕಂಡಾಳೊ ಸಿವನೆ ಉಂಗ್ರಾವ ನೋಡಿದಾಳು.
ನೋಡಯ್ಯ ನನು ತಂದೆ ಸಿವನೆ ಆನೇಯ ಹೊಡುದಾರು
ಆನೇಯ ಹೊಡುದಂಥ ರುದ್ದರುಗೊಮಾರ ಬಂದವ್ನೆ
ಅಜ್ಜೀಯ ಮನೆಯಾಗೆ ಸಿವನೆ ಇರುವಾನು ಎಂದಾರು
ಗಜವಾತಿ ರಾಜಾರು ಸಿವನೆ ದಂಡು ಮಂದೀಯ ಕೂಡಿ
ತಾಟೀಕಿ ಮನೆ ಮುಂದೆ ಬಂದು ನಿಲ್ಲುವರು ನೋಡಯ್ಯ
ಯಾರಜ್ಜಿ ನಿಮ್ಮ ಮನೆಯಾಗೆ ಇರುವಾರು?

ರುದ್ದುರುಗೊಮಾರ ಎಂಬುದು ಆಕಿಗಿ ಗುರತಿಲ್ಲ. ಮೂರು ಜನ ಇರುವಾರು ಕಣಪ್ಪ. ಮೂರ್ಥೆಣ್ಣು ಒಂದ ಗಂಡು ಕಣಪ್ಪ ಇರೋರು ಅಂತ ಹೇಳಿದಾಗ, ಕಳಿಸಿಕೊಡಜ್ಜಿ, ಈಚೆಗೆ ಅಂತ ಕೇಳತಾವ್ರೆ–

ರುದ್ದಾರಗೊಮಾರ ಮಾವ್ನ ಪಾದಕೆ ಬೀಳುತಾನೆ
ಸುರುಮಾನ್ಯೆ ರತ್ನುಮಾನ್ಯೆ ಸಿವನೆ ಗಜವಾತಿ ಬಂದಾರೊ.

ಹೇಮಾವತಿ ಎಂಬ ಹೆಣ್ಣು, ಬೆಕ್ಕನ ಜೂಜೀನ ಹೆಣ್ಣು ಮೂರು ಮಂದಿ ಆರು ಜನಾನು ಬೀದಿ ಮೆಳಂಡೆಮಾಡಿಕೊಂಡು ಗಜವತಿ ರಾಜ ತನ್ನರಮನೆ ಮುಂದಕೆ ಬಂದಾಗ, ಮೋಸ ಮಾಡಿದ ಮಾರಣ್ಣುನಗೆ ಏನ ಕೆಲಸ ಮಾಡತೀಯಪ್ಪ ರುದ್ರಗೊಮಾರ, ಸ್ವಾಮಿ ಅವ್ನ ಸಿಗ್ಸಿ ತ್ವಾರಣ ಕಟ್ಸದರೆ ನನ್ನ ಪಟ್ಣವೆ ಹಾಳಾಯ್ತು. ನಾನು ತಂದಿರೂದು ಆರು ಜನ ಹೆಂಡ್ರು–

ಆರೂ ಜನರ್ಥೆಂಡ್ರ ಅವ್ನು ಸೀರೇಯ ಸೆಹೆಯಲಿ
ನನ್ನ ಪಟ್ಟಾಣದಲ್ಲಿ ಅವನು ಕುಲಕಸಬ ಮಾಡುತಾನೆ.
ನನ್ನೀಗೆ ಸಿಕ್ಸಾಬುದ್ಧಿ ಕಲಿಸೀಯ ಇರುವಾನು
ನನ್ನಾ ಪಟ್ಟಣದ ಸಿವನೆ ಕೆಲಸಾವ ಮಾಡಾಲಿ.

ಹಾಗೆಂದು ಹೇಮಾವತಿ ಎಂಬೋ ಹೆಣ್ಣು, ಬೆಕ್ಕಿನ ಜೂಜಿನ ಹೆಣ್ಣು, ಗಜವತಿ, ಸುರುಮಾನ್ಯೆ, ರತ್ನುಮಾನ್ಯೆ ಎಂಬೊ ಆರು ಜನಕು ಆರು ಅರಮನೆ ಕೊಟ್ಟು ಬಿಡಾರದಲ್ಲಿ ಇಟ್ಟವನೆ. ಏನಪ್ಪ ರುದ್ರುಗೊಮಾರ ನೀನಾಡಿದ ಮಾತಿನಂತೆ ಪಟ್ಣ ಕುಟ್ಟಿ ಪಟ್ಣ ಸಾರ್ಸಿ ನೀವಾರು ಮಂದಿ ಹೆಣ್ಣು ನಿನಿಗೆ ಲಗ್ನ ಮಾಡತೀನಿ. ಮಾವಯ್ಯ ನನಗೆ ಲಗ್ನ ಮಾಡಬೇಕಾದರೆ ನಾನಾಗುವುದಿಲ್ಲ. ನಂತಾಯಿ ರುದ್ರು ಮಾದೇವಿನ ನೋಡಬೇಕು. ನಮ್ಮಣ್ಣ ಚಂದ್ರಗೊಮಾರನ ನೋಡಬೇಕು ಅಂತ ಹೇಳಬುಟ್ಟು

ತನ್ನ ಪಟ್ಟಾಣಕಾಗಿ ಸಿವನೆ ಬರುತಾಲೆ ಇರುವಾನು
ಚಂದಾರಗೊಮಾರ ಸಿವನೆ ತಮ್ಮ ಹೋದ ಮ್ಯಾಲೆ
ಗವ್ವಾತಿ ಪಟ್ಣದಲ್ಲಿ ಒಂದು ಮದಿವೇಯ ಆಗಿರುವಾನು

ರುದ್ದಾರ ಮಾದೇವಿ ಸಿವನೆ ಸಾಕೂವರಿಲ್ಲಾದೆ
ಉಡುವದುಕೆ ಬಟ್ಟೆಲ್ಲದೆ ಸಿವನೆ ಮಕ್ಕಾಳ ನೆನುಕೊಂಡು
ಬಾಳ ಬಡುಸ್ತಾನ ಬಂದು ತಾಯಿ ಕಣ್ಣೆರಡು ಕಾಣಾದೆ
ಕುಲವೆಂಟು ಬೀದಿ ಒಳಗೆ ದಾನ ಭಿಕ್ಷಾವ ಮಾಡುತಾಳೆ
ರುದ್ದಾರಗೊಮಾರ ತಾಯಿ ಪಟ್ಟಣಕೆ ಬರುತಾನೆ
ಗಜವಾತಿ ರಾಜಾನ ಪಟ್ಟಾಣ ಬಿಟ್ಟು ಬಂದಾರು ನೋಡಿ
ಮಲ್ಲೀಕ ಮಾದೇವಿ ಸಿವನೆ ರುದ್ದಾರ ಮಾದೇವಿ.

ಹಾಲುಮತರ ಬೀದಿ ಒಳಗೆ ಭಿಕ್ಷ ಮಾಡುತ ಇದ್ದಾಳೆ ಸತ್ಯವಂತೆಯಾದ ರುದ್ರ ಮಾದೇವಿ–

ಪಾದಾವ ಹಿಡುದಾನು ಸಿವನೆ ರುದ್ದುರುಗೊಮಾರ
ಯಾರಯ್ಯ ನನ್ನಾ ನೀನು ಪಾದಾವ ಹಿಡುದೋರು.

ತಾಯಿ ನಾನು ರುದ್ರುಗೊಮಾರ. ಆನೆ ಹೊಡದೇನಪ್ಪ? ತಾಯಿ, ಆನೆ ಹೊಡದು ಗಜವತಿ ತಂದಿದೀನಿ. ಅವಳ ಜೊತೆಗೆ ಇನ್ನು ಐದು ಜನ ಹೆಂಡ್ರು ತಂದಿವ್ನಿ ಕಾಣಮ್ಮ ಎಂದಾಗ–

ಕಣ್ಣೆರಡು ಕಂಡಾವ್ರೊ ತಾಯಿ ಹನ್ನೆರಡು ವರುಷಾದ
ಬಾಲೆಯಂಗೆ ನಿಂತಾಳೊ ರಾಜ್ಯ ದೊರೆತಾನ ಕೊಡುತಾರೆ
ರುದ್ದಾರ ಮಾದೇವಿ ಮಕ್ಕಾಳ ಸುದ್ದೀಯ ಕೇಳಾಳು
ಸಂತೋಷ ಬಂದೀತು ಸಿವನೆ ಸಂತೋಷ ಬಂದೀತು.
ಅಣ್ಣೆಲ್ಲಿಗೆ ಹೋದುನಮ್ಮ ತಾಯಿ ಅಣ್ಣೆಲ್ಲಿಗೆ ಹೋದುನಮ್ಮ?
ನೀನ್ಹೋದ ತಿಂಗಳುಗೆ ನಿಮ್ಮಣ್ಣ ಗವ್ವಾತಿ ಪಟ್ಣದಲ್ಲಿ
ಲಗ್ನವಾಗಿರುವವನಂತೆ ಕಾಣಪ್ಪ ಅಂದಾಗ
ಅಣ್ಣಾನ ಕರುಕೊಂಡು ನಾನು ಬರುತೀನಿ ಕಾಣಮ್ಮ.
ಗವ್ವಾತಿ ಪಟ್ಟಾಣಾಕೆ ಶಿವನೆ ಬರುತಾಲೆ ಇರುವಾನು
ಗವ್ವಾತಿ ಪಟ್ಟಾಣದ ದನವಿನ ಹುಡುಗಾರ ಕೇಳಿದಾನು
ಎಲೆಎಲೆ ಹುಡುಗಾರೆ ನಿಮ್ಮ ಪಟ್ಟಣದಲಿ ಒಬ್ಬ
ಚಂದಾರಗೊಮಾರ ಪಟ್ಣದಲ್ಲಿ ಇರುವಾನು
ನಮ್ಮ ಅಣ್ಣಾನೀಗ ನೀವು ಸುದ್ದೀಯ ಕೊಡಿರಯ್ಯ
ನಿನು ತಮ್ಮ ರುದ್ದಾರ ಬಂದಿ ಇರುವಾನು ಹೇಳಿರಯ್ಯಾ.

ದನವಿನ ಹುಡುಗರೆ ಕೇಳರಯ್ಯ, ಚಂದ್ರಗೊಮಾರ ನಿನ ತಮ್ಮ ರುದ್ರುಗೊಮಾರ ಬಂದು ಊರ ಮುಂದೆ ನಿಂತವ್ನೆ. ಚಂದ್ರುಗೊಮಾರ ರುದ್ರುಗೊಮಾರ ಇಬ್ರು ಅಣ್ಣತಮ್ಮದೀರು. ತಮ್ಮ ಬಂದ ಸುದ್ದಿ ಕೇಳಿಬಿಟ್ಟು ಚಂದ್ರಗೊಮಾರ ವಾದ್ಯ ಉತ್ಸವದಿಂದ ಮರ್ರ್ಯಾದೆಯಿಂದ ಕರಕೊಂಡು ತನ್ನ ಪಟ್ಣಕೆ ಬಂದವ್ನೆ. ಅರಮನೆಯನ್ನು ಸೇರಿಬುಟ್ಟು, ತಮ್ಮ ರುದ್ರುಗೊಮಾರ

ಆನೆ ಹೊಡದು ಗಜವತಿ ತಂದೇನಪ್ಪ? ಅಣ್ಣ ಆನೆ ಹೊಡದಿಲ್ಲ. ಗಜವತಿ ತರುಕಸಾಧ್ಯವಿಲ್ಲ. ನಾನು ಬಂದೆ ಕಾಣಣ್ಣ ನಿನ್ನ ಹತ್ರುಕ್ಕಾಗಿ ಅಂತ ಹೇಳಿದಾಗ, ಹಂಗಾದ ಮೇಲೆ ತಮ್ಮ, ನಾನು ನಿನಗೆ ಹೆಣ್ಣು ನೋಡಿಕೊಂಡು ಬಂದು ಮದವೇನು ಮಾಡತೀನಿ. ನೀನು ಪಟ್ನದಲ್ಲಿ ಇರಪ್ಪ ಎಂದಾಗ ತನ್ನ ಹೆಂಡತಿಗೆ ಹೇಳಬಿಟ್ಟು, ರುದ್ರಗೊಮರ್ನ ಸುಕವಾಗಿ ಸಾಕ್ಕೊಂಡಿರಮ್ಮ, ನಾನು ಬರೋತನಕ ಅಂತ ಹೊರಟೋಗಿದ್ದಾನೆ. ಆಗ ಅವಳು ಗಂಡ ಚಂದ್ರಗೊಮಾರ ಹೆಣ್ಣು ನೋಡೋಕೆ ಹೋದಾಗ–

ನಿಮ್ಮಣ್ಣ ಬರೊತನಕ ನೀನು ಸುಕುವಾಗಿ ಇರಯ್ಯ
ರುದ್ದಾರಗೊಮಾರ ಸಿವನೆ ಚಂದಾರಗೊಮಾರ
ಅಣ್ಣಾ ತಮ್ಮಗೋಳಲ್ಲೊ ಸಿವನೆ ರುದ್ದಾರ ಮಾದೇವಿ
ಗವ್ವಾತಿ ಪಟ್ನದಲ್ಲಿ ಸಿವನೆ ಚಂದಾರಗೊಮಾರ
ರುದ್ದರನಗೆ ಹೇಳುತಾನೆ ನಿನಿಗೊಂದು ಹೆಣ್ಣಾನೆ ತರುತೀನಿ
ಮದಿವೇಯ ಮಾಡುತೀನಿ ನನು ತಮ್ಮ ಇಲ್ಲೇಯ ಇರಯ್ಯ
ಹಾಗಂದು ಹೇಳಿ ತನ್ನ ಹೆಣ್ಣಿಗೆ ಹೊರಟಾನು
ಚಂದಾರನ ಹೆಂಡತಿ ಸಿವನೆ ಏನ ಹೇಳಾಳು?
ನಿಮ್ಮಣ್ಣ ಬರುತನಕ ಸಿವನೆ ಸುಕುವಾಗಿರಯ್ಯ
ರುದ್ದರನ ನೋಡಾಳೊ ಅವನಿಗೆ ಆಸೇಯ ಮಾಡಿದಾಳು
ಅಣ್ಣಾನ ಹೆಂಡಾತಿ ನಾನು ನೀನು ಏನಮ್ಮ?

ತಾಯಿ ಆಗಲುಬೇಕು ಅಮ್ಮ ನನ್ನಾನು ತಡಿಬ್ಯಾಡ
ದೂರು ಬಂದೀತು ಎಂದು ಆಗಲೆ ಕೋಪಾವ ತಾಳಿದಾಳು
ಸುದ್ದೀಯ ಕೊಡುತಾಳೆ ಚಂದಾರಗೊಮಾರುಗೆ
ರುದ್ದರಗೊಮಾರ ಸ್ವಾಮಿ ಮೈ ಕೈ ಮುಟ್ಟಿದಾನು
ಹಂಗಂದು ಹೇಳೀಗ ಸಿವನೆ ಸುದ್ದೀಯ ಕಳಿಸಾಳು
ಹೆಣ್ಣೀಗೆ ಹೋದಂತ ಅಣ್ಣ ಬೇಗಾದಿ ಬಂದಾನು
ಏನಯ್ಯ ನನುತಮ್ಮ ನೀನಿಂಥ ಮೋಸಾವ ಮಾಡೀದೆ?
ಶರುಣೆಂದು ಶರುಣೆಂದು ಅಣ್ಣಗೆ ಶರಣಾವ ಮಾಡುತಾನೆ
ನಿನ್ನಾ ಪಟ್ಟಣಕಾಗಿ ಅಣ್ಣ ನಾನು ಬಂದವನಲ್ಲ
ನಿನ್ನಾ ಹೆಂಡತೀಯು ನನ್ನೀಗೆ ತಾಯಿ ಆಗಲುಬೇಕು
ಶರಣಾವ ಮಾಡೀದ ಶಿವನೆ ಶರಣಾವ ಮಾಡೀದ
ಅನ್ಯಾಯ ನುಡಿದಂತ ಪಾಪಿ ಹಾಳಾಗಿ ಹೋಗಲಿ
ಧರುಮರ ನೀ ಜಯಿಸಿ ತನ್ನ ಪುರುವಾಕೆ ಬರುತಾನೆ
ನಿನ್ನೆಡತಿ ಬಾವಿಗೆ ಬಿದ್ದು ಪ್ರಾಣಾವ ಕಳುದಾಗ
ಕೆಟ್ಟು ಬಂದರೆ ಅಣ್ಣ ನಿನ್ನೀಗೆ ಪಟ್ನಾವ ಕೊಡುತೀನಿ
ಹಂಗಂದು ಹೇಳೀಗ ರುದ್ದಾರ ಪುರಕಾಗಿ ಬರುತಾನೆ
ತಾಯಿ ಪಟ್ಟಣಕಾಗಿ ರುದ್ದಾರಗೊಮಾರ ಬಂದಾನೊ.

ಆಗ ನೋಡಯ್ಯ ಗಜವತಿ ರಾಜನ ಪಟ್ಟಣಕಾಗಿ ದಂಡುದಾಳಿ ಸಮೇತರಾಗಿ ರುದ್ರುಮಾದೇವಿ ಪಟ್ಣದಿಂದ ಬಂದು ಗಜವತಿ ರಾಜನು ಪಟ್ಣ ಕುಟ್ಟಿ, ಪಟ್ಣ ಸಾರ್ಸಿ, ಗಜವತಿ ಸುರುಮಾನ್ಯೆ, ರತ್ನುಮಾನ್ಯೆ, ಬೆಕ್ಕಾನ ಜೂಜುನ ಹೆಣ್ಣು, ಹೇಮಾವತಿ ಎಂಬ ಹೆಣ್ಣು ಕೊಟ್ಟು ಮದಿವೆಯನ್ನು ಮಾಡಿ ಪಟ್ಣದಲ್ಲಿ ದೊರೆತನವನ್ನು ಕೊಟ್ಟಿದ್ದಾನೆ. ಹೇಮಾವತಿ ಪಟ್ಣವನ್ನು ಸೇರಿ ರಾಜ, ಹೇಮಾವತಿ ಪಟ್ಣಕ್ಕೂ ಸಿವಸಿವ, ಗಜವತಿ ರಾಜನ ಪಟ್ಣಕ್ಕು ರಾಜನಾಗಿ ಆಳಿಕೊಂಡು ರುದ್ರಗೊಮಾರ ಇರುವನು. ಗವ್ವಾತಿ ಪಟ್ಟಣದಲ್ಲಿ ಚಂದರಗೊಮಾರ ಅವನ ಹೆಡ್ತಿ ಸತ್ತು ಪ್ರಾಣವನ್ನು ನಿಗ್ರಹಿಸಿ ತಾನು ಪುರವನ್ನು ಸೇರಿದಾಗ ರುದ್ರಮಾದೇವಿ ಪಟ್ಣವನ್ನು ತನ್ನ ಅಣ್ಣನಿಗೆ ಬಿಟ್ಟುಕೊಟ್ಟವನೆ.

ರುದ್ದಾರಗೊಮಾರನ ಕಥೆಯ ಇಲ್ಲೀಗೆ ಮುಗಿದೀತು ಸಿವನೆ.

◆◆◆◆

ಹಾಡಿದವರು :

**ಗೊಲ್ಲರ ಸೂರಪ್ಪ**

**ಶಿವಪುರದ ಗೊಲ್ಲರ ಹಟ್ಟಿ**

**ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ**

**ಸಂಗ್ರಹ : ೧೪-೪-೧೯೭೯**

# ಅನುಬಂಧ

ಜನಪದ ಕಥನಕಾವ್ಯಗಳಲ್ಲಿ ಬಳಕೆಯಾಗಿರುವ ಅನೇಕ ಗ್ರಾಮ್ಯಶಬ್ದಗಳಿಗೆ ಸ್ಪಷ್ಟವಾದ ಅರ್ಥ ಹೇಳುವುದು ಕಷ್ಟ. ಪ್ರಾದೇಶಿಕ ವೈವಿಧ್ಯತೆ ಅಥವಾ ಹಾಡುಗಾರನ ಪ್ರಬುದ್ಧತೆ ಅಥವಾ ಅಪ್ರಬುದ್ಧತೆ ಅಥವಾ ಮಿತಿಮೀರಿದ ಸ್ವಚ್ಛಂದತೆ ಮೊದಲಾದವುಗಳಿಂದ ಪದಗಳು ಹುಟ್ಟಿಕೊಳ್ಳುತ್ತವೆ. ಕಾಲಕ್ರಮದಲ್ಲಿ ಶಬ್ದನಿಷ್ಪತ್ತಿಯ ಅರ್ಥ ಕೈತಪ್ಪಿಹೋಗುತ್ತದೆ ಅಥವಾ ಅಸ್ಪಷ್ಟವಾಗುತ್ತದೆ.

ಕನ್ನಡನಾಡಿನಾದ್ಯಂತ ಚೆಲ್ಲಾಡಿರುವ ಅಸಂಖ್ಯಾತ ಜನಪದ ಶಬ್ದಗಳು ಸಂಗ್ರಹವಾಗಿಲ್ಲ. ಶಿಷ್ಟಬರವಣಿಗೆಗಾರರು ಹಳ್ಳಿಗರ ಪದಗಳನ್ನು ಅರ್ಥಪೂರ್ಣವಾಗಿ ತಮ್ಮ ಕೃತಿಗಳಲ್ಲಿ ಬಳಸಿ ದಾಖಲಿಸಿಲ್ಲ. ತೌಲನಿಕ ಅಧ್ಯಯನಕ್ಕೆ ಅನುಕೂಲವಾಗಲು ಕನ್ನಡ ಜನಪದ ಕಥನಕಾವ್ಯಗಳ ಬಹುಪಠ್ಯಗಳು ಸಂಗ್ರವಾಗಿಲ್ಲ.

ಸಂಗ್ರಹಿಸಿದ ಸಂದರ್ಭದಲ್ಲೇ ಸಂಪಾದನೆ ಮಾಡಿ, ಅನುಮಾನ ಬಂದಕಡೆ, ಮೂಲಗಾಯಕನೊಡನೆ ಸಂವಾದಮಾಡಿ ಶಬ್ದಾರ್ಥ ನಿಷ್ಕರ್ಷೆ ಮಾಡಿಲ್ಲ. ಹಾಗಾಗಿ ಒಬ್ಬರು ಸಂಗ್ರಹಿಸಿದ ಸಾಹಿತ್ಯವನ್ನು ಹಲವು ವರ್ಷಗಳ ಮೇಲೆ ಇನ್ನೊಬ್ಬರು ಸಂಪಾದಿಸುವ ಸಂದರ್ಭದಲ್ಲಿ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೂಲಗಾಯಕರು ಕಣ್ಮರೆಯಾಗಿದ್ದರಂತೂ ಸಮಸ್ಯೆಗಳು ಮತ್ತಷ್ಟು ಬಿಗಡಾಯಿಸುತ್ತವೆ. ಪ್ರಸ್ತುತ ಸಂಗ್ರಹದ ಸಂಪಾದನೆಯಲ್ಲಿ ಇದು ನಿಚ್ಚಳವಾಗಿ ಕಂಡುಬಂದಿತು.

ನಾಡೋಜ ಎಚ್. ಎಲ್. ನಾಗೇಗೌಡರು ತಾವು ಸಂಗ್ರಹಿಸಿದ ಎಲ್ಲಾ ಸಾಹಿತ್ಯವನ್ನು ಸಂಗ್ರಹಿಸಿದ ಸಂದರ್ಭದಲ್ಲೇ ಸಂಪಾದಿಸಿ ಪ್ರಕಟಿಸಲಿಲ್ಲ. (ಸಂಗ್ರಹಿಸಿದ ಸಂದರ್ಭದಲ್ಲೇ ಅವರೇ ಸಂಪಾದಿಸಿ ಪ್ರಕಟಿಸಿದ ಮೂರು–ನಾಲ್ಕು ಗ್ರಂಥಗಳು ಮಾತ್ರ ಉಪಯುಕ್ತ ಮಾಹಿತಿಯೊಡನೆ ಬೆಳಕುಕಂಡಿವೆ. ಅವರ ಹೆಚ್ಚಿನ ಸಾಹಿತ್ಯ ಸಂಗ್ರಹಗೊಂಡ ಮೂವತ್ತು ವರ್ಷದಮೇಲೆ ಸಂಪಾದನೆಗೊಂಡು ಪ್ರಕಟವಾಗಲು ಅಣಿಯಾಗಿದೆ. ಈ ಹಂತದಲ್ಲಿ ಸಂಗ್ರಾಹಕರೂ ಗಾಯಕರೂ ಕಣ್ಮುಂದೆ ಇಲ್ಲ. ಹಾಗಾಗಿ ಗ್ರಂಥಸಂಪಾದನಾ ಸಂದರ್ಭದ ಅನೇಕ ಅನುಮಾನಗಳ ನಿವಾರಣೆಗೆ ಕಷ್ಟವಾಗಿದೆ. ಅರ್ಥಕೋಶ ತಯಾರಿಕೆಯಲ್ಲೂ ಈ ತೊಡಕು ಕಾಣಿಸಿಕೊಂಡಿದೆ.

ಪ್ರಸ್ತುತ ಅರ್ಥಕೋಶದಲ್ಲಿ ಕಾವ್ಯಕಥೆಯ ಸಂದರ್ಭದಲ್ಲಿ ಏನು ಧ್ವನಿಸಬಹುದೋ ಅಷ್ಟನ್ನು ಮಾತ್ರ ಪ್ರಧಾನವಾಗಿ ಗಮನಿಸಿ ಅರ್ಥನೀಡಲು ಪ್ರಯತ್ನಿಸಿದೆ. ಕೆಲವು ಕಡೆ ಊಹಾರ್ಥಕ್ಕೇ ತೃಪ್ತಿಪಟ್ಟುಕೊಂಡಿದೆ. ಸಾಕಷ್ಟು ಸಂದರ್ಭಗಳಲ್ಲಿ ಅರ್ಥ ಹೊಳೆಯದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಿದೆ. ಮುಂದೆ ಯಾರಾದರೂ ವಿದ್ವಾಂಸರು ಈ ಪ್ರಶ್ನಾರ್ಥಕ ಚಿಹ್ನೆಗಳನ್ನು ತೆಗೆಯಬಹುದು. ಅದಕ್ಕೆ ಕಾವ್ಯಕಥೆಯ ಬಹುಪಾಠಗಳು ಬೇಕು; ಪ್ರಯೋಗಗಳು ದೊರಕಬೇಕು. ಸಧ್ಯಕ್ಕೆ ಕೊಟ್ಟಿರುವ ಅರ್ಥಗಳಿಂದ ಕಾವ್ಯಕಥೆಯನ್ನು ಓದಿ ಮನನಮಾಡುವುದಕ್ಕೆ ತೊಂದರೆಯಾಗುವುದಿಲ್ಲ.

ಈ ಅರ್ಥಕೋಶವನ್ನು ತಯಾರಿಸುವ ಸಂದರ್ಭದಲ್ಲಿ ಶ್ರೀಮತಿ ಸರ್ವಮಂಗಳ ಅವರು ನೆರವು ನೀಡಿದ್ದಾರೆ.

# ಅರ್ಥಕೋಶ

ಅಕ್ಷೆಯ ಕೊಟ್ - ಮಾತುಕೊಟ್ಟು
ಅಗುಸಾರ - ಅಕ್ಷರ
ಅಗ್ರು ಬಾಳೆಲೆ - ತುದಿ ಬಾಳೆ ಎಲೆ
ಅಡಿವಾಳ - ಕಾಲಿಗೆ ಧರಿಸುವ ಆಭರಣ
ಅತ್ತೇ - ಹಸ್ತ ಮಳೆ
ಅರ್ಧಂಬಳಿಗ್ಹತ್ತಿ - ಅರ್ಧದವರೆಗೆ ಹತ್ತಿ
ಅನಾಡಿ - ಹೆಚ್ಚು
ಅನಾಲಾಯಕ - ನಾಲಾಯಕ್
ಅಮರು - ಮೊಸರು ಹುಳಿ
ಅರಅರದ ವಾಲೆ - ?
ಅರಬಾಳು - ಅರೆಬಾಳು, ಅರ್ಧಬಾಳು, ಅರ್ಧ ಆಯಸ್ಸು
ಅರಾಬಿ ಆಲದಮರ - ದೊಡ್ಡ ಆಲದಮರ
ಅರುಮಾಯ (ಅರಬಾಯ) - ?
ಅರುಸಾರೆ - ಅರಸರು
ಅಸಂಭವಿಕದಲ್ಲಿ - ?
ಅಳಪಡಿ - ಅಳೆದು ಕೊಡುವ ಪಡಿ, ಅಳತೆಯಲ್ಲಿ ಕೊಡುವ ಆಹಾರ ಪದಾರ್ಥ, ಸೀದಾಕೊಡುವುದು
ಆನೆಕಟ್ಟಾರ - ಆನೆಯನ್ನು ಕಟ್ಟಿದ ಆರು
ಆನೆಗರುಜಣ - ಆನೆಯ ಬೆನ್ನಿನ ಮೇಲೆ ಹೊದಿಸುವ ಅಲಂಕಾರದ ಬಟ್ಟೆ
ಆರು - ಒಣಗು
ಆರೆ -ತಮಿಳು
ಆಲದ ಮೊದೆ - ಆಲದಮರದ ಸೊಪ್ಪು
ಆವಾತಿ - ಆಹುತಿ, ಬಲಿ
ಇನ್ನೆ (ಇನ್ನ) - ಈಗ
ಇಪಟಿಗೆ - ಈಗ, ಇನ್ನುಮೇಲೆ
ಇಪರೀತವಾದಂಥವ್ರು - ವಿಪರೀತವಾದಂತಹವರು, ಅಸಾಮಾನ್ಯರಾದಂತಹವರು
ಇಸದ ಕುಂಟಿ - ವಿಷದ ಕುಂಟೆ, ಹರಗುವ ವಿಷದ ಕುಂಟೆ, ಹೊಲವನ್ನು ಹರಗುವ ಒಂದು ಕೃಷಿ ಉಪಕರಣ
ಇಳ್ಳಾರೆ - ಇರುಳಿನಲ್ಲಿ, ರಾತ್ರಿಯಲ್ಲಿ
ಈಡು - ಚಿತೆ

ಉಡೇವು – ಊರ ಮಧ್ಯೆ ಅರವತ್ತು ಎಪ್ಪತ್ತು ಅಡಿ ಎತ್ತರಕ್ಕೆ ನೂರಾರು ಅಡಿ ಒಳ ವ್ಯಾಸವುಳ್ಳ ದುಂಡನೆ ಕಲ್ಲಿನ ಬತೇರಿಯಂಥ ಕಟ್ಟಡ. ಹಿಂದೆ ದರೋಡೆಕಾರರು ದಾಳಿಕಾರರು ಬಂದಾಗ ಊರಿನವರೆಲ್ಲ ಇದರಲ್ಲಿ ಅಡಗಿಕೊಳ್ಳುತ್ತಿದ್ದರಂತೆ. ಶಿವಮೊಗ್ಗ ಜಿಲ್ಲೆಯ ಬಯಲುಸೀಮೆಯ ಹಳೆಯ ಊರುಗಳಲ್ಲಿ ಈಗಲೂ ಇಂತಹ ಉಡೇವುಗಳಿವೆ.

ಉತ್ತರಿಸಿದ – ?

ಉತಾರಿ ಚಂಬು (ಕುತಾರಿ ಚಂಬು) – ರೈಲು ಚಂಬು, ರೈಲು ಪ್ರಯಾಣದಲ್ಲಿ ನೀರುಕುಡಿಯಲು ಬಳಸುವ ಚಂಬು

ಉತ್ತುರಾನೇ ಮೈಲಾರಲಿಂಗ – ಉತ್ತರ ದಿಕ್ಕಿನ ಮೈಲಾರಲಿಂಗ

ಉರಿಯದಲ್ಲಿ ಹುಟ್ಟಿದ – ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದ

ಉರುಡಿಸಿಕೊಂಡು – ಉರುಳಿಸಿಕೊಂಡು

ಉಳುವಳಿಕೆ – ಉಳಿಯಲಿ

ಎದಿಯಾರ – ?

ಎದೆಸೊಕ್ಕು – ಪ್ರಜ್ಞೆ ಇಲ್ಲದಂತಾಗು

ಎಯ್ಯೇಬೆಟ್ಟು –ಕೊನೆಯ ಬೆರಳು ? ಕಾಲಿನ ಆರನೆಯ ಬೆರಳು ?

ಎಲವಿನಂದರ – ಎಲಬಿನಂದರ, ಮೂಳೆ ಹಂದರ, ಅಸ್ಥಿಪಂಜರ

ಎಸಾಕಂಡು _ ಎಷ್ಟೊಂದು

ಏಕಾದ ಚೆಲುವೆ – ಸುಂದರಿ

ಒಂದೊರ – ಒಂದು ವರಹ

ಒದರು – ಕೊಡವು

ಒಳಲಿಗೆ – ಮನೆಗೆ

ಓದ – ಒಯ್ದು

ಕಂಡ (ಖಂಡ) – ಮಾಂಸದ ತುಂಡು

ಕಂದುರು ಬಾಕಾನಿರದು _ ಒಂದು ಬಗೆಯ ಚೂರಿಯನ್ನು ತೆಗೆದು

ಕುಂತಿಳ್ಳೇನು ಹಾಕಾರು – ಕುಳಿತು ವೀಳ್ಯೆ (ತಾಂಬೂಲ) ಹಾಕಿದರು

ಕಚ್ಚಾತೆ – ಹಚ್ಚು

ಕಜ್ಜಿನೆಲ್ಲುಜ್ಜಿಕೊಂಡ – (ಮೈಮೇಲಿನ) ಕಜ್ಜಿಯನ್ನೆಲ್ಲ ಉಜ್ಜಿಕೊಂಡನು

ಕಜ್ಜಿ ಬಿಳುದಾಗ – ?

ಕಟಿಗೀಯ – ?

ಕಟಿರೊಟ್ಟಿ – ಒಣರೊಟ್ಟಿ, ಕಟುಕಲಾದ ರೊಟ್ಟಿ

ಕಡುದಾವೆ –ಕಳೆಯುತ್ತವೆ

ಕಣಿಗಾರ – ?

ಕಪ್ಪು – ಒಂದು ಒಡವೆ? ಕೊಪ್ಪು, ಕಿವಿಯ ಆಭರಣ

ಕರಗ ಕಟ್ಟಿದಂಗೆ – ಕರಣೆ ಕಟ್ಟಿದಹಾಗೆ

ಕರಿನಿಕಾರಣ್ಣ – ಕರುಣೆಯಿಲ್ಲದ ಅಣ್ಣ?
ಕಲ್ಲನ್ನು ಹಾದುಕೊಂಡು – ಕಲ್ಲಿಗೆ ತಲೆಯನ್ನು ಚೆಚ್ಚಿಕೊಂಡು
ಕಷ್ಟಕಾಕಾರಳಾದೀನಿ – ಕಷ್ಟಕ್ಕೆ ಸಿಕ್ಕಿಕೊಂಡಿದ್ದೇನೆ
ಕಾಗೆ ಕರಿಸವ್ವ ಕಾಗದವ ಬರಿಸವ್ವ – ಕಾಗೆ ಕೈಲಿ ಸುದ್ದಿ ಕಳಿಸು ಎಂಬುದು ಹಳ್ಳಿಯ ಹಾಡುಗಳಲ್ಲಿ ಬರುವ ವಿಶೇಷ ನುಡಿ. ಈಗಲೂ ಕಾಗೆ ಮನೆಯ ಮುಂದೆ ಒಂದು ಬಗೆಯ ಧನಿಯಲ್ಲಿ ಕೂಗಿದರೆ ಮನೆಗೆ ಯಾರೋ ನೆಂಟರು ಬರುತ್ತಾರೆ ಎಂದು ಹಳ್ಳಿಯಲ್ಲಿ ಹೇಳುತ್ತಾರೆ.
ಕಾಗೆ ಕಾರಿತು – ಕಾಗೆ ಕಾ ಎಂದು ಕೂಗಿತು
ಕಾಟುಗರ – ಕೀಳುಜಾತಿಯವರು
ಕಾಲಗಿರುವಂಥ – ?
ಕಾವೀನಲ್ಲಿ – ?
ಕಾಳ್ಯ – ಕಾಳಗ
ಕ್ಯಾಲಿ (ಖ್ಯಾಲಿ) – ಲಾವಣಿಯ ಕೊನೆಯಲ್ಲಿ ಹಾಡುವ ಉಪಸಂಹಾರ ಸ್ವರೂಪದ ಚಿಕ್ಕಹಾಡು. ಇದಕ್ಕೆ 'ಚಕ್ಕಡ' ಎಂದೂ ಹೆಸರಿದೆ. ಇದು ಮರಾಠಿ ಪದ.
ಕಿಚ್ಚು – ಹೆಣಸುಡುವ ಬೆಂಕಿ
ಕುಕ್ಕಿಬಾಯಿ – ಕೊಕ್ಕುಬಾಯಿ
ಕುಕ್ಕಳಿಸಿ _ತುಂಬಿ, ಭರ್ತಿಮಾಡಿ
ಕರುಬು – ಹೊಟ್ಟೆಕಿಚ್ಚುಪಡು
ಕುಟ್ಟ – ಕೂಡ, ಜೊತೆ
ಕುದುರೆ ರವಿಕೆ – ?
ಕುಲ್ಲಲೋಚನೆ – ಫುಲ್ಲಲೋಚನೆ, ಹೂವಿನ ಹಾಗೆ ಕಣ್ಣುಳ್ಳವಳು
ಕುಸುವು – ಕುದಿಸು
ಕೂಸಿದ – ಕೂಸಿನ, ಮಗುವಿನ
ಕೈ ಹಚ್ಚೆಂದ್ವು – ದಬಾಯಿಸಿದವು
ಕೊಂದಾಚಾರ – ?
ಕೊಲ್ಲಿನಾಡು – ?
ಕೌವ್ಲಾಗಿ ಕವಕಂದು – ಕತ್ತಲೆಯಾಗಿ ಕವಿದುಕೊಂಡು
ಖಬರಿಲ್ಲ _ ಅರಿವಿಲ್ಲ
ಗಂಗಚಂದರ – ?
ಗಚ್ಚ – ಗಚ್ಚು, ಗಾರೆ
ಗಾವುದು _ ನಾಲ್ಕು ಹರಿದಾರಿ, ಹನ್ನೆರಡು ಮೈಲು ದೂರದ ಅಳತೆ
ಗಾಳಿಯಾಗಿ – ದೆವ್ವವಾಗಿ
ಗಿರಕಿ ಮೆಟ್ಟು _ಗಿರಕಿ ಜೋಡು, ಜೀಕಿನ ಜೋಡು. ಜೋಡಿನ ಅಟ್ಟೆಯೊಳಗೆ ಚರ್ಮದ

ಚೂರುಗಳನ್ನು ಸೇರಿಸಿ ಹೊಲೆದ ಚಪ್ಪಲಿ.

ಗಿಲಾಯ್ – ಲೇಪನ

ಗಿಳುಲು – ಸಣ್ಣ ತಟ್ಟೆ

ಗೀಳು – ಹರಿ

ಗುಂಡಕಲ್ಲು (ಸುಣ್ಣಕಲ್ಲು) – ಸುಣ್ಣ

ಗುಂಡಿಯಲ್ಲಿ ಪಚ್ಚಕರಿಸಿ – ಸಮಾಧಿಯಲ್ಲಿ ಪ್ರತ್ಯಕ್ಷವಾಗಿ

ಗುಡಲಿಗೆ ಕೊಡು – ಮೈನೆರೆದ ಹೆಣ್ಣಿಗೆ ನಡೆಸುವ ಆಚರಣೆ. ಹಲಸು ಹತ್ತಿ ಲಕ್ಕಿ ಮೊದಲಾದವುಗಳ ಸೊಪ್ಪಿನ ರೆಂಬೆಗಳನ್ನು ತಂದು ಗುಡಿಸಿಲಿನಂತೆ ಕಟ್ಟಿ ಅದರ ಕೆಳಗೆ ಋತುವಾದ ಹುಡುಗಿಯನ್ನು ಕೂರಿಸುವುದು.

ಗುಬ್ಬಿ – ತಲೆಗೂದಲಿನ ಹೆಣೆಗಂಟಿನ ಮೇಲೆ ಧರಿಸುವ ಆಭರಣ

ಗುಳೇದ ಗುಳಸಾರಿತಿ – ?

ಚಂದು ಧೂಪ – ?

ಚರೆ – ಆಕಾರ

ಚರೆಪಟ್ಟಿ –ಚಹರೆ ಪಟ್ಟಿ

ಚವುನ –ಚೈನು ?

ಚಾರು ಮೆಟ್ಟು – ಸುಂದರವಾದ ಚಪ್ಪಲಿ

ಚೀಟಿ ಚೀಲ – ಚಿತ್ತಾರದ ಬಟ್ಟೆಯ ಚೀಲ

ಚಿತ್ತೇ –ಚಿತ್ತೆ ಮಳೆ

ಚಿನ್ನದ ಕದರು –ಚಿನ್ನದ ನೂಲು

ಚಿನ್ನವಲ್ಲಿ – ಚಿಕ್ಕವಸ್ತ್ರ

ಚಿರಂಜೀವನ _ ಚಿರಂತನ, ಶಾಶ್ವತ

ಜಡೆ ಹೂವು – ಜಡೆಯಲ್ಲಿ ಧರಿಸುವ ಹೂವಿನ ಆಕಾರದ ಆಭರಣ, ಜಡೆಬಿಲ್ಲೆ

ಜನನಿಂದೆ – ಜನರ ನಿಂದನೆ ಮಾತು, ಚುಚ್ಚುಮಾತು

ಜರತರಟಂಕಿ – ?

ಜಂಗಿಸಿ – ?

ಜೀಪಿನ ಕೆರ (ಜೀಕಿನ ಕೆರ) – ನಡೆದಾಗ ಜೀಕ್ ಜೀಕ್ ಶಬ್ದಮಾಡುವ ಚಪ್ಪಲಿ, ಗಿರಕಿ ಜೋಡು

ಜೋಲು _ ತೂಗುತೊಟ್ಟಿಲು, ಬಟ್ಟೆತೊಟ್ಟಿಲು

ಜೀನಬಾಳ – ಜಿಪುಣತನದ ಬಾಳು

ತುಂಬಟಾಗುಂಡಿ –ತಂಬ್ಬಿಟ್ಟಿನ ಉಂಡೆ

ತುಂಬಲಿ ಮನೆ ಮಾಡಿ – ?

ತುಂಬೆ – ?

ತಡದೊಳಗೆ – ?

ತಡಿಮೆ – ತಡಿಮೆ, ಹೂದೋಟದ ಬೇಲಿಯ ಚಿಕ್ಕ ಬಾಗಿಲು
ತತ್ತರ – ತತ್ತರಿಸು, ನಿಯಂತ್ರಣ ತಪ್ಪಿದ ನಡುಕ
ತಳಕಮಾರಿ ರಂಡಿ – ತಳಕು ಮಾಡುವ ಮುಖವುಳ್ಳವಳು, ಒಂದು ಬೈಗುಳ ಪದ
ತಾಮುರದ ಬಾವಿ (ತಾಮ್ರದ ಬಾವಿ) – ?
ತಾರಾಡ್ಕೆಂತ – ಅಬ್ಬರಿಸುತ್ತಾ
ತಿರುವಾನ್ನ – ಭಿಕ್ಷಾನ್ನ
ತೆಕ್ಕಿಮುಕ್ಕಿ ಬಿದ್ದಾರ – ಬಿಗಿಯಾಗಿ ಅಪ್ಪಿಕೊಂಡು ಬೀಳು (ಮಲಗು)
ತೊಗಲಿನ ಚಪ್ಪರ – ಚರ್ಮದ ಚಪ್ಪರ, ಚರ್ಮದ ಹೊದಿಕೆ
ತೊಳಲೀಸ – ತೊಳೆಯಲು ಬಿಡದಿರುವುದು
ದದ್ರವಾದುವಂತೆ – ಅಸಮಧಾನದಿಂದ ಮುಖ ಊದಿಕೊಳ್ಳುವುದು
ದಬ್ಬಾಕು – ತಲೆಕೆಳಗುಮಾಡು
ದಾಯಿ – ದಾದಿ, ಪರಿಚಾರಿಕೆ
ದಾರು – ಯಾರು
ದ್ವಾಂತೆಕವಿ – ?
ದಿಂಡುರುಳ್ಳಸ್ಯಾವೆ – ದಿಂಡು ಉರುಳು ಸೇವೆ, ದೇಹ ಪೂರ್ತಿಯಾಗಿ ಮಲಗಿ ಬಲಮಗ್ಗುಲಾಗಿ ಉರುಳುವುದು, ಉರುಳುತ್ತಾ ನಡೆಸುವ ಸೇವೆ ಅಥವಾ ಹರಕೆ
ದುಂಡಗಡ್ಡ – ದುಂಡನೆಯ ಕಡಬು
ದುಂಬಿಲೆ (ತುಂಬಿಲೆ) – ?
ದುರುಸಪನ – ದುಸ್ವಪ್ನ, ಕೆಟ್ಟಕನಸು
ದೇಸವಾಸ – ದೇಶಾಂತರ ?
ದೊಡ್ಡಿ – ದನಗಳನ್ನು ಕೂಡುವ ಸ್ಥಳ
ದೋಸುಮಾರ (ದುಸುಮಾನ) –ದುಷ್ಮಾನ, ದುಷ್ಟ
ಧಾರಾಕಡೆ – ?
ನಟ್ಟಿ ತುಳಿದು –ಬಲವಾಗಿ ಹೆಜ್ಜೆಯೂರಿ, ಬಲವಾಗಿ ಕಾಲಿಟ್ಟು
ನಡಿತಕ್ಕ – ನಡುವಿನ ತನಕ, ಸೊಂಟದ ತನಕ
ನಳ್ಳಸ್ಯಳವ್ವ – ನರಳಿಸಿದ್ದಾಳೆ
ನಾಗುಬೆತ್ತ – ನಾಗಬೆತ್ತ, ನಾಗರ ಬೆತ್ತ, ಹಿಡಿಯ ಕಡೆ ನಾಗರ ಹಾವಿನ ಹೆಡೆಯ ಆಕಾರದಲ್ಲಿರುವ ಕೋಲು, ಮಂತ್ರದಂಡ, ನಾಗರ ಬೆತ್ತವನ್ನು ಹೆಣ್ಣುಮಕ್ಕಳು ಮುಟ್ಟಬಾರದೆಂಬ ಪ್ರತೀತಿಯಿದೆ
ನಾಮ – ವೈಷ್ಣವರು ಹಣೆಗೆ ಧರಿಸುವ ಧಾರ್ಮಿಕ ಗುರುತು (ಚಿಹ್ನೆ)
ನೀಟುಮಾಡುತಾ – ಆಕರ್ಷಕ ಭಂಗಿ ತೋರುತ್ತಾ, ಒನಪು ಒಯ್ಯಾರ ನಟಿಸುತ್ತಾ
ನೀರಳಟಿ – ನೀರಿನ ಮೇಲಿನ ಕಸಕಡ್ಡಿಯನ್ನು ಕೈಯಿಂದ ಪಕ್ಕಕ್ಕೆ ತಳ್ಳಿ
ನೀರು ಕೊಪ್ಪು – ನೀರಿನ ಬಿಂದಿಗೆ ?

ನೀರು ಗಂಧಾದ ಸೌಧೆ – ಶ್ರೀಗಂಧದ ಸೀಳು ಸೌಧೆ

ನೀರು ತಪ್ಪಾವಾಯಿತಲ್ಲ – ವ್ಯರ್ಥವಾಯಿತಲ್ಲಾ, ನಿರರ್ಥಕವಾಯಿತಲ್ಲಾ

ನಾಗವಾಳಿ ಪಾತ್ರೆ – ನಾಗವಾಳಿ ಪತ್ರೆ, ವೀಳೆಯದೆಲೆ

ನೂಲೀನ ಶೀಲ – ?

ಪಂಚಮರ ವಂಸೆಲ್ಲ ಅಡಗೇ ಹೋಯ್ತು – ಆಚಾರಿಗಳ ವಂಶವೆಲ್ಲ ಸತ್ತೇಹೋಯಿತು. ವಾಜರ ಹೆಣ್ಣುಮಕ್ಕಳು ಉಳಿದರು. ಅವರನ್ನು ಮಡಿವಾಳ ಮಾಚಯ್ಯ ಹೊಲೆಯರ ವಂಶದ ಗಂಡುಮಕ್ಕಳಿಗೆ ಕೊಟ್ಟು ಮದುವೆಮಾಡಿದ. ಈಗಲೂ ಆದಿಕರ್ನಾಟಕರು ಮದುವೆ ಮಾಡುವಾಗ ಅವರು ಹಾಡುವ ಸೋಬಾನಗಳಲ್ಲಿ ಮಡಿವಾಳ ಮಾಚಯ್ಯನ ಹೆಸರು ಬಳಸುತ್ತಾರೆ.

ಪಂಚಮರ ಹುಡುಗಿ – ಪಂಚಮರ ಅಂದರೆ ಅಕ್ಕಸಾಲಿಗರ ಹುಡುಗಿ. ಚಿನ್ನ, ಬೆಳ್ಳಿ, ಮರಗೆಲಸ ಮಾಡುವ ಜಾತಿಯವರ ಹುಡುಗಿ. ಹರಿಜನರನ್ನು ಇತ್ತೀಚಿನ ವರೆಗೆ ಪಂಚಮರೆಂದು ಕರೆಯುತ್ತಿದ್ದರು. ಆದರೆ ಇಬ್ಬರೂ ಬೇರೆ ಬೇರೆ

ಪಗಡಿ ಬಜಾರ (ಪಗಡೆ ಬಜಾರ) – ಜೂಜಾಡುವ ಸ್ಥಳ

ಪಟ್ಟಗೆ – ಪಟ್ಟಾಗಿ, ಬಿಗಿಯಾಗಿ

ಪಟುಣಾವ – ಪೊಟ್ಟಣವನ್ನು

ಪಟುವಾಳ (ಪಟುಗಾಳ) – ಚಿತ್ರಪಟ, ಫೋಟೋ

ಪಡಾ – ಕತ್ತರಿಸು

ಪಡಿ – ಅಕ್ಕಿ, ಬೇಳೆ, ಉಪ್ಪು, ಮೆಣಸಿನಕಾಯಿ ಇತ್ಯಾದಿ ಅಡಿಗೆ ಸಾಮಗ್ರಿ. ಪರಮೇಶ್ವರ ಜೀವರಾಶಿಗೆಲ್ಲ ದಿನವೂ ಆಹಾರವನ್ನು ಅಳೆದುಕೊಡುತ್ತಾನೆಂಬ ನಂಬಿಕೆಯಿದೆ

ಪರಪತಿ – ಕೈಲಾಸ ? ಪ್ರಪಂಚ ?

ಪರಮಾಜಿಸಿ – ಪ್ರಮಾಣಿಸಿ

ಪರಮಸಾಲೆ – ಪರಮಶೀಲೆ, ಶೀಲವಂತೆ, ಪರಿಶುದ್ಧವಾದವಳು

ಪರಮಾಂಬು ಹಣ್ಣು – ?

ಪರಸಂಬ್ರಂತೆಯಾಗಿದ್ದಾಳೆ – ಫಲ ಸಮೃದ್ಧವಂತೆಯಾಗಿದ್ದಾಳೆ, ಮೈನೆರೆದಿದ್ದಾಳೆ

ಪರಿಯಂತರ –ವರೆಗೆ

ಪ್ರಾಣತ್ಯ – ಪ್ರಾಣಹತ್ಯ, ಸಾವು

ಪ್ಯಾಟಿ ಬಜ್ಜಾರಿ – ಪೇಟೆ ಬಜಾರು

ಪಿಸ್ತಣ – ಅವಮಾನ

ಪುಣ್ಣೇವುದಿಂದ – ಪುಣ್ಯದಿಂದ

ಪೆಂಡೇವ – ಬಂಗಾರದ ಒಡವೆ

ಪೇಟರೆ – ಪಯಣ

ಪೈಲೆ (ಪಹಿಲೆ, ಪಹಿಲಾ) – ಮೊದಲೆ

ಬಕಣಾ – ಜೇಬು

ಬಕಣಾದಾಳವು (ಬಕಣಾದಾಗಳವು) – ಬೊಕ್ಕಣದಲ್ಲಿ ಅಥವಾ ಜೇಬಿನಲ್ಲಿ ಇದ್ದವು
ಬಚ್ಚರಣೆ – ತಿದ್ದಿ ಮಾಡಿದ. ಉದಾಹರಣೆಗೆ ಚನ್ನಪಟ್ಟಣದ ಬಣ್ಣದ ಸಾಮಾನುಗಳಿಗೆ ಬಚ್ಚರಣೆ ಎನ್ನುತ್ತಾರೆ
ಬಚ್ಚಲು ದಂಡಿಗೆ – ಬಚ್ಚಲ ಅಡಿಗೆ
ಬಟ್ಟೆ ಹೇರು – ಬಟ್ಟೆಯ ಹೊರೆ
ಬಡ್ಡಿಗೆ – ಬಳಿಗೆ, ಸಮೀಪಕ್ಕೆ
ಬತ್ತ – ಬರುತ್ತಾ
ಬರಣೀಕೆ – ಬರವಣಿಗೆ
ಬರಲೀಸಾ – ಬರುವುದಕ್ಕೆ ಬಿಡದಿರುವುದು
ಬಾಡು – ಮಾಂಸ
ಬಾನಿ – ಅಗಸರ ಮಡಕೆ, ಅಗಲವಾದ ಬಾಯುಳ್ಳ ಮಣ್ಣಿನ ಅಥವಾ ಕಲ್ಲಿನ ಪಾತ್ರೆ
ಬಾಯಾರಿಗೆ – ಬಾಯಾರಿಕೆಗೆ
ಬಾರುಕೋಲು – ಎತ್ತುಗಳನ್ನು ಹೊಡೆಯಲು ಚರ್ಮದ ಬಾರುಗಳಿಂದ ಮಾಡಿದ ಚಾವಟಿ
ಬಾಲೈಯರ – ಬಾಲಕರ, ಮಕ್ಕಳ
ಬಾಳ ಬದ್ದನೆಲ್ಲ – ಬಾಲಬೆಂಧೆ
ಬಾಳವಾಡೆ – ಬಹಳವಾಗಿ
ಬಿದಿರ್ಹಿಂಡ್ಲು – ಬಿದಿರಿನ ಹಿಂಡಲು, ಬಿದಿರಿನ ಮೊದೆ
ಬಿದುರಾಕಾರ ಚೆಲುವೆ – ಬಿದುರೊಳಗಿನ ಚದುರೆ
ಬೀಸಾಗಿ – ಸೊಂಪಾಗಿ
ಬೂಂದದೆಸನ – ಬೂಂದಿ ಅಸನ, ಬೂಂದಿ ಸಿಹಿ
ಬೆಳ ದೇವ್ರು – ಬೆಳಗುವ ದೇವರು, ಸೂರ್ಯ
ಬೈಯ – ?
ಬೈಲು ಮಂದ್ರಾಯ (ಬಯಲು ಮಂದ್ರಾಯ) – ?
ಭೇರಿ – ದೊಡ್ಡ ನಗಾರಿ
ಮಂಡ್ಲ (ಮಂಡಲ) – ದುಂಡಾಗಿ ಎಳೆದ ಆಕೃತಿ, ಮಾಂತ್ರಿಕರು ತಮ್ಮ ಮಂತ್ರಶಕ್ತಿಯಿಂದ ಬರೆದ ವರ್ತುಲಾಕಾರ
ಮಂಡಿ – ಮಂಡೆ, ತಲೆ
ಪರಂಗು – ಒಂದು ಧಾನ್ಯ, ಹಾರಕ
ಮಂಡೆ ಕೂದಾಲ – ತಲೆಯ ಕೂದಲನ್ನು
ಮಗಿಲೀಸ – ಮೊಗೆಯಲು ಬಿಡಿದಿರುವುದು
ಮಡ್ಲು – ಮಡಿಲು
ಮಥನವಾಗು – ಇಲ್ಲವಾಗು
ಮನ ಮುನಿಸು – ವೈಮನಸ್ಸು
ಮರಿಯಾಕಂಡ – ಮನೆಯಾ ಕಂಡ ? ನೆಲೆಯನ್ನು ಕಂಡ ?

ಮರುಮಾಚಿ – ಮರೆಮಾಚಿ
ಮರುವೀನ –ಬೇಟೆಗಾಗಿ ಮರೆಯಲ್ಲಿ ಕುಳಿತುಕೊಳ್ಳಲು ಅನುಕೂಲವಾದ ಬಯಲು
ಮರೆಯಾದೆ ಹಾಡು – ?
ಮಲಕ – ಮುಂದಲೆ ಆಭರಣ
ಮಸುಲಾತಿ – ಮಸಲತ್ತು
ಮಹಲ್‌ದಾರ್‍ರು – ?
ಮಾನ – ಒಂದು ಅಳತೆಯ ಸಾಧನ
ಮಾನ್ಗೇಡಿ – ಮಾನ ಕೆಟ್ಟವಳು, ಮಾನ ಕೆಟ್ಟವನು
ಮಿಂಚುಳ್ಳ ಬಿಲ್ಲೆ – ?
ಮಿರಡಿ ಮುಳ್ಳು – ?
ಮಿಳ್ಳೆ ಚಂಬು –ಚಿಕ್ಕ ಚಂಬು, ಚಿಕ್ಕ ಪಾತ್ರೆ
ಮುಂಡಗೊಂದೀಳ್ಯಾರ – ?
ಮುಂಡಲಿಗೆ ಮಲಕ – ಮುಂದೆಲೆಯ ಮಲಕು, ಮುಂದೆಲೆಗೆ ಧರಿಸುವ ಆಭರಣ
ಮುಗುತೇನ – ಮುಗಿಯುತ್ತೇನೆ
ಮುಡಿದಂಡೆ – ಮುಡಿಯ ಹೂವಿನ ದಂಡೆ
ಮುಡುಲಕ್ಕಿ ( ಮಡಿಲಕ್ಕಿ) – ಮಡಿಲು ಅಕ್ಕಿ, ಶುಭ ಸಮಾರಂಭಗಳಲ್ಲಿ ಹೆಣ್ಣುಮಕ್ಕಳ ಉಡಿಗೆ ತುಂಬುವ ಅಕ್ಕಿ ಬೆಲ್ಲ ತೆಂಗಿನಕಾಯಿ ಹಣ್ಣು ಎಲೆ ಅಡಿಕೆ ಕುಪ್ಪಸದ ಕಣ ಮೊದಲಾದವು.
ಮುತ್ತಿನಷ್ಟೇ ಬೊಟ್ಟಕ್ಕಿ – ಮುತ್ತಿನಂತೆ ದುಂಡಾದ ಬೆಳ್ಳಗಿನ ಬೊಟ್ಟು. ಮದುವೆಯಾಗದ ಹೆಣ್ಣು ಮಕ್ಕಳು ಈಗಲೂ ಕುಂಕುಮ ಇಡದೆ ಬಿಳಿಯ ಅಥವಾ ಕಪ್ಪು ಬೊಟ್ಟು ಇಟ್ಟುಕೊಳ್ಳುವುದು ರೂಢಿಯಲ್ಲಿದೆ.
ಮುಸಕು – ಸೀರೆಯ ಸೆರಗನ್ನು ತಲೆಯಮೇಲೆ ಹಾಕಿಕೊಳ್ಳುವುದು
ಮುಳಕೀದೊ – ಮುಳಗಿದೊ
ಮೂಡಕ್ಕಿ ಕೊಳ – ಪೂರ್ವ ದಿಕ್ಕಿನ ಕೊಳ
ಮೂಲವಾಗು – ಕಂಟಕವಾಗು
ಮೇಣಿ (ಮೆಣಿ) – ಮೆಟ್ಟರೆ, ಕುತ್ತಿಗೆಯ ಮುಂಭಾಗ, ಕುತ್ತಿಗೆ
ಮೊಗಲ ಮಲ್ಲಿಗೆ (ಮುಗಳು ಮಲ್ಲಿಗೆ) – ಪೂರ್ತಿಯಾಗಿ ಅರಳದಿರುವ ಮಲ್ಲಿಗೆ ಹೂ
ಮೋಕ್ಷದಿಂದ – ಸಮಕ್ಷಮ
ಯಸದಿ (ವಸಧಿ) – ಹೊಟ್ಟೆ ?
ರಂಬೇಡಿ – ರಣಹೇಡಿ
ರಣಗ್ರದಾಗು – ರಣರಂಗದಲ್ಲೂ
ರತ್ನುಮಾನ್ಯೆ – ಒಬ್ಬಳು ಸುಂದರಿ
ರವ್ವೊಂಟು (ರವಷ್ಟು) – ಸ್ವಲ್ಪ

ರಾಜಗೌಳ – ಒಂದು ಹಕ್ಕಿ
ರಾಸು – ದನ ಕರುಗಳ ಗುಂಪು
ರುತುಮನಸೆನಾಗವಳೆ (ದೊಡ್ಡ ಮನಸೆನಾಗಳೆ) – ಮೈನೆರೆದಿದ್ದಾಳೆ
ರೈತ – ರಕ್ತ
ರೋಸಳಿ – ರೂಪು
ಲಂಡನರಕ – ಕೆಟ್ಟ ನರಕ
ವಟ್ಟಕೊಡ್ಲೇಯಿಲ್ಲ – ಸುಳಿವು ಕೊಡಲಿಲ್ಲ
ವಡಕ ಮಾಡಿ – ಮುಖ ಅಡಿಯಾಗುವಂತೆ ಮಾಡಿ, ಸಂಹಾರ ಮಾಡಿ
ವಷ್ಟಂಬ – ಅಷ್ಟು ಹೇಳಿದ
ವಾಟಾ – ಓಟ
ವಾಲೆ ಹೊನ್ನಮ್ಮ – ಶಿವಗಂಗೆಯ ಹೊನ್ನಾದೇವಿ, ಓಲೆ ಭಾಗ್ಯವನ್ನು (ಮುತ್ತೈದೆತನವನ್ನು) ಕೊಡುವ ದೇವತೆ
ವ್ಯಾಳ್ಯಾಕ – ವೇಳೆಗೆ
ವೇಜಾನ – ಯೋಜನ
ಸಂಜಾಲನ್ನು – ಸಂಧ್ಯಾವಂದನೆಯನ್ನು
ಸಂಧ್ಯಾವನ – ಸಂಧ್ಯಾವಂದನೆ
ಸಕನ ಕಟ್ಟಿ – ?
ಸರ್ಕಸ್ ದರ್ಬಾರ್ – ?
ಸಖಿ – ಲಾವಣಿಯ ಮೊದಲು ಹಾಡುವ ಉಪೋದ್ಘಾತ ಸ್ವರೂಪದ ಚಿಕ್ಕ ಹಾಡು. ಸಖೀಯನ್ನು ಘನ್ನವೆಂದೂ ಕರೆಯುವರು. ಗಾನಾ ಎಂಬುದು ಘನ್ನವಾಗಿರಬಹುದು
ಸಟಾಕ – ಸ್ವಲ್ಪ
ಸಣ್ಣ ಗುಬ್ಬೀನ – ಕಿರಿದಾದ ಮೊಲೆಕಟ್ಟು ?
ಸತ್ರ – ಗಾಬರಿ, ಹೆದರಿಕೆ, ನಡುಕ
ಸತ್ಯಾನು – ಭವಿಷ್ಯ ?
ಸದರು – ಸನ್ನಿಧಿಗೆ
ಸಬನೂರು – ಅಸಂಖ್ಯಾತ
ಸಬಿಂದ್ – ?
ಸಬಿಲ್ಲಿ – ?
ಸಮಗಾರ – ಚಮ್ಮಾರ, ಚರ್ಮಕಾರ, ಚಪ್ಪಲಿ ಹೊಲೆಯುವವನು
ಸಮಕ್ಷವಾಗಿ – ಸಮಕ್ಷಮ, ಮುಖಾಮುಖಿ
ಸಯರೂಪ – ಸ್ವರೂಪ, ಸೌಂದರ್ಯ, ಪ್ರತಿರೂಪ
ಸಯವಾಗಿ – ಸಹಿತವಾಗಿ
ಸರಸಿ – ಪಕ್ಕಕ್ಕೆ ತಳ್ಳಿ

ಸವಲಗ್ಯ – ಯುದ್ಧ
ಸಾಗವಳಿ (ನಾಗವಳಿ) – ವೀಳೆಯದ ಎಲೆ
ಸಾಧಿಸೆ – ಸಾಧಿಸಿ, ಹೊಂಚುಹಾಕಿ
ಸಾರುಗ ಚರಿ – ಸಾರಗ ಚರಿ, ಗಂಡು ಜಿಂಕೆಯ ಕಳೆ
ಸಿಕ್ಕಟ್ಟಿಗೆ – ತಲೆಗೂದಲಿನ ಸಿಕ್ಕನ್ನು ಬಿಡಿಸುವ ದಪ್ಪಹಲ್ಲಿನ ಬಾಚಣಿಗೆ
ಸಿರಸೋದನೆ – ಶಿರಚ್ಛೇದ
ಸಿವಸೋಕ – ಶಿವಶೋಕ, ಅಧಿಕ ಶೋಕ, ಶಿವನಿಗೆ ಮುಟ್ಟುವಂತಹ ಗೋಳು
ಸಿವ್ರುಡು – ಸಿಂಬಿ
ಸುಂದರತನಗೊನ್ನು – (ಹೆಣ್ಣಿನ) ಸೌಂದರ್ಯಕ್ಕೆ ಒಲಿದು
ಸುರುಜ ಚಂದುರ – ಸೂರ್ಯ ಚಂದ್ರ
ಸುರುಬು ಸಾವಂತಿಗೆ – ?
ಸುಲವಲ್ಲರಾಯ – ಒಬ್ಬನ ಹೆಸರು
ಸೂಡಿಕೊಂಡು – ಧರಿಸಿಕೊಂಡು
ಸೂರದಮಾನ್ಯೆ – ಒಬ್ಬಳು ಸುಂದರಿ
ಸೇಡಿಸಿ – ?
ಸೈನ – ಮೈಮೇಲಿನ ಎಚ್ಚರ, ಪ್ರಜ್ಞೆ
ಶಂಕುಧೂಪ – ?
ಶಿಮ್ಮನನ್ನ – ಸಿಂಹವನ್ನು
ಶಿವನಾಂಬು ಹಣ್ಣು – ?
ಹಂಗು – ಪರರ ಉಪಕೃತಿ ಪಡೆದುದರಿಂದಾಗುವ ದಾಕ್ಷಿಣ್ಯ
ಹಂಪಲ್ಲಿ –?
ಹಕ್ಕಿನರೆ ಬೋನು – ಪಕ್ಷಿಗಳನ್ನು ಹಿಡಿಯುವ ಬೋನು
ಹತವು – ?
ಹತಾಸೂರ – ರಣಸೂರ, ವೀರಾಧಿವೀರ
ಹನ್ನೆರಡು ತಾಳಾವ ಹನ್ನೆರಡು ಮ್ಯಾಳಾವ – ಹನ್ನೆರಡು ಗುಂಪಿನ ತಾಳ ಮೇಳ. ವಾದ್ಯ ಸಂಗೀತ. ಈವತ್ತಿಗೂ ತಾಳ ಮೇಳ ಮಾಡುವುದರಲ್ಲಿ ಹರಿಜನರು ಎತ್ತಿದ ಕೈ
ಹರಕ ರಂಡಿ – ಹರಕು ಬಾಯಿಯವಳು, ಒಂದು ಬೈಗುಳ ಪದ
ಹರವಿ – ನೀರು ತರುವ ಅಥವಾ ತುಂಬುವ ಮಣ್ಣಿನ ಮಡಕೆ
ಹರೀಬಾರಿ – ಹರಿದಾರಿ
ಹರುವಣೆ – ಸಂಪಿಗೆರಾಯನ ಹೆಂಡತಿ, ಅಗಲವಾದ ತಟ್ಟೆ
ಹಸುಮೀಸೆ (ಹಸುಮ+ಈಸಿ) – ಆರಾಮವಾಗಿ ಈಜಿ, ನಿರಾಯಾಸವಾಗಿ ಈಜಿ
ಹಾರ್ತಕೆ – ಪಾಡಿಗೆ
ಹಾರಿಗೋಲು –ಹರಿಗೋಲು

ಹ್ವಾರಿ – ಕೆಲಸ
ಹಾಳುಮೇಡ (ಹಾಳು ಮಾಡ, ಹಾಡು ಮಾಡ) – ಪಾಳುಗುಡ್ಡ, ಪಾಳುಮನೆ
ಹಿಟ್ಟುಮಿದಿ – ಹಿಟ್ಟನ್ನು ನಾದು
ಹಿರಿಯಣಿ – ಹಿರಿಯಣ್ಣ, ಹಿರಿಯವನು
ಹುಯ್ಕಂಬುಟ್ವೊ – ಜೋರಾಗಿ ಅತ್ತವು
ಹುಯ್ದು – ತುಂಬಿ
ಹೊಟ್ಟಕ್ಕಿ – ಹೊಟ್ಟೆಯಲ್ಲಿ ಹುಟ್ಟಿದವಳು, ಮಗಳು
ಹೋತನೆ – ಹೋಗುತ್ತಾನೆ
ಹೊತ್ತುಮುಂಚೆ – ಹೊತ್ತು ಹುಟ್ಟುವ ಮೊದಲು, ಸೂರ್ಯ ಹುಟ್ಟುವ ಮೊದಲು
ಹೊಲೇರೆಲ್ಲಾವ ಊಟಾಕೆ ಬರಬೇಕು – ಹೊಲೆಯರೆಲ್ಲ ಊಟಕ್ಕೆ ಬರಬೇಕು. ಹಿಂದಿನ ಕಾಲದಲ್ಲಿ ಪಂಚಮರ ಅಥವಾ ಅಕ್ಕಸಾಲಿಗರ ಹಟ್ಟಿಯಲ್ಲಿ ಹೊಲೆಯರು ಉಣ್ಣುತ್ತಿದ್ದರಂತೆ.

◆◆◆◆

# ಹಾಡುಗಾರರ ಪರಿಚಯ

ಕರ್ನಾಟಕ ಜಾನಪದ ಪರಿಷತ್ತು ಧ್ವನಿಮುದ್ರಣ ಸಂಗ್ರಹಾಲಯದಲ್ಲಿ ಸಾಕಷ್ಟು ಸಾಹಿತ್ಯವಿದೆ. ಸಂಗ್ರಹದ ಸಂದರ್ಭದಲ್ಲಿ ಹಾಡುಗಾರರೊಡನೆ ಸಂವಾದಿಸಿ ಅವರ ಕೆಲವು ವಿಷಯಗಳನ್ನು ದಾಖಲಿಸಿದೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ಎಲ್ಲಾ ಹಾಡುಗಾರರ ಬಗೆಗೆ ಮಾಹಿತಿ ಸಂಗ್ರಹಿಸಿಲ್ಲ. ಕೆಲವರ ಬಗೆಗೆ ಹೆಚ್ಚು ಮಾಹಿತಿಯಿದೆ; ಕೆಲವರ ಬಗೆಗೆ ಕಡಮೆ ಮಾಹಿತಿಯಿದೆ; ಮತ್ತೆ ಕೆಲವರ ಬಗೆಗೆ ಏನೇನೂ ಮಾಹಿತಿಯಿಲ್ಲ. ಇದ್ದಷ್ಟು ಮತ್ತು ಸಿಕ್ಕಿದಷ್ಟು ಅಂಕಿ ಅಂಶ ಮಾಹಿತಿಯಿಂದ ಹಾಡುಗಾರರ ಪರಿಚಯವನ್ನು ಕೊಟ್ಟಿದೆ.

## 1. ವನಮಾಲಜ್ಜಿ

ಹಾಡಿರುವ ಕಾವ್ಯಗಳು : 1. **ಮಲ್ಲಿಗೆರಾಯ** 2. **ಹೂವಿನ ನಾಗಮ್ಮ**
3. **ಶಿವಗಂಗೆ**

ಹವ್ಯಾಸಿ ಗಾಯಕಿ. ಕಥನಕಾವ್ಯ, ಧಾರೆಪದ ಮೊದಲಾದವುಗಳನ್ನು ಹಾಡಿದ್ದಾಳೆ. ಇವಳು ಹಾಡಿರುವ ಸಾಹಿತ್ಯವೆಲ್ಲಾ ಇನ್ನೂ ಪ್ರಕಟವಾಗಬೇಕಾಗಿದೆ.

## 2. ಡಿ. ಕೆ. ಕೃಷ್ಣೇಗೌಡ

ಹಾಡಿರುವ ಕಾವ್ಯ : **ವೀರದಿಮ್ಮವ್ವ**

ಹವ್ಯಾಸಿ ಗಾಯಕ, ಅವರಿವರಿಂದ ಕಲಿತುಕೊಂಡ ಹಾಡುಗಳನ್ನು ಸಂಗಡಿಗರೊಡನೆ ಅವಕಾಶ ಸಿಕ್ಕಿದಾಗ ಹಾಡುವ ಪ್ರವೃತ್ತಿ.

## 3. ಬಸಯ್ಯ ಪರ್ವತಯ್ಯ ಮಠಪತಿ

ಹಾಡಿರುವ ಕಾವ್ಯ : **ಅತ್ತೆ ಸೊಸೆಯರು**

ವೃತ್ತಿಗಾಯಕರಷ್ಟೇ ಪ್ರಸಿದ್ಧರಾದ ಹವ್ಯಾಸಿ ಗಾಯಕ. ಗೀಗೀಪದ ಹಾಡುಗಾರಿಕೆಯಲ್ಲಿ ಹೆಸರುವಾಸಿ. ಗೀಗಿಮೇಳವನ್ನು ಕಟ್ಟಿಕೊಂಡು, ಸಹಗಾಯಕರನ್ನು ಕೂಡಿಕೊಂಡು ರಾಜ್ಯಾದ್ಯಂತ ಹಾಡಿ ಮನ್ನಣೆ ಗಳಿಸಿದವರು. ಶ್ರೀ ನಿಂಗಪ್ಪ ಶಿವಪ್ಪ ಬೈರಾಟ ಎಂಬುವವರಿಂದ ಹಾಡುಕಲಿತರಂತೆ. ಗುರು ಸ್ಥಾಪಿಸಿದ ಗಾಯನ ಮೇಳವನ್ನು ಮುಂದುವರಿಸಿ ನಲವತ್ತು ವರ್ಷ ನಿರಂತರವಾಗಿ ಹಾಡಿದವರು. ಡಪ್ಪು, ತಾಳ, ಕುಂಕುಣಿ ಸಹಿತ ಹಾಡಲು ನಿಂತರೆ ಕೇಳುಗರಿಗೆ ರಸದೌತಣ.

ಬಸವಯ್ಯ ಪರ್ವತಯ್ಯ ಮಠಪತಿಯವರ ತಂದೆ ಪರ್ವತಯ್ಯ. ತಾಯಿ ಗುರುಲಿಂಗಮ್ಮ. ಬಡತನದ ಜೀವನ. ಏಳನೆಯ ಇಯತ್ತೆಯವರೆಗೆ ಶಿಕ್ಷಣ. ಭಜನೆ, ಜನಪದ ಹಾಡು ಅದರಲ್ಲೂ ಗೀಗೀಪದ ಹಾಡುಗಾರಿಕೆಯಲ್ಲಿ ನಿಪುಣತೆ. ದೊಡ್ಡಾಟದಲ್ಲೂ ಆಸಕ್ತಿ. ಎಪ್ಪತ್ತೈದು ಜನ ಶಿಷ್ಯರಿಗೆ ಲಾವಣಿ, ಜನಪದ ಹಾಡು ಕಲಿಸಿದ ಕಲಾವಿದ. ಹಲವು ಸಂಸ್ಥೆಗಳಲ್ಲಿ ಕಲಾಪ್ರದರ್ಶನ ನೀಡಿ ಹೆಸರಾದವರು. ಗೀಗೀ ಹಾಡುಗಾರಿಕೆಗಾಗಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ಗಳಿಸಿದ್ದಾರೆ (1984).

## 4. ಚೌಡಿಕೆ ಸುಬ್ಬಯ್ಯನ ಹೆಂಡತಿ

ಹಾಡಿರುವ ಕಾವ್ಯ : **ಮ್ಯಾದರ ಹೆಣ್ಣು**

ಸುಪ್ರಸಿದ್ಧ ವೃತ್ತಿಗಾಯಕನ ಹೆಂಡತಿ. ಗಂಡ ಮತ್ತು ಇತರರಿಂದ ಕಲಿತ ಹಾಡ್ಗತೆಗಳನ್ನು ಸ್ವಂತ ಹೆಣ್ಣುಮಕ್ಕಳೊಡನೆ ಹಾಡುವ ಹವ್ಯಾಸ. ಧ್ವನಿಮುದ್ರಣ ಮಾಡಿದಾಗ ಹುಟ್ಟು ಹೆಸರು ಬಿಟ್ಟುಹೋಗಿದೆ.

## 5. ತಿಮ್ಮಮ್ಮ

ಹಾಡಿರುವ ಕಾವ್ಯ : **ಗುಲಗಂಜಿ ಚೆನ್ನವ್ವ**

ಹವ್ಯಾಸಿ ಗಾಯಕಿ. ಹರಿಜನ ಮಹಿಳೆ. ಅರವತ್ತನೇ ವಯಸ್ಸಿನಲ್ಲಿ ಹಾಡಿದ್ದು.

## 6. ಗಿರಿಯಮ್ಮ

ಹಾಡಿರುವ ಕಾವ್ಯ : **ಕೆರೆಕಟ್ಟೋ ಒಡ್ಡರಯ್ಯ**

ಹವ್ಯಾಸಿ ಗಾಯಕಿ.

## 7. ನೀಲಮ್ಮ

ಹಾಡಿರುವ ಕಾವ್ಯ : 1. **ಶೆಟವಿ ಕಥೆ.** 2. **ಸ್ಯಾನಯ್ಯ**

ಹವ್ಯಾಸಿ ಗಾಯಕಿ. ಹರಿಜನ ಮಹಿಳೆ. ತಾಂಬಾ ಊರಿನ ಒಂದುನೂರಾಹದಿನೈದು ವರ್ಷದ ಮುದುಕಿಯಿಂದ ಒಂದು ವಾರ ಕಾಲ ಹೇಳಿಸಿಕೊಂಡು ಶೆಟವಿ ಕಥೆಯನ್ನು ಕಲಿತಳಂತೆ. ಹಾಡು ಕಲಿಸಿದ ಅಜ್ಜಿ ಅರೇಕರು ಅಂದರೆ ಮರಾಟಿಗರಂತೆ. ನೀಲಮ್ಮ ತನ್ನ ತೊಂಬತ್ತನೇ ವಯಸ್ಸಿನಲ್ಲಿ ಹಾಡಿದಾಗ ಧ್ವನಿಮುದ್ರಣ ಮಾಡಿಕೊಳ್ಳಲಾಯಿತು.

## 8. ಹೊನ್ನಮ್ಮ

ಹಾಡಿರುವ ಕಾವ್ಯ : **ಹೊಲೆಯರ ಹೈದ**

ಹವ್ಯಾಸಿ ಗಾಯಕಿ. ಚಿಕ್ಕಾಡೆ ಹೊನ್ನಮ್ಮ ಕೊಂ. ಚನ್ನಯ್ಯ ಹರಿಜನ ಮಹಿಳೆ. ಹೊಲೆಯರ ಹೈದ ಕಥನಕಾವ್ಯವನ್ನು ಹಾಡಿದ ಹೊನ್ನಮ್ಮನ ಪ್ರಕಾರ ಹೊಲೆಯರ ಹೊನ್ನಯ್ಯ, ಮಾದಿಗರ ಚನ್ನಯ್ಯ, ಕುಂಬಾರ ಗುಂಡಯ್ಯ, ಮಡಿವಾಳ ಮಾಚಯ್ಯ, ಗಾಣಿಗರ ಸಿದ್ಧಯ್ಯ, ಕೊರಮರ ಹನುಮಯ್ಯ, ಕುರುಬರ ಬೀರಪ್ಪ, ಒಕ್ಕಲಿಗರ ಮುದ್ದಯ್ಯ ಹೀಗೆ ಹನ್ನೆರಡು ಜಾತಿಗಳನ್ನು ದೊಡ್ಡ ಬಸವಣ್ಣ ವಿಂಗಡ ಮಾಡಿದನಂತೆ.

## 9. ಪುಣ್ಯಮ್ಮ

ಹಾಡಿರುವ ಕಾವ್ಯ : **ಹಾರುವಯ್ಯ ಮಾದಗಿತ್ತಿ ಹಾಡು**

ಹವ್ಯಾಸಿ ಗಾಯಕಿ. ಅಪರೂಪವಾದ ಅಪೂರ್ಣ ಕಥನಕಾವ್ಯವನ್ನು ಹಾಡಿದಾಕೆ.

## 10. ಚೌಡಕೆ ಸುಬ್ಬಯ್ಯ

ಹಾಡಿರುವ ಕಾವ್ಯ : 1. **ಅಣ್ಣ ತಂಗಿಯರ ಹಾಡು.** 2. **ಸತಿ ಪುರುಷರ ಹಾಡು** 3. **ಭುಜಂಗರಾಯ** 4. **ಚದುರಂಗ ಮಹಾರಾಜ**

ಸುಪ್ರಸಿದ್ಧ ವೃತ್ತಿ ಗಾಯಕ. ಹಲವು ಸನ್ಮಾನ ಪ್ರಶಸ್ತಿಗಳಿಗೆ ಪಾತ್ರನಾದ ಕಲಾವಿದ. ದೀರ್ಘ ಕಾವ್ಯಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಸವದತ್ತಿ ಎಲ್ಲಮ್ಮನ ಆರಾಧಕ. ಚೌಡಿಕೆ ನುಡಿಸುತ್ತಾ, ತಾಳಕ್ಕೆ ತಕ್ಕಂತೆ ಹೆಜ್ಜೆಹಾಕಿ ಲಘುವಾಗಿ ಕುಣಿಯುತ್ತಾ ಹಾಡುವುದು ವಾಡಿಕೆ. ಸುಬ್ಬಯ್ಯ ಹುಟ್ಟಿದ್ದು 26–2–1917 ರಲ್ಲಿ. ತಂದೆ ಚಿಕ್ಕ ಎಲ್ಲಪ್ಪ. ತಾಯಿ ತಿಮ್ಮಕ್ಕ. ಗುರು ಸಿದ್ಧಗಂಗಪ್ಪ. ಹನ್ನೆರಡನೇ ವಯಸ್ಸಿನಲ್ಲೇ ಚೌಡಿಕೆ ವಾದನ ಹಾಡುಗಾರಿಕೆ ಕಲಿಯಲು ಪ್ರಾರಂಭ. ಬೆಂಗಳೂರು, ಮೈಸೂರು, ಹೈದರಾಬಾದ್, ಕೇರಳದ ತ್ರಿಚೂರು ಮೊದಲಾದ ಕಡೆಗಳಲ್ಲಿ ಕಲಾಪ್ರದರ್ಶನ ನೀಡಿದ ಕಲಾವಿದ. ಸರಳತೆ ಸಜ್ಜನಿಕೆಗೆ ಹೆಸರುವಾಸಿ. ಶಾಸ್ತ್ರೀಯ ಸಂಗೀತಗಾರರ ಮುಂದೆಯೂ ಚೌಡಿಕೆ ನುಡಿಸಿ ಮೆಚ್ಚುಗೆ ಗಳಿಸಿದ ಕೀರ್ತಿವಂತ. ಎಂಬತ್ತನೇ ವಯಸ್ಸಿನ ಹೊತ್ತಿಗೆ ಸಾವಿರಾರು ಕಾರ್ಯಕ್ರಮ ನೀಡಿದ ಹೆಮ್ಮೆ. ಸರ್ಕಾರದ ಮಾಸಾಶನ, ಕಲಾಪ್ರದರ್ಶನದ ಸಂಭಾವನೆಯಿಂದ ಜೀವನ ನಿರ್ವಹಣೆ.

ಸುಬ್ಬಯ್ಯ ತನ್ನ ಹೆಂಡತಿ ಮಕ್ಕಳಿಗೂ ತನ್ನ ಕಲೆಯನ್ನು ಕಲಿಸಿದ್ದಾನೆ. ಕಾಲಿಗೆ ಗೆಜ್ಜೆ, ತಲೆಗೆ ಪೇಟ ಕಟ್ಟಿ, ಚೌಡಿಕೆ ಶ್ರುತಿಯೊಡನೆ ಹಾಡಲು ನಿಂತರೆ ಕೇಳುಗರಿಗೆ ಹಬ್ಬ. ಚೌಡಿಕೆ ಸುಬ್ಬಯ್ಯ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಗೆ ಪಾತ್ರನಾದ ಕಲಾವಿದ.

## 11. ಚೌಡಿಕೆ ಗೋವಿಂದಪ್ಪ

ಹಾಡಿರುವ ಕಾವ್ಯ : **ಸಿರಿದೇವಿ**

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು, ಹಿರೆನಲ್ಲೂರು ಗ್ರಾಮದ ವೃತ್ತಿಗಾಯಕ. ಅಪೂರ್ವವಾದ ಹಾಡುಗಾರ. ಚೌಡಿಕೆ, ದಮ್ಮಡಿ, ತಾಳಮೇಳಗಳಲ್ಲಿ ಕಳೆಗಟ್ಟುವಂತೆ ಹಾಡುವಾತ. ಚೌಡಿಕೆ ಗೋವಿಂದಪ್ಪ ಎಂದೇ ಹೆಸರುವಾಸಿ. ಚೌಡಿಕೆ ಕಲೆಗಾಗಿ ಕರ್ನಾಟಕ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ವಿಜೇತ (1981). ಕಾಂಭೋಜ ರಾಜ, ಚಿತ್ರಶೇಖರ ಸೋಮಶೇಖರ, ಕಪ್ಪುಕೊರಳ ಚೂಡಾಮಣಿ ಮೊದಲಾದ ಕಥನಕಾವ್ಯಗಳನ್ನು ಹಾಡುವುದರಲ್ಲಿ ನಿಷ್ಣಾತ.

ಗೋವಿಂದಪ್ಪ ಹುಟ್ಟಿದ್ದು 1920 ರಲ್ಲಿ. ತಂದೆ : ತಿಮ್ಮಪ್ಪ. ತಾಯಿ : ಕರಿಯಮ್ಮ. ಗಂಗಾಮತಸ್ಥ (ಬೆಸ್ತ) ಜಾತಿಗೆ ಸೇರಿದ ಅಪರೂಪದ ಕಲಾವಿದ. ವೃತ್ತಿ ಬೇಸಾಯ. ಮೂರು

ಎಕರೆ ಖುಷ್ಕಿ ಜಮೀನಿನಿಂದ ಜೀವನ ನಿರ್ವಹಣೆ. ಗೋವಿಂದಪ್ಪನ ಕುರುಡು ಚಿಕ್ಕಪ್ಪ ಗುರು. ಭಜನೆ, ಕೋಲಾಟ, ಬಯಲಾಟಗಳ ಸಂಪರ್ಕ. ಹದಿನೈದನೇ ವಯಸ್ಸಿನಿಂದಲೇ ಕಲಾಪ್ರದರ್ಶನ ಪ್ರಾರಂಭ. ಹಳ್ಳಿಗರೊಡನೆ ಜೀವನ. ತೇರು ಜಾತ್ರೆ ಹಬ್ಬ ಹುಣ್ಣಿಮೆಗಳಲ್ಲಿ ಕಲಾಪ್ರದರ್ಶನಕ್ಕೆ ಮುಂದು.

ಚಿಕ್ಕಮಗಳೂರು ಸಾಹಿತ್ಯ ಪರಿಷತ್ತಿನ ಸಮಾರಂಭದ ಮೂಲಕ ರಂಗಪ್ರವೇಶ. ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ಚಿಕ್ಕಮಗಳೂರು ವಾರ್ತಾ ಮತ್ತು ಪ್ರಚಾರ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹೈದರಾಬಾದ್ ದೂರದರ್ಶನ ಕೇಂದ್ರ ಮೊದಲಾದ ಸಂಸ್ಥೆಗಳ ಮೂಲಕ ಕಲಾಪ್ರದರ್ಶನ ನೀಡಿದ ಹೆಗ್ಗಳಿಕೆ. ಗಂಭೀರ ಕಾವ್ಯ ಕಥೆಗಳ ನಡುವೆ ಹಾಸ್ಯ ಬೆರೆಸುವುದು, ಹಾವಭಾವ ವಿನ್ಯಾಸದಲ್ಲಿ ಸನ್ನಿವೇಶವನ್ನು ಜೀವಂತಗೊಳಿಸುವುದರಲ್ಲಿ ನಿಷ್ಣಾತ. ಅನೇಕ ಆಸಕ್ತರಿಗೆ, ಮೊಮ್ಮಕ್ಕಳಿಗೆ ಚೌಡಿಕೆ ಕಲೆಯನ್ನು ಕಲಿಸಿದ್ದಾನೆ.

## 12. ಗೊಲ್ಲರ ಸೂರಪ್ಪ

ಹಾಡಿರುವ ಕಾವ್ಯ : **ರುದ್ರಕುಮಾರ**

ದೀರ್ಘ ಕಾವ್ಯಗಳನ್ನು ಹಾಡುವುದರಲ್ಲಿ ಪ್ರಸಿದ್ಧನಾದ ವೃತ್ತಿಗಾಯಕ. ಪಶುಪಾಲನೆ ಮತ್ತು ವ್ಯವಸಾಯದ ಹಳ್ಳಿಗ. ಹುಟ್ಟಿದ್ದು 1922 ರಲ್ಲಿ. ತಂದೆ : ಚಿತ್ತಯ್ಯ. ತಾಯಿ : ಪಾಲಮ್ಮ. ಅನಕ್ಷರಸ್ಥ. ಬಾಲ್ಯದಿಂದಲೂ ಜನಪದ ಹಾಡುಗಳ ಕಲಿಕೆ ಮತ್ತು ಹಾಡುಗಾರಿಕೆಯಲ್ಲಿ ಆಸಕ್ತಿ. ಹಟ್ಟಿಯ ಹಿರಿಯ ಗಾಯಕ ಪಾಲಯ್ಯನಿಂದ ಇಪ್ಪತ್ತನೆಯ ವಯಸ್ಸಿನವರೆಗೆ ಹಾಡು ಕಲಿತ. ಅನಂತರ ಕಲಿತಿದ್ದನ್ನು ಹಾಡುಗಾರಿಕೆಯ ಮೂಲಕ ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ. ಬೆಂಗಳೂರು, ಚಿತ್ರದುರ್ಗ, ತರೀಕೆರೆ, ಮೈಸೂರು, ಆದಿಚುಂಚನಗಿರಿ, ಹಾಸನ ಮೊದಲಾದ ಕಡೆಗಳಲ್ಲಿ ಹಾಡಿದ. ಸುಮಧುರ ಕಂಠದ, ನಿರಾಡಂಬರ ವ್ಯಕ್ತಿ.

ಪ್ರಸ್ತುತ ರುದ್ರಕುಮಾರ ಕಾವ್ಯಕಥೆಯನ್ನು ರುದ್ರಕುಮಾರ–ಚಂದ್ರಕುಮಾರ ಎಂದು ಹೆಸರಿಸಿ ಹಾಡುವುದು ರೂಢಿ. ರುದ್ರಕುಮಾರನೆಂಬ ಯುವಕನ ಸಾಹಸ ಜೀವನವನ್ನು ಕುರಿತ ಕಥೆ. ಹೆಚ್ಚು ಗದ್ಯ ರೂಪದಲ್ಲಿದೆ. ಇದೊಂದು ಸಂಕೀರ್ಣ ಕಥೆ. ಮೊದಲು ಗದ್ಯ ಕಥೆಯಾಗಿ ಹುಟ್ಟಿ ಅನಂತರ ಪದ್ಯ ಕಥೆಯಾಗಿರುವ ಸಾಧ್ಯತೆಯಿದೆ. ಇದನ್ನು ಹಾಡುವಾಗ ತಂಬೂರಿ, ದಮ್ಮಡಿ, ಚಿಟಿಗೆಗಳನ್ನು ಉಪಯೋಗಿಸುವುದು ಪದ್ಧತಿ.

ಸೂರಪ್ಪನ ಕಂಠದಲ್ಲಿ ಹಲವು ಕಥನಕಾವ್ಯಗಳುಂಟು. ಆಕರ್ಷಕವಾಗಿ ಹಾಡುವ ಸೂರಪ್ಪ ಜುಂಜಪ್ಪನ ಕಾವ್ಯಕಥೆಯನ್ನು ಹಾಡುವಾಗ ಗಣೆಯನ್ನು ಬಳಸುವನು. ಈತ ಮೂರು ನಾಲ್ಕು ಜನಪದ ವಾದ್ಯಗಳ ಪರಿಣತನೂ ಹೌದು.

ಸೂರಪ್ಪನಿಗೆ ಜುಂಜಪ್ಪ, ಬಾಲನಾಗಮ್ಮ, ಪುಣ್ಯವಂತೆ–ಗುಣವಂತೆ, ಮಾಗಡಿ ಕೆಂಪೇಗೌಡ, ಬಳ್ಳಾರಿ ತತ್ವಗಳೂ ಕಂಠಸ್ಥವಾಗಿವೆ.

ಸೂರಪ್ಪನ ಹಾಡುಗಾರಿಕೆಯ ಸಾಧನೆಯನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. (1981).

◆◆◆◆

# ಕನ್ನಡ ಜನಪದ ಕಥನ ಕಾವ್ಯಗಳು

ಇದು ಹದಿನೆಂಟು ಜನಪದ ಕಥನ ಕಾವ್ಯಗಳ ಸಂಕಲನ. ಇವುಗಳನ್ನು ಸಮಾಜದ ವಿವಿಧ ವರ್ಗದ ವಿಭಿನ್ನ ಸಂಸ್ಕೃತಿಯ ವೃತ್ತಿಗಾಯಕರು ಹಾಗೂ ಹವ್ಯಾಸಿ ಗಾಯಕರು ಹಾಡಿದ್ದಾರೆ. ಪೌರಾಣಿಕ, ಸಾಮಾಜಿಕ ಮೊದಲಾದ ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡಬಹುದಾದ ಈ ಕಾವ್ಯಕಥೆಗಳಲ್ಲಿ ಸಮಾಜೋ ಸಾಂಸ್ಕೃತಿಕ ಹಿನ್ನೆಲೆಯ ದಟ್ಟವಾದ ಜನಪದ ಆಶಯಗಳಿವೆ. ಸಮಾಜವಿಕಾಸದ ವಿವಿಧ ಹಂತಗಳಲ್ಲಿ ಮನುಕುಲದ ಮನೋಧರ್ಮ ಕಲ್ಪಿಸಿರುವ, ರೂಢಿಸಿರುವ ಬದುಕಿನ ಚಿಂತನೆಗಳಿವೆ. ತೌಲನಿಕ ಮೀಮಾಂಸೆಗೆ, ಭಿನ್ನ ಪಾಠಗಳ ಪರಿಶೀಲನೆಗೆ, ಉಪ ಸಂಸ್ಕೃತಿಯ ಅರಿವಿಗೆ, ಜನಾಂಗೀಯ ವಿಶ್ಲೇಷಣೆಗೆ ಇವು ಉಪಯುಕ್ತ ಆಕರಗಳಾಗುತ್ತವೆ.

-ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ

.1. ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ ಇ ಎಲ್ ರಸ್ತೆ,

ಬೆಂಗಳೂರು–5600054 ದೂರವಾಣಿ: 080-23605033

janapadaparishath@hotmail.com